ಅಧ್ಯಾಯ ೧೪

# ಸಾಹಿತ್ಯ ಮತ್ತು ಸಂಸ್ಕೃತಿ

ಮೂಲದ ದಕ್ಷಿಣ ಕನ್ನಡ ಜಿಲ್ಲೆಯು ಉಡುಪಿ ಮತ್ತು ದಕ್ಷಿಣ ಕನ್ನಡ ಎಂದು ಎರಡಾಗಿ ವಿಭಜನೆಗೊಂಡರೂ ಅದು ಒಳಗೊಂಡಿರುವ ಕರಾವಳಿ ಒಂದೇ. ಮಳೆ–ಬೆಳೆ–ಪ್ರಕೃತಿ ಪರಿಸರಗಳೂ ಒಂದೇ. ಅಂತೆಯೇ ಸಾಹಿತ್ಯ ಸಂಸ್ಕೃತಿಗಳೂ ಕೂಡ. ದೇಗುಲಗಳ ತವರೂರಿನಂತಿರುವ ಈ ಜಿಲ್ಲೆಗಳು ಒಂದೇ ಎನ್ನಬಹುದಾದ ಧಾರ್ಮಿಕ–ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿದೆ. ಇದು ಅನೇಕ ಜಾತಿ ಮತ ಧರ್ಮಗಳ ಸಂಗಮಭೂಮಿ. ಪರಸ್ಪರ ಧರ್ಮಗಳ ಅಂತರಾಳವನ್ನು ಅರಿತುಕೊಂಡು ಸಮಬಾಳುವೆ ನಡೆಸುತ್ತಿರುವ ಇಲ್ಲಿ ಎಲ್ಲ ದೇವರು, ಎಲ್ಲರ ದೇವರು. ಈ ಪರಂಪರಾಗತ ಸಂಸ್ಕೃತಿ ನಿಮಿತ್ತವಾಗಿಯೇ ಇರಬೇಕು, ಇಲ್ಲಿನ ಜನರು ಬುದ್ಧಿವಂತರೆಂದೂ ಶುದ್ಧಿವಂತರೆಂದೂ ರಾಜ್ಯದ ಇತರ ಭಾಗದ ಜನರಿಂದ ಹೊಗಳಿಸಿಕೊಳ್ಳುತ್ತಾರೆ. ಅಂಥ ಎರಡು ಜಿಲ್ಲೆಗಳಲ್ಲಿ ಮೂಲ ಹೆಸರನ್ನೇ ಹೊತ್ತು ಬಂದ 'ದಕ್ಷಿಣ ಕನ್ನಡ ಜಿಲ್ಲೆ'ಯು ರಾಜ್ಯದ ಸಾಹಿತ್ಯ ಹಾಗೂ ಸಂಸ್ಕೃತಿಗೆ ನೀಡಿದ ಕೊಡುಗೆಯನ್ನು ಈ ಭಾಗದಲ್ಲಿ ಗಮನಿಸಬಹುದು.

ಒಂದೆಡೆ ಅರಬ್ಬೀ ಸಮುದ್ರವಾದರೆ ಇನ್ನೊಂದೆಡೆ ಸಹ್ಯಾದ್ರಿಯ ಬೆಟ್ಟ, ಕೇರಳದ ಕಾಸರಗೋಡು, ಕೊಡಗು ದಕ್ಷಿಣಕ್ಕೆ, ಹಾಗೂ ಉತ್ತರಕ್ಕೆ ಉಡುಪಿ ಜಿಲ್ಲೆ, 'ದಕ್ಷಿಣ ಕನ್ನಡ ಜಿಲ್ಲೆ'ಯ ಇತರ ಸೀಮೆಗಳು. ಅತ್ತ ಗೋವಾದಿಂದ ಬಂದು ನೆಲಸಿದ ಸಾರಸ್ವತರೂ, ಕ್ಯಾಥೋಲಿಕರೂ, ಮಹಾರಾಷ್ಟ್ರದ ಕೊಡುಗೆಯಾದ ಮರಾಠಿಗರೂ, ಕೇರಳದ ಮಲೆಯಾಳಿ ವಲಸಿಗರೂ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು, ಕನ್ನಡ, ಮಲಯಾಳ, ಕೊಂಕಣಿ, ಬ್ಯಾರಿ, ಮರಾಠಿ ಭಾಷೆಗಳ ಕೊಡುಕೊಳೆಗಳು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ಪ್ರತಿಯೊಬ್ಬರೂ ನಾಲ್ಕಾರು ಭಾಷೆಗಳಲ್ಲಿ ವ್ಯವಹರಿಸಬಲ್ಲವರಾಗಿರುತ್ತಾರೆ. ತುಳುವರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶವಿದು. ಇಲ್ಲಿನ ಜಾನಪದ, ಭೂತಾರಾಧನೆ ಇತ್ಯಾದಿಗಳಲ್ಲಿ ತುಳುವರದೇ ಪ್ರಮುಖ ಪಾತ್ರ. ಹಾಗಾಗಿ ತುಳು ಇಲ್ಲಿಯ ಪ್ರಮುಖ ಹಾಗೂ ಜನಪ್ರಿಯ ಭಾಷೆ. ದಕ್ಷಿಣ ಕನ್ನಡ ಜಿಲ್ಲೆಯ ಉದ್ದಗಲಗಳಲ್ಲಿ ತುಳು ವ್ಯಾಪಕವಾಗಿ ಹರಡಿಕೊಂಡಿದೆ; ಆಡುಭಾಷೆಯಾಗಿ, ಮನೆಮಾತಾಗಿದೆ. ಆದ್ದರಿಂದಲೇ ಇದು ತುಳುನಾಡು. ಕನ್ನಡ ಇಲ್ಲಿನವರಿಗೆ ಕಲಿತು ಬಂದ ಭಾಷೆ. ಹಾಗಾಗಿ ಇಲ್ಲಿನ ಕನ್ನಡ ಗ್ರಂಥಸ್ಥ ರೂಪದ್ದು. ಹವ್ಯಕ ಹಾಗೂ ಕೋಟ ಬ್ರಾಹ್ಮಣರು ತಮ್ಮದೇ ಆದ ಗ್ರಾಮ್ಯ ಕನ್ನಡ ಭಾಷೆಯನ್ನು ಆಡುತ್ತಾರೆ. ಇಲ್ಲಿ ಶಿಕ್ಷಣದಲ್ಲಿ, ಆಡಳಿತದಲ್ಲಿ, ಸಾಹಿತ್ಯ ರಚನೆಯಲ್ಲಿ ಅಧಿಕೃತವಾಗಿ ಬಳಕೆಗೊಳ್ಳುವ ಭಾಷೆ ಕನ್ನಡ. ಕನ್ನಡದ ಮೊದಲ ಪತ್ರಿಕೆ ಪ್ರಾರಂಭವಾದುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಕನ್ನಡದ ಮೊದಲ ಸಣ್ಣಕತೆ ಹುಟ್ಟಿದ್ದು ಇಲ್ಲೇನೆ. ಹೊಸಗನ್ನಡ ಸಾಹಿತ್ಯದ ಮೊದಲ ಮುಂಗೋಳಿ ಕೂಗಿದ್ದೂ ಇಲ್ಲೇನೆ. ಜಗತ್ತಿಗೆ 'ಯಕ್ಷಗಾನ' ವೆಂಬ ಪರಿಪೂರ್ಣ ಕಲೆಯನ್ನು ಕೊಡಮಾಡಿದ್ದೂ ಇದೇ ಜಿಲ್ಲೆ. ಜಿಲ್ಲೆಯ ಅಧಿಕ ಸಂಖ್ಯೆಯ ಜನರ ಆಡುಭಾಷೆ ತುಳು, ಕೊಂಕಣಿ ಇತ್ಯಾದಿಯಾಗಿದ್ದರೂ ಕನ್ನಡ ನಾಡಿಗೆ ದಕ್ಷಿಣ ಕನ್ನಡ ಜಿಲ್ಲೆಯ ಕವಿಗಳು, ಸಾಹಿತಿಗಳು, ಕಲಾವಿದರು ಸಲ್ಲಿಸಿದ ಕೊಡುಗೆ ಅಪಾರವಾದುದು.

## ಕನ್ನಡ ಸಾಹಿತ್ಯ

ಜಿಲ್ಲೆಯಲ್ಲಿ ಕನ್ನಡ ಶಾಸನಗಳು ಸಾಕಷ್ಟು ಹಿಂದಿನಿಂದಲೇ ದೊರೆಯುತ್ತವಾದರೂ, ನಿಶ್ಚಿತ ದಾಖಲೆಯೊಂದಿಗೆ ಕನ್ನಡ ಸಾಹಿತ್ಯ ದೊರೆಯುವುದು, ಸೋಮರಾಜನ ಉದ್ಭಟ ಕಾವ್ಯದಿಂದ. ಈತ ಮೂಡಬಿದಿರೆಯವನಾಗಿದ್ದು, ೧೨೨೨ರಲ್ಲಿ ಕೃತಿ ರಚಿಸಿದಂತೆ ತಿಳಿದುಬರುತ್ತದೆ. ಈ ಪ್ರದೇಶದ ಏಕೈಕ ಪ್ರಾಚೀನ ಶೈವ ಕವಿ ಎಂದು ಕರೆಯಬಹುದಾದ ಸೋಮರಾಜ, ಪುತ್ತಿಗೆಯಿಂದ ರಾಜ್ಯ ಆಳುತ್ತಿದ್ದ ದೇವರಾಯ (ಇಂದುಶೇಖರ)ನ ಮಗ. ಕಾವ್ಯಾರಂಭದಲ್ಲಿ ಅಲ್ಲಮಪ್ರಭುವನ್ನು ಗುರುವೆಂದು ಹೇಳಿಕೊಂಡಿದ್ದು, ಅಂಬಿಕೆ, ಗಣಪತಿ, ಷಣ್ಮುಖ, ಬಸವೇಶ್ವರರನ್ನು ಸ್ತುತಿಸಿದ್ದಾನೆ. ಪೂರ್ವ ಕವಿಗಳಾದ ಹರಿಹರ, ಪಾಲ್ಕುರಿಕೆ ಸೋಮನಾಥರನ್ನು ಹೆಸರಿಸಿದ್ದಾನೆ. ಈತನಿಗೆ ಪರಮಜ್ಞಾನಿ, ವರವಾಣಿ ಎಂಬ ಬಿರುದು ಇದ್ದಂತೆ ತಿಳಿದುಬರುತ್ತದೆ. ಉದ್ಭಟಕಾವ್ಯ ಚಂಪೂ ಶೈಲಿಯಲ್ಲಿದ್ದು, ಕರ್ನಾಟಕದ ಖ್ಯಾತ ಆರು ವೃತ್ತಗಳಲ್ಲದೆ ಅಪರೂಪದ ವೃತ್ತಗಳು, ರಗಳೆ, ತ್ರಿಪದಿ, ದಂಡಕ ಇತ್ಯಾದಿಗಳನ್ನೂ ಬಳಸಿದ್ದಾನೆ. ಸೌಂದರ್ಯವತಿ–ಸುಧರ್ಮರಾಯರ ವಿವಾಹವೇ ಕಥಾ ವಸ್ತುವಾಗಿದ್ದರೂ ಇಲ್ಲಿ ಓಹಿಲನ ಚರಿತ್ರೆಯೂ ಸೇರಿದೆ. ರಸವತ್ತಾದ ಸನ್ನಿವೇಶಗಳಿಂದ ಕೂಡಿದ ಕಾವ್ಯವನ್ನು ಸೋಮರಾಜನೇ 'ಶೃಂಗಾರ ಸಾರಮ್' ಎಂದು ಕರೆದುಕೊಂಡಿದ್ದಾನೆ. ಆದರೆ ಪಾದೇಕಲ್ಲು ವಿಷ್ಣುಭಟ್ ಅವರು, ಗೋವಿಂದಪೈ ಹಾಗೂ ಮತ್ತಿತರರ ವಾದವನ್ನು ಎತ್ತಿ ಹಿಡಿದು ಸೋಮರಾಜನು ದಕ್ಷಿಣ ಕನ್ನಡ ಜಿಲ್ಲೆಯವನಲ್ಲವೆಂದು ಖಚಿತವಾಗಿ ನಿರ್ಣಯಿಸಿದ್ದಾರೆ. (ಪೊಲಿ. ಪು ೪೨೩)

ಕಾಸರಗೋಡಿನ ೧೦ನೇಶತಮಾನದ ತಳಂಗೆರೆಯ ಶಾಸನ ಕನ್ನಡದಲ್ಲಿದ್ದು ಕಾವ್ಯಾತ್ಮಕವಾಗಿದೆ. 'ಕಸ್ತೂರಿ ತಿಲಕಂ ಲಲಾಟ ಫಲಕೆ' ಇತ್ಯಾದಿ ೩೦೦ ಶ್ಲೋಕಗಳನ್ನು ಸಂಗ್ರಹಿಸಿದ, ೧೦ನೇ ಶತಮಾನದವನಾದ ಲೀಲಾಶುಕ ಬೆಳ್ತಂಗಡಿಯ ಕೊಕ್ಕಡದವನಿರಬೇಕೆಂದು ಉಮಾನಾಥಶೆಣೈ ಪ್ರತಿಪಾದಿಸುತ್ತಾರೆ. ಬಂಗಾಡಿಯ ರಾಮರಾಯಬಂಗನ ಆಸ್ಥಾನದಲ್ಲಿದ್ದ 'ವಿಜಯವರ್ಣಿ' ಕವಿ ೧೨೭೦ರಲ್ಲಿ 'ಶೃಂಗಾರಾರ್ಣವ ಚಂದ್ರಿಕಾ' ಎಂಬ ಅಲಂಕಾರ ಶಾಸ್ತ್ರ ಗ್ರಂಥ ರಚಿಸಿದ್ದು ಈಚೆಗೆ ಭಾರತೀಯ ಜ್ಞಾನಪೀಠ ಸಂಸ್ಥೆಯವರು ಅದನ್ನು ಪ್ರಕಟಿಸಿದ್ದಾರೆ. ಆ ನಂತರದ ಸಾಹಿತ್ಯವೆಂದರೆ ಮೂಡಬಿದಿರೆಯ ಕೆಲವು ಬಸ್ತಿಗಳಲ್ಲಿರುವ ಶಾಸನಗಳು. ಸಾವಿರ ಕಂಬದ ಬಸ್ತಿಯ ದ್ವಾರದ ಮೇಲಿನ ೧೪೩೦ರ ಶಾಸನ ಹಾಗೂ ಅದೇ ಬಸ್ತಿಯ ಉತ್ತರ ಭಾಗದ ಭಿತ್ತಿಯಲ್ಲಿರುವ ಅದೇ ದಿನದಂದು (೨೯–೧–೧೪೩೦) ರಚಿಸಿದ ಶಾಸನಗಳು ಕ್ರಮವಾಗಿ ೫೭ ಹಾಗೂ ೩೩ ಪಂಕ್ತಿಗಳಲ್ಲಿ ಗದ್ಯಪದ್ಯ ಮಿಶ್ರಿತವಾಗಿ ಚಿಕ್ಕ ಚಂಪೂ ಕಾವ್ಯದಂತೆ ರಚಿಸಿದೆ. ಈ ಸ್ಥಳದಲ್ಲಿಯೇ ಇರುವ ೧೪೬೧ರ ಶಾಸನ ಗದ್ಯದಲ್ಲಿದ್ದರೂ ಕಾವ್ಯಮಯವಾಗಿದೆ. ಆದರೆ ಈ ಎಲ್ಲ ಶಾಸನಗಳನ್ನು ರಚಿಸಿದ ಕವಿಯ ಹೆಸರು ಇಲ್ಲವಾಗಿದೆ. ಇದೇ ಬಸ್ತಿಯ ಇನ್ನೊಂದೆಡೆ ಇರುವ, ೧೪೭೫ರಲ್ಲಿ ರಚಿಸಿದ ಶಾಸನದ ಕವಿ, ದೇವರಸ ಎಂಬಾತ. ದೇವರಸನ ಕೃತಿಗಳು ದೊರೆಯದೇ ಹೋದರೂ ಪ್ರಸ್ತುತ ಶಾಸನದಲ್ಲಿಯ ಕಂದ ವೃತ್ತಗಳು ಈತನಿಗೆ ಕಾವ್ಯ ರಚನೆಯಲ್ಲಿಯೂ ಸಾಮರ್ಥ್ಯವಿದ್ದಂತೆ ಸ್ಪಷ್ಟಪಡಿಸುತ್ತದೆ. ಮೂಡಬಿದಿರೆಯಲ್ಲಿ ವಿದ್ಯಾನಂದ ಎಂಬ ಜೈನಮುನಿಯನ್ನು ಸ್ತುತಿಸಿರುವ ಅನಾಮಧೇಯ ಕವಿಯ ಕೃತಿಯೊಂದರ ಕೆಲವು ತಾಳೆಯೋಲೆಗಳು ದೊರೆತಿದ್ದು, ಅನ್ಯತಾ ಆಧಾರದ ಮೇಲೆ ವಿದ್ಯಾನಂದ ಜೈನಮುನಿಯಾಗಿದ್ದು 'ಕಾವ್ಯಸಾರ' ಎಂಬ ಕೃತಿಯನ್ನು ೧೫೩೩ರ ಸುಮಾರಿನಲ್ಲಿ ರಚಿಸಿದನೆಂದೂ ತಿಳಿದುಬರುತ್ತದೆ. 'ಕಾವ್ಯಸಾರ' ಕೃತಿಯು ಕಾವ್ಯಕ್ಕೆ ಸಂಬಂಧಿಸಿದಂತೆ ಪದ್ಯಗಳು, ವಿವಿಧ ವರ್ಣನೆಗಳು ಇತ್ಯಾದಿಗಳನ್ನು ಪೂರ್ವಕವಿಗಳ ಕಾವ್ಯಗಳಿಂದ ಸಂಗ್ರಹಿಸಿ ವಿಷಯಗಳಿಗೆ ಅನುಸಾರವಾಗಿ ವಿಂಗಡಿಸಿ ನೀಡಿರುವ 'ಕಾವ್ಯ ಸಂಗ್ರಹ' ವೆಂದು ಹೇಳಬಹುದು.

ಕನ್ನಡ ಕಾವ್ಯ ಪರಂಪರೆಯಲ್ಲಿ ಹೆಸರಿಸಬಹುದಾದ ಉತ್ತಮ ಕಾವ್ಯಗಳಲ್ಲಿ ಒಂದಾದ 'ಭರತೇಶ ವೈಭವ' ರಚಿಸಿದ ರತ್ನಾಕರ ವರ್ಣಿ ಮೂಡಬಿದಿರೆಯವನು. ರತ್ನಾಕರ ವರ್ಣಿಯು ತ್ರಿಲೋಕ ಶತಕ, ಅಪರಾಜಿತೇಶ್ವರ ಶತಕ, ಕೆಲವು ಹಾಡುಗಳನ್ನು ಬರೆದಿದ್ದು ಅವು ಪ್ರಕಟವಾಗಿವೆ. 'ರತ್ನಾಕರಾಧೀಶ್ವರ ಶತಕ'ವೂ ಈತನದಿರಬೇಕೆಂಬ ವಾದವಿದೆ. ತ್ರಿಲೋಕ ಶತಕದಲ್ಲಿ ಜೈನಮತಾನುಸಾರವಾದ ಸೃಷ್ಟಿ, ಸ್ಥಿತಿಗಳ ಬಗ್ಗೆಯೂ, ಅಪರಾಜಿತೇಶ್ವರ ಶತಕದಲ್ಲಿ ನೀತಿ ವೈರಾಗ್ಯ, ಆತ್ಮ ವಿಚಾರಗಳ ಬಗ್ಗೆಯೂ, ಅಣ್ಣನ ಪದಗಳು ಎಂಬ ಹೆಸರಿನಲ್ಲಿಯ ಆತನ ಹಾಡುಗಳಲ್ಲಿ ನೀತಿತತ್ವ ಭೋದನೆಯನ್ನೂ ಕಾಣಬಹುದು. ಭರತೇಶ ವೈಭವ ಎಂಭತ್ತು ಸಂಧಿಗಳಲ್ಲಿ ಸುಮಾರು ಹತ್ತು ಸಾವಿರ ಸಾಂಗತ್ಯಗಳಿಂದ ಕೂಡಿದ ಬೃಹತ್ ಕಾವ್ಯವಾಗಿದ್ದು ಇದರ ರಚನೆಯ ಕಾಲ ಕ್ರಿ.ಶ. ೧೫೫೭. ಕವಿ ಪಂಚ ಕಲ್ಯಾಣಗಳೆಂದು ಕರೆದು ಐದು ವಿಜಯಗಳ ಬಗ್ಗೆ ಹೇಳಿರುವನಾದರೂ ಭೋಗ ವಿಜಯ ಹಾಗೂ ಯೋಗ ವಿಜಯಗಳು ಪ್ರಾಧಾನ್ಯತೆ ಪಡೆದಂತೆ ಅನೇಕ ವಿಮರ್ಶಾ ಲೇಖನಗಳು ಬಂದಿವೆ. ಕಥೆ ಭರತ–ಬಾಹುಬಲಿ ಸಹೋದರರದೇ ಆದರೂ ಭರತ, ಚಕ್ರವರ್ತಿಯಾಗಿದ್ದ ಕಾಲದಲ್ಲಿ ನಡೆಸಿದ ಶೃಂಗಾರ ಜೀವನದ ಪರಾಕಾಷ್ಠೆ ವರ್ಣಿತವಾಗಿದೆ. ಸಹೋದರ ಬಾಹುಬಲಿಯ ನಿಮಿತ್ತ ವೈರಾಗ್ಯೋದಯವಾದ ಮೇಲೆ ಅಷ್ಟೇ ಪ್ರಮಾಣದಲ್ಲಿ ಯೋಗ ಹಾಗೂ ಮೋಕ್ಷಗಳ ತತ್ವ ವಿಚಾರಗಳೂ ವರ್ಣಿತವಾಗಿರುವುದನ್ನು ಕಾಣಬಹುದು. ಜೈನತತ್ವಕ್ಕೆ ಅನುಸಾರವಾಗಿ ಕಾವ್ಯದಲ್ಲಿ ಕೆಲವು ಬದಲಾವಣೆಗಳನ್ನು

ಮಾಡಿಕೊಂಡಿದ್ದಾನೆ. ಈತನಿಗೆ ಶೃಂಗಾರ ಕವಿ ಹಂಸರಾಜ, ನಿರಂಜನ ಸಿದ್ಧ ಇತ್ಯಾದಿ ಬಿರುದುಗಳಿದ್ದವು. ಮೈಸೂರು ಅರಸರ ಬಳಿ ಇದ್ದ ದೇವಚಂದ್ರನೆಂಬ ಕವಿ ತನ್ನ ರಾಜಾವಳಿ ಕಥೆಯಲ್ಲಿ (೧೮೩೮) ರತ್ನಾಕರ ವರ್ಣಿಯ ಕಾವ್ಯದ ಬಗ್ಗೆ ಹೇಳುತ್ತಾ ಜೈನನಾಗಿದ್ದ ಈತ ವೀರಶೈವಕ್ಕೆ ಮತಾಂತರಗೊಂಡು ಮತ್ತೆ ಜೈನ ಮತಕ್ಕೆ ಬಂದಂತೆ ತಿಳಿಸುತ್ತಾನೆ.

ಮೂಡಬಿದಿರೆಯ ಜೈನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದವರ ವಂಶದಲ್ಲಿ ಜನಿಸಿದ ನೇಮಣ್ಣ, ನೇಮಿವರ್ಣಿ ಇತ್ಯಾದಿ ಹೆಸರುಗಳಿಂದ ಕರೆಯುವ ನೇಮಿವೃತಿಯು ೧೫೬೦ರ ಸುಮಾರಿನಲ್ಲಿ ಜ್ಞಾನ ಭಾಸ್ಕರ ಚರಿತ್ರೆ, ಸುವಿಚಾರ ಚರಿತ್ರೆಗಳನ್ನು ರಚಿಸಿದ್ದಾನೆ. (ಆರ್. ನರಸಿಂಹಾಚಾರ್ಯರ ಕವಿಚರಿತ್ರೆಯಲ್ಲಿ ಈತನ ಕಾಲ ೧೬೫೦ ಎಂದು ಹೇಳಿದೆ) ಕೃತಿಗಳಲ್ಲಿ ಅಧ್ಯಾತ್ಮಕ ಅನುಸರಣೆ, ಶಾಸ್ತ್ರಾಧ್ಯಯನ, ಧ್ಯಾನ ಇತ್ಯಾದಿ ಸದಾಚಾರಗಳನ್ನು ಕುರಿತು ವಿವರಿಸಿದೆ. ಮೂಡಬಿದಿರೆ ಬಳಿಯ ಅಳಿಯೂರಿನ ಚಂದ್ರಮ ಕವಿ ೧೬೫೦ರಲ್ಲಿದ್ದು, 'ಲೋಕ ಸ್ವರೂಪ' ಹಾಗೂ 'ಗಣಿತ ವಿಲಾಸ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ಮೊದಲ ಕೃತಿಯಲ್ಲಿ ಜೈನ ಮತಾನುಸಾರವಾಗಿ ಲೋಕಗಳ ಸೃಷ್ಟಿ ಸ್ಥಿತಿಗಳ ವಿವರಗಳಿವೆ. ಗಣಿತ ಕುರಿತ ಗ್ರಂಥದಲ್ಲಿ, ಕಂದ ಪದ್ಯಗಳಲ್ಲಿ ಗಣಿತದಂತಹ ಕ್ಲಿಷ್ಟವಾದ ವಿಷಯವನ್ನು ಸರಳವಾಗಿ ವಿವರಿಸಿದೆ. ಎರಡೂ ಕೃತಿಗಳು ಅಪೂರ್ಣವಾಗಿದ್ದು, ಅಪ್ರಕಟವಾಗಿವೆ. ಮೂಡಬಿದಿರೆ ಬಳಿಯ ಅಳದಂಗಡಿಯ ಗೆಜ್ಜೆ ಬ್ರಹ್ಮನನ್ನು ಸುತ್ತಿಸಿ, ಕೆಲವು ಕಂದ ಪದ್ಯ ಬರೆದಿರುವ ಮಹೇಂದ್ರಕವಿಯ ಕೃತಿ 'ಬ್ರಹ್ಮಯಕ್ಷ ಸ್ತೋತ್ರ'ವು ಸುಮಾರು ೧೬–೧೮ನೇ ಶತಮಾನದಲ್ಲಿ ರಚಿತಗೊಂಡಿದೆಯೆಂದು ಅಭಿಪ್ರಾಯಪಡಲಾಗಿದೆ. ಮೂಲ್ಕಿಯ ಸಾಮಂತ ತಿರುಮಲ ರಾಯನ ಕೋಶಾಧ್ಯಕ್ಷನಾಗಿದ್ದ ಪದ್ಮನಾಭ ಎಂಬ ಕವಿ ೧೬೮೦ರಲ್ಲಿ ಇದ್ದಂತೆ ಕವಿಚರಿತ್ರಕಾರರು ತಿಳಿಸಿದ್ದು, ಈತ ಜಿನದತ್ತರಾಯ ಚರಿತೆ ಅಥವಾ ಪದ್ಮಾವತಿ ಚರಿತೆ ಎಂಬ ೧೨ ಸಂಧಿಗಳ ೧೬೭೧ ಪದ್ಯಗಳುಳ್ಳ ಕೃತಿ ರಚಿಸಿದ್ದಾನೆ.

ಮೂಡಬಿದಿರೆಯಲ್ಲಿದ್ದ ಕವಿ ಶಾಂತಿಕೀರ್ತಿ, ಜೈನ ನಿರ್ಗ್ರಂಥ ಮುನಿಯೂ ಆಗಿದ್ದಾತ. ಈ ಹಿಂದೆ ಬಿ.ಎಲ್.ರೈಸ್ ಅವರು ಈತನ ಕಾಲ ೧೫೧೯ ಎಂದು ತಿಳಿಸಿದ್ದು, ನಂತರದ ಶೋಧನೆಗಳಂತೆ– ಕವಿಯೇ ತಿಳಿಸಿರುವಂತೆ ೧೭೨೫ರಲ್ಲಿ ಗ್ರಂಥಾರಂಭ ಮಾಡಿದಾತ. 'ಚತುರ್ವಿಂಶತಿ ತೀರ್ಥಂಕರ ಪುರಾಣ', 'ಶಾಂತೀಶ್ವರ ಚರಿತ್ರೆ', 'ಇಪ್ಪತ್ತನಾಲ್ಕು ತೀರ್ಥಂಕರರ ಚರಿತ್ರೆ', 'ಪಾರ್ಶ್ವನಾಥ ಚರಿತ್ರೆ', 'ಪುರದೇವ ಚರಿತ್ರೆ'ಗಳನ್ನು ಮೂಡಬಿದಿರೆಯಲ್ಲಿದ್ದಾಗ ರಚಿಸಿದ್ದು, ಆನಂತರ ಬೆಳಗಾವಿ ಜಿಲ್ಲೆಯ ಗೋಕಾಕ ಹಾಗೂ ಕೊಲ್ಲಾಪುರಗಳಿಗೆ ಕವಿ ಶಾಂತಿನಾಥ ವಾಸಸ್ಥಾನ ಬದಲಿಸಿದ್ದು, ಅಲ್ಲಿ 'ಷೋಡಶಭಾವನಾ ಚರಿತ್ರೆ' 'ಪಟ್ಪಾಭೃತ ವ್ಯಾಖ್ಯಾನ', 'ಅರಾಧನಾಸಾರ ವ್ಯಾಖ್ಯಾನ', 'ದ್ವಾದಶಾನುಪ್ರೇಕ್ಷೆ' ಹಾಗೂ 'ಭುಜಬಲಿ ಚರಿತ್ರೆ' ಗಳನ್ನು ರಚಿಸಿದ. ಒಟ್ಟು ಹತ್ತು ಕೃತಿಗಳಲ್ಲಿ ಮೊದಲಿನ ಆರು ಕೃತಿಗಳು ಸಾಂಗತ್ಯ ಛಂದಸ್ಸಿನಲ್ಲಿವೆ. ವ್ಯಾಖ್ಯಾನ ಕಂದ ಪದ್ಯದಲ್ಲಿದ್ದು, ಕೊನೆಯ ಎರಡು ಕೃತಿಗಳು ಉಪಲಬ್ಧವಿಲ್ಲ. ಸಾಂಗತ್ಯಗಳು ನೂರರಿಂದ ಸಾವಿರದ ಇನ್ನೂರಕ್ಕೂ ಹೆಚ್ಚು ಪದ್ಯಗಳವರೆಗೂ ಇದ್ದು, ಅವುಗಳ ಹೆಸರೇ ತಿಳಿಸುವಂತೆ ಜೈನ ತೀರ್ಥಂಕರ ಚರಿತ್ರೆ ಹಾಗೂ ಜೈನ ಧರ್ಮ ಕುರಿತ ವಿವರಗಳಿಂದ ಕೂಡಿರುವಂತಹವು. ಹದಿನೆಂಟನೆಯ ಶತಮಾನದ ಆದಿಯಲ್ಲಿ ಮೂಡಬಿದಿರೆಯಲ್ಲಿ ರಚಿತವಾದ ಕಾವ್ಯಗಳಲ್ಲಿ ಅನಾಮಧೇಯ ಕವಿಯೊಬ್ಬನಿಂದ ರಚಿತವಾದ (ಸು. ೧೭೨೫ ರಲ್ಲಿ) 'ಜೀರ್ಣೋದ್ಧಾರ ಚರಿತ್ರೆ' ದೊರೆಯುತ್ತದೆ. ಅಂತೆಯೇ ಬಂಗಾಡಿ ಅರಮನೆಯಲ್ಲಿ ಲಕ್ಷ್ಮಣ ಬಂಗನ ಇಂಗಿತದಂತೆ ಕವಿ ಚಂದ್ರಶೇಖರನೆಂಬಾತ 'ರಾಮಚಂದ್ರ ಚರಿತ್ರೆ' ಎಂಬ ಕೃತಿ ಆರಂಭಿಸಿ ಮೊದಲ ಹದಿನಾರು ಸಂಧಿಗಳನ್ನು ಹಾಗೂ ಹದಿನೇಳನೇ ಸಂಧಿಯ ಹದಿಮೂರು ಪದ್ಯಗಳನ್ನು ಕ್ರಿ. ಶ. ೧೭೫೦ಕ್ಕೆ ಮೊದಲೇ ರಚಿಸಿದ್ದನು. ಆನಂತರ ಪದ್ಮನಾಭನೆಂಬ ಕವಿ ಮುಂದಿನ ಇಪ್ಪತ್ತು ಸಂಧಿಗಳನ್ನು ಅದಕ್ಕೆ ಸೇರಿಸಿ, ಕೃತಿ ಪೂರ್ಣಗೊಳಿಸಿದನು. ಒಟ್ಟು ಮೂವತ್ತೇಳು ಸಂಧಿಗಳಿಂದ ೫೭೯೯ ಸಾಂಗತ್ಯಗಳಿಂದ ಕೂಡಿದ ಬೃಹತ್ ಕೃತಿ ಪೂರ್ಣವಾಗಿ ಮುದ್ರಣವಾಗಿಲ್ಲ. ಚೌಟರ ರಾಣಿ ಮೂರನೇ ಅಬ್ಬಕ್ಕ ದೇವಿಯ ಆಸ್ಥಾನದಲ್ಲಿದ್ದ ಕೋದಂಡರಾಮ ಎಂಬ ಮಂತ್ರಿಯ ಮಗ ಪಟ್ಟಾಭಿರಾಮ ಎಂಬಾತ ೧೭೪೦ರ ಸುಮಾರಿನಲ್ಲಿ 'ರತ್ನಶೇಖರ ಚರಿತ್ರೆ' ಎಂಬ ಕಾವ್ಯ ರಚಿಸಿದ್ದು, ಜೈನ ಮತಾವಲಂಬಿಯಾಗಿ ಮತಾಂತರಗೊಂಡಂತೆ ತಿಳಿದು ಬರುತ್ತದೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲೂ ಮೂಡಬಿದಿರೆಯಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ಕೃತಿ ರಚನೆಯಾಗುತ್ತಿದ್ದು, ಚಂದಯ್ಯ ಎಂಬ ಕವಿ ೧೮೨೮ರಲ್ಲಿ ಸುಮಾರು ೩೮೦೦ ಸಾಂಗತ್ಯಗಳಿಂದ ಕೂಡಿದ 'ಜೈನಾಚಾರ' ಎಂಬ ಕೃತಿ ರಚಿಸಿದ್ದು ಪ್ರಕಟವಾಗಬೇಕಿದೆ.

ಯಕ್ಷಗಾನ ಕವಿಗಳಲ್ಲಿ ಧರ್ಮಸ್ಥಳದ ಮಧ್ವದಾಸ ಸುಮಾರು ೧೮೦೦ರಲ್ಲಿ 'ಅಭಿಮನ್ಯು ಕಾಳಗ', 'ಚಿತ್ರಸೇನ ಕಾಳಗ'ಗಳನ್ನೂ, ನಂಜುಂಡ ಕವಿ ೧೮೪೮ರಲ್ಲಿ 'ಬಲಿ ಚಕ್ರವರ್ತಿ ಕತೆ'ಯನ್ನು, ಮೂಲ್ಕಿಯ ವೆಂಕಣ್ಣ ೧೮೩೦ರಲ್ಲಿ 'ಮಾನಸ ಚರಿತ್ರೆ'ಯನ್ನೂ, ಪುತ್ತಿಗೆಯಲ್ಲಿ ಸುರಲ ಎಂಬಾತ ೧೬೭೧ರಲ್ಲಿ 'ಪದ್ಮಾವತಿ ಚರಿತ್ರೆ'ಯನ್ನು ಬರೆದರು. ೧೫೮೦–೧೬೭೦ರ ಕಾಲಾವಧಿಯವನೆಂದು ತಿಳಿಯಲಾದ

ಕುಂಬಳೆಯ, ಪಾರ್ತಿಸುಬ್ಬ ರಾಮಾಯಣ ಕಥೆಗಳನ್ನು ಆಧರಿಸಿ ಪ್ರಸಂಗಗಳನ್ನು ರಚಿಸಿದ್ದು, 'ಪುತ್ರಕಾಮೇಷ್ಟಿ', 'ಸೀತಾಕಲ್ಯಾಣ' ಗಳಿಂದ ಆರಂಭಿಸಿ ಎಂಟು ಪ್ರಸಂಗಗಳನ್ನೂ, 'ಐರಾವತ' ವನ್ನು ಮಹಾಭಾರತ ಆಧರಿಸಿಯೂ ಹಾಗೂ 'ಶ್ರೀಕೃಷ್ಣ ಚರಿತೆ'ಯನ್ನು ಭಾಗವತ ಆಧರಿಸಿಯೂ ಬರೆದಿದ್ದಾನೆ. ಈತನ ಕೃತಿಯಲ್ಲಿಯ ಸರಳತೆ, ರಂಗ ಪ್ರಯೋಗ ಸಾಧ್ಯತೆ ಅರ್ಥಗರ್ಭಿತತೆಯು ಮುಂದಿನ ಅನೇಕ ಯಕ್ಷಗಾನ ಕವಿಗಳ ಮೇಲೆ ಪ್ರಭಾವ ಬೀರಿದೆ. ಯಕ್ಷಗಾನ ಕುರಿತ 'ಸಭಾಲಕ್ಷಣ' ವೆಂಬ ಕೃತಿ ರಚಿಸಿದ್ದು ಅದರಲ್ಲಿ ಚೌಕಿಪೂಜೆ, ಭಾಗವತರು, ನಟರ ವೇಷ–ಭೂಷಣ, ಸಂಭಾಷಣೆ ಇತ್ಯಾದಿ ವಿವರಗಳಿದ್ದು, ಆಕರಗ್ರಂಥದಂತಿದೆ. ಶಿವರಾಮ ಕಾರಂತರು ಪಾರ್ತಿಸುಬ್ಬನು ಉಡುಪಿಯ ಬ್ರಹ್ಮಾವರದ ಪ್ರದೇಶದವನೆಂದು ಭಾವಿಸಿದ್ದುಂಟು. ಕೆಲವು ಲಿಂಗಾಯತ ಮಠಗಳು ತಾಳೆಯೋಲೆಗಳನ್ನು ಎರವಲು ತಂದು, ಇಲ್ಲವೇ ಆಸಕ್ತರಿಗೆ ಪ್ರತಿಗಳನ್ನು ಮಾಡಿಕೊಡುತ್ತಿದ್ದುದುಂಟು. ಗುರುಪುರದ ಲಿಂಗಾಯತ ಮಠವೊಂದು ಈ ಬಗೆಯ ಕಾರ್ಯ ಕೈಗೊಂಡಿತ್ತು.

## ಪ್ರವಾಸ ಸಾಹಿತ್ಯ ಹಾಗೂ ಕೈಫಿಯತ್ತುಗಳು

ಸಾಹಿತ್ಯಕವಾಗಿ ದಕ್ಷಿಣಕನ್ನಡ ಜಿಲ್ಲೆಯ ಪ್ರಥಮ ಉಲ್ಲೇಖ ದೊರೆಯುವುದು, ಕ್ರಿಸ್ತಶಕ ಎರಡನೇ ಶತಮಾನದಲ್ಲಿ ರಚಿತವಾದ ಈಜಿಪ್ಟ್ ದೇಶದ ಒಕ್ಸಿರಿಂಖಸ್ (Oxyrhunchus) ಎಂಬಲ್ಲಿ ೧೮೯೭ರಲ್ಲಿ ದೊರೆತ, ಗ್ರೀಕ್ ಭಾಷೆಯ ನಾಟಕವೊಂದರಲ್ಲಿ. ಮೊದಲಿಗೆ ಅಂದಿನ ಮೈಸೂರು ಸರ್ಕಾರದ ಪುರಾತತ್ವ ಇಲಾಖೆಯ ೧೯೨೬–೨೭ರ ವರದಿಯಲ್ಲಿ ಈ ನಾಟಕದ ಇಂಗ್ಲೀಷ್ ಅನುವಾದ ಪ್ರಕಟವಾಯಿತು. ಕೆಲ ತಿಂಗಳ ನಂತರ ಎಸ್. ಶ್ರೀಕಂಠಯ್ಯ ಅವರು ಈ ಕುರಿತು ನೀಡಿದ ಉಪನ್ಯಾಸದ ಲೇಖನ ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಯಿತು. ನಾಟಕದಲ್ಲಿ ಇರುವ ಕೆಲವು ಪದಗಳು ಕರಾವಳಿಯ ಕನ್ನಡ ಭಾಷೆಯದೆಂದು ತಿಳಿಯಲಾಗಿತ್ತು. ಎಂ. ಗೋವಿಂದ ಪೈ ಅವರು ಮೂಲ ಗ್ರೀಕ್ ಲೇಖನ ಪಡೆದು ವಿಸ್ತಾರವಾಗಿ ಅಭ್ಯಸಿಸಿ, ಇದರಲ್ಲಿ ಕೆಲವು ಪಾತ್ರಗಳು ಆಡುವ ಭಾಷೆ ಕನ್ನಡದ್ದೆಂದೂ ಉಲ್ಲೇಖಿತ ದೇವಾಲಯ ಮಂಗಳೂರು ಬಳಿಯ ಸೋಮೇಶ್ವರವೆಂದು ನಿರ್ಧರಿಸಿದ್ದು ೧೯೨೯ರಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ಲೇಖನ ಪ್ರಕಟಿಸಿದರು. ನಾಟಕದಲ್ಲಿ ಬಳಸಿರುವ ಭಾಷೆಯ ಬಗ್ಗೆ ಚರ್ಚೆಗಳಾದರೂ ವರ್ಣಿತವಾದ ಪ್ರದೇಶ ಮಂಗಳೂರು, ಮಲ್ಪೆ ಪ್ರದೇಶವೆಂದು ಒಪ್ಪಿತವಾಗಿರುವಂತಿದೆ.

ರೋಮಿನ ಪ್ಲಿನಿ(ಕೃಶ.೨೩) ಭಾರತದ ಪಶ್ಚಿಮ ಕರಾವಳಿಯಲ್ಲಿ 'ನೆತ್ರೆ' ಎಂಬ ವ್ಯಾಪಾರಸ್ಥಳದ ಬಗ್ಗೆ ಹೇಳುತ್ತಾನೆ. ಕ್ರಿಸ್ತಶಕ ಎರಡನೇ ಶತಮಾನದವನೇ ಆಗಿರಬಹುದಾದ ಗ್ರೀಕ್ ವಿಜ್ಞಾನಿ ಟಾಲೆಮಿಯ 'ಭೂಗೋಳ ವಿಜ್ಞಾನದ ಕೈಪಿಡಿ'ಯಲ್ಲಿ ಭಾರತದ ಬಗ್ಗೆ ಹೇಳುವಾಗ ಬರುವ 'ನಿತ್ರೆ, ಮಂಗಳೂರು ಬಳಿಯ ನೇತ್ರಾವತಿ ಹಾಗೂ 'ಮಲಿಪ್ಪಲ' ಎಂಬುದು ಮಲ್ಪೆಯಿರಬಹುದೆಂದೂ; ರೋಮನ್ನಿನ ಅರ್ರಿಯನ್(ಕ್ರಿಶ ೧೦೦) ತನ್ನ 'ಇಂಡಿಕಾ' ಗ್ರಂಥದಲ್ಲಿ 'ಮಂಡೆಗೊರ' ಎಂದು ಕರೆದಿರುವುದು ಮಂಗಳೂರೆಂದೂ, ಅಲೆಕ್ಸಾಂಡ್ರಿಯಾದ ಆರನೇ ಶತಮಾನದ ಪ್ರವಾಸಿ ಕಾಸ್‌ಮಸ್ ಹೇಳಿರುವ 'ಮಂಗತಾಯ್' ಹಾಗೂ ಹದಿಮೂರನೆಯ ಶತಮಾನದಲ್ಲಿ ಚೀನಾದಿಂದ ಬಂದಿದ್ದ ಚೌಜು–ಕುಆ ಹೇಳುವ 'ಘೊಂಗ್‌ಯಾಲೊ' , 'ಮಾಂಗ್ ಕೀಲಿನ್ ಕಿಯಾಲನ್'ಗಳು ಈಗಿನ ಮಂಗಳೂರೆಂದು ತಿಳಿಯಲಾಗಿದೆ. ಆಫ್ರಿಕಾದಿಂದ ೧೩೩೩ರಲ್ಲಿ ಇಂಡಿಯಾಗೆ ಬಂದ ಇಬ್–ನೆ–ಬತೂತಾ ಮಂಗಳೂರಿಗೂ ಬಂದಿದ್ದು ಅದನ್ನು ಮಂಜರೂರು ಎಂದೂ, ಅದರ ದೊರೆಯನ್ನು ರಾಮಡಾವ್ (ರಾಮದೇವ) ಎಂದು ಕರೆದಿದ್ದಾನೆ. ಹಾಗೂ ಅಲ್ಲಿ ಸಿಗುವ ಮೆಣಸು, ಶುಂಠಿಗಳ ಬಗ್ಗೆ, ಅವುಗಳಿಗಿರುವ ಬೇಡಿಕೆಯ ಬಗ್ಗೆ, ಮುಸಲ್ಮಾನರಿಗೆ ಹಾಗೂ ಸ್ಥಳೀಯರಿಗಿದ್ದ ವೈಮನಸ್ಸಿನ ಬಗ್ಗೆ, ಅಳಿಯ ಸಂತಾನ ಕಟ್ಟಿನ ಬಗ್ಗೆ , ಒಟ್ಟಿನಲ್ಲಿ ದೈನಂದಿನ ಜನಜೀವನ, ಸಂಪ್ರದಾಯ, ಪದ್ಧತಿಗಳು, ಸಾಮಾಜಿಕ ಮತ್ತು ಆರ್ಥಿಕ ಸಂಗತಿಗಳ ಬಗ್ಗೆ ವಿವರಣೆ ನೀಡುತ್ತಾನೆ. ಪರ್ಷಿಯಾದ ಅಬ್ದುಲ್ ರಝಾಕ್ ೧೪೩೭ರಲ್ಲಿ ಭಾರತಕ್ಕೆ ಬಂದಿದ್ದು. ಮಂಗಳೂರಿನಲ್ಲಿ ಕೆಲದಿನ ತಂಗಿದ್ದು ಪೊಳಲಿಯ ರಾಜರಾಜೇಶ್ವರಿಯ ಬಗ್ಗೆ ವಿವರಗಳನ್ನು ನೀಡುತ್ತಾನೆ. ೧೪೯೨ರ ವೇಳೆಗೆ ಕ್ಯಾಲಿಕಟ್‌ಗೆ ಬಂದಿದ್ದ ಪೋರ್ಚುಗೀಸ್ ಪ್ರವಾಸಿ ವಾಸ್ಕೋಡ ಗಾಮ ಉಡುಪಿಯ ಕಡೆ ಮಂಗಳೂರಿನ ಮೂಲಕ ಸಮುದ್ರಯಾನ ಮಾಡಿದ್ದ. ಪೋರ್ಚುಗಲ್ಲಿನ ಇನ್ನೊಬ್ಬ ಪ್ರವಾಸಿ ಡ್ಯೂರೆಟ್ ಬಾರ್ಬೊಸಾ ೧೫೦೦ರ ಸುಮಾರಿನಲ್ಲಿ ಭಟ್ಕಳ, ಬಂಕಾಪುರ, ಬಸರೂರು, ಬಾರಕೂರುಗಳ ಮೂಲಕ ಮಂಗಳೂರಿಗೂ ಬಂದಿದ್ದು, ನೇತ್ರಾವತಿ, ಗುರುಪುರ ನದಿಗಳ ಬಗ್ಗೆಯೂ, ಅಲ್ಲಿನ ಪ್ರಕೃತಿ ಸೌಂದರ್ಯ, ದೇವಾಲಯ ಹಾಗೂ ಮಸೀದಿಗಳ ಬಗ್ಗೆಯೂ, ಹೊರ ದೇಶಗಳಿಗೆ ರಫ್ತಾಗುತ್ತಿದ್ದ ಮೆಣಸಿನ ಬಗ್ಗೆಯೂ ತಿಳಿಸುತ್ತಾನೆ. ಈ ಪ್ರದೇಶ ವಿಜಯನಗರದ ನರಸಿಂಗರಾಯನ ಅಧೀನದಲ್ಲಿದ್ದು, ಇಂದಿನ ಕಾಸರಗೋಡಿನಲ್ಲಿರುವ ಕುಂಬಳೆ, ತುಳುರಾಜ್ಯದ ಕೊನೆಯ ಊರೆಂದು ಐತಿಹಾಸಿಕ ವಿವರಗಳನ್ನು ನೀಡುತ್ತಾನೆ. ವೆನಿಸಿನ ಸೀಜ಼ರ್ ಫ್ರೆಡರಿಕ್ ೧೫೬೩ರಲ್ಲಿ ಇಂಡಿಯಾಗೆ ಬಂದಿದ್ದು. ಮಂಗಳೂರಿನಲ್ಲಿ ಬೆಳೆಯುತ್ತಿದ್ದ ಅಕ್ಕಿಯ ಬಗ್ಗೆ ತಿಳಿಸುತ್ತಾನೆ. ೧೫೮೪ರಲ್ಲಿ ಭಾರತಕ್ಕೆ ಬಂದಿದ್ದ ಡಾಂ ದುಆರ್ತ್ ದ ಮೇನೇಜೀಸ್ ಸಹ ಮಂಗಳೂರಿನ ಕೋಟೆ ಮತ್ತು ಅಕ್ಕಿಯ ಬಗ್ಗೆ ವಿವರಿಸುತ್ತಾನೆ.

ಮುಂದೆ ಹದಿನಾರು ಹದಿನೇಳನೇ ಶತಮಾನಗಳಲ್ಲಿ ದಕ್ಷಿಣಕನ್ನಡದ ಪ್ರದೇಶಗಳ ಬಗ್ಗೆ ಲೋಡೋವಿಕೊದ ವರ್ತೆಮ, ಟೋಮ್ ಪೀರೆಸ್, ಲಿಸ್ ಷಾಡಿನ್, ಫ್ರಾನ್ಸಿಸ್ ಪಿರಾಡ್ಡ ಮುಂತಾದವರು ಬರೆದಿದ್ದಾರೆ. ಮಂಗಳೂರು ಪ್ರದೇಶದ ಬಗ್ಗೆ ಸಾಕಷ್ಟು ವಿವರಣೆ ನೀಡುವವನು ರೋಮ್ ನಗರದ ಪಿಯೆತ್ರೊ ದೆಲ್ಲೆವೆಲ್ಲಾ. ೧೬೨೩ರ ನವಂಬರ್ ೨೭ರಂದು ಮಂಗಳೂರಿಗೆ ಬಂದಿದ್ದು, ಉಳ್ಳಾಲದ ರಾಣಿ ಬಗ್ಗೆ ಆ ಹಿಂದೆಯೇ ಪರ್ಷಿಯಾದೇಶದಲ್ಲಿ ವಿವರವಾಗಿ ಓದಿದ್ದು ಆಕೆಯನ್ನು ಕಾಣಲೆಂದೇ ಇಲ್ಲಿಗೆ ಬಂದುದಾಗಿ ಹೇಳುತ್ತಾನೆ. ಅಲ್ಲಿಯ ನೇತ್ರಾವತಿ ನದಿ, ಮಂಗಳೂರಿನ ಕೋಟೆ, ಚರ್ಚ್ ಹಾಗೂ ಪಾದರಿಗಳು, ಬೋಳೂರು ಪ್ರದೇಶ, ಅಲ್ಲಿಯ ಅರಮನೆ, ಬಜಾರ್‌ಗಳನ್ನು ನೋಡಿ ಉಳ್ಳಾಲಕ್ಕೆ ಹೋರಟನು. ಅಲ್ಲಿ ರಾಣಿಯನ್ನು ಕಂಡು ವಿಚಾರ ವಿನಿಯಮ ಮಾಡಿಕೊಂಡನು. ಮಾರನೆಯ ದಿನ ರಾಜಕುಮಾರನ ಆತಿಥ್ಯವನ್ನು ಸ್ವೀಕರಿಸಿದನು. ಮತ್ತೆ ರಾಣಿಯನ್ನು ನೋಡಬೇಕೆಂಬ ಬಯಕೆ ಪೂರೈಸದೆ ಮರಳಿ ಮಂಗಳೂರಿಗೆ ಹೊರಟನು. ರಾಣಿಯನ್ನು ಕುರಿತು ಪದ್ಯ ಬರೆದಿದ್ದುದ್ದಲ್ಲದೆ ಸ್ಥಳೀಯ ಸಮಕಾಲೀನ ಇತಿಹಾಸ, ಸಂಸ್ಕೃತಿ, ಕೃಷಿ, ವಾಣಿಜ್ಯ ಇತ್ಯಾದಿ ಅನೇಕ ಸಂಗತಿಗಳನ್ನು ತಿಳಿಸಿದ್ದಾನೆ. ಮುಂದಿನ ಇತಿಹಾಸಕಾರರು ಅವುಗಳನ್ನು ಬಳಸಿಕೊಂಡಿದ್ದಾರೆ. ಇನ್ನುಳಿದ ಪ್ರವಾಸಿಗರಲ್ಲಿ ಪೀಟರ್ ಮಂಡಿ, ತೇವ್ನೊಟ, ಪ್ರಾಯರ್ ಅವರ ಬರಹಗಳು, ಕ್ರೈಸ್ತ ಮಿಶನರಿ ಜೋಸೆವಾಸ್ ಅಲ್ಲದೆ ಹೆಮಿಲ್ಟನ್, ಪೋರ್ಬಸ್, ಪಾರಸನ್, ಮೆಕನ್ಸಿ, ಬುಕಾನನ್ ಮುಂತಾದವರ ವರದಿಗಳು ಸಂಗ್ರಹಗಳು ಜಿಲ್ಲೆಯ ರಾಜಕೀಯ, ಸಂಸ್ಕೃತಿಗಳನ್ನು ಕುರಿತ ಸಾಹಿತ್ಯ ಮೂಲದ ಅಕರಗಳಾಗಿವೆ. ಮಂಗಳೂರನ್ನು ಪೋರ್ಚುಗೀಸರು ೧೫೨೩ರಲ್ಲಿ ಕೈವಶ ಮಾಡಿಕೊಂಡು ಕೆಲಕಾಲ ತಮ್ಮಲ್ಲಿ ಇರಿಸಿಕೊಂಡಿದ್ದರ ಬಗ್ಗೆಯೂ ಐತಿಹಾಸಿಕ ದಾಖಲೆಗಳಿರುವುದನ್ನು ಕೆ.ಜಿ.ವಸಂತ ಮಾಧವ ಅವರು ಗುರುತಿಸಿದ್ದಾರೆ.

ದಕ್ಷಿಣ ಕನ್ನಡದ ಬಗ್ಗೆ ಬರಹ ರೂಪದಲ್ಲಿ ದೊರೆಯುವ ಇತರ ಆಕರವೆಂದರೆ ಕೈಫಿಯತ್ತುಗಳು. ಮೆಕೆನ್ಸಿ ಸಂಗ್ರಹವೆಂದು ಪ್ರಸಿದ್ಧವಾಗಿರುವ ಕೈಫಿಯತ್ತು. ಶಾಸನ ಪ್ರತಿಗಳು, ನಕ್ಷೆ ಚಿತ್ರ, ನಾಣ್ಯ ಇತ್ಯಾದಿಗಳು ಉಳಿದುಕೊಂಡು ಬಂದಿವೆ. ಇವುಗಳಲ್ಲಿ ೩೯ ಕೈಫಿಯತ್ತುಗಳು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯವು. ಅಜಿಲರ ಕೈಫಿಯತ್ತು, ಜಮಾಲಾಬಾದು ಕೈಫಿಯತ್ತು ಇತ್ಯಾದಿ ಆರು ಚಾರಿತ್ರಿಕ ಕೈಫಿಯತ್ತುಗಳು, ಮೂಡಬಿದರೆ ಕೈಫಿಯತ್ತು, ಕಾಪಿನ ದೇವಸ್ಥಾನದ ಕೈಫಿಯತ್ತು ಇತ್ಯಾದಿ ಹತ್ತು ಸ್ಥಳ ಪುರಾಣಗಳು, ಕದಿರೆ ಮಾಗಣೆ ಕೈಫಿಯತ್ತು, ಹೊಸಂಗಡಿ ಮಾಗಣೆ ಕೈಫಿಯತ್ತು ಇತ್ಯಾದಿ ಸಂಕೀರ್ಣ ವಿಷಯಗಳಿಗೆ ಸಂಬಂಧಿಸಿದ ಹದಿನೇಳು ಕೈಫಿಯತ್ತುಗಳು ಹಾಗೂ ಉಡುಪಿಯ ಅಷ್ಟಮಠಗಳಿಗೆ ಸಂಬಂಧಿಸಿದ ಕೈಫಿಯತ್ತುಗಳನ್ನು ಕೆ. ಕುಶಾಲಪ್ಪಗೌಡ ಮತ್ತು ಕೆ.ಚಿನ್ನಪ್ಪ ಗೌಡ ಅವರು ಸಂಗ್ರಹಿಸಿ ವಿವರಗಳೊಂದಿಗೆ ಪ್ರಕಟಿಸಿದ್ದಾರೆ. ಇವುಗಳೂ ಸಹ ೧೮ನೆಯ ಶತಮಾನದಲ್ಲಿ ಜಿಲ್ಲೆಯಲ್ಲಿ ರಚಿತವಾದ ಸಾಹಿತ್ಯ ಕೃತಿಗಳಾಗಿದ್ದು, ಜಿಲ್ಲೆಯ ಚರಿತ್ರೆ, ಸಂಸ್ಕೃತಿ, ಆಚರಣೆಗಳಿಗೆ ಪೂರಕವಾಗಿ. ಮೌಖಿಕ ಇತಿಹಾಸವೆಂದು ಪರಿಗಣಿಸಬಹುದು.

೧೯ನೆಯ ಶತಮಾನದ ಆದಿಭಾಗದಲ್ಲಿ ಎಂದರೆ ೩೦–೧೦–೧೮೩೪ರಂದು ಜರ್ಮನಿಯ ಬಾಸೆಲ್‌ಮಿಷನ್ ಅವರ ಮಿಷನರಿಗಳು ಮಂಗಳೂರಿನಲ್ಲಿ ನೆಲೆಸಿ ಮುದ್ರಣ ಕಾರ್ಯ ಆರಂಭಿಸಿದ್ದು. ಅನೇಕ ಸಾಹಿತ್ಯ ಕೃತಿಗಳು ರಚನೆಗೊಂಡು ಮುದ್ರಿತವಾದವು. (ಈ ಹಂತದಲ್ಲಿ ಮುದ್ರಿತವಾದ ಪತ್ರಿಕೆಗಳ ಬಗ್ಗೆ ಪತ್ರಿಕೋದ್ಯಮ ಅಧ್ಯಾಯದಲ್ಲಿ ವಿವರಿಸಲಾಗಿದೆ). ಈ ಮಿಷನ್ನಿನ ಜಿ.ಹೆಚ್. ವೈಗಲ್ ೧೮೪೧ರಲ್ಲಿ ಮುಂಬಯಿಯಿಂದ ಮುದ್ರಣಯಂತ್ರವನ್ನು ಪಡೆದುಕೊಂಡು ಬಂದು 'ಜರ್ಮನ್ ಇವ್ಯಾಂಜೆಲಿಕಲ್ ಮಿಶನ್ ಪ್ರೆಸ್' ಅನ್ನು ಆರಂಭಿಸಿ ಇಲ್ಲಿ ಮೊದಲಿಗೆ ತುಳು ಕೀರ್ತನೆಗಳು ಅನಂತರ ಕಿರುಪ್ರಮಾಣದ ಮತ ಪುಸ್ತಕಗಳು, ಮುಂದೆ ಕುಮಾರವ್ಯಾಸಭಾರತ, ಬಸವ ಪುರಾಣ, ಚೆನ್ನಬಸವ ಪುರಾಣ, ಜೈಮಿನಿ ಭಾರತದಂತಹ ದೊಡ್ಡ ಗಾತ್ರದ ಪುಸ್ತಕಗಳು ಪ್ರಕಟವಾದವು. ಇವೆಲ್ಲಾ ಕಲ್ಲಚ್ಚಿನ ಪ್ರತಿಗಳು. ೧೮೫೧ರಲ್ಲಿ ಬಾಸಲ್‌ನಿಂದಲೇ ಬಿಡಿಮೊಳೆಗಳಿಂದ ಮುದ್ರಿಸಬಹುದಾದ ಯಂತ್ರೋಪಕರಣಗಳು ಬಂದವು. ಕನ್ನಡವಲ್ಲದೆ ತಮಿಳು, ಮಲೆಯಾಳಿ, ದೇವನಾಗರಿ, ರೋಮನ್ ಮತ್ತು ಜರ್ಮನ್ ಭಾಷೆಗಳಲ್ಲೂ ಮುದ್ರಣ ಕಾರ್ಯ ನಡೆಯುತ್ತಿತ್ತು. ಧಾರ್ಮಿಕ ಪುಸ್ತಕವಲ್ಲದೆ, ಪಠ್ಯಪುಸ್ತಕ, ಪಂಚಾಂಗ ಇತ್ಯಾದಿಗಳು ಮುದ್ರಣವಾಗುತ್ತಿದ್ದವು. ೧೮೫೯ರಲ್ಲಿ ಭಾರತದ ನಕಾಶೆಯನ್ನು ದೊಡ್ಡ ಅಳತೆಯಲ್ಲಿ ಬಹುವರ್ಣದಲ್ಲಿ ಕನ್ನಡದಲ್ಲಿ ಪ್ರಕಟಿಸಲಾಗಿತ್ತು. ರಾಜೇಂದ್ರ ನಾಮೆ ಹಾಗೂ ಭೂತಾಳ ಪಾಂಡ್ಯ ಇವುಗಳು ಪ್ರಕಟಿತವಾದ ಇನ್ನಿತರ ಗ್ರಂಥಗಳು. ಒತ್ತಕ್ಷರಗಳನ್ನು ಅಕ್ಷರದ ಕೆಳಗೆ ಬರೆಯುವ ಬದಲು ಅವುಗಳನ್ನು ಒಂದೇ ಸಾಲಿನಲ್ಲಿ ಬರೆಯುವಂತೆ ಲಿಪಿ ಸುಧಾರಣೆ ಮಾಡಲಾಯಿತು. ಉದಾಹರಣೆಗೆ ಈ = ಇೀ, ಅಕ್ಕ – ಅಕ್‌ಕ, ಸ್ವಾತಂತ್ರ್ಯ = ಸ್‌ವಾತಂತ್‌ರ್‌ಯ ಇತ್ಯಾದಿ. ಆದರೆ ಈ ಬದಲಾವಣೆ ಜನಪ್ರಿಯವಾಗಲಿಲ್ಲ.

ಇದೇ ವೇಳೆಯಲ್ಲಿ ಮಂಗಳೂರಿನಲ್ಲಿ ರೋಮನ್ ಕ್ಯಾಥೋಲಿಕ್‌ರು ತಮ್ಮದೇ ಆದ ಮುದ್ರಣ ಯಂತ್ರವೊಂದನ್ನು ಪಡೆದು ಪ್ರವಚನ ಪುಸ್ತಕ, ಪಠ್ಯಪುಸ್ತಕಗಳನ್ನು ಮುದ್ರಿಸಿದರು. ಇವರು ಹೆಚ್ಚಾಗಿ ಕೊಂಕಣಿ ಭಾಷೆಗೆ ಪ್ರೋತ್ಸಾಹ ನೀಡಿದರು. ಮುಂಬಯಿ ಸರ್ಕಾರದ ಕೆಲವು ಕ್ರಮಿಕ ಪುಸ್ತಕಗಳು ದೊಡ್ಡ ಪ್ರಮಾಣದಲ್ಲಿ ಮುದ್ರಣವಾದವು. ಅತ್ತಾವರದ ಅನಂತಾಚಾರಿ ಬಹುಸುಂದರವಾದ ಅಕ್ಷರಗಳನ್ನು ಇವರಿಗೆ ತಯಾರಿಸಿಕೊಟ್ಟಿದ್ದು ಮುಂದೆ ಅನಂತ ಶೇಡೆಡ್ ಎಂಬ ಹೆಸರಿನಲ್ಲಿಯೇ ಪ್ರಸಿದ್ಧವಾಯಿತೆಂದು ಶ್ರೀನಿವಾಸ ಹಾವನೂರ ಅವರು ತಿಳಿಸುತ್ತಾರೆ.

**ಆಧುನಿಕ ಸಾಹಿತ್ಯ**

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿಯೇ ಜಿಲ್ಲೆಯಲ್ಲಿ ಆಧುನಿಕ ಸಾಹಿತ್ಯ ಆರಂಭಗೊಂಡಿತು. ಮುಖ್ಯವಾಗಿ ಕ್ರೈಸ್ತ ಮಿಷನರಿಗಳು ಜಿಲ್ಲೆಯಲ್ಲಿ ನೆಲೆಸಿ ಅಂದಿಗೆ ಆಧುನಿಕವೆನಿಸಿದ ಮುದ್ರಣ ಯಂತ್ರೋಪಕರಣಗಳನ್ನು ತರಿಸಿ ಪತ್ರಿಕೆಗಳು ಹಾಗೂ ಪುಸ್ತಕಗಳನ್ನು ಪ್ರಕಟಿಸಿದ್ದು, ಸಾಹಿತ್ಯ ಹೆಚ್ಚು ಜನರಿಗೆ ತಲುಪಲು ಸಾಧ್ಯವಾಯಿತು. ಈ ವಿದೇಶಿಯರು ಸ್ಥಳೀಯ ವಿದ್ವಾಂಸರನ್ನೂ ಪರಿಗಣಿಸಿ ಸಹ ಬರಹಗಾರರಾಗಿ ಪ್ರೋತ್ಸಾಹಿಸಿದರು. ಮಿಷನರಿಗಳು ಧರ್ಮ ಪ್ರಚಾರಕ್ಕಾಗಿ ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಿದ್ದು, ಹರ್ಮನ್ ಮೋಗ್ಲಿಂಗ್‌ನ 'ಕ್ರೈಸ್ತ ಗೀತೆಗಳು' (೧೮೪೮) ಜೆ. ಮ್ಯಾಕ್‌ರವರ ಬಾಲಕ ಗೀತೆಗಳು (೧೮೪೯), ಜೆ. ವೈಗಲ್‌ರವರ ಕ್ರೈಸ್ತಗೀತೆಗಳು, ಪ್ರಾರ್ಥನೆಗಳು (೧೮೬೨) ಇತ್ಯಾದಿಗಳು ಕನ್ನಡ ಛಂದಸ್ಸು, ದಾಸವಾಣಿಗಳನ್ನು ಆಧರಿಸಿ ಹಾಡುಗಬ್ಬಗಳಾಗಿ ರಚಿತವಾಗಿರುವಂತಹವು. ಮಿಷನರಿಗಳ ಸಾಮಾಜಿಕ ಕಾರ್ಯಗಳಲ್ಲಿ ವಿದ್ಯಾಭ್ಯಾಸವೂ ಒಂದಾಗಿದ್ದು, ಪಠ್ಯಪುಸ್ತಕಗಳ ರಚನೆಗಳಾದವು. ಮೋಗ್ಲಿಂಗ್ ಹಾಗೂ ಕೌಂಡಿಣ್ಯರಿಂದ ೧೮೭೫ರಲ್ಲಿ ರಚಿತವಾದ 'ಶಾಲಾಗೃಹ ಪಠಣೋದ್ದಿಷ್ಯ ದೇವವಾಕ್ಯ ವಾಖ್ಯಾನವು'; ಫ್ರೆಡ್ರಿಕ್ ಜಿಗ್ಲೆರ್‌ರವರ ಕನ್ನಡಶಾಲಾ ವ್ಯಾಕರಣ (೧೮೬೬) ಗಣಿತನ್ಯಾಯ (೧೮೭೦) ಮತ್ತು ಗಣಿತಾಭ್ಯಾಸ (೧೮೭೭), ಕ್ರಿಸ್ತಾನುಜವತ್ಸರವರ ಕನ್ನಡ ಪಂಚಾಂಗವು (೧೮೭೦), ಭಾರದ್ವಾಜ ಶಿವರಾವ್ ಅವರ 'ವ್ಯಾಯಾಮ ದೀಪಿಕೆ' (೧೮೯೬) ಇತ್ಯಾದಿ ಉದಾಹರಿಸಬಹುದು. ಕೆಲಕಾಲ ಮಂಗಳೂರಿನಲ್ಲಿದ್ದ ರೆವರೆಂಡ್ ಎಫ್. ಕಿಟ್ಟೆಲ್, ಹಲವಾರು ಧಾರ್ಮಿಕ ಗೀತೆಗಳನ್ನು ರಚಿಸಿದ್ದು ೧೮೯೪ರಲ್ಲಿ ಕನ್ನಡ–ಕನ್ನಡ–ಇಂಗ್ಲೀಷ್ ನಿಘಂಟನ್ನು ಬಾಸಲ್ ಮಿಷನ್‌ನಿಂದ ಪ್ರಕಟಿಸಿದರು. ಕೆಲವು ಹಳಗನ್ನಡಕಾವ್ಯ, ಸಂಶೋಧನಾ ಲೇಖನ, ಪುಸ್ತಕಗಳು ಹಾಗೂ ಇಂಗ್ಲೀಷ್‌ನಲ್ಲಿ ಕನ್ನಡ ವ್ಯಾಕರಣಗಳನ್ನು ಬರೆದಿದ್ದಾರೆ. ಬಾಸೆಲ್ ಮಿಷನ್ ಅವರಿಗೆ ಬಿ. ಲೂಥಿ ಅವರೂ ಕೆಲವು ಪದ್ಯಗಳನ್ನು ಅನುವಾದಿಸಿಕೊಟ್ಟಿದ್ದಾರೆ.

ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ನವೋದಯ ಕವಿಗಳಲ್ಲಿ ಆದ್ಯರಾದ ಪಂಜೆ ಮಂಗೇಶ ರಾಯರು (೧೮೭೪–೧೯೩೭) ಸ್ಥಳೀಯವಾಗಿ ಹಾಗೂ ಚೆನ್ನೈನಲ್ಲಿ ಹೆಚ್ಚಿನ ಅಭ್ಯಾಸ ಮಾಡಿ ಮಂಗಳೂರಿನ ಶಾಲಾ ಕಾಲೇಜುಗಳಲ್ಲಿ ಉಪಾಧ್ಯಾಯರಾಗಿ ನಂತರ ವಿದ್ಯಾ ಇಲಾಖೆಯಲ್ಲಿ ಉನ್ನತ ಪದವಿ ಪಡೆದವರು. ಪಂಜೆಯವರು ೧೮೯೩ ರಿಂದಲೇ ಪದ್ಯ ರಚಿಸುತ್ತಿದ್ದರಾದರೂ ೧೯೦೦ರಲ್ಲಿ ಆರಂಭವಾದ 'ಸುವಾಸಿನಿ' ಪತ್ರಿಕೆಯಲ್ಲಿ ಪದ್ಯ, ಲಘುಪ್ರಬಂಧ, ವಿಮರ್ಶೆ ವಿಡಂಬನೆಗಳಲ್ಲದೆ ಸಾಮಾಜಿಕ ಹಾಗೂ ಐತಿಹಾಸಿಕ ಕಥೆಗಳನ್ನು ಪ್ರಕಟಿಸಿದರು. ಪಂಜೆಯವರ ಕವಿತಾ ಸಂಗ್ರಹಗಳನ್ನು ಬಾಸೆಲ್ ಮಿಷನ್‌ರವರು 'ಕನ್ನಡ ಮೊದಲನೆಯ ಪುಸ್ತಕ' (ಪದ್ಯ ಪುಸ್ತಕ)ವನ್ನು ೧೯೧೨ರಲ್ಲೂ 'ಕನ್ನಡ ಎರಡನೆಯ ಪುಸ್ತಕ' ೧೯೧೯ರಲ್ಲಿಯೂ ಹೊರತಂದರು. ಬಾಲ ಸಾಹಿತ್ಯದ ಆದ್ಯ ಪ್ರವರ್ತಕರೆಂದೇ ಪಂಜೆಯವರನ್ನು ಗುರುತಿಸಿದ್ದು, ಅವರ 'ಹಾವಿನ ಹಾಡು', 'ಹುತ್ತರಿಹಾಡು', 'ತೆಂಕಣ ಗಾಳಿಯಾಟ' ಮುಂತಾದ ಪದ್ಯಗಳು 'ಗುಡುಗುಡು ಗುಮ್ಮಟದೇವ', 'ಮೂರು ಕರಡಿಗಳು' ಇತ್ಯಾದಿ ಕಥೆಗಳು ಇಂದಿಗೂ ಜನಪ್ರಿಯವಾಗಿವೆ. ಪಂಜೆಯವರು ಮಕ್ಕಳ ಸಾಹಿತ್ಯದ ಪ್ರಕಟಣೆ, ಪ್ರಚಾರಗಳಿಗಾಗಿಯೇ ೧೯೨೧ರಲ್ಲಿ 'ಬಾಲ ಸಾಹಿತ್ಯ ಮಂಡಲ'ವೊಂದನ್ನು ಸ್ಥಾಪಿಸಿ ಮಕ್ಕಳಿಗೆ ಒಳ್ಳೆಯ ಸಾಹಿತ್ಯ ಒದಗಿಸಿದರು. ಕವಿಶಿಷ್ಯ, ಹರಟೆ ಮಲ್ಲ, ರಾ.ಮ.ಪಂ., ಇತ್ಯಾದಿ ಕಾವ್ಯನಾಮದಲ್ಲಿ ರಚಿಸುತ್ತಿದ್ದ ಪಂಜೆಯವರು ಮೂಡಬಿದಿರೆಯ ಶಾಸನಗಳು, ಬಿಳಗಿ ಅರಸರ ವಂಶಾವಳಿ ಇತ್ಯಾದಿ ಸಂಶೋಧನಾ ಲೇಖನಗಳನ್ನು 'ಪಂಚಕಜ್ಜಾಯ' ಎಂಬ ಹೆಸರಿನಲ್ಲಿ ಸಂಗ್ರಹಿಸಿ ೧೯೨೭ರಲ್ಲಿ ಪ್ರಕಟಿಸಿದರು. ರಾಯಚೂರಿನಲ್ಲಿ ೧೯೩೪ರಲ್ಲಿ ನಡೆದ ೨೦ನೇ ಅಖಿಲ ಭಾರತದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪಂಜೆಯವರ ಲೇಖನಗಳನ್ನು ಸಂಗ್ರಹಿಸಿ ಹಲವು ಸಂಪುಟಗಳಲ್ಲಿ ಓರಿಯಂಟಲ್ ಲಾಂಗ್‌ಮೆನ್ಸ್ ಪ್ರಕಾಶನದವರು ಪ್ರಕಟಿಸಿದ್ದಾರೆ.

ಮಂಗಳೂರಿನವರೇ ಆದ ಬೆನಗಲ್ ರಾಯರಾಯರು (೧೮೭೬–೧೯೪೩) ಮೈಸೂರು, ಚೆನ್ನೈ, ಮುಂಬಯಿಗಳಲ್ಲಿ ಸ್ನಾತಕೋತ್ತರ ಹಾಗೂ ನ್ಯಾಯಶಾಸ್ತ್ರಗಳ ಪದವಿ ಪಡೆದು ಈ ಪ್ರದೇಶಗಳಲ್ಲಿಯೇ ವಿವಿಧ ಹುದ್ದೆಗಳಲ್ಲಿದ್ದು, ಅಂತಿಮವಾಗಿ ಚೆನ್ನೈನಲ್ಲಿ ಅಂದಿನ ಮದರಾಸು ಸರ್ಕಾರದ ಭಾಷಾಂತರ ಇಲಾಖೆಯ ಮುಖ್ಯಸ್ಥರಾಗಿ ನೆಲೆಸಿದ್ದರು. ರಾಮರಾಯರಿಗೆ ತೆಲುಗು, ಬಂಗಾಳಿ, ಮರಾಠಿ ಮುಂತಾದ ಭಾಷೆಗಳಲ್ಲಿ

ಪ್ರಾವೀಣ್ಯತೆಯಿದ್ದು, ತೆಲುಗಿನಿಂದ ಕಲಹಪ್ರಿಯ ಎಂಬ ನಾಟಕ, ಸತ್ಯರಾಜನ ಪೂರ್ವದೇಶದ ಯಾತ್ರೆಗಳು ಕಾದಂಬರಿ, ಮರಾಠಿಯಿಂದ ರಾಧಾಮಾಧವ ಎಂಬ ಕಾದಂಬರಿ, ಸಂಸ್ಕೃತದಿಂದ ದೂತಾಂಗ ಎಂಬ ನಾಟಕ, ಬಂಗಾಳಿಯಿಂದ ಕೃಷ್ಣಕುಮಾರಿ ಎಂಬ ನಾಟಕ, ಇತ್ಯಾದಿ ಭಾಷಾಂತರಿಸಿದ್ದಲ್ಲದೆ ಸ್ವತಂತ್ರವಾಗಿ ಕನ್ನಡದಲ್ಲಿ ಇರಾವತಿ, ಚಿಕ್ಕಕಥೆಗಳು, ಮಹನೀಯರ ಚರಿತ್ರೆ ಮಾಲೆಗಳನ್ನು ರಚಿಸಿದ್ದಾರೆ. ತಂಜಾವೂರು, ಹಳೇಬೀಡು, ಹೊಳೆಹೊನ್ನೂರುಗಳ ಕೈಫಿಯತ್ತುಗಳನ್ನು ಬರೆದಿದ್ದು, ಪ್ಯಾನಂ ಸುಂದರಶಾಸ್ತ್ರಿಗಳ ಜೊತೆಗೂಡಿ 'ಪುರಾಣ ನಾಮ ಚೂಡಾಮಣಿ' ರಚಿಸಿದ್ದಾರೆ. 'ಸುವಾಸಿನಿ' ಪತ್ರಿಕೆಗೆ ಆರಂಭದಲ್ಲಿ ಸಂಪಾದಕರಾಗಿದ್ದ ರಾಮರಾಯರು ವಿಶ್ವವಿದ್ಯಾಲಯಗಳ ಹಲವಾರು ಸಮಿತಿಗಳಲ್ಲಿದ್ದಲ್ಲದೆ 'ಕರ್ನಾಟಕ ಏಕೀಕರಣ ಸಂಘದ' ಅಧ್ಯಕ್ಷರೂ ಆಗಿದ್ದರು. ೧೯೨೫ರಲ್ಲಿ ಬೆಳಗಾವಿಯಲ್ಲಿ ನಡೆದ ಹನ್ನೊಂದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಮುಳಿಯ ತಿಮ್ಮಪ್ಪಯ್ಯ (೧೮೮೮–೧೯೫೦) ರವರು ಬಂಟ್ವಾಳ ತಾಲೂಕಿನ ಮುಳಿಯದಲ್ಲಿ ಜನಿಸಿದ್ದು, ಸ್ಥಳೀಯವಾಗಿ ಹಾಗೂ ತಿರುವಾಂಕೂರುಗಳಲ್ಲಿ ಸಂಸ್ಕೃತ ಹಾಗೂ ಮೈಸೂರಿನಲ್ಲಿ ಸಂಗೀತಾಭ್ಯಾಸ ಮಾಡಿ, ಮೊದಲಿಗೆ ಮಂಗಳೂರಿನ ಕೆನರ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ನಂತರ ಸೆಂಟ್ ಅಲೋಸಿಯಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಪೇಜಾವರ ಭೋಜರಾಯರೊಂದಿಗೆ ಸೇರಿ 'ಕನ್ನಡ ಕೋಗಿಲೆ' ಎಂಬ ಮಾಸಪತ್ರಿಕೆ (೧೯೧೪) ಆರಂಭಿಸಿ ಅದರಲ್ಲಿ ತಮ್ಮ ಮೊದಮೊದಲ ನಾಟಕ, ಕವಿತೆಗಳನ್ನು ಪ್ರಕಟಿಸಿದರು. ಮುಂದೆ 'ಪ್ರೇಮಪಾಶ' 'ಪಶ್ಚಾತ್ತಾಪ' ಕಾದಂಬರಿಗಳು; ಸೊಬಗಿನಬಳ್ಳಿ (ಶಂಖರಾಸುರ ವಧೆ) (ಕಾವ್ಯ), ಪಂಪನನ್ನು ಕುರಿತು 'ನಾಡೋಜ ಪಂಪ' ವಿಮರ್ಶಾಕೃತಿ ಹಾಗೂ ಪಂಪನ ಎರಡು ಕಾವ್ಯಗಳು ಹಾಗೂ ಶಿಶುಮಾಯಣನ ತ್ರಿಪುರ ಸಂಹಾರಗಳ ಗದ್ಯಾನುವಾದ, ವಿಮರ್ಶಾಗ್ರಂಥ 'ಪಾರ್ತಿಸುಬ್ಬ' 'ಆಂಡಯ್ಯನೂ ಕನ್ನಡ ಮೆನಿಪ್ಪಾನಾಡು' ಸೇರಿದಂತೆ ಹಲವಾರು ಬಿಡಿ ಲೇಖನಗಳ ಸಂಗ್ರಹಗಳು 'ಕನ್ನಡ ಸಾಹಿತ್ಯ ಮತ್ತು ಇತರ ಉಪನ್ಯಾಸಗಳು' ಮತ್ತು 'ಕನ್ನಡ ನಾಡೂ ದೇಸೀ ಸಾಹಿತ್ಯವೂ' ಹಾಗೂ ಕೊನೆಯ ಕಾದಂಬರಿ 'ವೀರ ಬಂಕೆಯ' ಪ್ರಕಟವಾಗಿವೆ. ನವನೀತ ರಾಮಾಯಣ, ರಾವುತ ರಂಗಪ್ಪ, ಕಾವ್ಯ ಸಮಯ, ಸಂಸ್ಕೃತಿ, ಕೌಟಿಲ್ಯನ ಅರ್ಥಶಾಸ್ತ್ರ ಕವಿರಾಜಮಾರ್ಗ ವಿವೇಕ ಮುಂತಾದವು ಭಾಗಶಃ ಪ್ರಕಟವಾಗಿವೆ. ಮುಳಿಯ ತಿಮ್ಮಪ್ಪಯ್ಯರವರು ೧೯೩೧ರಲ್ಲಿ ಕಾರವಾರದಲ್ಲಿ ನಡೆದ ೧೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ಬಹುಮುಖ ಪ್ರತಿಭೆಯುಳ್ಳವರಾಗಿದ್ದ ಎಂ. ಗೋವಿಂದ ಪೈಗಳು (೧೮೮೩–೧೯೬೩) ರಚಿಸಿದ ಮೊದಲ ಕವನ ೧೯೦೦ರಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಅದೇ ಹೆಸರಿನಲ್ಲಿ ಪ್ರಕಟವಾಗಿದ್ದಲ್ಲದೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ (ಮೂರು ರೂಪಾಯಿ) ಸಹ ಪಡೆಯಿತು. ಪೈಯವರ ಮೊದಲ ಕವನ ಸಂಕಲನ 'ಗಿಳಿವಿಂಡು'ವನ್ನು ಪಂಜೆ ಮಂಗೇಶರಾಯರು ತಮ್ಮ ಬಾಲ ಸಾಹಿತ್ಯಮಂಡಲದಿಂದ ಪ್ರಕಟಿಸಿದರು (೧೯೩೦). ಆದರೆ ಗೋವಿಂದ ಪೈ ಅವರ ಜೀವಿತಾವಧಿಯಲ್ಲಿ ಅವರ ಬರಹಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿರುವುದು ಕಡಿಮೆ. ಪೈ ಅವರ ನಿಧನಾ ನಂತರ 'ನಂದಾದೀಪ' ಎಂಬ ಕವನ ಸಂಕಲನ ಪ್ರಕಟವಾಗಿದ್ದು ಮತ್ತೆ ಈ ಎರಡೂ ಸಂಕಲನ ಒಂದು ಗೂಡಿಸಿ 'ಹೃದಯರಂಗ' ಎಂಬ ಹೆಸರಿನಲ್ಲಿ ೧೯೬೯ರಲ್ಲಿ ಹೊರಬಂದಿತು. ಇನ್ನಷ್ಟು ಪದ್ಯಗಳ ಸಂಗ್ರಹ 'ಇಂಗಡಲು' ಸಹ ಹೊರಬಂದಿದೆ. ಖಂಡ ಕಾವ್ಯಗಳಾದ ಗೊಲ್ಗಥಾ ಮತ್ತು ವೈಶಾಖಿಗಳು ಹಾಗೂ ಹೆಬ್ಬೆರಳು, ಚಿತ್ರಭಾನು ಅಥವಾ ೧೯೪೨, ತಾಯಿ, ನಾಟಕಗಳು ಪುಸ್ತಕ ರೂಪದಲ್ಲಿ ಬಂದಿವೆ. 'ಶ್ರೀಕೃಷ್ಣ ಚರಿತ್ರೆ' ಬಂಗಾಳಿಯಿಂದ ಅನುವಾದಗೊಂಡಿದ್ದಾದ 'ನೋ ನಾಟಕಗಳು' ಜಪಾನಿ ಭಾಷೆಯಿಂದ ಭಾಷಾಂತರಗೊಂಡಿದ್ದು, ಪೈಯವರು ಬರೆದ ಕೆಲವು ವ್ಯಕ್ತಿಚಿತ್ರ, ಆತ್ಮಕಥೆ, ಭಾಷಣಗಳು 'ಕನ್ನಡದ ಮೊರೆ' ಎಂಬ ಹೆಸರಿನಲ್ಲಿಯೂ, ಧಾರವಾಡದಲ್ಲಿ ನೀಡಿದ ಉಪನ್ಯಾಸಗಳು 'ಮೂರು ಉಪನ್ಯಾಸಗಳು' ಎಂದೂ, ಪೈ ಅವರು ಇತರರಿಗೆ ಬರೆದ 'ಪತ್ರಗಳು ಚಿತ್ರಿಸಿದ ಗೋವಿಂದಪೈ' ಪ್ರಕಟವಾಗಿವೆ. ಭಕ್ತವಾಣಿ, ಪಾರ್ಶ್ವನಾಥ ತೀರ್ಥಂಕರ ಚರಿತ್ರೆ, ಶ್ರೀ ಬಾಹುಬಲಿ ಗೊಮ್ಮಟೇಶ್ವರ ಚರಿತ, ಕಾಯಾಯ್ ಕೊಮಾಜಿ ಮತ್ತು ಇತರ ಏಳು ನಾಟಕಗಳು ಪೈ ಅವರ ಇನ್ನಿತರ ಕೃತಿಗಳು. ಗೋವಿಂದಪೈ ಅವರನ್ನು ಸಂಶೋಧಕರೆಂದೇ ಗುರುತಿಸುವಂತಿದ್ದು, ೧೮೫ ಲೇಖನಗಳು ಲಭ್ಯವಾಗಿವೆ. ಇನ್ನೂ ಕೆಲವು ಅಲಭ್ಯವಾಗಿವೆ. ಮೊದಲಿಗೆ, ಕೆಲವು ಲೇಖನಗಳನ್ನು ಸಂಗ್ರಹಿಸಿ 'ಗೋವಿಂದ ಪೈ ವಾಙ್ಞಯ ದರ್ಶನ (೧೯೬೬) ಪ್ರಕಟವಾಗಿದ್ದು, ಲಭ್ಯ ಲೇಖನ (ಮುನ್ನುಡಿ, ಪುಸ್ತಕ ವಿಮರ್ಶೆ, ಸಂಶೋಧನಾ ಲೇಖನಗಳನ್ನು) ಸಂಗ್ರಹಿಸಿ ಉಡುಪಿಯ ಎಂ.ಜಿ.ಎಂ. ಕಾಲೇಜಿನ 'ಗೋವಿಂದ ಪೈ ಸಂಶೋಧನಾ ಕೇಂದ್ರ'ದಿಂದ ೧೯೯೫ರಲ್ಲಿ 'ಗೋವಿಂದ ಪೈ ಸಂಶೋಧನ ಸಂಪುಟ' ಹೊರತರಲಾಗಿದೆ. ಗೋವಿಂದ ಪೈಗಳಿಗೆ ಪಾಲಿ, ಗ್ರೀಕ್, ಲ್ಯಾಟಿನ್, ಪರ್ಶಿಯಾ ಇತ್ಯಾದಿ ಸೇರಿದಂತೆ ಅನೇಕ ಭಾಷೆಗಳ ಪರಿಚಯವಿದ್ದು, ತಮ್ಮ ಲೇಖನಗಳಿಗೆ ಅವುಗಳೆಲ್ಲದರ ಪ್ರಯೋಜನ ಪಡೆದಿದ್ದಾರೆ. ೧೯೪೯ರಲ್ಲಿ ಅಂದಿನ ಮದ್ರಾಸ್ ಸರ್ಕಾರದಿಂದ 'ರಾಷ್ಟ್ರಕವಿ' ಪ್ರಶಸ್ತಿ ಪಡೆದ ಪೈಗಳು ೧೯೫೦ರಲ್ಲಿ ಮುಂಬಯಿಯಲ್ಲಿ ನಡೆದ ೩೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ

ಅಧ್ಯಕ್ಷರಾಗಿದ್ದರು.ಗೋವಿಂದ ಪೈಗಳು ೧೯೧೧ರಲ್ಲಿ ಅಂತ್ಯಪ್ರಾಸ ತೊರೆದು ಕವಿತೆಗಳನ್ನು ಪ್ರಕಟಿಸಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಪ್ರಮುಖ ಘಟ್ಟವೆಂದೇ ಪರಿಗಣಿಸಲಾಗಿದೆ.

ಹಟ್ಟಿಯಂಗಡಿ ನಾರಾಯಣರಾಯರು (೧೮೬೩–೧೯೨೧) ಮಂಗಳೂರಲ್ಲಿ ಜನಿಸಿದ್ದು, ಚೆನ್ನೈನಲ್ಲಿ ಸ್ನಾತಕ ಹಾಗೂ ನ್ಯಾಯಶಾಸ್ತ್ರಗಳಲ್ಲಿ ಪದವಿ ಪಡೆದು ಅಲ್ಲಿಯೇ ವಕೀಲಿಕೆ ಆರಂಭಿಸಿ ೧೯೦೩ರಲ್ಲಿ ಮುಂಬಯಿಯಲ್ಲಿ ನೆಲೆಸಿದರು. ಇಂಡಿಯನ್ ಸ್ಪೆಕ್ಟೇಟರ್, ಟೈಮ್ಸ್ ಆಫ್ ಇಂಡಿಯಾ, ಈಸ್ಟ್ ವೆಸ್ಟ್ ಇತ್ಯಾದಿ ಪತ್ರಿಕೆಗಳಿಗೆ ಬರೆಯುತ್ತಿದ್ದರು. ನಂತರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ವಾಗ್ಭೂಷಣಗಳಿಗೂ ಸಾಹಿತ್ಯದ ವಿಷಯಗಳ ಬಗ್ಗೆ ಬರೆಯತೊಡಗಿದರು. ಮೊದಲಿಗೆಂಬಂತೆ, ಆಂಗ್ಲ ಕವಿತೆಗಳ ಕನ್ನಡಾನುವಾದಗಳನ್ನು ಬಿಡಿಯಾಗಿ ಪ್ರಕಟಿಸಿ ನಂತರ 'ಆಂಗ್ಲ ಕವಿತಾವಳಿ' ಎಂಬ ಹೆಸರಿನಲ್ಲಿ ಹೊರತಂದರು (೧೯೧೯), ಅದೇ ವರ್ಷ 'ಕನ್ನಡ ಕಥಾನಕ' ವನ್ನೂ 'ಕೊಂಕಣಿ ಚೊ ಮೂಲಾದರ್ಶು' ಎಂಬ ಎರಡು ಭಾಗದ ಕೊಂಕಣಿ ಭಾಷೆಯ ಪುಸ್ತಕಗಳನ್ನು ಪ್ರಕಟಿಸಿದರು. ಅವರು 'ಗಾಯತ್ರಿ' (ಗಾಯತ್ರಿ ಮಂತ್ರ ಕುರಿತ ಇಂಗ್ಲಿಷ್–ಕನ್ನಡ ವ್ಯಾಖ್ಯಾನ); 'ಕನ್ನಡ ಕೃತಿಗಳು' (ದಾಸರ ಭಜನೆ ಹಾಡುಗಳು); 'ಬ್ರಹ್ಮಗೀತೆ' (ಬ್ರಹ್ಮ ಸಮಾಜದ ಅನುಯಾಯಿಗಳಿಗೆ ಹಾಡುಗಳು) ರಚಿಸಿದ್ದಲ್ಲದೆ 'Tracks for Thinker' ಮಾಲಿಕೆಯಲ್ಲಿ ಅನೇಕ ಕೈಪಿಡಿಗಳಂತಹ ಪುಸ್ತಕ ಪ್ರಕಟಿಸಿದ್ದಾರೆ. ನಾರಾಯಣರಾಯರ ಬಗ್ಗೆ ಬರೆದ ಶ್ರೀನಿವಾಸ ಹಾವನೂರ ಅವರು ನಾರಾಯಣರಾಯರ ಯಾವುದೇ ಪುಸ್ತಕಗಳಾದರೂ ಮೂವತ್ತು ಪುಟಗಳಿಗಿಂತ ಹೆಚ್ಚಾಗಿಲ್ಲವೆಂದು ತಿಳಿಸುತ್ತಾರಲ್ಲದೆ 'ನಾರಾಯಣರಾಯರು ಬರೆದದ್ದು ತೀರ ಎಂದರೆ ತೀರ ಕಡಿಮೆ. ಆದರೆ ನವೋದಯ ಕಾವ್ಯದ ಹಾಗೂ ಕನ್ನಡ ಶಬ್ಧ ಭಂಡಾರದ ಮೂಲವನ್ನು ಗುರುತಿಸುವಲ್ಲಿ ಮಾರ್ಗ ಪ್ರವರ್ತಕರೆನಿಸಿದರು' ಎಂದು ಹೇಳುತ್ತಾರೆ.

ಕಡೆಂಗೋಡ್ಲು ಶಂಕರಭಟ್ಟರು (೧೯೦೪–೧೯೬೮) ವಿಟ್ಲದಲ್ಲಿ ಜನಿಸಿ ಮಂಗಳೂರಿನ ಸೆಂಟ್ ಆಗ್ನೇಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. ಜೊತೆಗೆ 'ನವಯುಗ' ವಾರಪತ್ರಿಕೆಯ ಪತ್ರಕರ್ತರಾಗಿ, 'ರಾಷ್ಟ್ರಬಂಧು' ವಾರಪತ್ರಿಕೆಯ ಸಂಪಾದಕರಾಗಿ (೧೯೨೮–೩೩) ನಂತರ ಸ್ವತಃ 'ರಾಷ್ಟ್ರಮತ' ಪತ್ರಿಕೆ ಆರಂಭಿಸಿ ಕೊನೆಯವರೆಗೆ ನಡೆಸಿದರು. ಘೋಷಯಾತ್ರೆ, ಗಾಂಧಿಸಂದೇಶ ಇತ್ಯಾದಿ ಏಳು ಕವನ ಸಂಗ್ರಹಗಳು; ಧೂಮಕೇತು, ದೇವತಾಮನುಷ್ಯ, ಲೋಕದ ಕಣ್ಣು ಕಾದಂಬರಿಗಳು; ಗಾಜಿನ ಬಳೆ, ಹಿಂದಿನ ಕಥೆಗಳು, ದುಡಿಯುವ ಮಕ್ಕಳು–ಕಥಾ ಸಂಗ್ರಹ; ಉಷೆ, ಹಿಡಿಂಬೆ ಇತ್ಯಾದಿ ಏಳು ನಾಟಕಗಳಲ್ಲದೆ ಸಾಹಿತ್ಯ ವಿಮರ್ಶೆ/ಉಪನ್ಯಾಸಗಳ ಸಂಗ್ರಹ, 'ವಾಙ್ಮಯ ತಪಸ್ಸು' ಮೋತಿಲಾಲ್ ನೆಹರು ಅವರ ಭಾಷಣಗಳ ಅನುವಾದ, 'ಸ್ವರಾಜ್ಯಯುದ್ಧ'ಗಳು ಶಂಕರಭಟ್ಟರ ಪ್ರಕಟಿತ ಸಾಹಿತ್ಯಗಳು. ಇವಲ್ಲದೆ ಪತ್ರಿಕೆ, ಸ್ಮರಣ ಸಂಚಿಕೆ, ಇತ್ಯಾದಿಗಳಲ್ಲಿ ಅನೇಕ ಲೇಖನಗಳು ಪ್ರಕಟವಾಗಿವೆ. ಶಂಕರಭಟ್ಟರು ೧೯೬೫ರಲ್ಲಿ ಕಾರವಾರದಲ್ಲಿ ನಡೆದ ೪೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇತ್ತೀಚೆಗೆ ಕಡೆಂಗೋಡ್ಲು ಶತಮಾನೋತ್ಸವ ಸಮಿತಿಯವರು ಕಡೆಂಗೋಡ್ಲು ಅವರ ಸಮಗ್ರ ಸಾಹಿತ್ಯವನ್ನು ಆರು ಸಂಪುಟಗಳಲ್ಲಿ ಹೊರತಂದಿದ್ದಾರೆ.

ಸೇಡಿಯಾಪು ಕೃಷ್ಣಭಟ್ಟರು ಪುತ್ತೂರು ಬಳಿಯಲ್ಲಿ ಸೇಡಿಯಾಪುವಿನಲ್ಲಿ ಜನಿಸಿದ್ದು (೧೯೦೨–೧೯೯೬) ಚೆನ್ನೈ ಸರ್ಕಾರದ 'ವಿದ್ವಾನ್' ಪರೀಕ್ಷೆಯನ್ನು ಬಾಹ್ಯ ಅಭ್ಯರ್ಥಿಯಾಗಿ ಪೂರೈಸಿ, ಸೆಂಟ್ ಅಲೋಸಿಯಸ್ ಕಾಲೇಜಿನಲ್ಲಿ ಮೊದಲಿಗೆ ಕನ್ನಡ ಪಂಡಿತರಾಗಿ, ನಂತರ 'ಟ್ಯೂಟರ್' ಹಾಗೂ ಮುಂದೆ ಲೆಕ್ಚರರ್ ಆಗಿ ಕಾರ್ಯನಿರ್ವಹಿಸಿದರು. ಕೃಷ್ಣಭಟ್ಟರ ಪ್ರಕಟಿತ ಪುಸ್ತಕಗಳೆಂದರೆ ಕೆಲವು ಸಣ್ಣಕಾವ್ಯಗಳು, ಚಂದ್ರಖಂಡ (ಬಿಡಿ ಕವಿತೆಗಳು), ಪಳಮೆಗಳು (ಕಥಾಸಂಗ್ರಹ), ಕೆಲವು ದೇಶನಾಮಗಳು (ಸಂಶೋಧನಾ ಲೇಖನಗಳು), ಛಂದೋಗತಿ ಹಾಗೂ ಕನ್ನಡ ಛಂದಸ್ಸು, ತಥ್ಯದರ್ಶನಗಳು. 'ಆರ್ಯ' ಪದದ ಬಗ್ಗೆ ವಿಸ್ತಾರವಾಗಿ ಶೋಧಿಸಿದ 'ತಥ್ಯ ದರ್ಶನ' Discovery of Facts ಎಂಬ ಹೆಸರಿನಲ್ಲಿ ಅನುವಾದಗೊಂಡು ಪ್ರಕಟವಾಗಿದೆ. 'ಈಶ್ವರ ಸಂಕಲ್ಪ ಅಥವಾ ದೈವಲೀಲೆ' ಸೇಡಿಯಾಪು ಅವರ ಆತ್ಮವೃತ್ತಾಂತ. ತಮ್ಮ ಬಗ್ಗೆ ಲೇಖನ ಬರೆದ ಎಮ್. ರಾಮಚಂದ್ರ ಅವರಿಗೆ ಕೃಷ್ಣಭಟ್ಟರು ಬರೆದ ೪೫೦ ಪತ್ರಗಳಲ್ಲಿ ನೂರು ಪತ್ರ ಆರಿಸಿ 'ಪತ್ರಾವಳಿ' ಎಂಬ ಹೆಸರಿನಲ್ಲಿ ರಾಮಚಂದ್ರ ಅವರೇ ಪ್ರಕಟಿಸಿದ್ದಾರೆ. ಸೇಡಿಯಾಪು ಅವರ 'ತಥ್ಯದರ್ಶನ'ದ ಆಂಗ್ಲ ಅನುವಾದ ಅವರು ನಿಧನರಾದಂದೇ ಪ್ರಕಟವಾಗಿತ್ತು (೮–೬–೯೬) ಏರ್ಯಲಕ್ಷ್ಮೀನಾರಾಯಣ ಆಳ್ವ ಅವರಿಗೆ ಸೇಡಿಯವು ಅವರು ಬರೆದ ಪತ್ರಗಳಿಗೆ ಟಿಪ್ಪಣಿ ಸಹಿತವಾಗಿ ಆಳ್ವ ಅವರು 'ಪತ್ರಗಳು ಚಿತ್ರಿಸಿದ ಸೇಡಿಯಾಪು' ಎಂಬ ಗ್ರಂಥವನ್ನು ಹೊರತಂದಿದ್ದಾರೆ. ಸೇಡಿಯಾಪು ಅವರ ವಿಮರ್ಶಾ ಲೇಖನ ಸಂಗ್ರಹ 'ವಿಚಾರ ಪ್ರಪಂಚ'ಕ್ಕೆ ಮರಣೋತ್ತರ ಪಂಪ ಪ್ರಶಸ್ತಿ ನೀಡಲಾಯಿತು.

ಪೇಜಾವರ ಸದಾಶಿವರಾಯರು (೧೯೧೩–೧೯೩೯) ಕಟೀಲಿನ ಬಳಿಯಲ್ಲಿ ಜನಿಸಿ ಸ್ಥಳೀಯವಾಗಿ 'ಮಿತ್ರಮಂಡಳಿ' ಯಿಂದ ಸಾಹಿತ್ಯ ಕುರಿತು ವ್ಯಾಸಂಗ ಗೋಷ್ಠಿ ಹಾಗೂ ಹಲವಾರು ಕಾರ್ಯಕ್ರಮಗಳನ್ನು ನಡೆಸಿ ನಂತರ ವಾರಣಾಸಿಯಲ್ಲಿ ಅಭ್ಯಸಿಸಿ ಇಟಲಿ ದೇಶಕ್ಕೆ

ಇಂಜನಿಯರಿಂಗ್ ವಿದ್ಯಾಭ್ಯಾಸಕ್ಕೆ ಹೋದರು. ಅನೇಕ ಸಾಹಿತಿ ಮಿತ್ರರೊಂದಿಗೆ ಪತ್ರ ಸಂಪರ್ಕ ಇರಿಸಿಕೊಂಡಿದ್ದು ಅಂದಿಗೆ 'ನವ್ಯ' ಎನ್ನಬಹುದಾದ ಶೈಲಿಯಲ್ಲಿ ಕವಿತೆಗಳನ್ನು ರಚಿಸಿ ಇಲ್ಲಿಯ ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ಸರಪಳಿ, ಬೀದಿಗಿಳಿದ ನಾರಿ, ಜೀವನ ಸಂಗೀತ– ನಾಟಕಗಳು; ಅಂಧಶಿಲ್ಪ, ಶ್ರೀಗಂಧ– ಸಣ್ಣಕಥೆಗಳು ಕನ್ನಡದ ತ್ರೀವೇಣಿ ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ತೀವ್ರ ಖಾಯಿಲೆಯಿಂದಾಗಿ ತಮ್ಮ ೨೭ರ ಪ್ರಾಯದಲ್ಲಿಯೇ ತೀರಿಕೊಂಡರು. ನಂತರ ಗೆಳೆಯ ವಿ.ಕೃ.ಗೋಕಾಕರು ಸಾಂಗಲಿಯಲ್ಲಿದ್ದಾಗ ಪೇಜಾವರರ ಕಾವ್ಯವೊಂದರ ಹೆಸರಿನ 'ವರುಣ ಕುಂಜ' ಹೆಸರಿನಲ್ಲಿ ಪ್ರತಿವಾರ ಸಾಹಿತ್ಯ, ಸಂವಾದ ಕಾರ್ಯಕ್ರಮ ನಡೆಸುತ್ತಿದ್ದರು. ರಂ. ಶ್ರೀ. ಮುಗಳಿ ಅವರು ಪೇಜಾವರರ ಕವನ ಸಂಕಲನ 'ವರುಣ' ಹೊರತಂದರು. ಇನ್ನಿತರ ಕತೆ, ಲಲಿತ ಪ್ರಬಂಧ ಇತ್ಯಾದಿಗಳಾದ 'ಬಿರುಸು' 'ಬಾಡೂರಿನ ಸೊಬಗು ?', 'ನನ್ನ ಲೇಖನ' ಇತ್ಯಾದಿಗಳನ್ನು ನಾ. ದಾಮೋದರ ಶೆಟ್ಟಿಯವರು ಸಂಕಲಿಸಿ ವಾಚಿಕೆಯೊಂದನ್ನು ಪ್ರಕಟಿಸಿದ್ದಾರೆ. ಮುಂಬಯಿಯ ಕರ್ನಾಟಕ ಸಂಘ, ಪೇಜಾವರರ ಹೆಸರಿನಲ್ಲಿ ಪ್ರತಿ ವರ್ಷ ಉದಯೋನ್ಮುಖರ ಕವನ ಸಂಗ್ರಹಕ್ಕೆ ಪ್ರಶಸ್ತಿ ನೀಡುತ್ತಿದೆ.

ಕಾಸರಗೋಡಿನಲ್ಲಿ ೧೯೧೫ರಲ್ಲಿ ಜನಿಸಿ ಇಂದಿಗೂ ಅಲ್ಲಿಯೇ ನೆಲೆಸಿ ಕ್ರಿಯಾಶೀಲರಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಕಯ್ಯಾರ ಕಿಞ್ಞಣ್ಣ ರೈ ಅವರು ಗಡಿನಾಡಾದ ಕಾಸರಗೋಡು ಕರ್ನಾಟಕದಲ್ಲಿ ಮತ್ತೆ ವಿಲೀನವಾಗಬೇಕೆಂದೂ ಅವ್ಯಾಹತವಾಗಿ ಪ್ರತಿಪಾದಿಸುತ್ತಾ ಬಂದವರು. ಶ್ರೀಯುತರು ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಕೊರಗ, ಗಂಧವತಿ ಇತ್ಯಾದಿ ಕವನ ಸಂಗ್ರಹಗಳನ್ನು; ಪರಿಚಯ ಹಾಗೂ ಕುಮಾರನ್ ಆಶನ್ ಮೂರು ಕವಿತೆಗಳು ಅನುವಾದ ಸಂಗ್ರಹವನ್ನು ಹೊರತಂದಿದ್ದು ಅವರ ಆಯ್ದ ಕವನಗಳು ೧೯೮೬ರಲ್ಲಿ 'ಶತಮಾನದ ಗಾನ' ಎಂಬ ಹೆಸರಿನಲ್ಲೂ ನಂತರ ಸಮಗ್ರ ಕವನ ಸಂಗ್ರಹ 'ಪ್ರತಿಭಾ ಪಯಸ್ವಿನಿ' ೧೯೯೨ರಲ್ಲಿಯೂ ಪ್ರಕಟಗೊಂಡಿತು. ಅನ್ನದೇವರು ಮತ್ತು ಇತರ ಕಥೆಗಳು, ವಿರಾಗಿಣಿ (ನಾಟಕ), ರಾಷ್ಟ್ರಕವಿ ಗೋವಿಂದ ಪೈ (ವಿಮರ್ಶೆ), ರತ್ನರಾಶಿ(ವ್ಯಕ್ತಿಚಿತ್ರಗಳು) ಪದ್ಯಮಂಜರಿ (ಶಿಶುಗೀತೆಗಳು), ವ್ಯಾಕರಣ ಮತ್ತು ಪ್ರಬಂಧ (೪ ಭಾಗಗಳು) ನವೋದಯ ಪಾಠಮಾಲೆ (೧ರಿಂದ೫), ಲಕ್ಷ್ಮೀಶನ ಕಥೆಗಳು, ಎ.ಬಿ.ಶೆಟ್ಟಿ (ವ್ಯಕ್ತಿ ಚಿತ್ರ), ಮಲೆಯಾಳ ಸಾಹಿತ್ಯ ಚರಿತ್ರೆ (ಅನುವಾದ), ಇನ್ನಿತರ ಕೃತಿಗಳು, ರೈ ಅವರ ಕೃತಿಗಳು, ಮಲೆಯಾಳವೂ ಸೇರಿದಂತೆ ಹಲವಾರು ಭಾಷೆಗಳಿಗೆ ಅನುವಾದಿತವಾಗಿದೆ. ಸಂಗ್ರಹಿತ ಕೃತಿಗಳಲ್ಲದೆ ಪತ್ರಕರ್ತರೂ ಆಗಿದ್ದ ಅವರು ನೂರಾರು ಲೇಖನಗಳು, ವಿಮರ್ಶೆ, ಮುನ್ನುಡಿ, ಪತ್ರಗಳು ಇವೇ ಮುಂತಾದ ಬರಹಗಳು ಇನ್ನು ಸಂಗ್ರಹಿತವಾಗಬೇಕಾಗಿದೆ. ರೈ ಅವರಿಗೆ ಅಂದಿನ ಮದ್ರಾಸ್(ತಮಿಳುನಾಡು) ಸರ್ಕಾರದ ಪ್ರಶಸ್ತಿಯಲ್ಲದೆ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ೨೦೦೬ರಲ್ಲಿ 'ಏಕೀಕರಣ ಪ್ರಶಸ್ತಿ'ಗಳು ಲಭ್ಯವಾಗಿವೆ. ಶಾಲಾ ಉಪಾಧ್ಯಾಯ ವೃತ್ತಿಯೂ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದು ಸ್ಥಳೀಯವಾಗಿ ನಡೆಯುವ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲದೆ ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸಂಘಟಿತವಾಗಿದ್ದ ತಾಲೂಕು, ಜಿಲ್ಲಾ ಮಟ್ಟದ ಹಲವಾರು ಸಾಹಿತ್ಯ ಸಮ್ಮೇಳನಗಳ ಗೌರವಾಧ್ಯಕ್ಷರಾಗಿದ್ದು ೧೯೯೭ರಲ್ಲಿ ಮಂಗಳೂರಲ್ಲಿ ನಡೆದ ೬೬ನೇ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಮಂಜೇಶ್ವರದ ಬಿ. ಶಂಕರಭಟ್ಟರವರು (೧೯೦೮–೭೨) ಮಕ್ಕಳಿಗಾಗಿ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ನಾಲ್ಕಾರು ಹಂತಗಳಲ್ಲಿ ಮಕ್ಕಳ ವಯೋಮಾನಕ್ಕೆ ಅನುಸಾರವಾಗಿ ರಚಿಸಿದ್ದಾರೆ. ಕಾಡುಮೀನು, ಬುದ್ಧಿವಂತರ ಬುರುಡೆಗಳು, ಭೂದೇವಿಯ ಮದುವೆ, ನರಿಯ ನಟನೆ, ಇತ್ಯಾದಿಗಳನ್ನು ಉದಾಹರಿಸಬಹುದು. ಚಲುಗನ್ನಡ ಪಾಠಮಾಲೆ, ಚಲುಗನ್ನಡ ಪದ್ಯಮಾಲೆ, ಕವನ ಕಿಶೋರ ಇತ್ಯಾದಿಗಳನ್ನು ಸಂಪಾದಿಸಿದ್ದಾರೆ. ತೋಡಾರುವಿನಲ್ಲಿ ಜನಿಸಿದ ಟಿ. ಚಂದ್ರರಾಜಶೆಟ್ಟಿ (೧೯೦೮–೮೦) ಅವರು ೨೫೦೦ಕ್ಕೂ ಹೆಚ್ಚು ಕನ್ನಡ ಬರಹಗಾರರ ಪರಿಚಯಾವಳಿಯನ್ನು ಸಂಗ್ರಹಿಸಿದ್ದು, ಕಥೆ, ಕಾದಂಬರಿ, ಪ್ರವಾಸ ಸಾಹಿತ್ಯ, ಇತ್ಯಾದಿ ಕುರಿತು ೨೦ ಕೃತಿಗಳನ್ನು ರಚಿಸಿದ್ದಾರೆ. 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಸಂಪತ್ತು' ಲೇಖನ ಕನ್ನಡ ನುಡಿಯಲ್ಲಿ ಪ್ರಕಟಿಸಿದ್ದು, ಅದು ಮಕ್ಕಳ ಸಾಹಿತ್ಯ ರಚನಕಾರರ ಪರಿಚಯ ಲೇಖನವಾಗಿದೆ. ಸೋಮಯಾಜಿ ಬಂಟ್ವಾಳ ಪದ್ಮನಾಭ (ಜ ೧೯೧೭) ಅವರು ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಚಂದ್ರಹಾಸನ ಕಥೆ, ಪಂಚತಂತ್ರದ ಕಥೆಗಳು, ಕೋಟಿ ಚೆನ್ನಯ್ಯ ಇತ್ಯಾದಿ ಪ್ರಕಟಿಸಿದ್ದಾರೆ. ಮುಂಡಾಜೆಯ ರಾಮಚಂದ್ರ ಭಟ್ಟರು (ಜ ೧೯೧೪) ಮಕ್ಕಳಿಗಾಗಿ ಮಕ್ಕಳ ಗೀತೆ ರಾಮಾಯಣ, ತಮ್ಮನ ಕವಿತೆಗಳು, ರಾಮಣ್ಣನ ರಗಳೆಗಳು ಇತ್ಯಾದಿ ಬರೆದಿದ್ದಾರೆ. ಸುಳ್ಯದ ಕೆ. ಸಚ್ಚಿದಾನಂದಯ್ಯ (೧೯೩೦) ಶಿಕ್ಷಣ ಕ್ಷೇತ್ರದಲ್ಲಿದ್ದು ಶಿಕ್ಷಣ ಚಿಂತನ–ಮಂಥನಗಳಲ್ಲದೆ ಕ್ರಾಂತಿಯಕಿಡಿ ಕಲ್ಯಾಣ ಸ್ವಾಮಿ, ಹದಿನೆಂಟರ ನೆಂಟು, ಗೀತ ನಾಟಕಗಳು, ಕರ್ಮಜೀವಿ ಇತ್ಯಾದಿ ಕಾದಂಬರಿ, ನಾಟಕ, ಕವನ ಸಂಕಲನ ಮುಂತಾದ ಇಪ್ಪತ್ತೈದು ಕೃತಿಗಳನ್ನು ರಚಿಸಿದ್ದಾರೆ. ವಿದ್ವಾನ್ ರಾಮಚಂದ್ರ ಉಚ್ಚಿಲರು (ಜ ೧೯೨೦) ಕೃಷ್ಣಾರ್ಜುನ ಗರ್ವಭಂಗ (ಯಕ್ಷಗಾನ ಕೃತಿ) ಕಡಲಕರೆಯ ಚಿತ್ರಗಳು(ಸ್ಥಳೀಯ ಜನಜೀವನ ಚಿತ್ರಣ)ಗಳಲ್ಲದೆ ಇತರ ವಿದ್ವಾಂಸರೊಂದಿಗೆ ಸೇರಿ ಸುಲಭ ವ್ಯಾಕರಣ, ವ್ಯಾಕರಣ ಮತ್ತು ಛಂದೋಲಂಕಾರ, ಮುದ್ದಣ್ಣ ಮಹಾಕವಿ, ಯಕ್ಷಗಾನ ಚರಿತ್ರೆ ಇತ್ಯಾದಿ ಬರೆದಿದ್ದಾರೆ.

ಸೂರ್ಯನಾರಾಯಣ ಚಡಗ (೧೯೩೨–೨೦೦೬) ಅವರು ಇಂದಿನ ಉಡುಪಿ ಹಾಗೂ ಕಾಸರಗೋಡಿನ ಸಾಹಿತಿಗಳನ್ನು ಕುರಿತು ಒಟ್ಟಾಗಿ ಸೇರಿಸಿ 'ದಕ್ಷಿಣ ಕನ್ನಡದ ಬರಹಗಾರರು' ಪುಸ್ತಕವನ್ನು ೧೯೬೦ರಲ್ಲಿ ರಚಿಸಿದ್ದು, ಅದರಲ್ಲಿ ೧೯ನೇ ಶತಮಾನದ ಮಧ್ಯದಿಂದ ೨೦ನೇ ಶತಮಾನದ ಆರಂಭ ಕಾಲದವರೆಗಿನ ಅನೇಕರನ್ನು ಹೆಸರಿಸಿದ್ದಾರೆ. ಈ ಮುಂದೆ ಸಂಕ್ಷಿಪ್ತವಾಗಿ ಅವರುಗಳ ಬಗ್ಗೆ ನೋಡಬಹುದಾಗಿದೆ. ಲಭ್ಯ ದಾಖಲೆಗಳಂತೆ ದಕ್ಷಿಣ ಕನ್ನಡ ಜಿಲ್ಲೆಯವರೆಂದು ಗುರುತಿಸಬಹುದಾದ ಮಹನೀಯರ ಪಟ್ಟಿ ಇದಾಗಿದೆ.

ಕಾದಂಬರಿ ಹಾಗೂ ನಾಟಕಗಳನ್ನು ಬರೆದ ಕಾಸರಗೋಡಿನ ಅನಂತರಾಮ ಕೆದಿಲಾಯ (೧೯೨೬), ಪತ್ರಿಕಾ ಲೇಖಕರಾದ ಅಪ್ಪಾಭಟ್ಟ ಪಿ, ಐತಿಹಾಸಿಕ ಕಾವ್ಯ ಬರೆದು 'ಕ್ಷಾತ್ರದರ್ಶನ' ಪುಸ್ತಕ್ಕೆ ಅಂದಿನ ಮದರಾಸು ಸರ್ಕಾರದಿಂದ ಪ್ರಶಸ್ತಿ ಪಡೆದ ಕಿನ್ನಿಗೋಳಿಯ ಅಚ್ಯುತಗೌಡ (೧೯೨೧), ಬಂಟ್ವಾಳದ ಅಚ್ಯುತ ಶ್ರೀನಿವಾಸ ಬಾಳಿಗ (೧೯೧೮), ಮಂಜೇಶ್ವರದ ಅನಂತರಾವ್, ಇಂಗ್ಲಿಷ್ ಮಹಿಮೆ ಲಾವಣಿ ಬರೆದ ಧರ್ಮಸ್ಥಳದ ಅನಂತಯ್ಯ. ಡಿ, ನೊಗರು ಗ್ರಾಮದ ಅನಂತಯ್ಯ ಉಪಾಧ್ಯಾಯ (೧೯೩೩), ಕ್ರೈಸ್ತ ಧರ್ಮ ಭೋದನೆ ಇತ್ಯಾದಿ ಕ್ರೈಸ್ತ ಮತೀಯ ಸಂಬಂಧಿತ ಗ್ರಂಥಗಳನ್ನು ಬರೆದ ಜರ್ಮನ್ ಮಿಶನ್‌ನಲ್ಲಿ ಉದ್ಯೋಗಸ್ಥರಾಗಿದ್ದ ಆನಂದರಾಮ ಕೌಂಡಿನ್ಯ (೧೮೩೦), ಬೈಂದೂರಿನ ಆನಂದರಾವ್ (೧೮೭೯), ಮಂಗಳೂರಿನ ಆನಂದ ತಳವಾರ, ಕಾಸರಗೋಡಿನ ಇಬ್ರಾಹಿಂ. ಎಂ. ಮಂಗಳೂರಿನ ಈಶ್ವರ ಕಂದಕ, ಕಾಸರಗೋಡಿನ ಈಶ್ವರಯ್ಯ. ಎ, (೧೯೪೦), 'ಪ್ರವಾಸಿ' ಮಾಸ ಪತ್ರಿಕೆಯ ಸಂಪಾದಕರಾಗಿದ್ದ ಮಂಗಳೂರಿನ ಉಪಾಧ್ಯಾಯ ಕೆ. ಎಸ್, ಕಾಸರಗೋಡಿನ ಉಬ್ಬೆದ್.ಟಿ, 'ಕಿರಾತಾರ್ಜುನೀಯ ಕಥೆ' ಸಂಪಾದಿಸಿದ ಕೃಷ್ಣಭಟ್ಟ ಎಸ್, (೧೯೨೩), ಕನ್ನಡ ಹಾಗೂ ಕೊಂಕಣಿಯಲ್ಲಿ ಹಲವಾರು ಕೃತಿಗಳನ್ನು ಬರೆದ ಕೃಷ್ಣಪ್ರಭು ಬೋಳಂತೂರು (೧೮೮೨), ಕನ್ನಡ ಇಂಗ್ಲಿಷ್ ಶಬ್ಧಕೋಶ ಹಾಗೂ ವ್ಯಾಕರಣಗಳನ್ನು ಬರೆದ ಕ್ರಿಸ್ತಾನುಜವತ್ಸ (೧೮೪೦), ಪ್ರಬಂಧ ಮತ್ತು ಕವಿತೆಗಳನ್ನು ಬರೆದ ಕಾವೇರಿಕಾನದ ಕೆ.ವಿ. ಕೃಷ್ಣಭಟ್ಟ, ಪುತ್ತೂರಿನ ಕವಿ ಕೆ.ಆರ್. ಕೃಷ್ಣರಾವ್, ಗ್ರಾಮ ಪದ್ಧತಿ ರಚಿಸಿದ ಕೃಷ್ಣಯ್ಯ ಹೊಳ್ಳ, ಶಾಂತಿನಿಕೇತನಕ್ಕಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋದ, ಹಲವಾರು ನಾಟಕಗಳನ್ನು ಬರೆದ ಕೆ. ಕಾಂತಪ್ಪ ಶೆಟ್ಟಿ, ವ್ಯಾಕರಣ ಹಾಗೂ ಛಂದೋಲಂಕಾರ ರಚಿಸಿದ ಮೂಡಬಿದಿರೆಯ ಕೆ. ಕಾಂತಾರೈ (೧೯೧೯), ಕಾಸರಗೋಡಿನ ಕೃಷ್ಣ ಅನಂತ ಪೈ, ಚಿತ್ರವಾಣಿ ಪತ್ರಿಕೆಯ ಸಂಪಾದಕರಾಗಿದ್ದ ಮಂಗಳೂರಿನ ಕುಮಾರ್, ಜೀವನ ಚರಿತ್ರೆಗಳನ್ನು ಬರೆದ ಕ್ರಿಶ್ಚಿಯನ್ ಅರ್ನೆ, ಶ್ರೀಧರ ಕಾವ್ಯನಾಮದ ಕವಿ ಮುಳಿಯ ಕೇಶವಭಟ್ಟ, ಗಣಿತ ಪುಸ್ತಕ ಬರೆದ ಕೆ. ಕೇಶವನಾಯಕ, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಮೊತ್ತಮೊದಲು ಬರೆದ ಬಂಟ್ವಾಳದ  ಎಂ. ಗಣಪತಿ ಐಗಳ, ಐತಿಹಾಸಿಕ ಪುಸ್ತಕ ಬರೆದ ಪಾಲ್ ಗಣೇಶರಾವ್ (೧೮೩೫), ಕಥೆ, ಕವನಗಳನ್ನು ಬರೆದ ಗೋಪಾಲಕೃಷ್ಣ ಪಾಲೆಪ್ಪಾಡಿ (೧೯೧೨), ಯಕ್ಷಗಾನದ ಕವಿ ಗೋವಿಂದ ಭಟ್ಟ ಅಂಬೆಮೂಲೆ (೧೯೩೫), ಯಕ್ಷಗಾನ ಕಲಾವಿದ ಹಾಗೂ ನಾಟಕಗಳನ್ನು ಬರೆದ ಕಾಸರಗೋಡಿನ ಗೋಪಾಲಕೃಷ್ಣ ಪುಣಿಂಚತ್ತಾಯ (೧೯೧೫) ರೇಡಿಯೋ ನಾಟಕಗಳ ಕರ್ತೃ ಬಂಟ್ವಾಳದ ಪ. ಗೋಪಾಲ ಕೃಷ್ಣ (೧೯೨೮), ಗಾಂಧಿ ಶತಕ ಬರೆದ ವೇಣೂರು ಗೋವಿಂದ ಭಟ್ಟ (೧೯೨೬), ಸಾಮಾಜಿಕ ಕಥೆಗಳ ಸಂಗ್ರಹ ತಂದ ಮೂಡುಬಿದಿರೆಯ ಗೋವರ್ಧನ ಹೊಸಮನಿ, ಪತ್ರಿಕಾ ಬರಹಗಾರ ಮಂಜೇಶ್ವರದ ಗೋಪಾಲಕೃಷ್ಣ ಮಿತ್ತಾಳ (೧೯೪೦), ಯಕ್ಷಗಾನ ಪ್ರಸಂಗ ಹಾಗೂ ಕೀರ್ತನೆಗಳನ್ನು ಬರೆದ ಚೊಕ್ಕಾಡಿಯ ಗಣಪ್ಪಯ್ಯ ಭಾಗವತರು (೧೯೧೫), ಬೆಂಗಳೂರಿನ ತರಂಗಿಣಿ ಮಾಸ ಪತ್ರಿಕೆಯ ಸಂಪಾದಕರಾಗಿದ್ದ ಕಟಿಲಿನ ಕೆ. ಗಣಪತಿ ಶರ್ಮ, ಧಾರವಾಡದಲ್ಲಿ ಪತ್ರಿಕೋದ್ಯಮಿಯಾಗಿದ್ದ ಗೋವರ್ಧನರಾವ್ ಮಳಿಗೆ, ಪುತ್ತೂರಿನ ಗೋಪಾಲಕೃಷ್ಣ ಪೈ, ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಬರೆದ ಕಿನ್ನಿಗೋಳಿಯ ಕೆ. ಗಣೇಶಮಲ್ಯ (೧೯೩೯), ಭೂ ವಿವರಣೆಯ ಬಗ್ಗೆ ಪುಸ್ತಕಗಳನ್ನು ಬರೆದ ಗ್ರೆಗರಿ ಮಿನೆಜಸ್ (೧೯೦೩), ಬೆಳ್ತಂಗಡಿಯ ಕವಿ ಗಣಪತಿ ವಿಷ್ಣು ಹೊಳ್ಳ, ವಿಮರ್ಶಕ ಗೋಪಾಲಕೃಷ್ಣ ಭಟ್ಟ ತೆಕ್ಕುಂಜೆ (೧೯೧೦), ಕಾದಂಬರಿಕಾರ ಜಿ. ಭಟ್ಟ ಕೆ. ಮಕ್ಕಳ ಕವಿತೆ ಬರೆದ ಗೋಪಾಲಕೃಷ್ಣ ಭಟ್ಟ ಹುಡನಾಡು (೧೯೩೫), ನಿರ್ಚಾಲಿನ ಕವಿ ಎಂ. ಗಂಗಾಧರಭಟ್ಟ, ಜೈನ ಪುರಾಣಗಳ ಕರ್ತೃ ಮತ್ತೀಗ್ರಾಮದ ಗೋವಿಂದರಾವ್. ಎಂ. (೧೯೦೯), ಮಕ್ಕಳ ಸಾಹಿತ್ಯದಲ್ಲಿ ಒಲವು ಇದ್ದ ಚಂದ್ರರಾಜ ಶೆಟ್ಟಿ. ಟಿ ಸಿದ್ದಕಟ್ಟೆ, ಕಾಸರಗೋಡಿನ ನಾಡಪ್ರೇಮಿ ವಾರ ಪತ್ರಿಕೆಯ ಸಂಪಾದಕರಾಗಿದ್ದ ತೇಜಶ್ಚಂದ್ರಶೆಟ್ಟಿ (೧೯೪೪), ಕತೆ, ಕವನಗಳನ್ನು ಬರೆದ ಸಾಹಿತಿ ವಿಟ್ಲದ ತಿರುಮಲೇಶ ಎ. ಜಿ, ವಿಜ್ಞಾನ, ಚರಿತ್ರೆ, ರಾಜಕೀಯ ಇತ್ಯಾದಿ ಕುರಿತು ಪುಸ್ತಕಗಳನ್ನು ರಚಿಸಿದ ಬಂಟ್ವಾಳದ ದಾಮೋದರ ಬಾಳಿಗ (೧೯೦೯), ವೈದಿಕ ಧರ್ಮ ಕುರಿತು ಬರೆದ ದಾಸಪ್ಪ ಶೆಣೈ ಬಸ್ತಿ, ಗಣಿತ ಕುರಿತು ಪುಸ್ತಕ ಬರೆದ ಮೂಲ್ಕಿಯ ದೇವರಾವ್ ಎಂ.ಎ. ಯಕ್ಷಗಾನ, ಕೀರ್ತನೆಗಳನ್ನು ಬರೆದ ಕವಿ ಕಾಸರಗೋಡಿನ ದಾಮೋದರ ಪುಣಿಂಚತ್ತಾಯ (೧೮೮೬), ಕಾದಂಬರಿಕಾರ ದಯಾನಂದ ವಿ. ಶೆಣೈ, ಪುತ್ತೂರಿನ ದಾಮೋದರ ಬಾಳಿಗ, ಯಕ್ಷಗಾನ ನಾಟಕಗಳ ಕರ್ತೃ ನರಸಿಂಹ ಲಕ್ಷ್ಮಣ ನಾಯಕ, ಸಣ್ಣ ಕತೆಗಳ ನಾರಾಯಣ ಭಟ್ಟ ಮಡಿಯಾಳ, ಮಕ್ಕಳಿಗಾಗಿ ಗೀತ ನಾಟಕಗಳನ್ನು ಬರೆದ ಪಿ. ಕೆ. ನಾರಾಯಣ (೧೯೧೪), ಪತ್ರಿಕೋದ್ಯಮಿ ಎಸ್. ನಾರಾಯಣ ಕಲ್ಯ, ರಾಜಕೀಯ ಲೇಖನಗಳ ಲೇಖಕ ನವೀನ್ ಚಂದ್ರಪಾಲ್, ಪಠ್ಯಪುಸ್ತಕ ಬರೆದ

ನಾರಾಯಣರಾವ್ ಬಾಳಿಗ, ನಾಟಕಗಳನ್ನು ಬರೆದ ಎನ್, ಎಸ್, ಕಿಲ್ಲೆ ಮತ್ತು ನಾರಾಯಣ ಮಧ್ಯಸ್ಥ (೧೯೩೦), ಸಣ್ಣ ಕತೆಗಳ ಕತೆಗಾರ ನಾಗರಾಜ ಪೂವಣಿ (೧೯೩೮), ಸಾಹಿತಿ ಕೆ. ನಾರಾಯಣ ಭಟ್ಟ, ಕತೆ, ಕವನ, ನಾಟಕಗಳ ಕರ್ತೃ ನೀಲಕಂಠಭಟ್ ಪರಾಂಜಪೆ (೧೯೨೪) ಪುತ್ತೂರಿನ ನಾಗಪ್ಪ ಕೆ. ಕಾಸರಗೋಡಿನ ನಾರಾಯಣ ಭಟ್ಟ, ಪೊಟ್ಟಿಪ್ಪಲ್ಲ (೧೯೪೧), ಪತ್ರಿಕಾ ಸಾಹಿತಿ ನಾರಾಯಣ ಕೇಕುಣ್ಣಾಯ (೧೯೪೨) (ನಾರಾಯಣ ಏತಡ್ಕ), ಸುದರ್ಶನ ಮಾಸಪತ್ರಿಕೆಯ ಉಪ ಸಂಪಾದಕರಾಗಿದ್ದ ನಾರಾಯಣ ಭಟ್ಟ, ಎಚ್. ಎಂ. (೧೯೧೮), ಶಿಶು ಗೀತೆ ಕವನಗಳನ್ನು ಬರೆದ ಪಿಂಟೋ ಎಚ್ (೧೯೩೮) ವಿಚಾರಾತ್ಮಕ ಲೇಖನಗಳ ಪುಟ್ಟಣ್ಣಗೌಡ ಕೊಳಂಬೆ (೧೯೦೩), ಭೂಗೋಳ ಪುಸ್ತಕ ರಚನಕಾರ ಪದ್ಮನಾಭಯ್ಯ ಕೆ. ಪಿ. ಕಿನ್ನಿಗೋಳಿಯ ಪುಂಡಲೀಕ ಮಲ್ಯ, ಕತೆ, ಕಾದಂಬರಿಗಳ ಬರಹಗಾರ ಸೂರತ್ಕಲ್‌ನ ಡಿ. ಪದ್ಮನಾಭ ಸೋಮಯಾಜಿ, ಧರ್ಮಸ್ಥಳದ ಪುಟ್ಟಸ್ವಾಮಿ ಡಿ. ಭಕ್ತಿ ಸಾಹಿತ್ಯದ ರಚನಕಾರ ಬಾಬುರಾವ್ ನರಸಪ್ಪ ಬೋಳಾರ (೧೮೪೮), ಪ್ರಬಂಧ, ಚರಿತ್ರೆಗಳನ್ನು ಬರೆದ ಬಾಬು. ಎಂ. (೧೮೮೧), ಪುತ್ತೂರಿನ ಬಾಬುಸೆಟ್ಟಿ. ವಿ., ವೈದ್ಯಕೀಯ ಸಾಹಿತ್ಯದ ವಿ. ಆರ್. ಭಟ್ಟ, ಬೆಳ್ಳೆಗ್ರಾಮದ ವಿ. ಭುಜಂಗರಾವ್, ಅಖಿಲ ಕರ್ನಾಟಕ ಭೂಪಟ ಪ್ರಕಟಿಸಿದ ಮಂಜನಾಥಯ್ಯ. ಬಿ. (೧೮೬೫), ಬ್ರಹ್ಮವಾದಿ ಮಾಬೆನ್ ಕ್ರಿಶ್ಚಿಯನ್, ಕ್ರೈಸ್ತಧರ್ಮ ಕುರಿತು ಬರೆದ ಮ್ಯಾಕ್. ಜೆ (೧೮೦೦), ವಿಗ್ರಹಾರಾಧನೆ ಕುರಿತು ಬರೆದ ಮೋಹನಪ್ಪ ತಿಂಗಳಾಯ, ಅಭಿಮನ್ಯು ಕಾಳಗದ ಕರ್ತೃ ಮಧ್ವದಾಸ ಕವಿ, ಅಡ್ಯನಡ್ಕದ ಮಹಾಲಿಂಗಭಟ್ಟ (೧೯೩೬), ಕಾಸರಗೋಡಿನ ಮಧ್ಯಸ್ಥ ಕೆ. ಕೆ, ಕಾಸರಗೋಡು ಪತ್ರಿಕೆಯ ಸಂಪಾದಕರಾಗಿದ್ದ ಮಹಾಲಿಂಗ ಭಟ್ಟ ವೈ, ಇಂಗ್ಲೆಂಡ್‌ನಲ್ಲಿ ತರಬೇತಿ ಪಡೆದು ಆಧುನಿಕ ಮನೋವಿಜ್ಞಾನ ಕುರಿತು ಬರೆದ ಎಂ. ವಿ. ಮರಕಿಣಿ. ಮೂರ್ತಿಪೂಜೆ ಕುರಿತು ಬರೆದ ಎಂ. ರಾಮನ್ ನಂಬಿಯಾರ್, ನಾನಾರ್ಥ ಶಬ್ದಾವಳಿ, ಸಂಜ್ಞಾರ್ಥಗಳು ಇತ್ಯಾದಿ ಬರೆದ ರಾಮಕೃಷ್ಣಯ್ಯ ಬೋಳಾರ, ಭಾರತ–ರಾಮಾಯಣಗಳ ಕತೆಗಳನ್ನು ಬರೆದ ಬಂಟ್ವಾಳದ ರಾಮಕೃಷ್ಣಯ್ಯ ವೆಂಕಪ್ಪಯ್ಯ ಸಜೀಪ (೧೮೪೩), ಯಕ್ಷಗಾನ ಕವಿ ರಾಮಕೃಷ್ಣ ಪುಣಿಂಚತ್ತಾಯ, ಹರಟೆಗಳನ್ನು ಬರೆದ ಎಂ. ರಮಾನಂದಘಾಟೆ (೧೯೧೯) ಕುಂಬಳೆ ಗ್ರಾಮದ ರಾಮಕೃಷ್ಣಭಟ್ ಮೇನಾ, ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಕಾದಂಬರಿಗಳನ್ನು ಬರೆದ ರಾಮಚಂದ್ರರಾವ್ ಬೆಳ್ಳೆ (೧೯೦೦), ನವ ಕಲ್ಯಾಣ ಪತ್ರಿಕೆಯಲ್ಲಿದ್ದ ರಾಘವರಾವ್. ಬಿ. (೧೯೩೪), ವೈದ್ಯರಾಗಿದ್ದು, ಸಾಹಿತ್ಯ ಸೇವೆ ಸಲ್ಲಿಸಿದ ರಮಾನಂದ ಬನಾರಿ (೧೯೪೦), ಮಕ್ಕಳ ಸಾಹಿತ್ಯ ರಚಿಸಿದ ಬಿ. ರಾಮಚಂದ್ರಭಟ್ಟ, ಪತ್ರಿಕೋದ್ಯಮಿ ರಂಗಪ್ಪಯ್ಯ ಹೆಬ್ಬಾರ, ವಸಂತ ಸಾಹಿತ್ಯ ಪ್ರಕಾಶನ ಸಂಸ್ಥೆಯ ರಾಮಚಂದ್ರಯ್ಯ. ಡಿ, ವ್ಯಕ್ತಿ ಚಿತ್ರಗಳನ್ನು ಬರೆದ ರಾಮಚಂದ್ರ ಎಂ. (೧೯೩೯), ಐತಿಹಾಸಿಕ ಕಾದಂಬರಿಗಳನ್ನು ಬರೆದ ರಾಮನಾಯಕ್ ಬೇಕಲ (೧೯೦೭) ಹಳಗನ್ನಡ ಸಾಹಿತ್ಯ, ಯಕ್ಷಗಾನ, ನಾಟಕ, ವಿಮರ್ಶೆಗಳ ಬರಹಗಾರ ಹಾಗೂ ಪತ್ರಿಕೋದ್ಯಮಿ ರಾಮಚಂದ್ರ ಉಚ್ಚಿಲ (೧೯೨೧), ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಜ್ಯೋತಿಷ್ಯ ಶಾಸ್ತ್ರ ಗ್ರಂಥಗಳನ್ನು ಬರೆದ ಎಂ. ರಾಮಕೃಷ್ಣ ಭಟ್ಟ (೧೯೦೯), ಯಕ್ಷಗಾನ ಕವಿಗಳಾದ ಪುತ್ತೂರಿನ ರಾಮಣ್ಣ ಶಗ್ರಿತ್ತಾಯ, ಆಯುರ್ವೇದ ವಿದ್ವಾಂಸ ಪಿ. ರಾಮಕೃಷ್ಣಯ್ಯ (೧೮೬೦), ಮುಲ್ಕಿಯ ಯಕ್ಷಗಾನ ಕವಿ ಎಂ. ರಾಮಕೃಷ್ಣ, ಲೇಖಕ ಎಂ. ರಾಮಕೃಷ್ಣಶಾಸ್ತ್ರಿ ಹಾಗೂ ಬಂಟ್ವಾಳದ ರಾಮಚಂದ್ರ ಕಾಮತ್, ಶ್ರೇಷ್ಠ ವಾಗ್ಮಿಗಳು, ಅನೇಕ ರಾಷ್ಟ್ರ ಭಕ್ತಿ ಗೀತೆಗಳನ್ನು ಬರೆದ ಲಕ್ಷ್ಮೀನಾರಾಯಣ ಪುಣಿಂಚತ್ತಾಯ (೧೮೯೯), ಜೈನ ವಿದ್ವಾಂಸ ಎಂ. ಲೋಕನಾಥ ಶಾಸ್ತ್ರಿ, ಸಂಸ್ಕೃತದಲ್ಲಿ ಕವಿತೆ ರಚಿಸಿದ ಲಕ್ಷ್ಮಣ ಭಟ್ಟ ಡೋಂಗ್ರೆ (೧೯೧೫), ಹಿಂದಿ ಗುಜರಾತಿ ಸೇರಿದಂತೆ ಬಹುಭಾಷಾ ಪಂಡಿತರಾಗಿದ್ದ, ಸದ್ಧರ್ಮ ಗ್ರಂಥಮಾಲೆಯ ಪ್ರಚಾರಕ, ಆಧುನಿಕ ವಿಚಾರವಾದಿ ಬಿ. ಲಕ್ಷ್ಮಣದೇವ ವಿದ್ಯಾರ್ಥಿ (೧೯೩೦), ವಿನೋಬಾ ಅವರ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದ ಎಸ್. ವಿ. ಲಕ್ಷ್ಮೀನಾರಾಯಣ ಶರ್ಮಾ (೧೯೩೦), ಸಾಹಿತಿ ಜೆ. ವಾಮನಭಟ್ಟ, ಎಂ. ವಿಠ್ಠಲ ಭಟ್ಟ, ವಿ.ವೆಂಕಟರಾಯ ಕೆ. ವಾಸುದೇವಭಟ್ಟ, ಕ್ರೈಸ್ತ ಮತ ಪ್ರಚಾರಕ ವೀಗಲ್. ಜಿ. (೧೮೦೦) ಹಳೆಗನ್ನಡ ಕಾವ್ಯವನ್ನು ಸಂಪಾದಿಸಿದ ವೆಂಕಟರಾವ್ ಆಲೆಮನೆ, ಹಿಂದೂಧರ್ಮ ಕುರಿತು ಬರೆದ ವಿನಾಯಕಶೆಣೈ (೧೯೨೩), ಸಾಹಿತಿ ವೆಂಕಟ ರಮಣಭಟ್ಟ ಅರ್ತಿಕಜೆ (೧೯೪೩), ಜೈನಕವಿ ವರ್ಧಮಾನ ಹೆಗಡೆ ಮಾರ್ನಾಡು (೧೯೦೧), ಯಕ್ಷಗಾನ ಕರ್ತೃ ವಿಷ್ಣುಭಟ್ಟ ಕಿರಿಕ್ಕಾಡು (೧೯೧೩), ಕೀರ್ತನೆ ಭಜನೆಗಳನ್ನು ಬರೆದ ಸಾಂಗತ್ಯ ಕವಿ ಡಿ. ವಿಷ್ಣುಮೂರ್ತಿ ಹೊಳ್ಳ (೧೯೦೫), ಸನಾತನ ಧರ್ಮ ಪ್ರಚಾರಕ ವಾಸುದೇವ ಶ್ರೀನಿವಾಸರಾವ್ ಶಿಬ್ರೂರ್‌ಕರ್ (೧೯೧೬), ನಾಟಕಕಾರ ವಿಠಲ ಕಬಕ (೧೯೩೯), ಕ್ಷೇತ್ರ ದರ್ಶನಗಳನ್ನು ಬರೆದ ಬಂಟ್ವಾಳ ವಾಸುದೇವ ಬಾಳಿಗ (೧೯೧೮), ಖನಿಜ ಸಂಪತ್ತು ಹಾಗೂ ಆಧುನಿಕ ವಿದ್ಯಾಭ್ಯಾಸ ಪುಸ್ತಕಗಳ ರಚನಕಾರ ವಾಸುದೇವರಾವ್ ಮೈರ್ಪಾಡಿ, ಸಾಹಿತ್ಯ ಹಾಗೂ ಸಂಶೋಧನೆಗಳ ಕೃತಿಕಾರ ಕುಳಾಯಿ ವೆಂಕಟರಾಯ ಆಚಾರ್ಯ (೧೯೧೯), ಪತ್ತೇದಾರಿ ಕಾದಂಬರಿಕಾರ ಯು. ವಾಸುದೇವ ನಾಯಕ, ಕಥೆಗಾರ ಹಾಗೂ ಪ್ರಕಟಣೆಗಾರ ಮಿತ್ತೂರು ವೆಂಕಟರಮಣ ಭಟ್ಟ (೧೯೨೮), (೧೯೦೬), ಇಂಗ್ಲಿಷ್, ಕೊಂಕಣಿಗಳಲ್ಲೂ ಹೆಚ್ಚಿನ ಪಾಂಡಿತ್ಯವಿದ್ದ ಎಂ. ವಿಶ್ವಂಭರ ನಾಯಕ, ಚಿತ್ರಕಲೆಯಲ್ಲಿಯೂ ಅಭಿರುಚಿಯಿದ್ದು ಕನ್ನಡ ಮತ್ತು ಹಿಂದಿಯಲ್ಲಿ ಸಾಹಿತ್ಯ ರಚನೆ ಮಾಡಿದ ವಿಶ್ವೇಶ್ವರ ವಿ. ಪಡ್ಕೆ, ಕಾರ್ನಾಡ್ ಸದಾಶಿವರಾಯರ ಚರಿತ್ರೆಯನ್ನು ಭಾಮಿನಿ ಷಟ್ಪದಿಯಲ್ಲಿ ಬರೆದ ಶ್ರೀಗುರುವಾಣಿ ಪತ್ರಿಕೆಯ ಸಂಪಾದಕರಾಗಿದ್ದ ವಿ. ನಾಯಕ್. (೧೯೨೨), ವಿಚಾರಾತ್ಮಕ ಪ್ರಬಂಧಗಳ ರಚನಕಾರ ವೆಂಕಟರಮಣ ಭಟ್ಟ ಪೆರಡಾಲ, ಹಳಗನ್ನಡದಲ್ಲಿ

ಕಾವ್ಯಗಳನ್ನು ಬರೆದ ಮುಳಿಯ ಶಂಕರಭಟ್ಟ (೧೮೯೦), ಯಕ್ಷಗಾನ ಪ್ರಸಂಗಗಳ ಕವಿ ಶಾಂತಯ್ಯ (೧೮೦೦), ಕಿಟ್ಟೆಲ್ಲರಿಗೆ ಸಹಾಯಕರಾಗಿದ್ದ ಆಯುರ್ವೇದ ಕುರಿತು ಪುಸ್ತಕ ಬರೆದ ಶಿವರಾಮ ಭಾರದ್ವಾಜ (೧೮೪೩), ಯಕ್ಷಗಾನ, ಹರಿಕಥೆಗಳ ರಚನೆಕಾರ ಮೂಲ್ಕಿಯ ಶ್ರೀನಿವಾಸ ಭಾಗವತ, ಚರಿತ್ರೆ, ಭೂಗೋಳಗಳನ್ನು ಬರೆದ ಕೆ. ಶ್ರೀನಿವಾಸ ಕಿಣಿ (೧೮೯೩), ಮಂಜೇಶ್ವರದ ಶ್ರೀಧರ ಭಟ್ಟ, ಕದ್ರಿಯ ಶ್ರೀನಿವಾಸರಾವ್ ಈರೆ, ಯಕ್ಷಗಾನ, ಹರಿಕಥಾ ವಿದ್ವಾಂಸ ಎಂ. ಶಂಕರನಾರಾಯಣ ಸಾಮಗ, ಪೊಳಲಿಯ ಶಂಕರನಾರಾಯಣಶಾಸ್ತ್ರಿ, ವೀರವಾಣಿ ಪತ್ರಿಕೆಯ ಸಂಪಾದಕ ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ, ಕಾಸರಗೋಡಿನ ಶ್ರೀನಿವಾಸಶರ್ಮಾ, ಪುತ್ತೂರಿನ ಶಂಕರನಾರಾಯಣ ಭಟ್ಟ ಪುರೋಹಿತ, ಅತ್ತಾವರದ ಶೇಷಪ್ಪಾಚಾರ್, ನೀತಿಕಥೆ ಹಾಗೂ ಮಕ್ಕಳಿಗಾಗಿ ಸಾಹಿತ್ಯ ರಚಿಸಿದ ಕೆ. ಜೆ. ಶೆಟ್ಟಿ (೧೯೩೧), ಕಾದಂಬರಿಕಾರ ಶ್ರೀಕಂಠ ಪುತ್ತೂರು, ಶಿಶು ಸಾಹಿತ್ಯ ರಚನೆಕಾರ ಶಾಮಭಟ್ಟ ಕೂಳೂರು, ಚೆನ್ನೈನ ಓರಿಯಂಟಲ್ ಗ್ರಂಥಾಲಯದಲ್ಲಿ ಕನ್ನಡ ಪಂಡಿತರಾಗಿದ್ದ, ಭಾಸನ ಗ್ರಂಥಗಳನ್ನು ಅನುವಾದ ಮಾಡಿದ ಎಂ. ಶಂಕರನಾರಾಯಣಭಟ್ಟ (೧೯೦೮), ಕಾದಂಬರಿ ನಾಟಕಗಳ ರಚನಕಾರ ಬಿ. ಎಂ. ಶರ್ಮ (೧೯೩೧), ಕವಿ ಶ್ರೀನಿವಾಸರಾವ್ ಸೂರತ್ಕಲ್, ನಾಟಕ ರಚನಕಾರ ಶ್ರೀನಿವಾಸಭಟ್ಟ ಐತ್ತಡ್ಕ 'ವೀಣಾ ಮಾಸ ಪತ್ರಿಕೆ'ಯ ಸಂಪಾದಕರಾಗಿದ್ದ ಶಂಕರನಾರಾಯಣರಾವ್ (೧೯೧೪), ಕುರುನಾಡು ಗ್ರಾಮದ ಶಂಕರಭಟ್ಟ ಟಿ.ಎಸ್, ಜ್ಯೋತಿಷ್ಯ ಶಾಸ್ತ್ರ ಕುರಿತು ಪುಸ್ತಕಗಳನ್ನು ಬರೆದ ಶಂಕರ ಜೋಯಿಸ, ಯಕ್ಷಗಾನ ಕರ್ತೃ ಸುಬ್ಬಣ್ಣಶಾಸ್ತ್ರಿ, ಪತ್ರಿಕೋದ್ಯೋಗಿ ಕೊಡಿಯಾಲ ಬೈಲಿನ ಕೆ. ಸದಾಶಿವ, ವಿಕ್ರಮ ಪತ್ರಿಕೆಯ ಸಹ ಸಂಪಾದಕರಾಗಿದ್ದ ಕೆ.ಆರ್. ಸಾರಂಗಪಾಣಿಶೆಟ್ಟಿ, ಸಾಹಿತಿ ಸೀತಾರಾಮಪಾಡಿ (೧೯೩೪), ನಾಟಕಕಾರ ಸುಬ್ರಾಯ ಅನಂತಪುರ (೧೯೩೩), ಯಕ್ಷಗಾನ ನಾಟಕಕಾರ, ರಾಜ್ಯ ಸರ್ಕಾರದಿಂದ ಬಹುಮಾನಿತ ಸೀತಾರಾಮಯ್ಯ ದೇರಾಜೆ (೧೯೧೪), ಪತ್ರಿಕೋದ್ಯಮಿ ಎಸ್.ಜಿ. ಸುರೇಶ್ (೧೯೪೭), ಛಂದಸ್ಸು, ಭಾಷಾಶಾಸ್ತ್ರ ಕುರಿತು ಬರೆದ ಸೀತಾರಾಮ ಕೆದಿಲಾಯ (೧೯೩೦), ನೀತಿವಲ್ಲರಿ ಬರೆದ ಸುಬ್ಬರಾವ್ ಸೂರತ್ಕಲ್ (೧೮೯೬), 'ವಿಚಿತ್ರಯೇತಡ್ಕ' ಕಾವ್ಯ ನಾಮದಲ್ಲಿ ಬರೆಯುತ್ತಿದ್ದ ಬಹುಭಾಷಾ ಪಂಡಿತ, ರಾಜಕಾರಣಿ, ವೈ.ಎಸ್. ಹರಿಹರ ಭಟ್ಟ (೧೯೨೬), 'ದಿವ್ಯವಾಣಿ' ಪತ್ರಿಕೆಯ ಸಂಪಾದಕ ಸಿ.ಕೆ. ಹುಸೇನ್, ವಿಮರ್ಶಕ ವಿ. ಬಿ. ಹೊಸಮನೆ (೧೯೩೦), ಕಾದಂಬರಿಕಾರ ಎಂ. ಹರಿದಾಸರಾಯ, 'ನಚೀಕೇತ' ಕಾವ್ಯನಾಮದಿಂದ ಕಾದಂಬರಿ ರಚಿಸಿದ ಎಂ. ನಾಗೇಶರಾವ್, ಕತೆಗಾರ ರಾಜರಾಮಭಟ್ಟ ಅಮ್ಮೆಂಬಳ ಅನಂತಯ್ಯನಾವಡ (೧೯೧೮) ಅವರು ಶ್ರೀಕೃಷ್ಣನ ಆದರ್ಶ ಜೀವನ, ಬುದ್ಧನ ಕಥೆಗಳು ಇತ್ಯಾದಿ ಸಣ್ಣಕಥೆಗಳನ್ನೂ, ಮಕ್ಕಳಿಗಾಗಿ ಪದ್ಯಗಳನ್ನೂ ಬರೆದ ಕೀರ್ತನ ತರಂಗ ಇತ್ಯಾದಿ ರಚಿಸಿದ್ದು ಕೀರ್ತನ ಕಲಾವಿದರೂ ಆಗಿದ್ದ, ಬಾಯಾರು ಗ್ರಾಮದ ಈಶ್ವರಜಿತ್ತಿ (೧೮೭೭–), ಜ್ಞಾನಾಮೃತ ಷಟ್ಪದಿ ಕಾವ್ಯ ಬರೆದ ಕುಕ್ಕಟೆ ಗ್ರಾಮದ ಕೆ. ಐತಪ್ಪ ನಾಯಕರು; ಕೋಳಿಯೂರಿನ ಎಂ. ಕೃಷ್ಣಭಟ್, ಯಾದ್ವಾಭ್ಯುದಯ ಇತ್ಯಾದಿ ಬರೆದ ಕೃಷ್ಣಾಯ್ಯ ಪೆರಡಾಲ (೧೮೯೩–); ಅಮ್ಮೆಂಬಳದ ಕೇಶವ ಪೈ; ಸಣ್ಣ ಕಥಾಸಂಗ್ರಹ ರಚಿಸಿದ ಪುತ್ತೂರಿನ ಹಳೆಯಂಗಡಿಯ ಎಲ್. ಎಂ. ಕಾಮತ್; ಮಲೆಯಾಳಂ ಕಥೆಗಳನ್ನು ಅನುವಾದಿಸಿದ ನೀಲೇಶ್ವರದ ಎನ್. ಗಣಪತಿಕಾಮತ್; ನೀತಿ ಮುಕ್ತಾಹಾರಕ ಕರ್ತೃ ಪಾಲೆಪ್ಪಾಡಿ ಗೋಪಾಲಕೃಷ್ಣ ಅರುಣೋದಯ ಕೃತಿ ರಚಿಸಿದ ಸುಜೀರು ಗೋವಿಂದನಾಯ್ಕ; ಸಂಗೀತ ಪ್ರಧಾನವಾಗಿ ಚಂದ್ರಹಾಸ ದ್ರೌಪದೀ ವಸ್ತ್ರಾಪಹರಣ ಇತ್ಯಾದಿ ಬರೆದ ಬಂಗ್ಲೆಕರ ನಾರಾಯಣ ರಾಮಪ್ಪ ಕಾಮತ್; ಪದ್ಮನಾಭ ಕಾವ್ಯನಾಮದಿಂದ ಬರೆಯುತ್ತಿದ್ದ, ತ್ರಿವೇಣಿ ಮಾಸಪತ್ರಿಕೆಯ ಸಂಪಾದಕರಾಗಿದ್ದ ತೊಟ್ಟತ್ತೋಡಿ ನಾರಾಯಣ ಭಟ್ಟರು; ತಳಕಜೆ ಗ್ರಾಮದ ಟಿ. ನಾಗೇಶರಾಯರು; ಆಶಾಂಕುರ ಸಣ್ಣಕತೆಗಳ ಸಂಗ್ರಹ ಹೊರತಂದ ಬಲ್ಲಮಂಜ ಗ್ರಾಮದ ನಾರಾಯಣ ಜೋಗಿತ್ತಾಯ(ಜ ೧೯೪೩) ಗೀತನಾಟಕಗಳು ಹಾಗೂ ಹಲವಾರು ಅಪ್ರಕಟಿತ ಪುಸ್ತಕಗಳನ್ನು ಬರೆದಿರುವ ಕಿನ್ನಿಕಂಬಳದ ಕೆ.ಎಸ್.ಪದ್ಮನಾಭ ಆಚಾರ್ಯರು; ಕನ್ನಡ ಭಜಗೋವಿಂದ ರಚಿಸಿದ ಬಡಕಬೈಲು ಪರಮೇಶ್ವರಯ್ಯ(೧೮೭೫–ಪ್ರೇಮಚಂದರ ಕಥೆ, ಕಾದಂಬರಿಗಳನ್ನು ಅನುವಾದಿಸಿದ್ದಲ್ಲದೇ ಸ್ವಂತ ಕೃತಿಗಳನ್ನು ರಚಿಸಿದ ಕೊಡತ್ತೂರು ರಾಮಕೃಷ್ಣ ಉಡುಪರು(೧೯೧೬–) ರಾ.ಮೊ ವಿಶ್ವಾಮಿತ್ರ ಕಾವ್ಯನಾಮದಲ್ಲಿ ರಚಿಸುತ್ತಿದ್ದ, ಅಭಯಾರಾಣಿ, ಬೇನೆಯ ಬಾಳ್ವೆ ಮುಂತಾದ ಹದಿನಾಲ್ಕು ಕಾದಂಬರಿಗಳನ್ನು, ಸಣ್ಣಕಥೆಗಳು, ಶಿಶುಸಾಹಿತ್ಯಗಳನ್ನು ಬರೆದ ರಾಮಮೊಳೆಯಾರರು(೧೯೨೭–); ಪ್ರಸಿದ್ಧ ಪತ್ರಿಕೋದ್ಯಮಿಯಾಗಿದ್ದ, ಅಂದಿನ ಮದ್ರಾಸ್ ವಿಶ್ವವಿದ್ಯಾಲಯದಿಂದ ತಮ್ಮ ಕೃತಿ'ಮೋಟಾರ್ ಯಂತ್ರ ವಿಜ್ಞಾನ'ಕ್ಕೆ ಪ್ರಶಸ್ತಿ ಪಡೆದ ವಾಮನ್ನುಡುವ ಅವರು; ಜಪಾನಿನ ಕಥೆಗಳು, ಗ್ರೀಸಿನ ಕಥೆಗಳು ಇತ್ಯಾದಿ ಮಕ್ಕಳ ಸಾಹಿತ್ಯ ಬರೆದ ಧರ್ಮಾಮೃತ, ದಶಕುಮಾರ ಚರಿತ್ರೆಗಳನ್ನು ಸಂಪಾದಿಸಿದ ಕೋಳಿಯೂರಿನ ಬಿ. ಶಂಕರಭಟ್ಟರು(೧೯೦೮) ನಿಸ್ಪೃಹಕಾರಣ್ಯ, ಸ್ವರಾಜ್ಯ ಚಕ್ರ ಇತ್ಯಾದಿ ಜನಪ್ರಿಯ ಮಕ್ಕಳ ಕವಿತಾ ಸಂಗ್ರಹಗಳನ್ನು ಹೊರತಂದ ಮಚ್ಚಿಮಲೆ ಶಂಕರನಾರಾಯಣರಾವ್ ಅವರು; ಮಕ್ಕಳಿಗಾಗಿ ಅನೇಕ ಪದ್ಯ–ಗದ್ಯ ಪುಸ್ತಕಗಳನ್ನು ರಚಿಸಿದ ಪಳರಳ ಸೀತಾರಾಮಭಟ್ಟರು (ಜ ೧೯೩೨); ಹಿಂದಿ ಭಾಷೆಯಲ್ಲಿ ಪರಿಣತಿ ಹೊಂದಿದ್ದ ಅನೇಕ ಕಥೆಗಳನ್ನು ಹಾಗೂ ನವಪ್ರಭಾತ, ನಿಯೋಗ ಇತ್ಯಾದಿ ಕಾದಂಬರಿಗಳನ್ನು ಅನುವಾದಿಸಿದ ಶಿಮುಂಜೆಪುರದ ಸೀತಾರಾಮ ಎಂ. ಶೆಟ್ಟಿ (ಜ ೧೯೪೦) ಅವರುಗಳು ಇಂದಿನ ದಕ್ಷಿಣಕನ್ನಡಜಿಲ್ಲೆಯ ಹತ್ತೊಂಬತ್ತನೆಯ ಶತಮಾನದ ಕೊನೆ ಹಾಗೂ ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ಸಾಹಿತ್ಯ ಕೃಷಿ ನಡೆಸಿದವರು.

೧೯ನೇ ಶತಮಾನದ ಅಂತ್ಯದಲ್ಲಿ ಜನಿಸಿ ಕಳೆದ ಶತಮಾನದ ಮಧ್ಯದಲ್ಲಿ ಕ್ರಿಯಾಶೀಲರಾಗಿದ್ದ ಹಲವಾರು ಲೇಖಕರನ್ನು ಹೆಸರಿಸಬಹುದು. ಬೋಳಾರ ಬಾಬುರಾವ್ (೧೮೪೮–೧೯೧೯) ಮಂಗಳೂರು ಟೌನ್ ಮ್ಯಾಜಿಸ್ಟ್ರೇಟ್ ಆಗಿದ್ದು, ಕನ್ನಡದ ಮೊದಮೊದಲ ಕಾದಂಬರಿಗಳಲ್ಲಿ ಒಂದಾದ 'ವಾಗ್ದೇವಿ' (೧೯೦೫) ರಚಿಸಿದ್ದಲ್ಲದೆ, ಶಿವಲೀಲಾಮೃತ ಭಕ್ತಿಯ ಮಹಿಮೆಗಳನ್ನು ಬರೆದಿದ್ದಾರೆ ಹಾಗೂ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಲೇಖನಗಳನ್ನು ರಚಿಸಿದ್ದಾರೆ. ಶಿಕ್ಷಣ ತಜ್ಞರಾಗಿದ್ದ ಉಳ್ಳಾಲ ಮಂಗೇಶರಾಯರು (೧೮೭೮–೧೯೪೨) ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಗ್ರಂಥಗಳನ್ನು 'ನಿಷ್ಕಾಮ ಪ್ರೇಮ' ಎಂಬ ಕಾದಂಬರಿಯನ್ನು 'ಶಶಿಕಾಂತನ ವುಯಿಲು' ಹಾಗೂ 'ಸಮಾಜದ್ರೋಹಿ' ಎಂಬ ಅನುವಾದ ಕೃತಿಯ ರಚಿಸಿದ್ದಾರೆ. ಕುಂದಾಪುರದವರಾದರೂ ಮಂಗಳೂರು ಭಾಗದಲ್ಲೇ ನೆಲೆಸಿದ್ದ ಉಗ್ರಾಣ ಮಂಗೇಶರಾಯರು (೧೮೯೨–೧೯೭೩) 'ಡೋನ್‌ಕ್ವಿಹೋಟ್' ಎಂಬ ಅನುವಾದ ಕೃತಿ, ಮಕ್ಕಳಿಗಾಗಿ ಶಾಲಾ ವ್ಯಾಕರಣಗಳು, 'ಮಾರ್ಕೋಪೋಲೋ' ಜೀವನ ಚರಿತ್ರೆ, 'ಶಬ್ದವಿಚಾರ' ಎಂಬ ಭಾಷಾಶಾಸ್ತ್ರ ಪುಸ್ತಕ, 'ಉಗ್ರಾಣ ಪದ್ಯಾವಳಿ' ಎಂಬ ಕವಿತಾಸಂಗ್ರಹ, ಕತೆ, ನಾಟಕ, ಸಂವಾದ, ಸಾಹಿತ್ಯ ವಿಮರ್ಶೆ ರಚಿಸಿದ್ದಾರೆ. ರತ್ನಾಕರವರ್ಣಿಯ 'ಭರತೇಶ ವೈಭವ'ವನ್ನು ಸಮಗ್ರವಾಗಿ ಪರಿಶೋಧಿಸಿ ಸಂಪಾದಿಸಿದ್ದಾರೆ. ಮಂಗೇಶರಾಯರ ಲೇಖನಗಳನ್ನು ೧೯೮೭ರಲ್ಲಿ ಸಂಗ್ರಹಿಸಿ 'ಉಗ್ರಾಣ' ಎಂಬ ಹೆಸರಿನಲ್ಲಿ ಎರಡು ಸಂಪುಟಗಳಲ್ಲಿ ಪುತ್ತೂರಿನ ಕನ್ನಡ ಸಂಘದವರು ಪ್ರಕಟಿಸಿದ್ದಾರೆ.

ನವೋದಯ ಕಾಲದ ಪ್ರಮುಖ ಸಾಹಿತಿ, ಪತ್ರಕರ್ತ ಎಂ.ಎನ್. ಕಾಮತರು (ಮುಂಡ್ಕೂರು ನರಸಿಂಹಕಾಮತ್) (೧೮೮೩–೧೯೪೦) ಅವರು ೧೯೧೧ ರಿಂದಲೇ ಕತೆಗಳನ್ನು ಬರೆಯಲು ಆರಂಭಿಸಿದ್ದು, ಮುಂದೆ ಅವರ ಕತೆಗಳು 'ಅಂದಿನ ಆವೂರು', 'ಹತ್ತೊಡನೆ ಹನ್ನೊಂದು' ಎಂಬ ಹೆಸರಿನಲ್ಲಿ ಸಂಗ್ರಹಿತವಾಗಿವೆ. ಇವಲ್ಲದೆ ಕಾಮತರು ಹಲವಾರು ಏಕಾಂಕ ನಾಟಕಗಳನ್ನು, ಪದ್ಯಗಳನ್ನು ಬರೆದಿದ್ದಾರೆ. ಕಾಮತರ ಸಮಗ್ರ ಲೇಖನಗಳನ್ನು ಲೀಲಾಭಟ್ ಅವರು ಸಂಗ್ರಹಿಸಿ ಸಂಪಾದಿಸಿ, ನಾಲ್ಕು ಸಂಪುಟಗಳಲ್ಲಿ ಪುತ್ತೂರಿನ ಕನ್ನಡ ಸಂಘದಿಂದ ಪ್ರಕಟಿಸಿದ್ದಾರೆ. ಪ್ರಸಿದ್ಧ ಆಯುರ್ವೇದ ವೈದ್ಯ, ಸಂಗೀತಜ್ಞ, ಸಾಹಿತಿ, ಶಿಕ್ಷಣತಜ್ಞ, ಪತ್ರಿಕೋದ್ಯಮಿಯಾಗಿದ್ದ ಪಂಡಿತ ತಾರಾನಾಥರು (೧೮೯೧–೧೯೪೨) ಮಂಗಳೂರಿನಲ್ಲಿ ಜನಿಸಿದ್ದು, ಮುಂದೆ ರಾಯಚೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಧರ್ಮ ಸಂಭವ ಅಥವಾ ಧರ್ಮದ ಮೂಲತತ್ವಗಳು ಎಂಬ ಸಾಮಾಜಿಕ ಸುಧಾರಣೆಯನ್ನು ಕುರಿತ ಗ್ರಂಥ, ಹಲವಾರು ವೈದ್ಯಕೀಯ ಗ್ರಂಥಗಳು, ಪತ್ರಗಳು ಇವೇ ಮುಂತಾದ ಅವರ ಇನ್ನಿತರ ಕೃತಿಗಳು ಪ್ರಕಟವಾಗಿದೆ. ಪುತ್ತೂರಿನವರಾದ ಬಿ. ರಾಘವೇಂದ್ರರಾವ್ (ಜ: ೧೮೯೩–) ಅವರು ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡರು. ಯೋಗ, ಆಧ್ಯಾತ್ಮಿಕ ಚಿಂತನೆ ಹಾಗೂ ಶೈಕ್ಷಣಿಕ ಕ್ಷೇತ್ರವಾಗಿ ಹಳ್ಳಿಯನ್ನು ಅಭಿವೃದ್ಧಿಪಡಿಸಿದರು. 'ತಿರುಕ' ಎಂಬ ಕಾವ್ಯನಾಮದಲ್ಲಿ ಕರ್ಮಯೋಗಿ ಎಂಬ ನಾಟಕ, ಪೂಜೆ (ಕತೆ), ಉದಯಾಸ್ತ(ಕಾವ್ಯ), ರಸಋಷಿ (ಕಾದಂಬರಿ) ಇತ್ಯಾದಿ ೩೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಮಂಗಳೂರಿನಲ್ಲಿ ಜನಿಸಿದ ಪಡುಕೋಣೆ ರಮಾನಂದರಾಯರು (೧೮೯೬–೧೯೮೩) ವಿಜ್ಞಾನದ ಪ್ರಾಧ್ಯಾಪಕರಾಗಿದ್ದು ಹೊರರಾಜ್ಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ರಾಯರು 'ಹುಚ್ಚು ಬೆಳದಿಂಗಳಿನ ಹೂಬಾಣಗಳು', 'ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ' ಎಂಬ ಅನುವಾದಗಳನ್ನು ಹಾಗೂ ಕತೆ, ಹಾಸ್ಯ ಪ್ರಬಂಧಗಳನ್ನು ಬರೆದಿದ್ದಾರೆ.

ಮೂಡಬಿದಿರೆಯ ಲೋಕನಾಥ ಶಾಸ್ತ್ರಿಯವರು (೧೮೯೨–೧೯೫೨) 'ವೀರವಾಣಿ' ಪತ್ರಿಕೆಯ ಸಂಪಾದಕರಾಗಿದ್ದು 'ಬಾಲಬೋಧೆ ಜೈನ ಧರ್ಮ', 'ವೇಣೂರಿನ ಗತವೈಭವ', ಸೃಷ್ಟಿವಾದ ವಿಚಾರ, ತುಳುನಾಡಿನ ಬಸದಿಗಳು, ಮೂಡಬಿದಿರೆಯ ಚರಿತ್ರೆ ಇತ್ಯಾದಿಗಳಲ್ಲದೆ ಜೈನಧರ್ಮಕ್ಕೆ ಸಂಬಂಧಪಟ್ಟಂತೆ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಕೆ. ಭುಜಬಲಿಶಾಸ್ತ್ರಿ (ಜ: ೧೮೯೭) ಅವರು ಜೈನಮತಕ್ಕೆ ಸಂಬಂಧಿಸಿದಂತೆ ಹಲವಾರು ಭಾಷೆಗಳಲ್ಲಿಯ ಗ್ರಂಥಗಳನ್ನು ಅಭ್ಯಸಿಸಿ ಅನೇಕ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಮೂರ್ತಿ ಪೂಜೆಯ ಅವಶ್ಯಕತೆ, ಜೈನ ಷಟ್ಕರ್ಮ, ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕೊಡುಗೆ, ವೀರಬಂಕೇಯ ಇತ್ಯಾದಿ ಪುಸ್ತಕಗಳನ್ನು, ಜೈನಧರ್ಮಕ್ಕೆ ಸಂಬಂಧಪಟ್ಟಂತೆ ಅನೇಕ ಲೇಖನಗಳನ್ನು ರಚಿಸಿದ್ದಾರೆ.

ಮಂಜೇಶ್ವರ ಅನಂತರಾವ್ (೧೮೮೯–೧೯೪೯) ಭಗವದ್ಗೀತೆಯ ಅನುವಾದ, ಕನ್ನಡ ಪದ್ಯಗೀತೆಗಳಲ್ಲದೆ ಕಲಸುಮೇಲೋಗರ ಎಂಬ ಕಾವ್ಯ ಕೃತಿಯನ್ನು ರಚಿಸಿದ್ದಾರೆ. ಸಮಾಜಸೇವಕರಾಗಿದ್ದ ಅನಂತರಾವ್ ಅವರಿಗೆ ೧೯೨೬ರಲ್ಲಿ ರಾವ್‌ಸಾಹೇಬ್ ಪ್ರಶಸ್ತಿ ಬಂದಿದೆ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ (೧೮೮೯–೧೯೫೧) ಅತ್ಯಂತ ಹೆಚ್ಚಾಗಿ ಸ್ವಾತಂತ್ರ್ಯ ಗೀತೆಗಳನ್ನು ಬರೆದ ಕವಿ ಹಾಗೂ

ಸ್ವಾತಂತ್ರ್ಯ ಹೋರಾಟಗಾರ, ತಿಲಕ ಕಾವ್ಯಾಂಜಲಿ, ಬಾಲಗಂಗಾಧರಸ್ತವ, ರಾಷ್ಟ್ರಗೀತ ರತ್ನಾಕರ, ಸ್ವರಾಜ್ಯ ಗೀತಾಮೃತ, ಹರಿಜನ ಸಂಧಾನ ಇತ್ಯಾದಿ ಕಾವ್ಯ ಸಂಗ್ರಹಗಳು ಪ್ರಕಟವಾಗಿವೆ.

ಬೇಕಲರಾಮನಾಯಕ (೧೯೦೨–೧೯೬೯) ಅವರು ಕೋಟಿಯಕತೆಗಳು, ತೌಳವ ಸ್ವಾತಂತ್ರ್ಯ, ನಾಡಕತೆಗಳು, ತೆಂಕನಾಡ ಐತಿಹ್ಯ ಇತ್ಯಾದಿ ೧೩ಕ್ಕೂ ಹೆಚ್ಚು ವಿವಿಧ ವಿಷಯಗಳಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕಡಲತೀರದ ಭಾರ್ಗವ ಶಿವರಾಮ ಕಾರಂತರು (೧೯೦೨–೧೯೯೭) ೧೯೩೦ರ ಸುಮಾರಿಗೆ ಪುತ್ತೂರಿಗೆ ಬಂದು ತಮ್ಮ ಜೀವಿತಾವಧಿಯ ಯಶಸ್ವೀ ಕೃತಿಗಳನ್ನು ರಚಿಸಿ, ಬಾಲವನದಂತಹ ಸಾಂಸ್ಕೃತಿಕ ಚಟುವಟಿಕೆ ಕಾರ್ಯಗಳನ್ನು ಕೈಗೊಂಡು ಸಿನಿಮಾ, ಪತ್ರಿಕೋದ್ಯಮ, ನಾಟಕ, ಯಕ್ಷಗಾನ ಮುಂತಾದ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ಮಾಡಿದ್ದು ೪೦ವರ್ಷಗಳ ನಂತರ ಮರಳಿ ಸಾಲಿಗ್ರಾಮದಲ್ಲಿ ಅಂತ್ಯಕಾಲದವರೆಗೆ ನೆಲಸಿದ್ದರು. ನಾಟಕ, ಕಾದಂಬರಿ, ಸಂಶೋಧನಾ ಗ್ರಂಥ, ಸಣ್ಣಕತೆ, ಹರಟೆ, ಕವನಸಂಕಲನ, ಹರಟೆ, ನಿಘಂಟು ಇತ್ಯಾದಿ ಸಾಹಿತ್ಯದ ಎಲ್ಲ ಮಗ್ಗುಲಗಳನ್ನು ಒಳಗೊಂಡಂತೆ ೪೧೭ ಕೃತಿಗಳನ್ನು ಪ್ರಕಟಿಸಿದ್ದರು. ಕಾರಂತರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ತುಳಸಿ ಸಮ್ಮಾನ್ ಪ್ರಶಸ್ತಿ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳಿಂದ ಎಂಟು ಗೌರವ ಡಾಕ್ಟರೇಟ್‌ಗಳೂ ಸಂದಾಯವಾಗಿದ್ದವು. ಕಾರಂತರು ತಮಗೆ ದೊರೆತಿದ್ದ ಪದ್ಮಭೂಷಣ ಪ್ರಶಸ್ತಿಯನ್ನು ತುರ್ತು ಪರಿಸ್ಥಿತಿಯನ್ನು ಪ್ರತಿಭಟಿಸಿ ಹಿಂತಿರುಗಿಸಿದ್ದರು.

ಪುತ್ತೂರಿನ ಮುಂಗ್ಲಿಮನೆಯವರಾದ ಎಂ. ಮರಿಯಪ್ಪಭಟ್ಟರು (೧೯೦೬–೧೯೮೦) ತಮ್ಮ ಜೀವಿತಾವಧಿಯೆಲ್ಲಾ ಇಂದಿನ ಚೆನ್ನೈನಲ್ಲೇ ಕಳೆದಿದ್ದು ಮೊದಲಿಗೆ ಕಾಲೇಜು ಅಧ್ಯಾಪಕರಾಗಿದ್ದು, ನಂತರ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಭಾಷಾ ವಿಭಾಗದ ಮುಖ್ಯಸ್ಥರು ಹಾಗೂ ದ್ರಾವಿಡ ಭಾಷಾ ವಿಭಾಗದ ಮುಖ್ಯಸ್ಥರೂ ಆಗಿದ್ದರು. ಸಾಕಷ್ಟು ಕನ್ನಡದ ಕೆಲಸವನ್ನು ಕೈಗೊಂಡಿದ್ದರು. ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟಂತೆ 'ನಾಲ್‌ನುಡಿ ನಾಣ್ಣುಡಿ', ಹಳೆಗನ್ನಡ ನಡುಗನ್ನಡ ಕಾವ್ಯ ಸಂಗ್ರಹ, ಹೊಸಗನ್ನಡ ಕಾವ್ಯಶ್ರೀಗಳನ್ನು ಬರೆದಿರುವದಲ್ಲದೆ ಖಗೇಂದ್ರ ಮಣಿ ದರ್ಪಣ, ಅಭಿನವ ಮಂಗರಾಜ ನಿಘಂಟು, ಗುಣಚಂದ್ರನ ಛಂದಸ್ಸಾರ, ವರ್ಧಮಾನ ಪುರಾಣ, ಪಾರ್ಶ್ವನಾಥ ಪುರಾಣ, ಜಾತಕತಿಲಕ, ವಿಷ್ಣು ಪುರಾಣ ಇತ್ಯಾದಿ. ಸುಮಾರು ೧೫ ಕೃತಿಗಳನ್ನು ಸಂಪಾದಿಸಿದ್ದಾರೆ. ಮುಖ್ಯವಾಗಿ ರೆವರೆಂಡ್ ಎಫ್ ಕಿಟ್ಟೆಲ್ ಅವರು ರಚಿಸಿದ ಕನ್ನಡ ಕನ್ನಡ ಇಂಗ್ಲಿಷ್ ನಿಘಂಟನ್ನು ಸಂಪೂರ್ಣವಾಗಿ ಪರಿಷ್ಕರಿಸಿ ನಾಲ್ಕು ಸಂಪುಟಗಳಲ್ಲಿ ಅಂದಿನ ಮದರಾಸು ವಿಶ್ವವಿದ್ಯಾಲಯದಿಂದ ಹೊರತಂದರು. ಅಲ್ಲದೆ ತುಳು–ಇಂಗ್ಲಿಷ್ ಶಬ್ದಕೋಶ, ಹವ್ಯಕ ಕನ್ನಡ ಶಬ್ದಕೋಶ, ಇವರ ವಿಶಿಷ್ಟ ಕೊಡುಗೆಗಳು. ೧೯೫ರಲ್ಲಿ 'ಸಾರ್ಥಕ' ಎಂಬ ಹೆಸರಿನಲ್ಲಿ ಭಟ್ಟರಿಗೆ ಸಂಸ್ಮರಣಾ ಗ್ರಂಥವೊಂದನ್ನು ಹೊರತರಲಾಯಿತು. ಕೊಳಂಬೆ ಪುಟ್ಟಣ್ಣಗೌಡರು (೧೯೦೩–೧೯೮೧) ಕಾವ್ಯ, ಮುಕ್ತಕ, ಯಕ್ಷಗಾನ, ಮಕ್ಕಳ ಸಾಹಿತ್ಯ, ಹಸ್ತ ಸಾಮುದ್ರಿಕಾಶಾಸ್ತ್ರವಲ್ಲದೆ, ಅಚ್ಚ ಕನ್ನಡ ನಿಘಂಟು ರಚಿಸಿದ್ದಾರೆ. ಮನವಿ, ಕದಿರೆ, ಪ್ರತಿಭೆ, ಭಾವದರಸ ಇತ್ಯಾದಿ ಕವನ ಸಂಗ್ರಹಗಳನ್ನು ಹೊರತಂದ ಕದಿರೆ ಶ್ರೀನಿವಾಸರಾವ್ (೧೯೦೬–೧೯೭೧) ಅವರು ಸಣ್ಣ ಕತೆ ಹಾಗೂ ಪತ್ತೇದಾರಿ ಕಾದಂಬರಿಗಳನ್ನು ಬರೆದಿದ್ದಾರೆ.

ಮೂಡಬಿದಿರೆ ಮೊದಲಿನಿಂದಲೂ ಸಾಂಸ್ಕೃತಿಕ ಕೇಂದ್ರವಾಗಿದ್ದು, ಹಲವಾರು ಸಾಹಿತಿ ಕಲಾವಿದರುಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ಅಲ್ಲದೆ ಇತ್ತೀಚೆಗೆ ಶಾಲಾ ಕಾಲೇಜುಗಳು ತೆರೆಯಲಾಗಿದ್ದು ಜಿಲ್ಲೆಯ ಅನೇಕ ಸಾಹಿತಿಗಳು ಇಲ್ಲಿ ನೆಲಸುವಂತಾಗಿದೆ ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ (೧೯೦೯) ಅವರು ಸ್ಥಳೀಯವಾಗಿ ಸಂಸ್ಕೃತ ಪಾಠಶಾಲೆಯಲ್ಲಿ ಪ್ರಧಾನ ಅಧ್ಯಾಪಕರಾಗಿದ್ದು, ನಂತರ ಮೈಸೂರು ಅರಸರಲ್ಲಿ ಸೇವೆ ಸಲ್ಲಿಸಿ ಆಸ್ಥಾನವಿದ್ವಾನ್ ಬಿರುದು ಪಡೆದಿದ್ದರು. ಪ್ರಾಣಿಬಲಿ ನಿಷೇಧ, ಅರ್ಚನಾ, ಸುಮನ ಸಂಚಯ, ತೀರ್ಥೇಶವೈಭವ, ಜ್ಞಾನಾದರ್ಶ ಇತ್ಯಾದಿ ಇವರ ಕೃತಿಗಳು. ಪಂಡಿತ ಕೆ.ಜಿನರಾಜ ಶಾಸ್ತ್ರಿ ಅವರು ಶ್ರವಣಬೆಳಗೊಳ ಮೈಸೂರು ಹಾಗೂ ಗ್ವಾಲಿಯರ್‌ಗಳಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, ಪ್ರಾಕೃತ, ಗುಜರಾತ್ ಸೇರಿದಂತೆ ಹಲವಾರು ಭಾಷೆಗಳನ್ನು ಬಲ್ಲವರಾಗಿದ್ದರು. ಇಷ್ಟೋಪದೇಶ, ಆತ್ಮಸಿದ್ಧಿ, ಲಘು ಪಾಠ ಸಂಗ್ರಹ ಮೊದಲಾದವು ಇವರ ಕೃತಿಗಳು. ಜಗತ್ಪಾಲಯ್ಯ ಜ್ಯೋತಿಷಿ (೧೯೦೯–) ಅವರು ಜೈನಧರ್ಮವಲ್ಲದೆ ಶಾಸ್ತ್ರೀಯ ಸಂಗೀತ ನೃತ್ಯಗಳಲ್ಲೂ ಪರಿಣಿತರಿದ್ದರು. ಬಾಳಿನಬೆಳಕು, ಕಾರ್ಕಳ ಭೈರವ ಪಾಂಡ್ಯ ಅರಸರ ಇತಿಹಾಸ ಲಾವಣಿ, ಗಾನಸುಧಾ, ಶ್ರೀ ಬಾಹುಬಲಿ ಸ್ವಾಮಿಯ ಲಾವಣಿ ಹಾಗೂ ಹಲವಾರು ದೇವತಾಸ್ತೋತ್ರಗಳನ್ನು ರಚಿಸಿದ್ದಾರೆ.

ನವಗಿರಿನಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಹೊಸಬೆಟ್ಟು ರಂಗರಾವ್ (೧೯೧೩–೧೯೯೭), ಚಂದಮಾಮ ಬಳಗದಲ್ಲಿ ಸಂಪಾದಕರಾಗಿ ಸೇರಿ ಮಕ್ಕಳಿಗಾಗಿ ಕತೆಗಳನ್ನು ಬರೆಯುತ್ತಿದ್ದರು. ಇನ್ನೂ ಹಲವಾರು ಪತ್ರಿಕೆಗಳಲ್ಲೂ ಕತೆಗಳನ್ನು ಬರೆದಿದ್ದಾರೆ. ೪೦ಕ್ಕಿಂತ ಹೆಚ್ಚು ಕಾದಂಬರಿಗಳು, ಸುಮಾರು ೨೦೦ ಮಕ್ಕಳ ಕತೆಗಳನ್ನು ಬರೆದಿದ್ದು, ಕೆಲವು ಕತೆಗಳು ಸಂಗ್ರಹರೂಪದಲ್ಲಿ ಪ್ರಕಟವಾಗಿವೆ. ಚಂದಮಾಮ

ಪತ್ರಿಕೆಯಲ್ಲಿ ಪೂರಕ ಚಿತ್ರಗಳನ್ನು ಬರೆಯುತ್ತಿದ್ದ ಅವರು ಹಲವಾರು ವ್ಯಂಗ್ಯ ಚಿತ್ರಗಳನ್ನೂ ಬರೆದಿದ್ದಾರೆ. ಕುಮಾರ ವೆಂಕಣ್ಣ (ವೆಂಕಟರಾವ್ ಕೈಲೂರ್ಕರ್ ಜ: ೧೯೧೮) ಅವರು ಮಕ್ಕಳಿಗಾಗಿ ಕಪ್ಪೆ ಮಾಡಿದ ಕ್ರಾಂತಿ, ಜಾಣ ಗೆಲ್ಲುತ್ತಾನೆ, ಮರೆಯಲಾಗದ ಮಹಾವೀರರು ಇತ್ಯಾದಿ ಹನ್ನೆರಡು ಕತೆ ಪುಸ್ತಕಗಳನ್ನು ರಚಿಸಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿ ಮಕ್ಕಳ ಪತ್ರಿಕೆ ಪಾಪಚ್ಚಿಯೂ ಸೇರಿದಂತೆ ಹಲವಾರು ಪತ್ರಿಕೆಗಳ ಸಂಪಾದಕರಾಗಿದ್ದರು. ಹರಿದಗೆಜ್ಜೆ, ಬೀದಿಯ ದೀಪ ಇತ್ಯಾದಿ ಹನ್ನೆರಡು ಕಾದಂಬರಿಗಳು, ಬೋಕಾಶಿಯೊನ ಆರು ಕೃತಿಗಳ ಅನುವಾದ, ಏಳು ಗೀತನಾಟಕಗಳು, ೧೦ ಸಾಮಾಜಿಕ ಮತ್ತು ರಾಜಕೀಯ ಪುಸ್ತಕಗಳನ್ನು ಬರೆದಿದ್ದಾರೆ. ಮಕ್ಕಳಿಗಾಗಿ ಬರೆದ ಇಂಗ್ಲಿಷ್ ಕವನಗಳು Kite ಎಂಬ ಹೆಸರಿನಲ್ಲಿ ೧೯೩೦ರಲ್ಲಿ ಪ್ರಕಟವಾಗಿದೆ. ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದ ಮಂಜಯ್ಯ ಹೆಗ್ಗಡೆಯವರು ೧೯೧೮ರಲ್ಲಿ ಪಟ್ಟಕ್ಕೆ ಬಂದಿದ್ದು, ತುಳುವಿನಲ್ಲಿ ಹಲವು ಪುಸ್ತಕಗಳನ್ನು ಬರೆದಿದ್ದು, ಕನ್ನಡದಲ್ಲಿ ನನ್ನ ಕೌನ್ಸಿಲ್ ಮೆಂಬರಿಕೆ, ಬಾಹುಬಲಿ ಚರಿತ್ರೆ ಮುಂತಾದ ಏಳು ಕೃತಿಗಳು ಹಾಗೂ ಹಲವಾರು ಬಿಡಿಲೇಖನಗಳನ್ನು ಬರೆದಿದ್ದಾರೆ. ಬಿ.ಎಂ. ಇದಿನಬ್ಬ ಅವರು (ಜ ೧೯೨೦) ಬಾಳಿನ ಚಿತ್ರಗಳು, ಹರಿದಕೋಟು, ಸಣ್ಣಕತೆಗಳ ಸಂಗ್ರಹ, ಹೃದಯಗೀತೆಗಳು, ಜೇನುಗೂಡು, ಕವನಸಂಕಲನ, ವೀರಗೀತೆಗಳು ಮತ್ತು ಕಿಡಿಗಳು, ದೇಶಭಕ್ತಿಗೀತೆ, ಮಕ್ಕಳಿಗಾಗಿ ಚುಟುಕರಾಶಿ ಇತ್ಯಾದಿ ಬರೆದಿದ್ದಾರೆ. ಅವರು ಒಂದು ಅವಧಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು.

ಕಾಸರಗೋಡಿನ ಕಾರ್ಯಹಳ್ಳ ರಾಮಕೃಷ್ಣಶೆಟ್ಟಿ (೧೯೨೧–೧೯೪೭) ಅವರು ಜೀವನ ಮತ್ತು ಅವಳ ಹುಚ್ಚು ಎಂಬ ಕಥಾ ಸಂಕಲನವನ್ನು ರಚಿಸಿದ್ದಾರೆ. ಚಿತ್ರಕಲಾವಿದರೂ ಆಗಿದ್ದ ಅವರು ಕನ್ನಡಿಗ ಎಂಬ ಕೈಬರಹದ ಪತ್ರಿಕೆಯನ್ನು ತರುತ್ತಿದ್ದರು. ನಿರಂಜನ ಹೆಸರಿನಲ್ಲಿ ಪ್ರಸಿದ್ಧರಾದ ಕುಳಕುಂದ ಶಿವರಾಯರು (೧೯೨೪–೧೯೯೨) ಕನ್ನಡದ ಹೆಸರಾಂತ ಸಾಹಿತಿಯಾಗಿದ್ದು, ಕತೆ, ಕಾದಂಬರಿ, ಕವಿತೆ, ವಿಮರ್ಶೆ, ನಾಟಕ, ಅನುವಾದ ಸಾಹಿತ್ಯ ಸಂಪಾದನೆ ಇತ್ಯಾದಿಯಾಗಿ ಸಾಹಿತ್ಯದ ಹಲವಾರು ವಿಭಾಗಗಳಲ್ಲಿ ಕೃಷಿ ನಡೆಸಿದ್ದರು. ಪತ್ರಿಕೋದ್ಯಮಿಯಾಗಿ, ಅಂಕಣ ಬರಹಗಾರರಾಗಿ ಲೇಖನಗಳನ್ನು ಬರೆದು ಒಂದು ಕಾಲದ ಯುವಜನತೆಯಲ್ಲಿ ಹೊಸ ಅರಿವು ಮೂಡಿಸಿದ್ದರು. ಸಮಾಜವಾದದಿಂದ ಪ್ರೇರಿತರಾಗಿ ಕ್ರಾಂತಿಕಾರಿ ಬರಹಗಳನ್ನು ರಚಿಸಿದ್ದರು. ಅವರು ಇಪ್ಪತ್ತೈದು ಕಾದಂಬರಿಗಳನ್ನು ಬರೆದಿದ್ದು 'ಚಿರಸ್ಮರಣೆ' ಕಾದಂಬರಿಗೆ ಸೋವಿಯಟ್ ಲ್ಯಾಂಡ್ ನೆಹರು ಪ್ರಶಸ್ತಿ ಬಂದಿದೆ. ಅವರ ಹಲವಾರು ಕಾದಂಬರಿಗಳು ರಷ್ಯನ್ ಸೇರಿದಂತೆ ಅನೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ. ಅವರ ನಿಧನಾನಂತರ ಅವರ ಕಥೆ, ಕಾದುಂಬರಿ ಇತ್ಯಾದಿಗಳು ಹಲವಾರು ಸಂಪುಟಗಳಲ್ಲಿ ಪ್ರಕಟವಾದುವು. ಗಮಕ, ಯಕ್ಷಗಾನ, ಅಷ್ಟಾವಧಾನ, ಸಂಗೀತಗಳಲ್ಲಿ ಪರಿಶ್ರಮವಿದ್ದ ಟಿ.ಕೇಶವಭಟ್ಟ (ಜ:೧೯೨೫–೨೦೦೫) ಅವರು ಕಾಸರಗೋಡಿದ ಬಾಯಾರು ಗ್ರಾಮದವರಾಗಿದ್ದು, ಸಾಹಿತ್ಯ, ಸಂಶೋಧನೆ, ವಿಮರ್ಶೆ ಕುರಿತು ಲೇಖನ ಪುಸ್ತಕಗಳನ್ನು ರಚಿಸಿದ್ದಾರೆ. ಭಾಷಾ ಪಾಠ ಸಹಾಯಕ, ಭಾಷಾಪೀಠಿಕೆ, ಭಾಷಾ ಭಾಸ್ಕರ ಇತ್ಯಾದಿ ಬರೆದಿದ್ದು ದೇವಪ್ಪ ಕವಿಯ ರಾಮ ವಿಜಯ ಸಂಪಾದಿಸಿದ್ದಾರೆ. ಸಾಹಿತಿ, ಸಂಘಟಕ, ಸಾಮಾಜಿಕ ಕಾರ್ಯಕರ್ತ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಬಂಟ್ವಾಳ ತಾಲೂಕಿನ ಏರ್ಯಬೀಡುವಿನಲ್ಲಿ ೧೯೨೬ರಲ್ಲಿ ಜನಿಸಿದರು. ೧೯೪೯ರಲ್ಲಿ ಇವರು ಬರೆದ ರಾಮಾಶ್ವಮೇಧ ತರಂಗಗಳು ಪ್ರಕಟವಾಗಿದ್ದು, ಅಂದಿನ ಮೈಸೂರು, ಮದರಾಸು ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವಾಗಿ ಆಯ್ಕೆಯಾಗಿದ್ದವು. ಪತ್ರರೂಪದ ಕಾದಂಬರಿ 'ಸ್ನೇಹಸೇತು' ಮುಳಿಯ ತಿಮ್ಮಪ್ಪಯ್ಯರ ಜೀವನ ಚರಿತ್ರೆ 'ಜೀವನ ಚಿತ್ರ' ಗಳಲ್ಲದೆ ಮೊದಲ ಮಳೆ, ಸಂಚಯ, ಓರಗೆಗೆ ಒಲವಿನ ಒಸಗೆ, ನಾಗೇಗೌಡರ ಸ್ವಾಗತಗೀತೆ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಭೂತಾರಾಧನೆ ಕುರಿತ 'ಮಂಗಳ ತಿಮರು', ಕೌಟುಂಬಿಕ ಪರಿಚಯದ ನೂರರ ನೆನಪು ಇತರ ಕೃತಿಗಳು. 'ಗಾನಕೋಗಿಲೆ' ಸಂಪಾದಿತ ಕೃತಿ (ಯಕ್ಷಗಾನ ಭಾಗವತ ದಾಮೋದರ ಮಂಡೆಚ್ಚರ ಸಂಸ್ಮರಣ ಗ್ರಂಥ). ಶ್ರೀಯುತರು ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಸಂಸ್ಥೆಗಳಿಂದ ದೊರೆತ ಸನ್ಮಾನ ಗೌರವಧನವನ್ನು ಇಡುಗಂಟಾಗಿ ಇರಿಸಿ ಅನೇಕ ವಿದ್ವಾಂಸರನ್ನು ಗೌರವಿಸಿದ್ದಾರೆ. ಬಂಟ್ವಾಳ ತಾಲೂಕು, ಕಾಸರಗೋಡು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯ ಗೌರವಕ್ಕೆ ಪಾತ್ರರಾಗಿದ್ದಾರೆ. ಹಲವಾರು ಪ್ರಶಸ್ತಿ ಸಮಿತಿಗಳಲ್ಲಿ ಅಧ್ಯಕ್ಷರಾಗಿ ಪ್ರತಿಭಾವಂತರನ್ನು ಗುರುತಿಸಿ ಗೌರವಿಸಿದ್ದಾರೆ. ಏರ್ಯ ಅವರಿಗೆ "ಏರ್ಯ" ಎಂಬ ಹೆಸರಿನಲ್ಲಿ ಗೌರವ ಗ್ರಂಥವೊಂದನ್ನು ಅರ್ಪಿಸಲಾಗಿದೆ. ೨೦೦೬ರ ರಾಜ್ಯೋತ್ಸವ ಪ್ರಶಸ್ತಿಯೂ ಸಂದಾಯವಾಗಿದೆ.

ನವೋದಯ ಹಾಗೂ ನವ್ಯ ಕಾಲಘಟ್ಟದ ಮಹತ್ವದ ಕತೆಗಾರರಲ್ಲಿ ಒಬ್ಬರಾದ ಬಾಗಲೋಡಿ ದೇವರಾಯರು (೧೯೨೭–೧೯೮೫) ೨೦ನೇ ವಯಸ್ಸಿನಿಂದಲೇ ಕತೆ ಬರೆಯಲಾರಂಭಿಸಿದ್ದು, ೪೯ರಲ್ಲಿ ಹುಚ್ಚ ಮುನ್ಸೀಫ ಮತ್ತು ಇತರ ಕತೆಗಳು ಸಂಗ್ರಹವನ್ನು ತಂದಿದ್ದು, ಮುಂದೆ ಅನುರಾಧ ಹಾಗೂ ರುದ್ರಪ್ಪನ ರೌದ್ರ ಕಥಾ ಸಂಕಲನಗಳು ಪ್ರಕಟವಾದವು. ೨೦೦೦ದಲ್ಲಿ ಅವರ ಕಥಾ ಸಂಗ್ರಹ ಸಮಗ್ರವಾಗಿ ಪ್ರಕಟವಾಯಿತು. ಉನ್ನತ ಶಿಕ್ಷಣ (ಐ.ಎಸ್.ಎಸ್) ಪಡೆದು ವಿದೇಶಿ ವ್ಯವಹಾರ ಸಚಿವಾಲಯದಿಂದ ಕೆಲವು ದೇಶಗಳಲ್ಲಿ ರಾಯಭಾರಿ ಹಾಗೂ ಇನ್ನಿತರ ಹುದ್ದೆಗಳಲ್ಲಿದ್ದರು. ಬಾಗಲೋಡಿ ಅವರ ಕತೆಗಳು ವಿಭಿನ್ನವಾಗಿದ್ದು ಅನೇಕ ವಿಮರ್ಶಕರ ಗಮನ ಸೆಳೆದಿದೆ. ಧಾರಾ ಮತ್ತು

ಇತರ ಕತೆಗಳು ಹಾಗೂ 'ದೇವರ ಸಾಮ್ರಾಜ್ಯ' ಮತ್ತು 'ಹೊಸ ಸಮಯ' ಕಾದಂಬರಿಗಳನ್ನು ಬರೆದ ಶ್ರೀಕಂತ ಪುತ್ತೂರು (೧೯೨೭) ಅವರ ಕೃತಿಗಳಲ್ಲಿ ಸಾಮಾಜಿಕ ಚಿಂತನೆಗಳನ್ನು ಕಾಣಬಹುದು. ರೈಲ್ವೆ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಜನಾರ್ದನ ಗುರ್ಕಾರ್ (೧೯೩೨) 'ಕಂಬದ ಹುಚ್ಚು' ಮತ್ತು 'ಬೆಳ್ಳಿ ಬಟ್ಟಲು' ಎಂಬ ಕಥಾ ಸಂಕಲನಗಳನ್ನು, ೧೮ ಕಾದಂಬರಿಗಳನ್ನು, ವೈಚಾರಿಕ ಪ್ರಬಂಧ ಸಂಕಲನಗಳನ್ನು ರಚಿಸಿದ್ದಾರೆ. ಪುತ್ತೂರಿನವರಾದ ಮುಳಿಯ ಕೃಷ್ಣ ಭಟ್ (೧೯೩೩–೮೨) 'ಪ್ರವಾಹದಲ್ಲಿ ಪ್ರತಿಬಿಂಬ' ಎಂಬ ಕಥಾ ಸಂಕಲನ ಪ್ರಕಟಿಸಿದ್ದು, ಅವರ ನಿಧನಾನಂತರ ಅವರ ಸಹೋದರಿ ಗಂಗಾ ಪಾದೇಕಲ್ ಮುಳಿಯರ ಕೆಲವು ಲಭ್ಯ ಕಥೆಗಳನ್ನು ಸಂಗ್ರಹಿಸಿ 'ಪ್ರತಿಬಿಂಬ'ಎಂಬ ಹೆಸರಿನಲ್ಲಿ ಪ್ರಕಟಿಸಿದರು.

ನಿರ್ಪಾಜೆ ಭೀಮಭಟ್ (೧೯೩೩–೨೦೦೫) ಅವರು ಬಂಟ್ವಾಳ ತಾಲೂಕಿನ ಕನ್ಯಾನದವರಾಗಿದ್ದು, ಕನ್ನಡ ಹಾಗೂ ಸಂಸ್ಕೃತಗಳಲ್ಲಿ ಪಾಂಡಿತ್ಯ ಉಳ್ಳವರಾಗಿದ್ದರು. ಮಾಲತೀಮಾಧವ, ಮಣ್ಣಿನ ಬಂಡಿ ಇತ್ಯಾದಿಗಳನ್ನು ಅನುವಾದಿಸಿದ್ದಾರೆ. ಸಂಸ್ಕೃತದಲ್ಲಿ 'ಕಾಶ್ಮೀರ ಸಂಧಾಮ ಸಮುದ್ಯಮ' ರಚಿಸಿದ್ದಾರೆ. ಕಲ್ಹಣನ ರಾಜತರಂಗಿಣಿಯ ಅನುವಾದದಲ್ಲಿ ನಿರ್ಪಾಜೆಯವರ ಭಾಷಾ ಪ್ರೌಢಿಮೆಯನ್ನು ಕಾಣಬಹುದು. ತ್ರಿಭಾಷಾ ಪಂಡಿತರಾದ ವೆಂಕಟರಾಜ ಪುಣಿಂಚತ್ತಾಯ ಅವರು (ಜ ೧೯೩೬) ಸಂಸ್ಕೃತದಲ್ಲಿ 'ಭಕ್ತ ಕುಚೇಲ' ರೂಪಕ, ಹಿಂದಿಯಲ್ಲಿ 'ವಿಭೀಷಣ್ ಕ ಗೃಹತ್ಯಾಗ್' ಹಾಗೂ ಕನ್ನಡದಲ್ಲಿ ನಚಿಕೇತ, ಬೇಡನ ಮಗಳು ನಾಟಕಗಳು, ಗೀತಗೋವಿಂದ ಅನುವಾದ, 'ತೆಂಕಣನಾಡಿನ ಯಕ್ಷಗಾನ ಕವಿಗಳು' ಸಂಶೋಧನಾ ಪ್ರಬಂಧ, ಮಧೂರು ದೇವಾಲಯದ, ಶ್ರೀಮದೀಶ್ವರಾನಂದ ಭಾರತೀ ಸ್ವಾಮೀಜಿ ಜೀವನ ಚರಿತ್ರೆ, ದಕ್ಷಯಜ್ಞ ಖಂಡಕಾವ್ಯ ರಚಿಸಿದ್ದಾರೆ. ಜಿಲ್ಲೆಯ ಜನಪದ ಕ್ಷೇತ್ರದಲ್ಲಿ ಅಮೃತ ಸೋಮೇಶ್ವರರದು (ಜ ೧೯೩೫) ಗಣನೀಯವಾದ ಹೆಸರು. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀಯುತರು ಕನ್ನಡದಲ್ಲಿ ನಾಲ್ಕು ಸಣ್ಣಕಥಾ ಸಂಗ್ರಹಗಳು, ನಾಲ್ಕು ಕವಿತಾ ಸಂಕಲನಗಳು, ತಲಾ ಒಂದೊಂದು ಕಾದಂಬರಿ, ರೇಡಿಯೋ ರೂಪಕ, ನಾಟಕಗಳು, ಐದು ನೃತ್ಯ ರೂಪಕಗಳು, ಹದಿನಾರು ಪ್ರಸಂಗಗಳು, ಆರು ತುಳು ಜಾನಪದ ಸಂಬಂಧಿತ ಕೃತಿಗಳು ಹಾಗೂ ಜೀವನ ಚರಿತ್ರೆ ಗಾದೆಗಳ ಸಂಕಲನ, ಕುಚೋದ್ಯ ಕೋಶ, ಯಕ್ಷಗಾನ ಕೃತಿ ಸಂಪುಟ, ಹಾಗೂ ಸಂಪಾದನಾ ಕಾರ್ಯಗಳನ್ನು ಮಾಡಿದ್ದಾರೆ. ಸುಮಾರು ನೂರು ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಸೋಮೇಶ್ವರರಿಗೆ 'ಸಿರಿ' ಎಂಬ ಗೌರವ ಗ್ರಂಥ ಅರ್ಪಿಸಲಾಗಿದೆ. ಈಚೆಗೆ ಮಂಗಳೂರು ವಿಶ್ವವಿದ್ಯಾಲಯ ಶ್ರೀಯುತರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

'ರಸಿಕಪುತ್ತಿಗೆ' ಹೆಸರಿನಿಂದ ಖ್ಯಾತರಾಗಿದ್ದ ಸುಬ್ರಹ್ಮಣ್ಯ ಆಚಾರ್ಯರು ಸುಮಾರು ೫೦ ಪುಸ್ತಕಗಳನ್ನು ಬರೆದಿದ್ದಾರೆ. ರಾಷ್ಟ್ರ ಪುರುಷ ಗುರೂಜಿ, ತುಳಸೀದಾಸ್, ಕುರಿಯ ವಿಠ್ಠಲಶಾಸ್ತ್ರಿ ಇತ್ಯಾದಿ ಜೀವನ ಚರಿತ್ರೆಗಳನ್ನೂ, ಮಕ್ಕಳ ಸಾಹಿತ್ಯಗಳಾದ ಏನನ್ನುತ್ತೀರಿ ಸ್ವಾಮಿ, ಅವಳ ನೆನಪು, ನವನೀತ, ಒಡ್ಡೋಲಗ, ಸಿಂಹನಾದ; ಕಾದಂಬರಿಗಳಾದ ಮುಕ್ತ ವಿಷದ ಸೂಜಿ, ಮಾಂತ್ರಿಕ, ಅನುಭವಗಳನ್ನೂ: ಮಾರುತಿ ಶಾಲೆ, ಹುಡುಗರು, ಗವಿಯಪ್ಪನ ಗುಡ್ಡ ಇತ್ಯಾದಿ ಕಿರು ಕಾದಂಬರಿಗಳನ್ನೂ ರಚಿಸಿದ್ದಾರೆ. ಕೆಂಪುಕಾರು ಕಿರು ಕಾದಂಬರಿ ಇವರಿಗೆ ರಾಷ್ಟ್ರಪ್ರಶಸ್ತಿಯನ್ನು ತಂದು ಕೊಟ್ಟಿದೆ.

ಕಾಂತಾರ್ಕೈ ಅವರು ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರವನ್ನೂ, ಧರ್ಮಸ್ಥಳದ ಕವಿಭೂಷಣ ವೆಂಕಪ್ಪ ಶೆಟ್ಟಿ ಅವರು ರಚಿಸಿದ ಯಶೋಧರ ಚರಿತ್ರೆಯನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಟಿ. ರಘುಚಂದ್ರ ಶೆಟ್ಟಿ ಅವರು ರಯಣಸಾರ, ಸವಣ ನುಡಿಮುತ್ತು, ಜ್ಞಾನ ಚಂದ್ರ ಚರಿತ್ರೆ (ಪಾಯಣವರ್ಣಿ ರಚಿಸಿದ) ಇತ್ಯಾದಿಗಳನ್ನು ಗದ್ಯಪದ್ಯಗಳಲ್ಲಿ ರಚಿಸಿದ್ದಾರೆ. ದೇವಕುಮಾರ ಶಾಸ್ತ್ರಿ ಅವರು ಹಿಂದಿ ಭಾಷೆಯಲ್ಲಿ ಪ್ರೌಢತ್ವ ಸಾಧಿಸಿದ್ದು, ರಾಷ್ಟ್ರ ಪ್ರಶಸ್ತಿಯೂ ಸೇರಿದಂತೆ ಅನೇಕ ಬಿರುದುಗಳನ್ನು ಪಡೆದಿದ್ದಾರೆ. ಹಿಂದಿ ಭಾಷೆಯಲ್ಲಿ ಹಲವು ನಾಟಕಗಳನ್ನು, ವೇಣೂರಿನ ಇತಿಹಾಸವನ್ನು ಬರೆದಿದ್ದಾರೆ. ಹಿಂದಿಯಿಂದ ಜೈನಧರ್ಮ ಎಂಬ ಬೃಹತ್ ಗ್ರಂಥ, ಏಲಾಚಾರ್ಯ ವಿದ್ಯಾನಂದ ಮುನಿಗಳ ಪುಸ್ತಕಗಳನ್ನು, ಮೃತ್ಯು ಮಹೋತ್ಸವನ್ನು ಅನುವಾದಿಸಿದ್ದಾರೆ. ಸಂಸ್ಕೃತದಿಂದ ಜೈನ ಆರಾಧನಾ ವಿಧಾನ ಸಂಗ್ರಹ, ರತ್ನಸಂಚಯ, ಸಮಯಸಾರಗಳನ್ನು ಅನುವಾದಿಸಿದ್ದಾರೆ. ಜೈನರ ವ್ರತಾಚರಣೆಗೆ ಸಂಬಂಧಿಸಿದಂತೆ (ನೋಂಪಿ) ಪ್ರತ್ಯೇಕವಾಗಿ ಕಿರುಪುಸ್ತಕಗಳನ್ನು ಹಾಗೂ ಭಗವಾನ್ ಚಂದ್ರಪ್ರಭಾ ಗದ್ಯಗ್ರಂಥವನ್ನು ಬರೆದಿದ್ದಾರೆ. ಅಜ್ಞಾತ ಕವಿ ಬರೆದಿದ್ದ ಜೀರ್ಣೋದ್ಧಾರ ಚರಿತ್ರೆಯನ್ನೂ, ಚಿಕ್ಕಣ್ಣ ಪಂಡಿತನ ಬಾಹುಬಲಿ ಚರಿತ್ರೆ, ಜೈನತತ್ತ್ವಗಳ ಭವ್ಯಾಮೃತ, ರತ್ನಾಕರ ಶತಕ, ಅಪರಾಜಿತ ಶತಕ ಸಂಪಾದಿಸಿದ್ದಾರೆ. ಕನ್ನಡ ಗದ್ಯದಲ್ಲಿ ಜಿನಾಲಯ ಬಸದಿ, ನಾಂದಿ ಮಂಗಳ ಪೂಜಾ ವಿಧಾನಗಳನ್ನು ಸಂಗ್ರಹಿಸಿದ್ದಾರೆ.

ಪಳಕಳ ಸೀತಾರಾಮಭಟ್ ಅವರು ೧೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದು ಹೆಚ್ಚಿನವು ಮಕ್ಕಳ ಸಾಹಿತ್ಯವಾಗಿವೆ. ಮಕ್ಕಳು ಹಿಗ್ಗಿ ನಲಿಯುವಂತೆ ಕಿರಿಯರ ಕಿನ್ನರಿ, ಪುಟ್ಟನ ಪೀಪಿ, ಕಂದನ ಕೊಳಲು, ಬಣ್ಣದ ಬೊಂಬೆ ಇತ್ಯಾದಿ ಕವನ ಸಂಕಲಗಳನ್ನೂ, ಗಡಿಬಿಡಿಗುಂಡ,

ಮಿಠಾಯಿ ಬೊಂಬೆ, ಕಿಟ್ಟನ ಸಾಹಸ ಇತ್ಯಾದಿ ಕತೆಗಳನ್ನೂ, ಭಕ್ತ ಧ್ರುವ, ನಚಿಕೇತ, ಕುಳ್ಳತಮ್ಮ, ಹೀಗೊಂದು ಕತೆ ಇತ್ಯಾದಿ ನಾಟಕಗಳನ್ನೂ, ಈಶ್ವರ ಚಂದ್ರರನ್ನು ಕುರಿತ ಜೀವನ ಚರಿತ್ರೆಯನ್ನೂ ಬರೆದಿದ್ದಾರೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ, ಬೇವುಬೆಲ್ಲ ಲಲಿತ ಕವನ ಸಂಕಲನವನ್ನು ಅನೇಕ ಚುಟುಕಗಳನ್ನು ರಚಿಸಿದ್ದಾರೆ. ಪುತ್ತಿಗೆ ಈಶ್ವರ ಭಟ್ಟರು ಭಾಮಿನಿ ಷಟ್ಪದಿಯಲ್ಲಿ 'ಕಟೀಲು ಕ್ಷೇತ್ರದ ಶ್ರೀ ಭ್ರಮರಾಂಬ, ಪುತ್ತಿಗೆ ಕ್ಷೇತ್ರದ ಶ್ರೀ ಸೋಮನಾಥೇಶ್ವರ' ಬರೆದಿದ್ದಾರೆ. ತುಳುವಿನಲ್ಲಿ 'ಮಾಣಿಗೆರಡ್ ಪಾತೆರ'ನ ಮೊದಲಭಾಗ ಪ್ರಕಟವಾಗಿದ್ದು, ಉಳಿದ ೬,೭೫೫ ಷಟ್ಪದಿಗಳ ೧೨ ಭಾಗಗಳು ಪ್ರಕಟವಾಗಬೇಕಾಗಿದೆ. ೨೪,೦೦೦ ಭಾಮಿನಿ ಷಟ್ಪದಿಯ ಶ್ರೀ ಹರಿಭಕ್ತಿ ಮಹಾಕಾವ್ಯ ಅಪ್ರಕಟಿತವಾಗಿದೆ. ಒಂದು ಅಂದಾಜಿನಂತೆ ೪೫,೦೦೦ಕ್ಕೂ ಹೆಚ್ಚು ಭಾಮಿನಿಗಳನ್ನು ಬರೆದಿದ್ದಾರೆ. ಸಾವಿರದ ಮುನ್ನೂರಕ್ಕೂ ಹೆಚ್ಚು ವಚನಗಳನ್ನೂ, ಶಿವಳ್ಳಿ ತುಳು ಭಾಷೆಯಲ್ಲಿ ಸುಮಾರು ೮೦೦ ಹಾಸ್ಯ ಲೇಖನಗಳನ್ನೂ ರಚಿಸಿದ್ದಾರೆ.

ಬಿ.ಎಂ. ಇಚ್ಲಂಗೋಡು ಅವರು ಬ್ಯಾರಿ ಸಂಸ್ಕೃತಿಯ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದಾರೆ. ಇಂಗ್ಲಿಷ್‌ನಲ್ಲಿ ಸಿವಿಲೈಸೇಶನ್ ಆಫ್ ಏನ್‌ಷಿಯಂಟ್ ವರ್ಲ್ಡ್. ಕುರಾನಿನ ಕನ್ನಡಭಾವನುವಾದ 'ದಿವ್ಯದರ್ಶನ' ಇವರಿಗೆ ಹೆಸರು ತಂದು ಕೊಟ್ಟಿದೆ. ಇಸ್ಲಾಮೀ ತತ್ತ್ವಗಳನ್ನು ಕುರಿತು ಸರಳಗನ್ನಡದಲ್ಲಿ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಭಾಷಣಕಲೆ, ಶ್ರೀಮಂತಿಕೆಯ ಸೂತ್ರಗಳು, ಸಿರಿನಿಧಿಗಳಲ್ಲದೆ, ಬಳಕೆದಾರರ ಸಮಸ್ಯೆಗಳು ಮತ್ತು ಪರಿಹಾರ, ಗ್ರಾಹಕ ಸಂರಕ್ಷಣಾ ಕಾಯ್ದೆ ಮತ್ತು ಜನ ಸಾಮಾನ್ಯರು, ಇಸ್ಲಾಂ ಎಂದರೇನು? ಕವಿ ಹೃದಯ–ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಅಮ್ಮೆಂಬಳ ಶಂಕರ ನಾರಾಯಣ ನಾವಡ (ಜ: ೧೯೧೬) ಅವರು ಸರ, ಪಡಿದನಿ, ಬೆಳಕು, ಬಾಳ ಸಂಗಾತಿಗಳನ್ನೂ ಶ್ರೀರಾಮಾಶ್ವಮೇಧದ ಕತೆ, ಅದ್ಭುತ ರಾಮಾಯಣ, ಕೇಂದ್ರ ಸರ್ಕಾರದಿಂದ ಬಹುಮಾನಿತವಾದ ಉಪನಿಷತ್ತಿನ ಕತೆಗಳು, ಕಿಶೋರ ರಾಮಾಯಣ, ಕನ್ನಡ ಕುಮಾರ ಸಂಭವ, ಜೇನು ಹನಿ, ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಪುತ್ತೂರಿನ ಕೆ.ಆರ್. ಕೃಷ್ಣರಾವ್ (೧೯೨೦–೪೦) ಅವರ ಕವನ ಸಂಕಲನ 'ಚೆಲುವು' ಮರಣೋತ್ತರವಾಗಿ ಪ್ರಕಟವಾಯಿತು. ಅಚ್ಯುತಗೌಡ ಕಿನ್ನಿಗೋಳಿ (೧೯೨೧–೭೬) ಅವರು ಮದರಾಸ್ ಸರ್ಕಾರದ ಬಹುಮಾನಿತ ಯೋಗಲಹರಿ, ಮೈಸೂರು ಸರ್ಕಾರದ ಬಹುಮಾನಿತ 'ಶಿವಲೇಶ್ಯ' ಹಾಗೂ ಕ್ಷಾತ್ರದರ್ಶನ ಖಂಡಕಾವ್ಯಗಳನ್ನೂ, ಬಡ್ಡಿದ ಉರುಳು, ದಾರಾ ಸಂಗ್ರಾಮ ಸಿಂಹ, ವತ್ಸವಿಜಯ ಇತ್ಯಾದಿ ಕಾದಂಬರಿಗಳನ್ನೂ; ನಾಗವರ್ಮನ ಕಾದಂಬರಿಯ ಗದ್ಯಾನುವಾದವನ್ನು ರಚಿಸಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿದ್ದ ಯು.ಪಿ.ಕುಣಿಕುಳ್ಳಾಯ 'ಇವರೆಲ್ಲಿಯವರು' ಕವನ ಸಂಕಲನ ಬರೆದಿದ್ದಾರೆ. ಪುತ್ತೂರಿನ ಎಸ್. ಶಂಕರನಾರಾಯಣ ಭಟ್ಟ ಅವರು ಹೂದೋಟ, ಗಂಗಾ ಸಲಿಲ, ನಾಲ್ಕು ಕವನಗಳು–ಕವನ ಸಂಕಲನಗಳನ್ನೂ, ನವೋದಯ ವ್ಯಾಕರಣ, ಹೊಸಗನ್ನಡ ಅದ್ಭುತ ರಾಮಾಯಣ, ಕನಕದಾಸರ ನಳಚರಿತ್ರೆಯ ಗದ್ಯಾನುವಾದ, ಕುಮಾರನ ಜನನ ಮತ್ತು ವಿಜಯ ಬರೆದಿದ್ದಾರೆ. ಕಮಲನಾಭ ಕಾವ್ಯನಾಮದ ಕೊಡತ್ತೂರು ಅನಂತ ಪದ್ಮನಾಭ ಉಡುಪ (೧೯೨೫–೯೨) ಅವರು ಸಮರ್ಪಣೆ, ಸುಮಸಂಚಯ, ತುಂಬಿದ ಬಿಂದಿಗೆ, ಜೋಡಿಮೋಡಿ ಕವನ ಸಂಕಲನಗಳನ್ನೂ, ಕಥಾ ಸಂಕಲನಗಳಾದ ಚಾರುಚಯನ, ನಮನ, ಬಿಂದು ಸಿಂಧು, ಮಂಗಲಾಂಗನೆಯರು, ಮೂಲದಾಳ, ಕಾದಂಬರಿ, ಕುಟಿಲ ಕಾಲ, ನಾಟಕ, ದೀನಮಾನ, ರಚಿಸಿದ್ದಾರೆ. ತಮ್ಮ ಯುಗಪುರುಷ ಪ್ರಕಟಣಾಲಯದಿಂದ ಹಲವಾರು ಲೇಖಕರ ಕೃತಿಗಳನ್ನು ಪ್ರಕಟಿಸಿದ್ದಾರೆ. ಯರ್ಮುಂಜ ರಾಮಚಂದ್ರ (೧೯೩೩–೫೫) ಅವರು ವಿದಾಯ ಕವನ ಸಂಕಲನವನ್ನೂ, ಚಿಕಿತ್ಸೆಯ ಹುಚ್ಚು ಮತ್ತು ಇತರ ಕತೆಗಳನ್ನು ಬರೆದಿದ್ದಾರೆ. ಪುತ್ತೂರಿನ ಡಿ. ಸದಾಶಿವ ಭಟ್ (ಜ ೧೯೩೩) ಅವರು ದೀವಿಗೆ, ಸುಮಹಾರ, ಅಜನಮಾಲಿಕೆ, ಬಾಲವಾಡಿ ಗೀತಿಕೆ–ಕವನ ಸಂಕಲನಗಳನ್ನು ರಚಿಸಿದ್ದಾರೆ. ಸುರತ್ಕಲ್‌ನ ರಘುರಾಮರಾವ್ ಬೈಕಂಪಾಡಿ (ಜ ೧೯೩೪) ಅವರು ನನ್ನ ಪಯಣ ಕವನ ಸಂಕಲನವನ್ನು, ಪುತ್ತೂರಿನ ಪಾಡಿ ಸೀತಾರಾಮ ಭಟ್ ಅವರು (ಜ.೧೯೩೪) ಮುಂಬೆಳಗು, ಬಣ್ಣದ ಚಿಟ್ಟೆ ಕವನ ಸಂಕಲನಗಳನ್ನೂ, ಗೀತ ನಾಟಕ ಪ್ರಭುಯೋಗಿನಿ, ಪ್ರಬಂಧ ಸಂಕಲನ ಆನ್ವಾರ, ಯಕ್ಷಗಾನ ಕೃತಿ ಚಂಡಶಾಸನ, ನಾಟಕ–ದುರಂತ ಕೌರವ, ಶಬರಿಮಲೆ ಇತಿಹಾಸ–ಅನುವಾದ ಕೃತಿಗಳನ್ನು ಬರೆದಿದ್ದಾರೆ.

ಜಿಲ್ಲೆಯ ಇನ್ನೊಬ್ಬ ಹೆಸರಾಂತ ಕಾದಂಬರಿಕಾರ ಕೆ. ಟಿ. ಗಟ್ಟಿ ಅವರು (ಜ ೧೯೩೮) ಇಂಗ್ಲಿಷ್ ಉಪನ್ಯಾಸಕರಾಗಿದ್ದು, ೪೨ ಕಾದಂಬರಿಗಳನ್ನು ೧೩ ನಾಟಕಗಳನ್ನು ಎರಡು ಕವನ ಸಂಕಲನಗಳನ್ನು ಎರಡು ತುಳು ಕೃತಿಗಳನ್ನು ಇಂಗ್ಲಿಷ್ ಭಾಷಾಭ್ಯಾಸದ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಂಗಳೂರಿನ ವಿಶುಕುಮಾರ್ (೧೯೩೫–೮೬) ಅವರು ಕತೆ, ನಾಟಕ, ಕಾದಂಬರಿ, ಕವಿತೆಗಳನ್ನು ರಚಿಸಿದ್ದು, ನಾಟಕ–ಸಿನಿಮಾ ಕ್ಷೇತ್ರಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಹೆಗಲಿಗೆ ಹೆಗಲು ನಾಟಕ, ಕುಸುಮ ಕೀರ್ತನ ಕವನ ಸಂಗ್ರಹಗಳಲ್ಲದೆ, ಮದರ್, ಕರಾವಳಿ, ವಿಪ್ಲವ, ಭಗವಂತನ ಆತ್ಮಕತೆ ಮುಂತಾದ ೧೩ ಕಾದಂಬರಿಗಳನ್ನು ಬರೆದಿದ್ದಾರೆ. ಕಾಸರಗೋಡಿನ ಕೆ. ವಿ. ತಿರುಮಲೇಶ್

(ಜ.೧೯೪೦) ಹೊರ ರಾಜ್ಯಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಆಂಧ್ರದ ಸಿಕಂದರಾಬಾದ್‌ನಲ್ಲಿ ನೆಲೆಸಿದ್ದಾರೆ. 'ನಾಯಕ ಮತ್ತು ಇತರರು', 'ಜಾಗುವ ಮತ್ತು ಇತರರು' ಇತ್ಯಾದಿ ಕಥಾ ಸಂಕಲನ, 'ಮುಖವಾಡಗಳು', 'ವಠಾರ' ಇತ್ಯಾದಿ ಕವಿತಾ ಸಂಕಲನ, ನಾಲ್ಕು ಕಾದಂಬರಿಗಳನ್ನು ರಚಿಸಿದ್ದಾರೆ. ತಿರುಮಲೇಶರು ಹೆಚ್ಚು ಪ್ರಸಿದ್ಧವಾಗಿರುವದು ಅವರ ವೈಚಾರಿಕ ಹಾಗೂ ವಿಮರ್ಶಾ ಸಂಗ್ರಹಗಳಿಂದ. ಜಿಲ್ಲೆಯಾದ್ಯಂತ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವ ಸುಬ್ರಾಯ ಚೊಕ್ಕಾಡಿ (ಜ ೧೯೪೦)ಅವರು ಮುಖ್ಯವಾಗಿ ಕವಿಯೆಂದು ಗುರುತಿಸಿಕೊಂಡವರು. 'ತೆರೆ', 'ಬೆಟ್ಟವೇರಿದ ಮೇಲೆ', 'ನಿಮ್ಮವೂ ಇರಬಹುದು', 'ಮೊನ್ನೆ ಸಿಕ್ಕವರು', 'ಇದರಲ್ಲಿ ಅದು', 'ಹಾಡಿನ ಲೋಕ' ಅವರ ಕವಿತಾ ಸಂಕಲನಗಳು ಇವಲ್ಲದೆ 'ಸಂತೆಮನೆ' (ಕಾದಂಬರಿ), 'ಕೃತಿಶೋಧ' (ವಿಮರ್ಶೆ), ಬೇರುಗಳು (ಕಥಾ ಸಂಕಲನ) ರಚಿಸಿದ್ದಾರೆ ಹಾಗೂ ಮುರಳೀಧರ ಉಪಾಧ್ಯಾಯರೊಂದಿಗೆ ಸೇರಿ 'ದಕ್ಷಿಣ ಕನ್ನಡ ಕಾವ್ಯ ೧೯೦೧–೧೯೭೬'ಎಂಬ ಆಂಥಾಲಜಿ ಸಂಪಾದಿಸಿದ್ದಾರೆ. ಸುಳ್ಯ ತಾಲೂಕಿನ ಸಾಹಿತ್ಯ ಸಮ್ಮೇಳನ ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಚೊಕ್ಕಾಡಿಯವರು ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಅವಿಶ್ರಾಂತ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರಿಗೆ ವರ್ಧಮಾನ ಪ್ರಶಸ್ತಿ ಮುದ್ದಣ್ಣ ಪ್ರಶಸ್ತಿ ಇವೇ ಮುಂತಾದ ಹಲವಾರು ಪ್ರಶಸ್ತಿಗಳು ಬಂದಿವೆ. ವಿಶಿಷ್ಟ ಛಾಪಿನ ಅತ್ಯಂತ ಹೆಚ್ಚು ಪ್ರಾಯೋಗಿಕ ಕಥೆಗಳನ್ನು ಬರೆದ ಕಾಸರಗೋಡಿನ ಎಂ. ವ್ಯಾಸ ಅವರು (ಜ ೧೯೪೧) 'ಸುಳಿ', 'ಕ್ಷೇತ್ರ' ಕವನ ಸಂಕಲನಗಳು, ದಿಗಂತ, ಸ್ನಾನ ಕಾದಂಬರಿಗಳನ್ನು, ಅನೇಕ ಕಥೆಗಳನ್ನು ಬರೆದಿದ್ದಾರೆ. ನವ್ಯ ಹಾಗೂ ನವ್ಯೋತ್ತರ ಸಾಹಿತ್ಯ ಸಂದರ್ಭದಲ್ಲಿ ಪ್ರಮುಖ ಸಾಹಿತಿಯಾಗಿ ಹಾಗೂ ಸಾಹಿತ್ಯ ಚಿಂತಕರಾಗಿ ಗುರುತಿಸಲ್ಪಟ್ಟ ರಾಮಚಂದ್ರದೇವ (೧೯೪೮) ಅವರು ಸುಳ್ಯ ತಾಲೂಕಿನ ಕಲ್ಮಡ್ಕದವರು. ಕಥಾ ಸಂಕಲನಗಳಾದ 'ದಂಗೆಯ ಪ್ರಕರಣ', 'ಮೂಗೇಲ ಮತ್ತು ಇತರ ಕಥೆಗಳು, ಕವನ ಸಂಕಲನಗಳಾದ 'ಬೊಮ್ಮನ ಸತಿಗೆ ಮೂಗಿಲ್ಲ' 'ಇಂದ್ರಪ್ರಸ್ಥ' ಮತ್ತು ಇತರ ಕವನಗಳು, ನಾಟಕ 'ರಥ ಮುಸಲ' ವಿಮರ್ಶೆ 'ಮುಚ್ಚು ಮತ್ತು ಇತರ ಲೇಖನಗಳು', ಅಂಕಣ ಬರಹ 'ಮಾತುಕತೆ', ಅನುವಾದಿತ ನಾಟಕಗಳು 'ಮ್ಯಾಕ್‌ಬತ್', 'ಹ್ಯಾಮ್ಲೆಟ್'ಗಳನ್ನು ರಚಿಸಿದ್ದಾರೆ. 'ಶೇಕ್ಸ್‌ಪಿಯರ್– ಎರಡು ಸಂಸ್ಕೃತಿಗಳಲ್ಲಿ' ಅವರ ಪಿಎಚ್.ಡಿ ನಿಬಂಧ. ಇವರ ಕಥೆಗಳಲ್ಲಿ ಕಂಡು ಬರುವ ಫ್ಯಾಂಟಸಿ ಅನನ್ಯವಾದುದು.

ಮುಖ್ಯಮಂತ್ರಿಯಾಗಿದ್ದ ವೀರಪ್ಪ ಮೊಯಿಲಿ ಅವರು ೧೯೪೦ರಲ್ಲಿ ಮೂಡಬಿದಿರೆಯಲ್ಲಿ ಜನಿಸಿದ್ದು, ಸಾಹಿತಿಗಳಾಗಿ ಕೊಟ್ಟ, ತೆಂಬರೆ, ಸಾಗರದೀಪ, ಸುಳಿಗಾಳಿ ಕಾದಂಬರಿಗಳು; ಹಾಲುಜೇನು, ಮತ್ತೆ ನಡೆಯಲಿ ಸಮರ, ಯಕ್ಷಪ್ರಶ್ನೆ ಕಾವ್ಯಗಳು; ಮಿಲನ, ಪರಾಜಿತ, ಪ್ರೇಮ ವೇದಿಕೆ ನಾಟಕಗಳು Musings of India ಇಂಗ್ಲಿಷ್ ಗ್ರಂಥಗಳನ್ನು ರಚಿಸಿದ್ದಾರೆ. ಮೊಯಿಲಿ ಅವರ ಉತ್ತುಂಗ ಕೃತಿಯೆಂದರೆ ಐದು ಭಾಗಗಳಲ್ಲಿ ರಚಿಸಿದ 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯ. ಮೂಲ ರಾಮಾಯಣವೇ ಆದರೂ ಸಮಕಾಲೀನ ಸನ್ನಿವೇಶಗಳೊಂದಿಗೆ ಸಮೀಕರಿಸಿ ರಚಿಸಿರುವುದು ವಿಮರ್ಶಕರ, ಸಹೃದಯರ ಮೆಚ್ಚುಗೆಗೆ ಪಾತ್ರವಾಗಿದೆ. ಈ ಕಾವ್ಯದ ಹಿಂದಿ ಅನುವಾದವೂ ಸಿದ್ಧವಾಗುತ್ತಿದ್ದು, ಮೊದಲ ಸಂಪುಟ ಬಿಡುಗಡೆಯಾಗಿದೆ. ವೀರಪ್ಪ ಮೊಯಿಲಿ ಅವರಿಗೆ ಆರ್ಯಭಟ ಪ್ರಶಸ್ತಿ, ಗೊರೂರು ಪ್ರತಿಷ್ಠಾನ ಪ್ರಶಸ್ತಿ ಲಭ್ಯವಾಗಿವೆ. ಕಾಸರಗೋಡಿನ ಕೊಳ್ಯೂರಿನವರಾದ ನಾ. ಮೊಗಸಾಲೆ (ಜ ೧೯೪೪) ವೈದ್ಯಕೀಯ ವೃತ್ತಿಯಲ್ಲಿದ್ದರೂ ವರ್ತಮಾನದ ಮುಖಗಳು, ಮೊಗಸಾಲೆಯ ನೆನಪುಗಳು, ಪ್ರಭವ, ಸ್ವಂತಕ್ಕೆ ಸ್ವಂತಾವತಾರ, ನೆಲದ–ನೆರಳು (ಕಾವ್ಯ ಸಂಗ್ರಹಗಳು); ಮಣ್ಣಿನ ಮಕ್ಕಳು, ಕನಸಿನ ಬಳ್ಳಿ, ಅನಂತ, ನನ್ನದಲ್ಲದ್ದು, ಪಲ್ಲಟ, ಹದ್ದು, ಪ್ರಕೃತಿ, ನೆಲ–ಮುಗಿಲುಗಳ ನಡುವೆ, ದಿಗಂತ, ಸೃಷ್ಟಿ, ಬದುಕು, ತೊಟ್ಟಿ, ಪಂಥ (ಕಾದಂಬರಿಗಳು) ಪ್ರಕಟವಾಗಿವೆ. ಈಚೆಗೆ ಮೊಗಸಾಲೆಯವರ ಆತ್ಮವೃತ್ತಾಂತದ 'ಬಯಲ ಬೆಟ್ಟ' ಸಂಪುಟ ಹೊರಬಂದಿದೆ. ಶ್ರೀಯುತರಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಬಿ. ಎಚ್. ಶ್ರೀಧರ ಕಾವ್ಯ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಹಾವನೂರು ಪ್ರತಿಷ್ಠಾನ ಪ್ರಶಸ್ತಿಗಳು ದೊರೆತಿವೆ. ಪ್ರಸ್ತುತ ಮೊಗಸಾಲೆಯವರು ಕಾರ್ಕಳದ ಕಾಂತಾವರದಲ್ಲಿ ನೆಲೆಸಿದ್ದಾರೆ.

ಪುತ್ತೂರಿನಲ್ಲಿ ೧೯೪೫ರಲ್ಲಿ ಜನಿಸಿದ ಕೃಷ್ಣಭಟ್ ಅರ್ತಿಕಜೆ ಅವರು ಕೆಲಕಾಲ ಪುತ್ತೂರಿನ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು, ಚೆನ್ನೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನೇಮಕಗೊಂಡು, ವಿವಿಧ ಹುದ್ದೆಗಳಲ್ಲಿದ್ದು ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. 'ಸೂತಭಾರತ', 'ಹವ್ಯಕ ಗಾದೆಗಳು', 'ಜನಪ್ರಿಯ ತುಳು ಗಾದೆಗಳು' 'ಸಹಸ್ರಾರ್ಧ ತುಳುಗಾದೆಗಳು' ಹಾಗೂ ಮರಿಯಪ್ಪಭಟ್ಟರ ಸಂಸ್ಮರಣ ಗ್ರಂಥ 'ಸಾರ್ಥಕ'ವನ್ನು ಸಂಪಾದಿಸಿದ್ದಾರೆ. ವಿಷಕನ್ನಿಕೆ, ಅಯ್ಯಪ್ಪ ರಾಮರಾಜ ಬಹದ್ದೂರ್, ಸಮಾಜವಿಜ್ಞಾನ, ಪೆರಿಯಾರ್, ಇತ್ಯಾದಿ ಅನುವಾದಿಸಿದ್ದಾರೆ. 'ಕನ್ನಡದಲ್ಲಿ ಶತಕ ಸಾಹಿತ್ಯ' ಅವರ ಪಿಎಚ್.ಡಿ. ನಿಬಂಧ 'ಲಹರಿ' ಪತ್ರಿಕೆಯೂ ಸೇರಿದಂತೆ ಹಲವಾರು ಸ್ಮರಣ ಸಂಚಿಕೆಗಳನ್ನು ಸಂಪಾದಿಸಿದ್ದಾರೆ. ಬಿ. ಪ್ರಭಾಕರ ಶಿಶಿಲ (೧೯೫೩)ಅವರು ಕವಿತಾ ಸಂಕಲನಗಳಾದ 'ಗಗ್ಗರ', 'ಬೆಟ್ಟದಾ ಮೇಲೊಂದು', 'ತುಳು ಕತೆಗಳ ಸಂಕಲನ' 'ಬಾರಣೆ', ಹಾಗೂ 'ಶಿಕಾರಿಯ ಸೀಳು ನೋಟ', 'ದೇಶ ಯಾವುದಾದರೇನು' ಗಳನ್ನು ಪ್ರಕಟಿಸಿದ್ದಾರೆ. ಅರ್ಥಶಾಸ್ತ್ರ ಕುರಿತು ಇಂಗ್ಲಿಷ್ ಮತ್ತು

ಕನ್ನಡದಲ್ಲಿ ೫೦ಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. ಕನ್ನಡಪ್ರಭ ಪತ್ರಿಕೆಯ ಸಂಪಾದಕ ವರ್ಗದಲ್ಲಿರುವ ಹೆಚ್. ಗಿರೀಶ್‌ರಾವ್ (ಜೋಗಿ) (೧೯೬೫) ಅವರು 'ಸೀಳು ನಾಲಿಗೆ' ಕಥಾ ಸಂಕಲನ 'ಊರ್ಮಿಳಾ' ಕಾದಂಬರಿ ರವಿ ಕಾಣದ್ದು ಹಾಗೂ ಬಾಲಿವುಡ್ ಗಾಸಿಪ್ ಅಂಕಣ ಬರಹಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ವಿಮರ್ಶಾ ಪರಿವಾರದಲ್ಲಿ ಚಿರಪರಿಚಿತರಾಗಿರುವ ಸಿ. ಎನ್. ರಾಮಚಂದ್ರನ್ ಅವರು ಕೆಲಕಾಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದು. ಶೋಧ, ಶಿಲ್ಪವಿನ್ಯಾಸ, ಸ್ವರೂಪ, ಸಾಹಿತ್ಯ ವಿಮರ್ಶೆ, ಆಶಯ–ಆಕೃತಿ, ಇತ್ಯಾದಿ ವಿಮರ್ಶಾ ಲೇಖನಗಳನ್ನು ಹೊರತಂದಿದ್ದಾರೆ. ಇಂಗ್ಲಿಷ್‌ನಲ್ಲಿಯೂ Self consious structure five centuries of British and American Poetry (ed) From Chaucer to Milton, (ed) Triveni ಕೃತಿಗಳನ್ನು ಬರೆದಿದ್ದಾರೆ. ಪ್ರಾಧ್ಯಾಪಕರಾದ ನಾ. ದಾಮೋದರ ಶೆಟ್ಟಿಯವರು ೧೯೫೧ರಲ್ಲಿ ಕಾಸರಗೋಡಿನ ನ್ಯಾಯಪು (ಕುಂಬಳೆಬಳಿಯ) ವಿನಲ್ಲಿ ಜನಿಸಿದರು. ಶೆಟ್ಟಿಯವರು 'ಮುದ್ದಣ್ಣನ ಶಬ್ಧ ಪ್ರತಿಭೆ' ಕುರಿತು ಸಂಶೋಧನಾ ಪ್ರಬಂಧ, ಕಾವ್ಯಸಂಗ್ರಹಗಳಾದ ಒಡೆದ ಮುತ್ತುಗಳು, ಇಂಗ್ಲೆಂಡ್ ಕವನಗಳು, ದೇಶಭಕ್ತಿ ಗೀತೆಗಳು; ನಾಟಕ 'ಅರ್ಪಣೆ'; ಕಾದಂಬರಿ 'ಸುಳಿವಿನೊಳಗೆ', ವ್ಯಕ್ತಿ ಪರಿಚಯಗಳಾದ 'ಕೆ.ಎನ್. ಟೇಲರ್', 'ಮುದ್ದಣ್ಣ ಬದುಕು ಬರಹ', 'ನಾರಾಯಣ ಗುರು', 'ಪೇಜಾವರ ಸದಾಶಿವರಾಯರು', ಅನುವಾದಗಳಾದ 'ಭತ್ತದ ಕಾಳುಗಳು', 'ಕರಿಯ ದೇವರ ಹುಡುಕಿ', 'ಅಶ್ವತ್ಥಾಮ', 'ಬಾಲ್ಯದ ನೆನಪುಗಳು', 'ದೇವರ ವಿಕರಾಳಗಳು', 'ಸಾಕ್ಷಾತ್ಕಾರ', 'ಮಹಾಕವಿ ಜಿ. ಶಂಕರ ಕುರುಪ್'; ಸಂಪಾದಿತ ಗ್ರಂಥಗಳಾದ (ಸ್ವಂತ ಹಾಗೂ ಇತರರೊಂದಿಗೆ ಸೇರಿ) ಅದ್ಭುತ ರಾಮಾಯಣ, ಸ್ವಾತಂತ್ರ್ಯದ ಸ್ವರ್ಣಹೆಜ್ಜೆ ಸಾನಿಧ್ಯ ಪೊಲಿ, ಸಿರಿ ಹಾಗೂ ಸ್ವಂತ ಕೃತಿಗಳಾದ ರಂಗಶೋಧನ, ತೆಂಕಣಗಾಳಿ (ಅಂಕಣ ಬರಹಗಳು) ಮುಂತಾದುವನ್ನು ರಚಿಸಿದ್ದಾರೆ. ಶ್ರೀಯುತರಿಗೆ ನಾಟಕ ಅಕಾಡಮಿ ಫೆಲೋಶಿಪ್ ಹಾಗೂ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ದೊರೆತಿವೆ.

ಸುಳ್ಯದ ಚಂದ್ರಶೇಖರ ದಾಮ್ಲೆ(ಜ ೧೯೫೧) 'ವಿದೇಶಿಯರ ದೇಶದಲ್ಲಿ ಪ್ರವಾಸ ಕಥನ', 'ಜಾತ್ರೆಗಳ ಜನಪದೀಯ ಅಧ್ಯಯನ' ಸಂಶೋಧನ ಗ್ರಂಥ, ಓ ಲಕ್ಷ್ಮಣ, ಏಕಲವ್ಯ, ಬಣ್ಣ, ಯಕ್ಷಗಾನ ಪ್ರಸಂಗಗಳು, ಶಿಕ್ಷಣ ಮತ್ತು ಸಮಾಜ ಪ್ರಬಂಧ ಸಂಕಲನಗಳನ್ನು ರಚಿಸಿದ್ದಾರೆ. Land reforms and changing agrarian relations ದಾಮ್ಲೆಯವರ ಪಿಎಚ್.ಡಿ ನಿಬಂಧ ಪುತ್ತೂರಿನ ಬೊಳುವಾರು ಮಹಮದ್ ಕುಂಞ (೧೯೫೧) ಬ್ಯಾಂಕ್ ಉದ್ಯೋಗಿಯಾಗಿದ್ದು, ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ. 'ಅತ್ತ ಇತ್ತಗಳ ಸುತ್ತುಮುತ್ತೆ' ಲೇಖನ ಸಂಗ್ರಹವಲ್ಲದೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ದೇವರುಗಳ ರಾಜ್ಯದಲ್ಲಿ', ಭಾರತೀಯ ಭಾಷಾ ಸಂಸ್ಥಾನಗಳ ಪ್ರಶಸ್ತಿ ಪಡೆದ 'ಅಂಕ', ಸಾಹಿತ್ಯ ಅಕಾಡೆಮಿಯಿಂದ ಅತ್ಯುತ್ತಮ ಸೃಜನಶೀಲ ಕೃತಿ ಪ್ರಶಸ್ತಿ ಪಡೆದ 'ಆಕಾಶಕ್ಕೆ ನೀಲಿ ಪರದೆ' ಹಾಗೂ 'ಒಂದು ತುಂಡುಗೋಡೆ', 'ಜೀಹಾದ್' ಕಾದಂಬರಿಗಳನ್ನು ಬರೆದಿದ್ದಾರೆ. 'ತಟ್ಟು ಚಪ್ಪಾಳೆ ಪುಟ್ಟ ಮಗು' ಶಿಶು ಗೀತೆಗಳ ಸಂಪಾದನಾ ಗ್ರಂಥವಾಗಿದ್ದು, ಆರ್ಯಭಟ್ಟ ಪ್ರಶಸ್ತಿ ಬಂದಿದೆ. ಸಂತಮ್ಮಣ್ಣ, ಪೊನ್ನಪ್ಪ ವಯಲಾರ್ ಸಮರ, ಪಾಪುಗಾಂಧಿ ಗಾಂಧಿ ಬಾಪು ಆದ ಕಥೆ ಬರೆದಿದ್ದಾರೆ. ಪಂಡಿತ ಫಕೀರ, ಒಂದು ಗಜಲ್ ನಾಟಕ. ಬೊಳುವಾರು ಅವರಿಗೆ ೧೯೭೪ರ ಕಥಾ ಪ್ರಶಸ್ತಿ, ೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ.

ಪುತ್ತೂರಿನ ಬಿ. ಪುರಂದರಭಟ್ (ಜ ೧೯೩೭) ಅವರು ಅನಾದಿಯ ಮಗು ಕಾವ್ಯಸಂಕಲನ, ಧರ್ಮಹಾಳಾಯ್ತು, ಹೀಗೊಬ್ಬ ಚಾರ್ವಾಕಗಳನ್ನು ರಚಿಸಿದ್ದಾರೆ. ಕಿರಣ ಕಾವ್ಯನಾಮದ ಸುಳ್ಯದ ಕುತ್ಯಾಳ ನಾಗಪ್ಪ ಗೌಡ ಅವರು (ಜ ೧೯೪೦) ಒಳದನಿ, ಪರಸ್ಪರ, ಲಬ್ಧ, ಅಟ್ಟದಲ್ಲಿ ಒಂದು ರಾತ್ರಿ–ಕವನ ಸಂಗ್ರಹವನ್ನೂ; ಕಾಸರಗೋಡಿನ ಕೆ. ರಮಾನಂದ ಬನಾರಿಯವರು (೧೯೪೦) ಮಕ್ಕಳಾಗಿ ಎಳೆಯರ ಗೆಳೆಯ ಹಾಗೂ ತೊಟ್ಟಿಲುಗಳು, ಕವಿತೆಗಳೇ ಬನ್ನಿ ಮುಂತಾದ ಕವನಸಂಗ್ರಹಗಳನ್ನು 'ಆರವೆ' ಪ್ರಬಂಧ ಸಂಕಲನವನ್ನೂ; ಉಜಿರೆಯ ಎನ್.ಜಿ. ಪಟವರ್ಧನ್ ಅವರು ಪ್ರೇಮಲಹರಿ, ಅಕ್ಷಯ, ಚಿಲುಮೆ ಮುಂತಾದ ಕವನ ಸಂಕಲನ, ಛಂದಸ್ಸಾರ, ಹೊಸಗನ್ನಡದಲ್ಲಿ ಅನುವಾದಿಸಿದ ಅದ್ಭುತ ರಾಮಯಣವನ್ನು; ಸುಳ್ಯದ ಜಿ.ಎಸ್.ಉಬರಡ್ಕ (ಜ ೧೯೪೪) ಕ್ಯಾ ನಿಂತ ಪಾಶಗಳು, ಅರಣ್ಯ ಕಾಂಡ–ಕವನ ಸಂಕಲನ, ಕತೆ–ಚಿಕ್ಕದೊಂದು ಗಿಳಿಯ ಸಾಕಿ ಜನಪದ ಗೀತೆಗಳ ಸಂಗ್ರಹ–ಸಿರಿಗಂಧ ಸೂಸ್ಯಾವೆಗಳನ್ನೂ; ಕಾಸರಗೋಡಿನ ಎ. ಶ್ರೀಶದೇವ್ ಪೂಜಿತ್ತಾಯ ಅವರು (ಜ ೧೯೪೪) ಮುದ್ದಣ್ಣ ಸ್ಮಾರಕ ಪ್ರಶಸ್ತಿ ಪಡೆದ ಕವನಸಂಕಲನ 'ತಪ್ಪೇನು' ಹಾಗೂ 'ಇದು ವರ್ತಮಾನ', 'ಕವಿಗೋಷ್ಠಿ'ಗಳನ್ನೂ; ಪುತ್ತೂರಿನ ಲಕ್ಷ್ಮೀಶ ತೋಳ್ಪಾಡಿ (ಜ ೧೯೪೭) ಅವರು ಮಹಾಯುದ್ಧಕ್ಕೆ ಮುನ್ನ–ವೈಚಾರಿಕ ಗ್ರಂಥ ಹಾಗೂ ಕೆಲವು ಕವನಗಳನ್ನು; ವೇಣುಗೋಪಾಲ ಕಾಸರಗೋಡು (ಜ ೧೯೪೭) ಅವರು ಗರಿಮುರಿದ ಹಕ್ಕಿಗಳು, ಗೆರಿಲ್ಲಾ, ಬೊಗಸೆ ಮೀರಿದ ಬೆಳಕು ಕವನ ಸಂಕಲನಗಳನ್ನೂ, ಅನುವಾದಗಳಾದ ಈಚಿನ ಮಲೆಯಾಳಂ ಕವಿತೆಗಳು, ಬಂಜೆನೆಲ(ಈಲಿಯಟ್‌ನ ವೇಸ್ಟ್ ಲ್ಯಾಂಡ್), ಕಾದಂಬರಿ–'ಆಹುತಿ', ಜೀವನಚರಿತ್ರೆ ಯರ್ಮುಂಜ ರಾಮಚಂದ್ರ–ಬದುಕು–ಬರಹ, ಮಣ್ಣಿನ ಬೊಂಬೆ ಇತ್ಯಾದಿ ಹತ್ತು ನಾಟಕಗಳನ್ನೂ; ಕಾಸರಗೋಡಿನ ಶ್ರೀಕೃಷ್ಣ ಅನಂತಪುರ

(ಜ ೧೯೪೮) ಅವರು ಜೀವತಂತಿಯ ಮೀಟಿ ಕವನ ಸಂಕಲನವನ್ನೂ, ಮಂಗಳೂರಿನ ಎಚ್. ರಮೇಶ್ ಕೆದಿಲಾಯ(ಜ ೧೯೫೦) ಅವರು ಕಡೆಂಗೋಡ್ಲು ಪ್ರಶಸ್ತಿ ಪಡೆದ 'ನೋವಿನ ಇತಿಹಾಸ', ಕಿಳಿಂಗಾರು ಕುಂಞಗಟ್ಟಿ ಪ್ರಶಸ್ತಿ ಪಡೆದ 'ಶತಮಾನದ ಅಶ್ವ' ಕವನ ಸಂಕಲನ, ಶೋಧ, ಅಂತರಾರ್ಥನ ಅರ್ಥಶಾಸ್ತ್ರ ಪುಸ್ತಕಗಳನ್ನೂ; ಸುಳ್ಯದ–ಲಕ್ಷ್ಮೀಶ ಚೊಕ್ಕಾಡಿ (ಜ ೧೯೫೧) 'ವರ್ತುಲದ ಹೊರಗೆ' ಕವನ ಸಂಕಲನವನ್ನೂ, ಮಂಗಳೂರಿನ ಹರಿಯಪ್ಪ ಪೇಜಾವರ (ಜ ೧೯೫೮) ಅವರು ಕಡೆಂಗೋಡ್ಲು ಪ್ರಶಸ್ತಿ ಪಡೆದ 'ವ್ಯಕ್ತಿ ಮತ್ತು ವ್ಯಕ್ತ' ಕವನ ಸಂಕಲನ, ಮಾನ ಮತ್ತು ಇತರ ಕಥೆಗಳ ಸಂಗ್ರಹವನ್ನೂ; ಕಾಸರಗೋಡಿನ ಕೆ. ರಾಧಾಕೃಷ್ಣ ಒಳಿಯತ್ತಡ್ಕ (ಜ೧೯೫೮) ಅವರು ಸರಳ ಗೀತೆಗಳು ಈ ನನ್ನ ಶಬ್ದಗಳು, ನೋವ ಜಿನುಗುವ ಜೀವ–ಕವನ ಸಂಕಲನಗಳು, ಗುರುಕವಿ–ವ್ಯಕ್ತಿ ಚಿತ್ರ, ಶ್ರೀ ಕ್ಷೇತ್ರ ಮಧೂರು, ಕುತ್ಯಾಳ ಸಂಪದ ಪುಸ್ತಕಗಳನ್ನೂ; ಮಂಗಳೂರಿನ ವ. ಉಮೇಶ್ ಕಾರಂತ (ಜ ೧೯೬೦) 'ಭಾವಯಾನ' ಕವನ ಸಂಕಲನವನ್ನೂ: ಬಜಪೆಯ ಶ್ರೀನಿವಾಸ ಜೋಕಟ್ಟೆ (ಜ ೧೯೬೪) ಅವರು ವರ್ಧಮಾನ ಉದಯೋನ್ಮುಖ ಪ್ರಶಸ್ತಿ ಪಡೆದ 'ಕ್ಷಮಿಸಿ ಈ ಚಿತ್ರಕ್ಕೆ ಹೆಸರಿಲ್ಲ, ಹಾಗೂ 'ಪರದಾಟ' ಕವನ ಸಂಕಲನ ಹಾಗೂ ಕೆಲವು ಕಥೆಗಳನ್ನೂ, ವಿದ್ವಾನ್ ಪುಷ್ಪಾನಂದ ಉಳ್ಳಾಲ್ (ಜ ೧೯೬೬) ಅವರು ಮೊಟ್ಟೆಯೊಡೆಯುವ ಮೊದಲು, ಗಾಢವಾದ ಮುದ್ರೆಗಳು, ನನ್ನೊಲವಿನ ಚೇತನ–ಕವನ ಸಂಕಲನಗಳು, ವಾಸ್ತವದ ಹನಿಗಳು ಇತ್ಯಾದಿ ಪುಸ್ತಕಗಳನ್ನೂ, ಮಂಗಳೂರಿನ ಯು. ದಿವಾಕರ ರೈ (ಜ ೧೯೬೭) ಅವರು ಕಡೆಂಗೋಡ್ಲು ಪ್ರಶಸ್ತಿ ಪಡೆದ 'ಚುಕ್ಕಿ ಚೆಲ್ಲುವ ಬೆಳಕು', ಅಂಗಳದ ನೆರಳು–ಕವನ ಸಂಕಲನಗಳನ್ನೂ; ಕಾಸರಗೋಡಿನ ರಾಧಾಕೃಷ್ಣ ಬೆಳ್ಳೂರು (ಜ ೧೯೭೧) ಅವರು 'ಮುಗಿಲ ನೆರಳಿನ ಬೆಳಕು', 'ಅಗ್ನಿಜಿಹ್ವಾ' ಕವನ ಸಂಕಲನಗಳು ಹಾಗೂ ಪುಂಡೂರು–ಸಂಶೋಧನೆ, ಇತ್ಯಾದಿ ಪುಸ್ತಕ ಹಾಗೂ ಸಂಪಾದಿತ ಕೃತಿಯೊಂದನ್ನೂ, ಬಂಟ್ವಾಳದ ರವಿಶಂಕರ ಶೆಟ್ಟಿ, ಒಡ್ಡುಂಬೆಟ್ಟು (ಜ ೧೯೭೨) ಅವರು ಮೌನ ಮುರಿಯುವ ಸಮಯ' ಕವನಸಂಕಲನವನ್ನೂ ಪುತ್ತೂರಿನ ಬಿ. ಎಂ. ಬಶೀರ್(ಜ ೧೯೭೨) ಅವರು ಮುದ್ದಣ್ಣ ಪ್ರಶಸ್ತಿ ಪಡೆದ 'ಪ್ರವಾದಿಯ ಕನಸು' ಕವನ ಸಂಕಲನವನ್ನೂ ಬರೆದಿದ್ದಾರೆ.

ಕದಂಬಾಡಿ ಜತ್ತಪ್ಪ ರೈ ರವರು (ಜ ೧೯೧೬) ಬೇಟೆಯ ನೆನಪುಗಳು, ಈಡೊಂದು ಹುಲಿಯೆರಡು ಇತ್ಯಾದಿ ಬೇಟೆಗೆ ಸಂಬಂಧಿಸಿದ ಚಿತ್ರಣಗಳಲ್ಲದೆ, ಕಾಬೂಲಿವಾಲ ಇತ್ಯಾದಿಗಳ ಅನುವಾದ ಸೂದ್ರೆ–ಏಕಲವ್ಯ, ಮುಂತಾದ ತುಳು ಕೃತಿಗಳನ್ನು ರಚಿಸಿದ್ದರು. ರಾಜ್ಯ ಅಕಾಡೆಮಿ ಪ್ರಶಸ್ತಿ ಅವರಿಗೆ ಸಂದಿತ್ತು. ಕಾಸರಗೋಡಿನ ಕೆ. ಪರಮೇಶ್ವರ ಭಟ್ಟ ಬಾಳಿಲ (ಜ ೧೯೪೦) ಕಿಟ್ಟಣ್ಣನ ಪ್ರೀತಿ, ಹೊಳಪಿನ ಹಾದಿ ಇತ್ಯಾದಿ ಖಂಡಕಾವ್ಯಗಳನ್ನು, ಧರ್ಮವಿಜಯ ಮಹಾಕಾವ್ಯವನ್ನು ರಚಿಸಿದ್ದಾರೆ. ಅಲ್ಲದೆ ನಲವತ್ತಕ್ಕೂ ಹೆಚ್ಚು ನಾಟಕಗಳನ್ನು, ನೂರಾರು ಕವಿತೆಗಳನ್ನು ರಚಿಸಿದ್ದು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕೆ. ಕುಶಾಲಪ್ಪಗೌಡರು(ಜ ೧೯೩೧) ಕೊಡಗಿನಲ್ಲಿ ಜನಿಸಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಕಾರ್ಯಕ್ಷೇತ್ರವನ್ನಾಗಿ ಇರಿಸಿಕೊಂಡವರು. ತಮಿಳುನಾಡಿನ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದ್ದು ಕನ್ನಡ ಭಾಷೆ, ವ್ಯಾಕರಣ ಕುರಿತು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತುಗಳು ಸೇರಿದಂತೆ ಪ್ರಬಂಧಗಳ ಸಂಕಲನಗಳು, ಅನುವಾದ ಸಾಹಿತ್ಯಗಳು ಐವತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಮತ್ತು ಪ್ರಬಂಧಗಳು, ಕವಿತೆಗಳು, ವಿಮರ್ಶೆಗಳು ರಚಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡಮಿಯಿಂದ ೧೯೮೭ರಲ್ಲಿ ವಾರ್ಷಿಕ ಗೌರವ ಪ್ರಶಸ್ತಿ ಪಡೆದಿದ್ದು, ೧೯೯೪ರಲ್ಲಿ ಸುಳ್ಯದಲ್ಲಿ ನಡೆದ ಜಿಲ್ಲಾ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಹಂಪೆಯ ಕನ್ನಡ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಬಿ.ಎ.ವಿವೇಕ ರೈ ಅವರು ಕನ್ನಡ ಸಾಹಿತ್ಯ ಹಾಗೂ ಜನಪದಗಳ ತಜ್ಞರಾಗಿದ್ದು ಹನ್ನೊಂದು ಸಂಶೋಧನಾ ಗ್ರಂಥಗಳನ್ನು ರಚಿಸಿದ್ದು, ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದ್ದಾರೆ. ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿ, ಸಂದೇಶ ಪ್ರಶಸ್ತಿ, ರಾಜ್ಯ ಜನಪದ ಮತ್ತು ಯಕ್ಷಗಾನ ಹಾಗೂ ತುಳು ಅಕಾಡಮಿಗಳ ಪ್ರಶಸ್ತಿಗಳು ದೊರೆತಿವೆ. ಒಂದು ಅವಧಿಗೆ ತುಳು ಅಕಾಡಮಿಯ ಅಧ್ಯಕ್ಷರಾಗಿದ್ದರು.

ಎ.ವಿ.ನಾವಡರವರು ಹಂಪಿ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದು ನಿವೃತ್ತರಾಗಿದ್ದಾರೆ. ಜಾನಪದ ವಿಜ್ಞಾನ, ದಾಸ ಸಾಹಿತ್ಯ ಇತ್ಯಾದಿಗಳಲ್ಲಿ ಆಸಕ್ತಿ ಹೊಂದಿದ್ದು, 'ಸಾವಿರ ಕೀರ್ತನೆಗಳು', ಜಾನಪದ ಸಮಾಲೋಚನ ಮುಂತಾದ ನಲವತ್ತಕ್ಕೂ ಹೆಚ್ಚು ಪುಸ್ತಕಗಳ ಪ್ರಕಟಣೆ, ಅಂತರರಾಷ್ಟ್ರೀಯ ಜಾನಪದ ಕಮ್ಮಟದಲ್ಲಿ ಭಾಗವಹಿಸುವಿಕೆ, 'ಆರ್ಯಭಟ ಪ್ರಶಸ್ತಿ', ಕರ್ನಾಟಕ ಸಾಹಿತ್ಯ ಅಕಾಡಮಿಯ ಪುಸ್ತಕ ಬಹುಮಾನ, ಜಾನಪದ ತಜ್ಞ ಮೊದಲಾದ ಪ್ರಶಸ್ತಿ, ಗೌರವಗಳು ಸಂದಿವೆ. ಅಲ್ಲದೆ, ಜಾನಪದ ಕ್ಷೇತ್ರದಲ್ಲಿನ ಸಾಧನೆಗಾಗಿ ಅಂತರಾಷ್ಟ್ರೀಯ ಫೂಕ್ಲೋರ್ ಫೆಲೋಸ್‌ನ ಗೌರವ ಸದಸ್ಯತ್ವವೂ ದೊರೆತಿವೆ.

ದೆಹಲಿಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ ಹಾಗೂ ಎಪಿಪಿಎಸ್ ನ ನಿರ್ದೇಶಕರು ಆಗಿರುವ ಪುರುಷೋತ್ತಮ ಬಿಳಿಮಲೆ ರವರು (ಜ ೧೯೫೫) 'ಸುಳ್ಯ ಪರಿಸರದ ಗೌಡ ಜನಾಂಗ' ಒಂದು ಅಧ್ಯಯನ ಕುರಿತು ಪಿಹೆಚ್.ಡಿ ಪ್ರಬಂಧ ರಚಿಸಿದ್ದಾರೆ. ಕರಾವಳಿ

ಜಾನಪದ ಶಿಷ್ಟ ಪರಿಶಿಷ್ಟ ಕೊರಗರು, ಜಾನಪದ ಕಾರ್ಯಕ್ಷೇತ್ರ, ಕೋಮುವಾದ ಮತ್ತು ಜನ ಸಂಸ್ಕೃತಿ, ಹಂಪಿ ಜಾನಪದ, ಕೂಡುಕಟ್ಟು, ಹಲಿಗೆಮ್ಮ, ಕುಮಾರರಾಮ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ, ಇಂಗ್ಲೀಷಿನಲ್ಲಿಯೂ ಸಾಹಿತ್ಯ ಕೃಷಿ ನಡೆಸಿದ್ದಾರೆ. ಅಂತರರಾಷ್ಟ್ರಮಟ್ಟಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದು ಜನಪದ ತಂಡಗಳೊಂದಿಗೆ ವಿದೇಶಗಳಿಗೆ ಹೋಗಿ ಜನಪದ ತಂಡಗಳನ್ನು ಕರೆದೊಯ್ದು ಕಾರ್ಯಕ್ರಮ ನೀಡಿದ್ದಾರೆ. ಬಿಳಿಮಲೆಯವರಿಗೆ ಮಲ್ಲಿಕಾರ್ಜುನ ಮನ್ಸೂರ್ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ.

ಪಾದೇಕಲ್ಲು ವಿಷ್ಣುಭಟ್ಟ(೧೯೫೭) ಅವರು ಭಾಗವತ ಯಕ್ಷಗಾನ ಪ್ರಸಂಗಗಳು ಕುರಿತ ಪಿಎಚ್.ಡಿ ನಿಬಂಧವನ್ನೂ, ಸೇಡಿಯಾಪುಕೃಷ್ಣಭಟ್ಟರ ಕುರಿತ ಮೂರು ಕೃತಿಗಳನ್ನೂ, ಸತಿಕಮಲೆ ಎನ್ನುವ ತುಳು ಕಾದಂಬರಿಯ ಕನ್ನಡ ಅನುವಾದವನ್ನು ರಚಿಸಿದ್ದು, ತುಳು ನಿಘಂಟಿನ ಸಹಾಯಕ ಸಂಪಾದಕರಾಗಿದ್ದಾರೆ. ಮೂಲತಃ ಶಿವಮೊಗ್ಗದವರಾದ ಹೆಚ್.ಜಿ.ಶ್ರೀಧರ ಅವರು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆ ಕುರಿತು ಪಿಎಚ್.ಡಿ ನಿಬಂಧವನ್ನೂ ಮೂರು ಭಾಗಗಳಲ್ಲಿ ಕಡವ ಶಂಭುಶರ್ಮಾ ಕೃತಿ ಸಂಚಯಗಳನ್ನೂ ಹಾಗೂ ಇನ್ನಿತರ ಕೃತಿಗಳನ್ನು ಪ್ರಕಟಿಸಿದ್ದಾರೆ. ಸುಳ್ಯ ತಾಲೂಕಿನವರಾದ ಎಂ. ರಾಮಚಂದ್ರ(೧೯೩೯) ಅವರು 'ಸೇಡಿಯಾಪು ಕೃಷ್ಣಭಟ್ಟ' ಪಂಜೆಮಂಗೇಶರಾಯರು' ಇತ್ಯಾದಿ ಹತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದು, ತಾಲೂಕು ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯೂ ಸೇರಿದಂತೆ ಹಲವಾರು ಗೌರವ, ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ.

ಪುಂಡಿಕ್ಯಾ ಗಣಪಯ್ಯಭಟ್ ಅವರು ಗ್ರೀಸ್ ಹಾಗೂ ಇಂಗ್ಲೆಂಡ್ ದೇಶಗಳಲ್ಲಿ ಪುರಾತತ್ವ ಸಂಶೋಧನೆ ಕೈಗೊಂಡಿದ್ದು ಯುರೋಪ್ ನೆನಪುಗಳು ಎಂಬ ಕೃತಿಯನ್ನೂ, ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿ ಕುರಿತ ಲೇಖನಗಳ ಸಂಗ್ರಹ 'ತೌಳವ' ಕೃತಿಯನ್ನು ರಚಿಸಿದ್ದಾರೆ. ಇವರುಗಳಲ್ಲದೆ ಮೂಡಬಿದಿರೆಯವರಾದ ವಿದ್ಯಾಕುಮಾರ, ಬಿ. ಚಂದ್ರಯ್ಯ, ಕೆ. ಗುಣಪಾಲ ಕದಂಬ, ಬಿ.ಪಿ. ಕಾಮತ್, ಅಜಿತ್ ಪ್ರಸಾದ್ ರಾಮಚಂದ್ರಪ್ಪ ರವೀಂದ್ರ ಪೈ, ರಾಜೇಂದ್ರಪ್ಪ ಮಹಮ್ಮದ್ ಇರ್‌ಕಾರ್, ಧನಂಜಯ .ಎಸ್.ಯು. ಪುತ್ತಿಗೆ ಮುಂತಾದ ಅನೇಕರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ.

ಮೂಡಬಿದಿರೆಯ ಜೈನಮಠದ ಭಟ್ಟಾಚಾರ್ಯರಾದ ಅಭಿನವ ಚಾರುಕೀರ್ತಿಭಟ್ಟಾರಕರು 'ಜೈನಿಸಮ್' ಪುಸ್ತಕ ರಚಿಸಿದ್ದು ಸಂಶೋಧನಾ ಮೌಲ್ಯವುಳ್ಳ 'ಆರ್ಕಿಟೆಕ್ಚರ್ ಅಂಡ್ ಪಿರಮಿಡ್ ಟೆಕ್ನಾಲಜಿ' ಗ್ರಂಥವನ್ನು ರಚಿಸುತ್ತಿದ್ದಾರೆ. 'ಜೈನಕಾಶಿ ಮೂಡಬಿದಿರೆ', 'ಸಮ್ಯಕ್ ವ್ರತೋಪದೇಶ' ಮುಂತಾದ ಶಾಸ್ತ್ರಗ್ರಂಥಗಳನ್ನು ರಚಿಸಿದ್ದು, 'ಜೈನರತ್ನ', 'ಎಕ್ಸಲೆಂಟ್ ಅವಾರ್ಡ್' ಇತ್ಯಾದಿ ಪ್ರಶಸ್ತಿಗಳು ದೊರೆಕಿವೆ.

ಕಾಸರಗೋಡಿನ ವಸಂತಕುಮಾರ್ ಪೆರ್ಲ ಅವರು ರಂಗಭೂಮಿಯ ಜನಪದ ಅಂಶಗಳು ಕುರಿತು ಪಿಎಚ್.ಡಿ ಪದವಿ ಪಡೆದಿದ್ದು, ಮೂರು ಕವನ ಸಂಕಲನವನ್ನೂ ಒಂದು ಕಥಾ ಸಂಕಲನವನ್ನೂ ಹೊರತಂದಿದ್ದಾರೆ. ಕಾಸರಗೋಡಿನ ತಾಳ್ತಜೆ ವಸಂತಕುಮಾರ್ ಅವರು (ಜ ೧೯೪೮) ಮುಂಬಯಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದು, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ ಕುರಿತ ಪಿಎಚ್.ಡಿ ನಿಬಂಧವೂ ಸೇರಿದಂತೆ ಬೌದ್ಧ ಸಂಸ್ಕೃತಿ ಕುರಿತು ಎರಡು ಗ್ರಂಥಗಳನ್ನು ಹಾಗೂ ಕಾದಂಬರಿ, ಸಂಶೋಧನಾ ಲೇಖನಗಳನ್ನು ಹೊರತಂದಿದ್ದಾರೆ. ಪುತ್ತೂರಿನ ನರೇಂದ್ರ ರೈ ದೇರ್ಲ ಅವರು ಕನ್ನಡದಲ್ಲಿ ಬೇಟೆ ಸಾಹಿತ್ಯ, ತೇಜಸ್ವಿಯೊಳಗೊಬ್ಬ ಕಲಾವಿದ, ಲಂಕೇಶ್ ನೆನಪು ಇತ್ಯಾದಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ವಿಟ್ಲ ಬಳಿಯ ಕೋಡೂರಿನಲ್ಲಿ ಜನಿಸಿದ ಕೆ. ಚಿನ್ನಪ್ಪಗೌಡ ಅವರು (ಜ ೧೯೫೭) ಕರಾವಳಿಯ ಆರಾಧನಾ ರಂಗಭೂಮಿ ಕುರಿತಂತೆ ಪಿಎಚ್.ಡಿ ಪದವಿ ಪಡೆದಿದ್ದಾರೆ. ಭೂತಾರಾಧನೆ ಕೆಲವು ಅಧ್ಯಯನಗಳು, ಜಾಲಾಟ, ಭೂತಾರಾಧನೆ ಜಾನಪದೀಯ ಅಧ್ಯಯನ ಕೃತಿಗಳನ್ನೂ, ಲೇಖನಗಳ ಸಂಗ್ರಹ, 'ಸಂಸ್ಕೃತಿ ಸಿರಿ'ಯನ್ನೂ ಹೊರತಂದಿದ್ದಾರೆ. ಹಲವಾರು ಸ್ಮರಣ ಸಂಚಿಕೆಗಳ ಸಂಪಾದಕರಾಗಿದ್ದು, ಲೌರಿಹಾಂಕೋ ಅವರ ಕ್ಷೇತ್ರ ಕಾರ್ಯದಲ್ಲಿ ವಿವಿಧ ರೀತಿಯಲ್ಲಿ ನೆರವಾಗಿದ್ದು ಅವರ ಮಾರ್ಗದರ್ಶನದಲ್ಲಿ ಮೌಖಿಕ ಮಹಾಕಾವ್ಯಗಳು: ಪಠ್ಯರಚನೆ, ಲಿಪ್ಯಂತರ ಮತ್ತು ಅನುವಾದ ವಿಷಯ ಕುರಿತು ಅಧ್ಯಯನ ನಡೆಸಿದ್ದಾರೆ. ತುಳುನಾಡಿನ ಜನಪದಕ್ಕೆ ಸಂಬಂಧಿಸಿದಂತೆ ದೇಶ ವಿದೇಶಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಬಂಟ್ವಾಳದ ವಾಮನ ನಂದಾವರ (ಜ ೧೯೪೪) ಅವರು ಕೋಟಿ ಚೆನ್ನಯ್ಯ ಕುರಿತ ಜಾನಪದೀಯ ಅಧ್ಯಯನಕ್ಕೆ ಪಿಎಚ್.ಡಿ ಪದವಿ ಪಡೆದಿದ್ದು, ತಾಳಮೇಳ, ಸಿಂಗದನ ಇತ್ಯಾದಿ ಕೃತಿಗಳನ್ನು ಕನ್ನಡದಲ್ಲಿಯೂ, ತುಳುವಿನ ಸಣ್ಣಕತೆ, ತುಳುವಿನ ಕುಣಿತ ಇತ್ಯಾದಿಗಳನ್ನು ಕುರಿತು ತುಳುವಿನಲ್ಲಿಯೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ದೊರಕಿವೆ. ಅವರ ಈಚಿನ ಕೃತಿ 'ಜನಪದ ಸಂಸ್ಕೃತಿ ರೂಪಿಸುವ ಬದುಕು–ಕೆಲವು ಚಿಂತನೆಗಳು', ನಂದಾವರ ಅವರು ಸಾಹಿತ್ಯ ಸಂಸ್ಕೃತಿಗಳ ಸಂಘಟಕರಾಗಿರುವುದಲ್ಲದೆ ಅನೇಕ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದಾರೆ. ವಿಚಾರ ಸಂಕಿರಣಗಳಲ್ಲಿ ಪ್ರೌಢ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಸುಳ್ಯದಲ್ಲಿ ನೆಲೆಸಿರುವ ಜನಾರ್ಧನಏರ್ಪಕಟ್ಟೆ 'ತಿರಸ್ಕೃತರು', 'ಪ್ರಕ್ರಿಯೆ' ಇತ್ಯಾದಿ ಕಥಾ ಸಂಕಲನಗಳನ್ನೂ, ದಲಿತ ಚಿಂತನೆ ಪ್ರಬಂಧ ಸಂಕಲನವನ್ನೂ; 'ನಾ. ವುಜಿರೆ' ಹೆಸರಿನಿಂದ ಬರೆಯುವ ಎನ್. ನಾಗರಾಜ ಪೂವಣೆ 'ಕನಸುಗಳು' ಕವನ ಸಂಕಲನ ತಂದಿದ್ದು ಹಲವಾರು ಹಿಂದಿ–ಕನ್ನಡದ ಲೇಖನಗಳನ್ನು ಪರಸ್ಪರ ಅನುವಾದಿಸಿದ್ದಾರೆ. ಮೂಡಬಿದಿರೆಯಲ್ಲಿ ನೆಲೆಸಿರುವ ಜಯಪ್ರಕಾಶ ಮಾವಿನಕುಳಿ ಅವರು'ಅಶ್ವತ್ಥಾಮ, ಸಾಗರದಲ್ಲಿ ಸಾಯಂಕಾಲ– ಕಾವ್ಯ ಸಂಕಲನ; ಅಂತರ–ಕಾದಂಬರಿ; ಶೇಫಾಲಿಕ, ಮಹಾಯಾತ್ರೆ ಇತ್ಯಾದಿ ನಾಟಕಗಳಲ್ಲದೆ ಕಥೆ, ಜಾನಪದ ಕುರಿತ ಲೇಖನ ಇತ್ಯಾದಿ ಬರೆದಿದ್ದಾರೆ. ಶಿವರಾಮ ಕಾರಂತರು ತೀರಿಕೊಂಡ ಮೇಲೆ ಬಂದ ಪತ್ರಿಕಾ ಲೇಖನಗಳು ಹಾಗೂ ಬೇರೆಡೆ ಬಂದ ಕಾರಂತರ ಕುರಿತ ಲೇಖನಗಳನ್ನು ಸಂಗ್ರಹಿಸಿ 'ಕಾರಂತ ಯುಗಾಂತ' ಎಂಬ ಪುಸ್ತಕವನ್ನು ಸಂಗ್ರಹಿಸಿ ತಂದಿದ್ದಾರೆ. ಇದೇ ರಿತಿ ಇನ್ನೂ ಕೆಲವು ಸಾಹಿತಿ, ಕಲಾವಿದರ ಬಗ್ಗೆಯೂ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ದೆಹಲಿಯಲ್ಲಿ ನೆಲೆಸಿರುವ 'ದೆಹಲಿ ಕನ್ನಡಿಗ' 'ತುಳುವೆರ್' ಪತ್ರಿಕೆಗಳ ಸಂಪಾದಕ ಬಾ.ಸಾಮಗ ಅವರು 'ತಾಳಮದ್ದಲೆ', 'ಪುರಾತತ್ವ ಶೋಧನೆ' ಇತ್ಯಾದಿ ಕನ್ನಡದಲ್ಲಿಯೂ 'ತುಳುತ ಕಿನ್ಯ ಕತೆಕ್ಲು' ಇತ್ಯಾದಿ ತುಳುವಿನಲ್ಲೂ ಪುಸ್ತಕ ರಚಿಸಿದ್ದಾರೆ. ವರ್ಷಕ್ಕೊಂದು ಬಾರಿ ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಸಮ್ಮೇಳನ ಏರ್ಪಡಿಸಿ ನಾಡಿನ ಅನೇಕರನ್ನು ಗೌರವಿಸುತ್ತಿದ್ದಾರೆ.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಅನೇಕ ಇತಿಹಾಸ ಸಂಶೋದಕರು ಜಿಲ್ಲೆ ಹಾಗೂ ಹೊರಜಿಲ್ಲೆಗಳಲ್ಲಿ ಸಂಶೋಧನಾಕಾರ್ಯಗಳನ್ನು ಕೈಗೊಂಡಿದ್ದಾರೆ. ಪಿ. ಗುರುರಾಜಭಟ್ಟರು ತುಳುವ ಸಾಹಿತ್ಯ, ಸಂಸ್ಕ್ರತಿ, ಶಿಲ್ಪ, ವಾಸ್ತುಶಿಲ್ಪ ಕುರಿತು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ತುಳುವ ಸಂಸ್ಕೃತಿಗೆ ಇವರ 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್' ಕೃತಿಯು ಮಹೋನ್ನತ ಕೊಡುಗೆಯಾಗಿದೆ.

ಪುತ್ತೂರಿನ ಬಿ. ಸೀತಾರಾಮಶಾಸ್ತ್ರಿಯವರ 'ದ ಪೋರ್ಚುಗೀಸ್ ಇನ್ ಕೆನರಾ' ಎಂಬುದು ಪುತ್ತೂರು ಮತ್ತು ಗೋವಾಗೆ ಸಂಬಂಧಿಸಿದ ಇತಿಹಾಸ ಸಂಶೋಧನಾ ಕೃತಿಯಾಗಿದೆ. ಕನ್ನಡದಲ್ಲಿ 'ಕೆಳದಿಯ ಅರಸರು ಮತ್ತು ಪೋರ್ಚುಗೀಸರು' ಮತ್ತು ಇಂಗ್ಲೀಷಿನಲ್ಲಿ 'ಸ್ಟಡೀಸ್ ಇನ್ ಇಂಡೊ–ಪೋರ್ಚಿಗೀಸ್ ಹಿಸ್ಟರಿ' ಇತ್ಯಾದಿ ಲೇಖನಗಳ ಸಂಗ್ರಹ ಹಾಗೂ ಕೆಲವು ಪುಸ್ತಕಗಳ ಸಂಪಾದನೆಯನ್ನು ಮಾಡಿದ್ದಾರೆ. ಮೂಲತಃ ಬೆಳ್ತಂಗಡಿಯ ಸೂರ್ಯನಾಥ ಉಪೇಂದ್ರ ಕಾಮತ್ ಅವರು ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಮುಖ್ಯ ಸಂಪಾದಕರಾಗಿ ಹದಿನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು ಆ ಅವಧಿಯಲ್ಲಿ ಜಿಲ್ಲಾ, ರಾಜ್ಯ ಗ್ಯಾಸೆಟಿಯರ್‌ಗಳು, ದಶವಾರ್ಷಿಕ ಪುರವಣಿ, ಕರ್ನಾಟಕ ಕೈಪಿಡಿ ಇತ್ಯಾದಿಗಳು ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರಕಟವಾದವು. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಮೂರು ಸಂಪುಟಗಳಲ್ಲಿಯೂ ಹಾಗೂ ಕ್ವಿಟ್ ಇಂಡಿಯಾ ಚಳುವಳಿ ಕುರಿತ ಗ್ರಂಥ ಮತ್ತು ಒಕ್ಕಲಿಗರ ಇತಿಹಾಸ ಕುರಿತ ಗ್ರಂಥಗಳು ಪ್ರಕಟವಾಗಿವೆ. ಅಲ್ಲದೆ ಕಾಮತರು ಕಥೆ, ಕಾದಂಬರಿ, ಕವನ ಸಂಕಲನಗಳನ್ನೂ, ಹೊರತಂದಿದ್ದಾರೆ. ವಿಜಯನಗರ ಇತಿಹಾಸವನ್ನು ಕುರಿತು ಪ್ರೌಢ ಪ್ರಬಂಧ ರಚಿಸಿದ್ದು ಪಿಎಚ್.ಡಿ ಲಭ್ಯವಾಗಿದೆ. ಕರ್ನಾಟಕದ ಇತಿಹಾಸದ ಅಧ್ಯಯನಕ್ಕಾಗಿ ಇತಿಹಾಸ ಅಕಾಡಮಿಯೊಂದನ್ನು ರೂಪಿಸಿದ್ದು ಕಳೆದ ಇಪ್ಪತ್ತೈದು ವರ್ಷಗಳಿಂದ ವಿಚಾರ ಸಂಕಿರಣ, ಕಮ್ಮಟ, 'ಇತಿಹಾಸ ದರ್ಶನ' ಎಂಬ ವಾರ್ಷಿಕ ನಿಯತಕಾಲಿಕೆಯನ್ನು ಹೊರತರಲಾಗುತ್ತಿದೆ. ಮಿಥಿಕ್ ಸೊಸೈಟಿಯೂ ಸೇರಿದಂತೆ ಹಲವಾರು ಸಾಂಸ್ಕೃತಿಕ ಸಂಘಟನೆಗಳಲ್ಲಿ ಕಾಮತರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಇನ್ನೊಬ್ಬ ಸಂಶೋಧಕ ಕೆ.ವಿ.ರಮೇಶ್ ಅವರು ಮೈಸೂರಿನ ಶಾಸನಶಾಸ್ತ್ರ ಇಲಾಖೆಯಲ್ಲಿ ಅತ್ಯುನ್ನತ ಪದವಿಯಲ್ಲಿದ್ದರು. ಕೆ.ವಿ.ರಮೇಶ್ ಅವರು 'ಎ ಹಿಸ್ಟರಿ ಆಫ್ ಸೌತ್ ಕೆನರಾ' ಹಾಗೂ 'ತುಳುನಾಡಿನ ಇತಿಹಾಸ' ರಚಿಸಿದ್ದು, ತುಳುನಾಡಿನ ಶಾಸನ ಸಂಪುಟವನ್ನು ಸಂಗ್ರಹಿಸಿದ್ದಾರೆ.

ಸಂಶೋಧಕ ಕೆ.ಜಿ. ವಸಂತ ಮಾಧವ ಅವರು ಭಾರತ–ಪೋರ್ಚುಗೀಸ್ ಸಂಬಂಧ ಕುರಿತಂತೆ 'ಪಶ್ಚಿಮ ಕರಾವಳಿ–ಮಾಲ್ಡೀದ್ವೀಪ, 'ವಿದೇಶಿ ದಾಖಲೆಗಳ ಹಿನ್ನೆಲೆಯಲ್ಲಿ ಸ್ವಾದಿ ರಾಜ್ಯದ ಸಾಂಸ್ಕೃತಿಕ ಮಾಹಿತಿಗಳು' ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸಕ್ಕೆ ವಿದೇಶಿ ಆಕರಗಳು ಇತ್ಯಾದಿಗಳಲ್ಲದೆ ಸ್ಥಳೀಯವಾಗಿ ದೊರೆಯುವ ಮಾಹಿತಿಗಳನ್ನು ಆಧರಿಸಿ ಕರಾವಳಿಯ ಸಾಹಿತ್ಯ, ಸಂಸ್ಕೃತಿ ಕುರಿತು ಪ್ರೌಢ ಪ್ರಬಂಧಗಳನ್ನು ಮಂಡಿಸಿದ್ದಾರೆ. ಉಜಿರೆಯ ವೈ ಉಮಾನಾಥ ಶೆಣೈ ಅವರು ಕರಾವಳಿಯ ಹಲವಾರು ಶಾಸನಗಳನ್ನು ಶೋಧಿಸಿ, ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶೆಣೈಯವರ 'ಕನ್ನಡ' ಸಾಹಿತ್ಯಕ್ಕೆ ಮೂಡಬಿದಿರೆ ಲೇಖಕರ ಕೊಡುಗೆ, ಪುಸ್ತಕ ಹಾಗೂ ಲೇಖನಗಳ ಸಂಗ್ರಹವನ್ನು ಇತಿಹಾಸದಲ್ಲಿ ಮರೆತುಹೋದ ಕನ್ನಡದ ಪುಟಗಳು' ಎಂಬ ಹೆಸರಿನಿಂದ ಪ್ರಕಟಿಸಲಾಗಿದೆ.

ಕಾಸರಗೋಡಿನ 'ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ' ಸಾಹಿತ್ಯ ಸಂಸ್ಕೃತಿ ಕುರಿತು ರಾಷ್ಟ್ರಮಟ್ಟದಲ್ಲಿ ವಿಚಾರಸಂಕಿರಣ, ಪ್ರಶಸ್ತಿಪ್ರದಾನ, ಶಿಬಿರ, ಪುಸ್ತಕ ಬಿಡುಗಡೆ, ಗಡಿಪ್ರದೇಶದಲ್ಲಿ ಕನ್ನಡದ ಉಳಿವಿಗಾಗಿ ಕಾರ್ಯಕ್ರಮಗಳು ಇತ್ಯಾದಿಗಳನ್ನು ಹಮ್ಮಿಕೊಂಡಿದ್ದು, ಸುಸಜ್ಜಿತ

ಗ್ರಂಥಾಲಯವನ್ನು ಕೆ. ಪುರುಷೋತ್ತಮ ಮಾಸ್ತರ್ ಅವರ ಹೆಸರಿನಲ್ಲಿ ನಡೆಸುತ್ತಿದೆ. ಅಧ್ಯಕ್ಷರಾದ ಶಿವರಾಮ ಕಾಸರಗೋಡು ಅವರು ಸಂಘಟಕ, ಪತ್ರಕರ್ತ, ಚುಟುಕು ಸಾಹಿತ್ಯ ಕವಿ ಇತ್ಯಾದಿ ಸಾಹಿತ್ಯ ಪರ ಚಟುವಟಿಕೆಯನರಾಗಿದ್ದು ದುಬೈನ ಕನ್ನಡ ಸಂಘವೂ ಸೇರಿದಂತೆ ಹಲವಾರು ಸನ್ಮಾನಗಳನ್ನು ಪಡೆದಿದ್ದಾರೆ. ಪುತ್ತೂರಿನ ಐ.ಕೆ. ಬೊಳುವಾರು ಅವರು ರಂಗಚಟುವಟಿಕೆಗಳೊಂದಿಗೆ 'ಕಪ್ಪು ಕಾಗೆಯ ಹಾಡು, ಹಕ್ಕಿ ಮತ್ತು ಬೆಕ್ಕು, ಕಾಡೆಂದರೆ ಕಾಡು, ಕೆಂಪಾದ ಹೂವು, ತುಂಗಾಯಣ ತಿರುಕನ ಕನಸು, ಬಿಳಿಯಾನೆ' ಇತ್ಯಾದಿ ನಾಟಕಗಳನ್ನು; ಬೆಂಗಳೂರಿನ ಸುರಾನ ಕಾಲೇಜಿನ ಪ್ರಾಂಶುಪಾಲ ಪೆರಾಜೆಯ ಕೆ.ಇ. ರಾಧಾಕೃಷ್ಣ ಅವರು 'ಆವರ್ತಮಾನ, ಆಕಾಶದಲ್ಲಿ ಬೆಂಕಿ, ವಿಶ್ವ ಗ್ರಾಮ, ಜಾಗತಿಕ ಚದುರಂಗ' ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಸುರಾನ ಕಾಲೇಜಿನಲ್ಲಿ ಗೋವಿಂದಪೈಗಳನ್ನು ಕುರಿತ ವಿಚಾರ ಸಂಕಿರಣ ನಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಸೆಲ್ ಮಿಷನ್ ಅವರ ಕಾರ್ಯಚಟುವಟಿಕೆ ಕುರಿತು ಪಿಎಚ್.ಡಿ ಪದವಿಗೆ ಅಧ್ಯಯನ ಮಾಡಿದ ಪೀಟರ್ ವಿಲ್ಸನ್ ಪ್ರಭಾಕರ್ ಅವರು ಇಂಗ್ಲೀಷ್ ಹಾಗೂ ತುಳುವಿನಲ್ಲಿಯೂ ಪುಸ್ತಕ ಹಾಗೂ ನೂರಾರು ಲೇಖನಗಳನ್ನು ಬರೆದಿದ್ದಾರೆ. ವಿಘ್ನೇಶ್ವರ ವರ್ಮುಡಿ ಅವರು ಕೃಷಿ ಕುರಿತು ಪಿಎಚ್.ಡಿ ಪದವಿ ಪಡೆದಿದ್ದು ನೂರಾರು ಅಂಕಣ ಬರಹಗಳನ್ನು ಬರೆದಿದ್ದಾರೆ. ಪ್ರಭಾಕರ್ ಹಾಗೂ ವಿಘ್ನೇಶ್ವರ ಅವರುಗಳು 'ಪುತ್ತೂರು ತಾಲೂಕಿನ ಇತಿಹಾಸ ದರ್ಶನ' ಎಂಬ ಪುಸ್ತಕ ರಚಿಸಿದ್ದು ಅದರಲ್ಲಿ ತಾಲೂಕಿನ ಅನೇಕ ಸಾಹಿತಿ ಕಲಾವಿದರನ್ನು ಉಲ್ಲೇಖಿಸಿದ್ದಾರೆ.

ಮೈಸೂರಿನಲ್ಲಿ ನೆಲೆಸಿರುವ ಜನಾರ್ಧನ ಗುರ್ಕಾರ್ ಪರಾವಲಂಬಿ, ಹಳ್ಳದ ಹಾದಿ ಇತ್ಯಾದಿ ೧೮ ಕಾದಂಬರಿಗಳನ್ನು ಹಾಗೂ ಸಣ್ಣ ಕಥಾ ಸಂಕಲನ, ಪ್ರಬಂಧ, ವಿಚಾರ ಸಾಹಿತ್ಯ, ಅನುವಾದಗಳನ್ನು ರಚಿಸಿದ್ದಾರೆ. ಜಿಲ್ಲೆಯಲ್ಲಿ ಅನೇಕ ಬರಹಗಾರರಿದ್ದು ಅವರಲ್ಲಿ ಸೊಂಡಕೂರು ತಿರುಮಲೇಶ ಭಟ್, ಸಿ. ಹೊಸಬೆಟ್ಟು, ಕಲ್ಮಕ್ಕರಾಮಚಂದ್ರರಾವ್, ಎಂ. ಗಂಗಾಧರ ಭಟ್, ಶ್ರೀಕೃಷ್ಣ ಚನ್ನಂಗೊಡ್, ವಿ.ಗ. ನಾಯಕ, ಯದಯಕುಮಾರ್ ಹಬ್ಬು, ಜೀತುನಿಡ್ಲೆ, ನರೇಂದ್ರರೈದೆರ್ಲ, ರಾಮಚಂದ್ರ ಕುಂಞಹಿತ್ಲು, ಉಪ್ಪಂಗಳ ರಾಮಭಟ್ಟ, ಕೆ.ಚಿದಾನಂದಗೌಡ, ಬಾಲಸುಬ್ರಹ್ಮಣ್ಯ ಕಂಜರ್ಪಣೆ ಸತ್ಯಾನ್‌ದೇರಾಜೆ, ಪಂಡಿತ ರಾಮಕೃಷ್ಣ ಶಾಸ್ತ್ರ, ಪ್ರಭಾಕರ ಜೋಶಿ, ವಿಶ್ವೇಶ್ವರಭಟ್ ಬಿ.ಜಿ. ಮುಂತಾದ ಅನೇಕರನ್ನು ಹೆಸರಿಸಬಹುದು.

**ಮಹಿಳಾ ಸಾಹಿತ್ಯ**

ಜಿಲ್ಲೆಯ ಆದ್ಯ ಕವಯಿತ್ರಿ ಎಂದು ಹೇಳಬಹುದಾದ ಮೂಕಾಂಬಿಕಾ ಅಮ್ಮ (೧೮೭೦–೧೯೪೨) ಅವರು ಬಂಟ್ವಾಳ ತಾಲೂಕಿನ ಮಲೆತಡ್ಕ ಎಂಬಲ್ಲಿಯವರು. ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರಭಟ್ಟ ಮುಂತಾದವರು ಇವರ ಬಂಧುಗಳಾಗಿದ್ದು, ಎಳವೆಯಲ್ಲಿಯೇ ವೈಧವ್ಯ ಪ್ರಾಪ್ತವಾಗಿ ಅನಂತರ ಸಾಹಿತ್ಯದಲ್ಲಿ ಒಲವು ತೋರಿದರು. ಮೂಕಾಂಬಿಕಾ ಅಮ್ಮನವರು ದ್ರೌಪದಿ ವಸ್ತ್ರಾಪಹರಣ, ಹರಿಲೀಲಾಮೃತ, ಸೀತಾಕಲ್ಯಾಣ, ಧ್ರುವಚರಿತ್ರೆ ಪುತ್ರ ಕಾಮೇಷ್ಠಿ, ಗಜೇಂದ್ರ ಮೋಕ್ಷ ಬಾಲಲೀಲೆ, ಬಿಲ್ಲಹಬ್ಬ ಹಾಗೂ ಶ್ರೀ ಮಹಿಷಮರ್ದಿನಿ ಸ್ತುತಿಗಳನ್ನು ರಚಿಸಿದ್ದಾರೆ. ಪ್ರಸ್ತುತ ಮೊದಲೆರಡು ಹಾಗೂ ಕೊನೆಯ ಕೃತಿ ವಿನಾ ಉಳಿದವು ಅಲಭ್ಯವಾಗಿದ್ದು, ಎಲ್ಲವೂ ಅಪ್ರಕಟವಾಗಿಯೇ ಇವೆ. ಇವಲ್ಲದೆ ಅನೇಕ ಶೋಭಾನೆ ಹಾಡುಗಳನ್ನು ರಚಿಸಿದ್ದು, ಇವು ಸಂಪ್ರದಾಯ ಗೀತೆಗಳಂತೆ ಉಳಿದು ಬಂದಿವೆ. ಬೆಳ್ತಂಗಡಿಯ ಗುರುವಾಯನ ಕೆರೆಯ ನೆಲ್ಲಿಕಾರು ರಾಧಾಮತಿ (೧೮೯೯–೧೯೭೦) ಅವರು ಚಿಕ್ಕಂದಿನಿಂದಲೇ ಶೋಭಾನೆ– ದೇವತಾಸ್ತುತಿ, ಭಜನೆ ಇತ್ಯಾದಿ ಆಶುಕವಿತ್ವ ರಚಿಸಿ ಹಾಡುತ್ತಿದ್ದು, ವಿವಾಹ ನಂತರ ಕಾವ್ಯ ಕವಿತೆಗಳನ್ನು ರಚಿಸಿ ಪತ್ರಿಕೆಗಳಿಗೆ ಕಳುಹಿಸುತ್ತಿದ್ದರು. ಬ್ರಹ್ಮದೇವ ಸ್ತವನ, ನನ್ನ ಭಾವನೆ (ಅನುವಾದ), ಲಕ್ಷ್ಮೀಬಾಯಿ (ಕಾವ್ಯ), ಅನಂತಮತಿ ಮುಂತಾದವನ್ನು 'ಜೈನ ಮಹಿಳೆ' ಎಂಬ ಕಾವ್ಯನಾಮದಲ್ಲಿ ಪ್ರಕಟಿಸಿದ್ದಾರೆ. ಚಂದ್ರಯ್ಯಶಾಸ್ತ್ರಿಗಳೊಂದಿಗೆ ಕೂಡಿ 'ಸಂಗೀತ ಪೂಜಾಷ್ಟಕ' ರಚಿಸಿದ್ದರು. ಇದಲ್ಲದೆ ಜಯಕುಮಾರ ಚರಿತೆ, ನೀಲಿಕುಮಾರಿ ಚರಿತೆ, ಉದ್ದಾಮ ಚರಿತೆ, ಅಪ್ರಕಟಿತವಾಗಿವೆ. ಅಂತಿಮಕಾಲದಲ್ಲಿ ರಚಿಸುತ್ತಿದ್ದ 'ವರ್ಧಮಾನ ಪುರಾಣ' ಅಪೂರ್ಣವಾಗಿದ್ದು, ಭುವನಹಳ್ಳಿ ಪದ್ಮನಾಭ ಶರ್ಮರು ಪೂರ್ಣಗೊಳಿಸಿದ್ದು, ಅನಂತರ ಪ್ರಕಟವಾಯಿತು. ಪಡುಕೋಣೆ ರಮಾನಂದರಾಯರ ಪತ್ನಿ ಸೀತಾದೇವಿ ಪಡುಕೋಣೆಯವರು (೧೯೦೩–೬೯) ಹಲವು ಭಾಷೆಗಳಲ್ಲಿ ಪರಿಣಿತರಿದ್ದು, ವ್ಯಾಖ್ಯಾನ, ಉಪನ್ಯಾಸ, ಸುಗಮ ಸಂಗೀತ, ಹಿನ್ನೆಲೆ ಗಾಯಿಕೆ, ರಂಗನಟಿ, ಇತ್ಯಾದಿ ಹಲವಾರು ಕ್ಷೇತ್ರಗಳಲ್ಲಿ ಖ್ಯಾತರಾಗಿದ್ದರು. ಹಿಂದಿಯಲ್ಲಿ ವಿ. ಸೀತಾರಾಮಯ್ಯರ 'ಸೋಹ್ರಾಬ್ ರುಸ್ತುಂ' ಅನುವಾದವನ್ನಲ್ಲದೆ 'ಮೇರೆ ಗೋಪಾಲ್', ಕೊಂಕಣಿಯಲ್ಲಿ 'ವಧು ಪರೀಕ್ಷಾ', 'ಕುಟ್ಟುಮಕ್ಕಾರಿ ಫಜೀತಿ', 'ಲಡಾಯಿಮೂಳ' ರಚಿಸಿದ್ದು ಕೈಲಾಸಂರವರ 'ಹೋಂರೂಲ್' ಕೊಂಕಣಿಗೆ ಅನುವಾದಿಸಿದ್ದಾರೆ. ಕನ್ನಡದಲ್ಲಿ 'ಹೀಗಾಗ ಬೇಕೆ ?' 'ಕಟುಕ ರೋಹಿಣಿ ಸಂವತ್ಸರದಲ್ಲಿ' ಹಾಗೂ 'ವೇಣುಮಾವ' ರಚಿಸಿದ್ದಾರೆ. ೧೯೨೯ರಲ್ಲಿಯೇ ಸಣ್ಣ ಕಥೆಗಳ ಬಗ್ಗೆ ಇದ್ದ ಅನಾದರ ವಿಶ್ಲೇಶಿಸಿ 'ಚಿಕ್ಕ ಕಥೆಗಳ ಸಾಮ್ರಾಜ್ಯ' ಎಂಬ ಲೇಖನ ಬರೆದಿದ್ದಾರೆ. ಪಡುಕೋಣೆ

ದಂಪತಿಗಳ ಮಕ್ಕಳಲ್ಲಿ ಚಂದ್ರಭಾಗದೇವಿ ಹೆಸರಾಂತ ನೃತ್ಯ ಕಲಾವಿದೆಯಾದರೆ ಶಾಂತಿ ಎಂಬಾಕೆ ಚಿತ್ರಕಲೆಯಲ್ಲಿ ಪರಿಣಿತರಿದ್ದರು. ಜಯವಂತಿ ಸಂಗೀತ ವಿದುಷಿ ಹಾಗೂ ಯಶೋಧರಾ ಭಟ್ ಹಲವಾರು ಭಾಷೆಗಳಲ್ಲಿ ಸಾಹಿತ್ಯ ರಚಿಸಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಮೂಲತಃ ಬೈಂದೂರಿನವರಾದರೂ ಕರ್ನಾಟಕದ ಹೊರಗೇ ಬಹು ಕಾಲ ನೆಲೆಸಿದ್ದ ವಾಸಂತಿ ಬಾಯಿ ಪಡುಕೋಣೆಯವರು, ಕನ್ನಡ ಹಿಂದಿಗಳಲ್ಲದೆ ಗುಜರಾತಿ, ಬಂಗಾಳಿ ಮುಂತಾದ ಭಾಷೆಗಳಲ್ಲೂ ಹಿಡಿತ ಸಾಧಿಸಿದ್ದು, ಅನುವಾದ ಹಾಗೂ ಸ್ವತಂತ್ರವಾಗಿ ಸಾಹಿತ್ಯ ರಚಿಸಿದ್ದಾರೆ. ಎಂ. ಕೆ. ಇಂದಿರಾರವರ 'ನಾಗವೀಣೆ' ಹಿಂದಿಗೆ, ಇತರ ಭಾಷೆಗಳಿಂದ ಮಿಥುನ ಲಗ್ನ, ಆಸೆಯ ಕಣ್ಣು, ಕರ್ಮಾಚಾರಿ ಇತ್ಯಾದಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕೊಂಕಣಿ ಭಾಷೆಯಲ್ಲೂ ಅನುವಾದ ಕಾರ್ಯ ಮಾಡಿದಂತೆ ತಿಳಿದುಬರುತ್ತದೆ. 'ಜೀವನದ ಹೋರಾಟ' ಹಾಗೂ 'ನನ್ನ ಮಗ ಗುರುದತ್ತ'ಗಳು ವಾಸಂತಿದೇವಿ ಅವರ ಆತ್ಮ ಚರಿತೆಗಳಾಗಿದ್ದು, ಪತ್ರಿಕೆಗಳಲ್ಲಿ ಹಲವಾರು ಕಥೆಗಳು ಪ್ರಕಟವಾಗಿವೆ. ಮಂಗಳೂರಿನಲ್ಲಿ ಜನಿಸಿದ ಬೆಳ್ಳೆ ಸೀತಾರತ್ನಮ್ಮ (೧೯೧೦–೯೫) ಚಿಕ್ಕಂದಿನಿಂದಲೇ ಸಾಹಿತಿಗಳ ಒಡನಾಟದಿಂದ ಸಾಹಿತ್ಯದ ಬಗ್ಗೆ ಆಸಕ್ತಿತೋರಿ ಕತೆಗಳು, ಲೇಖನಗಳು, ಧಾರ್ಮಿಕ ಕಾವ್ಯಗಳನ್ನು ಬರೆದಿರುವರಾದರೂ ಪ್ರಕಟವಾಗಿರುವುದು ಕಡಿಮೆ. ಅವೂ ಸೇರಿದಂತೆ ಅಪ್ರಕಟವಾಗಿರುವುದೂ ಇಂದು ಅಲಭ್ಯವಾಗಿವೆ. ಭಾಮಿನಿ ಷಟ್ಪದಿಯಲ್ಲಿರುವ 'ಭಗವದ್ಗೀತೆ' ಪ್ರಕಟವಾಗಬೇಕಿದೆ. ಸುಮಾರು ನೂರು ಭಕ್ತಿಗೀತೆಗಳ ಸಂಗ್ರಹ 'ಭಕ್ತಿವಾಹಿನಿ' ಪ್ರಕಟವಾಗಿದ್ದು, 'ಮಿಸ' (MISA) ದೀರ್ಘ ಕಥೆ ಲಭ್ಯವಿದ್ದು, 'ಮಿಲನ' ಕಾದಂಬರಿ ಅಲಭ್ಯವಾಗಿದೆ. ಮಂಗಳೂರಿನಲ್ಲಿ ಜನಿಸಿ ಉಡುಪಿಯಲ್ಲಿ ನೆಲೆಸಿರುವ ಲೀಲಾಬಾಯಿ ಕಾಮತ್ (೧೯೧೧) ಅವರು ನೂರಕ್ಕೂ ಹೆಚ್ಚು ಕಥೆಗಳನ್ನು ಅನ್ಯ ಭಾಷೆಗಳಿಂದ ಅನುವಾದಿಸಿದ್ದು, ಎಪ್ಪತ್ತರಷ್ಟು ಕಥೆಗಳು ಪ್ರಕಟವಾಗಿವೆ. ಕೆಲವು ಕಥೆಗಳು 'ಹಾರಿಹೋದ ಹಕ್ಕಿ', 'ನಮ್ಮೂರ ಶಿವಪಾರ್ವತಿ' ಕಥಾ ಸಂಕಲನಗಳಲ್ಲಿ ಸಂಗ್ರಹಿತಗೊಂಡಿವೆ. ಅಲ್ಲದೇ ಕೊಂಕಣಿಯಲ್ಲಿಯೂ ಕವಿತೆ, ನಾಟಕಗಳನ್ನು ರಚಿಸಿದ್ದಾರೆ.

ಬಂಟ್ವಾಳದ ಏರ್ಯಬೀಡಿನ ಚಂದ್ರಭಾಗಿ ಕೆ. ರೈ. ಅವರು (ಜ ೧೯೧೬) ಅನೇಕ ವೈಚಾರಿಕ ಲೇಖನಗಳು, ತುಳು ಕವಿತೆ, ನೀಳ್ಗವಿತೆಗಳನ್ನು ಬರೆದಿದ್ದಾರೆ. 'ಹರಿಜನೋದ್ಧಾರ', 'ವರದಕ್ಷಿಣೆಯ ಪರಿವಾರ ಭೂತಗಳು' ಇತ್ಯಾದಿ ವೈಚಾರಿಕ ಸಾಹಿತ್ಯ, 'ಮಂಗಳ ಅವಮಂಗಳ' ನೀಳ್ಗತೆ ಮುಂತಾದವು ಪ್ರಕಟವಾಗಿವೆ. ಆಕಾಶವಾಣಿಯಲ್ಲೂ ಕೆಲವು ಕವಿತೆಗಳು ಬಿತ್ತರವಾಗಿವೆ. ಚಂದ್ರಭಾಗಿ ಕೆ. ರೈ. ಅವರು ಖ್ಯಾತ ಬರಹಗಾರ ಏರ್ಯ ಲಕ್ಷ್ಮೀನಾರಾಯಣ ಆಳ್ವರ ಹಿರಿಯ ಸಹೋದರಿಯಾಗಿದ್ದಾರೆ. ಮಂಗಳೂರಿನ ಇನ್ನೊಬ್ಬ ಲೇಖಕಿ ಲಲಿತ ರೈ (ಜ ೧೯೨೮) ಅವರು ಕಡೆಂಗೋಡ್ಲು ಶಂಕರಭಟ್ ಹಾಗೂ ನಿರಂಜನರು ಹೊರತರುತ್ತಿದ್ದ 'ರಾಷ್ಟ್ರಬಂಧು' ಪತ್ರಿಕೆಗೆ ಲೇಖನಗಳ ಅನುವಾದ ಮಾಡುವುದರ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿ, ಹಲವಾರು ಪತ್ರಿಕೆಗಳಲ್ಲಿ ಲೇಖನ, ಕಥೆಗಳನ್ನು ಬರೆದಿದ್ದಾರೆ. ಪ್ರಕಟವಾದ ಅನೇಕವು ಇಂದು ಅಲಭ್ಯವಾಗಿದ್ದು, ಕೆಲವು ಕಥೆಗಳು ವಿವಿಧ ಸಂಗ್ರಹಗಳಲ್ಲಿ ಪುನರ್ ಮುದ್ರಿತವಾಗಿವೆ.

ಮಂಗಳೂರಲ್ಲಿ ಜನಿಸಿದ ಕಮಲಾದೇವಿ ಚಟ್ಟೋಪಾಧ್ಯಾಯ (೧೯೦೩–೧೯೮೮) ಅವರು ಸ್ವಾತಂತ್ರ್ಯ ಹೋರಾಟಗಾರ್ತಿ, ಕಲಾಭಿಜ್ಞೆ, ಸಮಾಜಸೇವಾಕರ್ತೆ ಇತ್ಯಾದಿಯಾಗಿದ್ದರು. ಮಹಾತ್ಮಾ ಗಾಂಧೀಯವರ ಚಳವಳಿಯಿಂದ ಪ್ರೇರಿತರಾಗಿ ಅಳಿವಿನಂಚಿಗೆ ಸಾಗಿದ್ದ ದೇಶೀಯ ಕರಕುಶಲಕಲೆಗೆ ಪುನರುಜ್ಜೀವನ ನೀಡಲು ಶ್ರಮಿಸಿದರು. ಇದರಿಂದಾಗಿ ದೇಶಾದ್ಯಂತ ನೂರಾರು ಕರಕುಶಲ ಕಲೆಗಳು ಅಭಿವೃದ್ಧಿ ಹೊಂದಿ ಲಕ್ಷಾಂತರ ಜನಕ್ಕೆ ಜೀವನೋಪಾಯ ಕಲ್ಪಿಸಿತು. ಕಮಲಾದೇವಿಯವರು ಇಂಗ್ಲಿಷ್‌ನಲ್ಲಿ ಭಾರತೀಯ ಕರಕುಶಲ ಕೈಗಾರಿಕೆಗಳು, ಭಾರತೀಯ ಮಹಿಳಾ ಜಾಗೃತಿ, ರಾಷ್ಟ್ರೀಯ ರಂಗಭೂಮಿ ಮುಂತಾದ ೧೦ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಅವರ ಸೇವೆಗೆ ಪದ್ಮಭೂಷಣ, ವಾಟ್ಟುಮಲ್ ಪ್ರಶಸ್ತಿ, ಮ್ಯಾಗ್ಸೆಸೆ ಪ್ರಶಸ್ತಿ, ದೇಶಿಕೋತ್ತಮ ಇತ್ಯಾದಿ ಪ್ರಶಸ್ತಿಗಳು ಬಂದಿದ್ದವು.

ಮಂಗಳೂರಿನ ಬಾಳಕುಂಜಗ್ರಾಮದ ಕೈಯ್ಯಾಕುಮಾರಿಯವರು ಹಲವಾರು ಕತೆಗಳನ್ನು ಬರೆದಿದ್ದು ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಕುರಿತು ಸುದೀರ್ಘ ಲೇಖನ ರಚಿಸಿದ್ದಾರೆ. ಮಂಗಳೂರಿನವರಾದ ಗೀತಾ ಕುಲಕರ್ಣಿಯವರು ತೇಲಿ ಹೋದ ಮೋಡ, ಮೌನಸಂಧಾನ, ಸಣ್ಣಕತೆಗಳ ಸಂಗ್ರಹ, ಕಿಶೋರನ ಚಿಕ್ಕಮ್ಮ, ಏಳುಕನ್ನಿಕೆಯರು, ನೆಲೆಯಿಲ್ಲ ನಿಲುವಿಲ್ಲ ಇತ್ಯಾದಿ ಕಾದಂಬರಿಗಳನ್ನು ಬರೆದಿದ್ದಾರೆ. ಕಾಸರಗೋಡಿನ ಬಿ.ನಳಿನಿರಾವ್ (ಜ:೧೯೪೩) 'ದೀನದಲಿತ' ಸಣ್ಣ ಕಥಾ ಸಂಗ್ರಹವನ್ನು ರಚಿಸಿದ್ದಾರೆ. ಚಿತ್ತಾಂಗಿನ ಕ್ರಾಂತಿವೀರರು ಕೃತಿಯನ್ನು ಅನುವಾದಿಸಿದ ಬಿ.ಲಲಿತಾ ಅವರು ಮಂಗಳೂರಿನವರು.

ಪದ್ಮಾ ಶೆಣೈ ಅವರು ರಾಜ್ಯ ಸರ್ಕಾರದಿಂದ ಪ್ರಶಸ್ತಿ ಪಡೆದ 'ರಸವಿರಸ' ಅಲ್ಲದೆ ಸಂಧಿಕಾಲ, ಕೊನೆಯ ನಿರ್ಧಾರ, ಜಯಶ್ರೀ, ಅನಿಶ್ಚಿತ ಇತ್ಯಾದಿ ೮ ಕಾದಂಬರಿಗಳನ್ನು, ದೂರದ ಆಸೆ ಮುಂತಾದ ಮೂರು ಸಣ್ಣ ಕಥಾ ಸಂಗ್ರಹಗಳನ್ನೂ, ಎರಡು ನೀಳ್ಗತೆಗಳನ್ನೂ ಹಲವಾರು

ಮಕ್ಕಳ ಸಾಹಿತ್ಯವನ್ನು, ಆಧ್ಯಾತ್ಮ ಕೃತಿ ಆನಂದೋಪನಿಷತ್ತು, ಶಂಕರಾಚಾರ್ಯರನ್ನು ಕುರಿತ ಜೀವನ ಚರಿತ್ರೆ, ಭಾರತೀಯ ಸ್ತ್ರೀ, ಸಂಸ್ಕೃತಿ ಮತ್ತು ಸಮಾಜ–ವಿಚಾರ ಸಾಹಿತ್ಯಗಳನ್ನು ಬರೆದಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ರಾಜ್ಯ ಮಟ್ಟದ ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕಿನ್ನಿಗೋಳಿಯಲ್ಲಿ ನಡೆದ ತಾಲ್ಲೂಕು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು, ಹಲವಾರು ಸನ್ಮಾನಗಳು ಇವರಿಗೆ ಸಂದಿವೆ. ಆನಂದಿ ಸದಾಶಿವರಾವ್ ಅವರು 'ಸ್ನೇಹಸುಧೆ' ಕಾದಂಬರಿ ರಚಿಸಿದ್ದು ಅಪಕಾರ, ಕಲಾವಿದೆ ಮುಂತಾದ ನಾಲ್ಕು ಕಥಾಸಂಕಲನವನ್ನು ಇಂಗ್ಲೀಷ್‌ನಲ್ಲಿ ಎಕೋಸ್ ಆಫ್ ಫ್ರೀಡಮ್, ವಾಯ್ಸ್ ಆಫ್ ಸ್ಟೆಲೆನ್ಸ್, ಮ್ಯಾಜಿಕ್ ಆಫ್ ದಿ ಮೈಂಡ್ ಕವನ ಸಂಕಲನಗಳನ್ನು ಬರೆದಿದ್ದು ರಾಜಾಜಿ ಅವರ ಉಪನ್ಯಾಸ 'ನಿರ್ಲಿಪ್ತ ವಾಣಿ' , ರಾಜೇಂದ್ರ ಪ್ರಸಾದರ ಭಾಷಣಗಳ ಸಂಗ್ರಹ, 'ಭಾರತದ ಐಕ್ಯತೆ'ಯನ್ನು ಅನುವಾದಿಸಿದ್ದಾರೆ. ಇವರಿಗೆ ಮೈಕೇಲ್ ಮಧುಸೂದನ ದತ್ತ ಪ್ರಶಸ್ತಿ, ಅಮೇರಿಕನ್ ಬಯೋಗ್ರಾಫಿಕಲ್ ಇನ್ಸ್ಟಿಟ್ಯೂಟಿನಿಂದ ಪ್ರತಿಷ್ಠಿತ ಮಹಿಳೆ ಪ್ರಶಸ್ತಿ, ಮಂಗಳೂರು ತಾಲ್ಲೂಕಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಹಾಗೂ ಹಲವಾರು ಸಂಘ ಸಂಸ್ಥೆಗಳಿಂದ ಸನ್ಮಾನಗಳು ದೊರೆತಿವೆ. ಜಿಲ್ಲೆಯ ಇನ್ನೊಬ್ಬ ಹೆಸರಾಂತ ಲೇಖಕಿ ಮನೋರಮ ಎಂ ಭಟ್ ಅವರು 'ಸ್ವಯಂವರ'–ಕಥಾಸಂಕಲನ, ವೈಚಾರಿಕ ಸಾಹಿತ್ಯ 'ಹೆಣ್ಣೇಕೆ ಈ ಶಿಕ್ಷೆ'; ರೇಡಿಯೋ ನಾಟಕ ಸಂಗ್ರಹಗಳಾದ ಬಲಿ, ಹೊಸಹಾದಿ, ಆಯ್ಕೆ, ನಿರ್ಧಾರಗಳನ್ನು ಬರೆದಿದ್ದಾರೆ. 'ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು', ',ವ್ಯಂಗ್ಯ ಚಿತ್ರ ಕಲಾವಿದ ಶ್ರೀ ರಾಮಕೃಷ್ಣರ ಜೀವನ ಮತ್ತು ಸಾಧನೆ' ಗಳನ್ನು ಸಂಪಾದಿಸಿದ್ದಾರೆ. ಮನೋರಮ ಅವರು ಮಂಗಳೂರು ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದುದಲ್ಲದೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರಿನ 'ಸಂಸ್ಕಾರ ಭಾರತಿ' ವತಿಯಿಂದ ಸನ್ಮಾನಿತರಾಗಿದ್ದಾರೆ. ಮೇಲಿನ ಮೂವರು ಸಾಹಿತಿಗಳು ಕರಾವಳಿ ಲೇಖಕಿಯರ, ವಾಚಕಿಯರ ಸಂಘಕ್ಕೆ ವಿವಿಧ ಕಾಲಘಟ್ಟದಲ್ಲಿ ಅಧ್ಯಕ್ಷರಾಗಿದ್ದಲ್ಲದೆ ಇಂದಿಗೂ ಸಂಪರ್ಕವಿರಿಸಿಕೊಂಡಿದ್ದಾರೆ.

ಕಾಸರಗೋಡಿನವರಾದ ಸಾರಾ ಅಬೂಬಕ್ಕರ್ (ಜ ೧೯೩೬) ಕತೆ, ಕಾದಂಬರಿಗಳಿಂದಾಗಿ ಮಹಿಳಾ ಸಾಹಿತಿಗಳಲ್ಲಿ ಪ್ರಮುಖವಾಗಿ ಗುರುತಿಸಲ್ಪಟ್ಟಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳನ್ನು ಪಡೆದ 'ಚಂದ್ರಗಿರಿಯ ತೀರದಲ್ಲಿ', ವರ್ಧಮಾನ ಉದಯೋನ್ಮುಖ ಪ್ರಶಸ್ತಿ ಪಡೆದ 'ಸಹನಾ', ಅನುಪಮಾ ನಿರಂಜನ ಪ್ರಶಸ್ತಿ ಹಾಗೂ ರತ್ನಮ್ಮ ಹೆಗ್ಗಡೆ ಮಹಿಳಾ ಸಾಹಿತ್ಯ ಪ್ರಶಸ್ತಿ ಗಳಿಸಿದ 'ಸುಳಿಯಲ್ಲಿ ಸಿಕ್ಕವರು', ಸಾವಿತ್ರಮ್ಮ ಜವರೇಗೌಡ ಪ್ರಶಸ್ತಿ ಪಡೆದ 'ಪ್ರವಾಹಸುಳಿ', ಶಿವಾನಂದ ಪಾಟೀಲ ಪ್ರಶಸ್ತಿ ಪಡೆದ 'ತಳ ಒಡೆದ ದೋಣಿಯಲ್ಲಿ' ಅಲ್ಲದೆ ವಜ್ರಗಳು, ಕದನವಿರಾಮ ಕಾದಂಬರಿಗಳನ್ನೂ, ಚಪ್ಪಲಿಗಳು, ಪಯಣ ಮತ್ತು ಇತರ ಕತೆಗಳು, ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು, ಖೆಡ್ಡಾ–ಕಥಾಸಂಕಲನಗಳು, ಮನೋಮಿ, ಬಲೆ, ನಾನಿನ್ನು ನಿದ್ರಿಸುವೆ, ಅನುವಾದಿತ ಕಾದಂಬರಿಗಳನ್ನು, 'ಅನಾವರಣ' ಲೇಖನಗಳ ಸಂಗ್ರಹವನ್ನೂ, ರಚಿಸಿದ್ದಾರೆ. ಸಾರಾ ಅಬೂಬಕ್ಕರ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಹಾಗೂ ಅತ್ತಿಮಬ್ಬೆ ಪ್ರಶಸ್ತಿಗಳು, ಆಳ್ವಾಸ್ ನುಡಿಸಿರಿ, ಭಾಷಾ ಭಾರತಿ ಸನ್ಮಾನಗಳು ದೊರೆತಿವೆ. ಇವರು ಒಂದು ಅವಧಿಗೆ ಹಂಪೆಯ ಕನ್ನಡ ವಿದ್ಯಾಲಯದ ಸೆನೆಟ್‌ಗೆ ಸದಸ್ಯರಾಗಿದ್ದರು.

ಗಂಗಾಪಾದೇಕಲ್ ಹೆಸರಿನಿಂದ ಬರೆಯುವ ಬಿ.ರತ್ನಾ ಜಿ.ಭಟ್ (ಜ.೧೯೪೮) ಅವರು ಕತೆ, ಕಾದಂಬರಿಗಳನ್ನು ರಚಿಸಿದ್ದಾರೆ. ಪುಲಪೇಡಿ ಮತ್ತು ಇತರೆ ಕತೆಗಳು, ಹೆಜ್ಜೆ ಮೂಡದ ಹಾದಿಯಲ್ಲಿ, ಹೊಸಹೆಜ್ಜೆ ಇತ್ಯಾದಿ  ಕಥಾಸಂಕಲನಗಳನ್ನು, ಸೆರೆಯಿಂದ ಹೊರಗೆ, ಹೊನ್ನಳ್ಳಿಯಲ್ಲೊಮ್ಮೆ, ಮೌನರಾಗಗಳು ಇತ್ಯಾದಿ ಒಂಬತ್ತು ಕಾದಂಬರಿಗಳನ್ನು ರಚಿಸಿದ್ದು ಸಾಹಿತ್ಯ ಅಕಾಡಮಿಗೆ ಸಣ್ಣ ಕಥೆಗಳ ಸಂಗ್ರಹವಲ್ಲದೆ ಮುಳಿಯಕೃಷ್ಣಭಟ್ ಗೌರವಗ್ರಂಥ ಸಂಪಾದಿಸಿದ್ದಾರೆ. ಬಂಟ್ವಾಳ ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಾಗವೇಣಿ.ಎಚ್. (ಜ.೧೯೬೨) ನಾಕನೇ ನೀರು ಕಥಾ ಸಂಕಲನ, ಗಾಂಧೀ ಬಂದ, ಕಡಲು ಕಾದಂಬರಿಗಳನ್ನು ರಚಿಸಿದ್ದಾರೆ.  ನಾಗವೇಣಿಯವರಿಗೆ ಸಾಹಿತ್ಯ ಆಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಬಂದಿವೆ. ಮೂಲತಃ ಗಜೇಂದ್ರಗಡದವರಾದ ಸಬಿಹಾ ಭೂಮಿಗೌಡ ಅವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.  'ಬಗೆ', 'ನಿಲುಮೆ', ವಿಮರ್ಶಾಕೃತಿಗಳು; 'ಚಿತ್ತಾರ' ಕವನಸಂಕಲನ, 'ನುಡಿಗವಳ'– ಮಹಿಳೆಯರ ಸೃಜನೇತರ ಸಾಹಿತ್ಯಾವಲೋಕನ ರಚಿಸಿದ್ದಾರೆ.  'ಸರಸ್ವತಿಬಾಯಿ ರಾಜವಾಡೆಯವರ ಆಯ್ದ ಕತೆಗಳು', 'ನಾವು ಮತ್ತು ನಮ್ಮ ಪರಿಸರ' ಕರಾವಳಿಯ ಕಥೆಗಳು ಕೃತಿಗಳನ್ನು ಸಂಪಾದಿಸಿದ್ದಾರೆ.  "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣಕಥೆಗಳ ಹುಟ್ಟು ಮತ್ತು ಬೆಳವಣಿಗೆ – ೧೮೪೩–೧೯೪೭" ಸಬಿಹಾ ಅವರ ಪಿಎಚ್.ಡಿ. ನಿಬಂಧ ಬಂಟ್ವಾಳದ ಮಂಚಿ ಗ್ರಾಮದಲ್ಲಿ ಜನಿಸಿದ ಧರಣಿ ದೇವಿ ಮಾಲಗಿತ್ತಿ ಅವರು ನಿರ್ವಹಣಾ ಶಾಸ್ತ್ರದಲ್ಲಿ ಪಿಎಚ್.ಡಿ. ಪಡೆದಿದ್ದಾರೆ. ತುಳು ನಾಡಸಿರಿ, ಸ್ತ್ರೀವಾದ ಮತ್ತು ಭಾರತೀಯತೆ, ಸಾಹಿತ್ಯ ವಾಣಿಜ್ಯ  ಮತ್ತು ಮಹಿಳಾ ಪ್ರಜ್ಞೆ ಬರೆದಿದ್ದಾರೆ. 'ಈವುರಿವದಿವ' ಕವನಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ ದೊರೆತಿದೆ.  'What Gandhi say about Ambedkar' ಗ್ರಂಥಕ್ಕೆ ಸಹ ಸಂಪಾದಕರಾಗಿದ್ದು, 'Dr.B.R.Ambedkar on women's Emanicpation,  Government Brahmana

ಗ್ರಂಥಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಧರಣೀ ದೇವಿಯವರಿಗೆ ಹಲವು ಪ್ರಶಸ್ತಿಗಳು ಬಂದಿವೆ. ಎಳತ್ತೂರು ಗುತ್ತಿನ ಇಂದಿರಾ ಹೆಗ್ಗಡೆ (ಜ.೧೯೪೯) ಮೋಹಿನಿಯ ಸೇಡು, ಪುರುಷರೇ ನಿಮಗೆ ನೂರು ನಮನ ಸಣ್ಣಕಥೆಗಳನ್ನು, ಅಮಾಯಕಿ, ಒಡಲುರಿ, ಮಂಥನ, ಬದಿ ಕಾದಂಬರಿಗಳನ್ನೂ, ಕಾವ್ಯಗಳ ಪುಟದಿಂದ ನೀನೆದ್ದು ನಿಲ್ಲು ಎಂಬ ಕವನ ಸಂಗ್ರಹವಲ್ಲದೆ ಕೆಲವು ಲಲಿತ ಪ್ರಬಂಧಗಳನ್ನೂ ಬರೆದಿದ್ದಾರೆ. ಬಂಟರನ್ನು ಕುರಿತು ಸಮಾಜೋಸಾಂಸ್ಕೃತಿಕ ಅಧ್ಯಯನ ಮಾಡಿದ್ದಾರೆ. ಅತ್ತಿಮಬ್ಬೆ ಬಹುಮಾನ ಸೇರಿದಂತೆ ಕೆಲವು ಪ್ರಶಸ್ತಿಗಳು ಬಂದಿವೆ. ಮಕ್ಕಳ ಕಾವ್ಯ ಚಿಲಿಪಿಲಿ, ನಲಿಕಲಿ, ಕಿರಿಯರ ಕೈಪಿಡಿಗಳನ್ನು ಬರೆದ ಈಶ್ವರಿ ಕೆ.ಭಟ್ ಅವರು ಕಾಸರಗೋಡಿನವರು. ಮರಕಿಣಿಯ ವಿ.ಕೆ.ಮಣಿಮಾಲಿನಿ ಅವರು ಬಾಜಿರ 'ಕಂಬದ ಒಳಸುತ್ತು' ಕಥಾ ಸಂಕಲನ, 'ಪ್ರಲೋಭನೆ' ವಿಮರ್ಶೆಗಳನ್ನು ರಚಿಸಿದ್ದು, ದ್ರೌಪದಿಯ ಸಮೀಕ್ಷೆಯನ್ನು ವಸ್ತುವಾಗಿರಿಸಿಕೊಂಡು ಪಿಎಚ್.ಡಿ. ನಿಬಂಧ ರಚಿಸಿದ್ದಾರೆ.  ಕಾಸರಗೋಡಿನ ಮಹೇಶ್ವರಿ. ಯು ಅವರು 'ಮುಗಿಲಹಕ್ಕಿ' ಕಾವ್ಯ ಸಂಕಲನ, 'ಇದು ಮಾನುಷಿಯ ಓದು' ಸಂಶೋಧನಾ ಗ್ರಂಥ ಹೊರತಂದಿದ್ದಾರೆ. ಕಾಸರಗೋಡಿನ ವರದಾ ಶ್ರೀನಿವಾಸ್ ಅವರು ಬೆಂಗಳೂರಿನಲ್ಲಿ ನೆಲೆಸಿದ್ದು 'ಕನಸು ಮತ್ತು ವಾಸ್ತವಗಳ ನಡುವೆ' 'ಮುಂಜಾವದ ಕಥೆಗಳು' ಸಂಗ್ರಹಗಳಲ್ಲದೆ ಹಲವಾರು ವಿಮರ್ಶೆ ಹಾಗೂ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಸ್ಫಟಿಕ ಮಂಜೂರ, ರಜತ ಸಿರಿ ಸಂಪಾದಿಸಿದ್ದು ಸ್ಮರಣೆ ಸೊಗಸು ಎಂಬ ಲಲಿತ ಪ್ರಬಂಧ ಸಂಕಲನ ಹೊರತಂದಿದ್ದಾರೆ. 'ಪಂಜೆಮಂಗೇಶರಾಯರ ಕೃತಿಗಳ ಅಧ್ಯಯನ' ಅವರ ಪಿಎಚ್.ಡಿ. ನಿಬಂಧವಾಗಿದೆ. ಕಾಸರಗೋಡಿನ ಶಶಿಕಲಾ ನಾಯಕ್ ತರಂಗಗಳು, ಹೆಣ್ಣು–ಕಾದಂಬರಿಗಳನ್ನೂ, ಪೂರ್ವ–ಪಶ್ಚಿಮ ಸಂಸ್ಕೃತಿ ಮಿಲನ ಇತ್ಯಾದಿ ಕೃತಿಗಳನ್ನೂ; ಪಡುಬಿದ್ರಿಯ ಶಾರದಾ ಆರ್ ರಾವ್ ಪ್ರತಿಫಲನ, ಕಾವ್ಯಗುಚ್ಛ, ಕಾವ್ಯಕರವೀರ, ಸಪ್ತಸ್ವರ, ಇತ್ಯಾದಿ ಕಾವ್ಯಗಳನ್ನು ಕೆಲವು ತುಳು ನಾಟಕಗಳನ್ನು ರಚಿಸಿದ್ದಾರೆ. 'ನಿಜವೇನು ಗೆಳೆಯಾ ಆ ಹಸಿರು ತೋಟ' ಕಾವ್ಯವಲ್ಲದೆ ಜೀವನ ಚರಿತ್ರೆಯನ್ನು ಬರೆದಿರುವ ಶಾಲಿನಿ ಶ್ರೀನಿವಾಸ ಅವರು ಬಡೆಕ್ಕಿಲದವರು. ಸುನೀತಿ ಉದ್ಯಾವರ ಅವರು ಸ್ನೇಹದ ಸ್ಮಾರಕ, ತಂಗಿಯ ಕಾಣಿಕೆ, ಇತ್ಯಾದಿ ಕಾದಂಬರಿ, ಕಾವ್ಯ ಸಂಕಲನ  ಹಾಗೂ ಮಕ್ಕಳ ಕಾವ್ಯಗಳನ್ನು ಬರೆದಿದ್ದಾರೆ.

ಧರ್ಮಸ್ಥಳದ ರತ್ನಮ್ಮ ಹೆಗ್ಗಡೆ(೧೯೨೮–೨೦೦೬) ಅವರು ಲೇಖಕಿ, ಸಮಾಜ ಕಾರ್ಯಕರ್ತೆ, ಸಂಘಟಕಿ ಇತ್ಯಾದಿಗಳಾಗಿದ್ದು 'ಮಂಜುವಾಣಿ' ಪತ್ರಿಕೆಯಲ್ಲಿ ಧಾರ್ಮಿಕ ಲೇಖನಗಳನ್ನು ಬರೆಯುತ್ತಿದ್ದರು. ಧರ್ಮಸ್ಥಳದಲ್ಲಿ ೧೯೮೨ರಲ್ಲಿ ಗೊಮ್ಮಟೇಶ್ವರನನ್ನು ಸ್ಥಾಪಿಸಲು ವೀರೇಂದ್ರ ಹೆಗ್ಗಡೆಯವರಿಗೆ ಪ್ರೇರೇಪಣೆ ನೀಡಿದವರು. ಧರ್ಮಸ್ಥಳದಲ್ಲಿ ನಡೆದ ಮಹಿಳಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರಾವಳಿ ಮಹಿಳಾ ಲೇಖಕಿಯರ ಸಂಘವೂ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಿಗೆ ಅನುದಾನ ನೀಡಿದ್ದರು. ರತ್ನಮ್ಮ ಹೆಗ್ಗಡೆಯವರಿಗೆ ೨೦೦೬ರ ಮಹಾಮಸ್ತಕಾಭಿಷೇಕದ ವೇಳೆಯಲ್ಲಿ ಸನ್ಮಾನಿಸಲಾಗಿತ್ತು. ರಾಜ್ಯ ಪ್ರಶಸ್ತಿಯೂ ಸೇರಿದಂತೆ ರಾಷ್ಟ್ರಾದ್ಯಂತ ಹಲವಾರು ಪ್ರಶಸ್ತಿ ಗೌರವಗಳು ದೊರೆತಿತ್ತು. ಅವರ ಹೆಸರಿನಲ್ಲಿ ಮಹಿಳಾ ಲೇಖಕಿಯರಿಗೆ ಪ್ರಶಸ್ತಿಯೊಂದನ್ನು ಸ್ಥಾಪಿಸಲಾಗಿತ್ತು.

ಜಿಲ್ಲೆಯ ಇತಿಹಾಸ ಸಂಶೋಧಕಿಯಾಗಿದ್ದ ಲೀಲಾಭಟ್ ಅವರು ಭೂತನಾಗರಗಳ ನಡುವೆ, ಏಷ್ಯಾದ ಬೆಳಕು, ಉಲ್ಲಾಳ್ತಿಯಮ್ಮ, ಲೀಲಾಕಾರಂತರ ನೆನಪು, ಮಾರ್ತಾ ಅವರ ಜೀವನ ಚರಿತ್ರೆ, ರಚಿಸಿದ್ದು ಎಂ.ಎನ್. ಕಾಮತ್ ಅವರ ಸಮಗ್ರ ಲೇಖನಗಳನ್ನು ಐದು ಸಂಪುಟಗಳಲ್ಲಿ ಸಂಪಾದಿಸಿದ್ದಾರೆ. ಕತೆ, ಕವನ, ಪ್ರಬಂಧಗಳನ್ನು ರಚಿಸಿರುವ ಉಳ್ಳಾಲದ ಎಂ. ಉಷಾ, ದಿ ಬ್ಲಾಕ್–ವೈಟ್ ಎನ್‌ಕೌಂಟರ್ ಹಾಗೂ 'ಸ್ತ್ರೀವಾದ ನೆಲೆಗಳು–ನಿಲುವುಗಳು' ರಚಿಸಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿರುವ, ಅನೇಕ ಗೌರವ ಪ್ರಶಸ್ತಿ, ಸನ್ಮಾನ ಪಡೆದಿರುವ ಮಂಗಳೂರಿನ ಕೆ. ಕಿಶೋರಿ ನಾಯಕ್; ಲೇಖನ, ಕವನ ರಚಿಸುವ, ಚಲನಚಿತ್ರ ಹಾಗೂ ಕಿರಿತೆರೆಯಲ್ಲಿ ಅಭಿನಯಿಸಿರುವ ಗೀತಾ ಸುರತ್ಕಲ್; ಸ್ತ್ರೀಪರಚಿಂತನೆಯ ಲೇಖನಗಳನ್ನು ಬರೆದ, ಕ.ಲೇ.ವಾ. ಸಂಘಕ್ಕೆ ಕಾರ್ಯದರ್ಶಿಯಾಗಿದ್ದ ಗುಲಾಬಿ ಬಿಳಿಮಲೆ; ಕನ್ನಡ, ಹಿಂದಿ, ಸಂಸ್ಕೃತಗಳಲ್ಲಿ ಹಾಗೂ ಯೋಗವಿದ್ಯೆಯಲ್ಲಿ ಪದವಿ ಪಡೆದ, ಪ್ರೊ. ಎಂ ಮರಿಯಪ್ಪ ಭಟ್ಟರ ವ್ಯಕ್ತಿ ಚಿತ್ರ ಹಾಗೂ 'ನಾವು ಪ್ರಾಮಾಣಿಕರೆ?' 'ಮತ್ತೆ ಚಿತ್ತಾರ ಬರೆ ಗೆಳತಿ'–ಕವನ ಸಂಗ್ರಹಗಳು, ಕಯ್ಯಾರರ ಕಾವ್ಯ ವಿಮರ್ಶೆಗಳಲ್ಲದೆ ಪ್ರಬಂಧ, ಅನುವಾದ, ಸಣ್ಣಕಥೆ, ಪಠ್ಯಪುಸ್ತಕಗಳನ್ನು ಬರೆದ, ತುಳು ಸಾಹಿತ್ಯ ಅಕಾಡೆಮಿಯಿಂದ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸಣ್ಣ ಕಥೆಗಳಿಗೆ ರಾಜ್ಯ ಪ್ರಶಸ್ತಿ, ಆಂಡಾಳ್ ಪ್ರಶಸ್ತಿ ಪಡೆದ, ರಾಷ್ಟ್ರೀಯ ಮಟ್ಟದಲ್ಲಿ ಪ್ರಬಂಧ ಮಂಡಿಸಿದ ಬಂಟ್ವಾಳದ ಚಂದ್ರಕಲಾ ನಂದಾವರ; ಜೈನ ತತ್ವಶಾಸ್ತ್ರ ಪ್ರಾಕೃತ ಭಾಷೆಗಳನ್ನು ಅಭ್ಯಸಿಸಿದ್ದ 'ಬಿಸಿಲು'–ಅನುವಾದಿತ ಕಾದಂಬರಿ, ಮಹಿಳೆ ಮತ್ತು ಕನ್ನಡ–ವಿಮರ್ಶಾಕೃತಿ ಹಾಗೂ ವೈಜ್ಞಾನಿಕ ಪುಸ್ತಕ, ಜೀವನ ಚರಿತ್ರೆ ರಚಿಸಿದ ಎಂ. ಜಯಂತಿಬಾಯಿ; 'ಭಾವನಾ' ಕವನ ಸಂಕಲನ ಪ್ರಕಟಿಸಿದ, ಹಲವು ಪ್ರಶಸ್ತಿ ಪಡೆದ ಹಳೆಯಂಗಡಿಯ ಜ್ಯೋತಿ ಚೇಳ್ಯಾರು; ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರೂ ಕನ್ನಡ ಪಾಕ್ಷಿಕ ಪತ್ರಿಕೆ 'ದೀಪಿಕಾ' ವಿಗೆ ಮುವ್ವತ್ತು ವರ್ಷಗಳಿಂದ ಹಾಗೂ 'ನಗರದೀಪಿಕಾ' ಕನ್ನಡ ಮಾಸಪತ್ರಿಕೆಗೆ ಹದಿನೈದು ವರ್ಷಗಳಿಂದ ಸಂಪಾದಕಿ ಹಾಗೂ ಪ್ರಕಾಶಕಿಯಾಗಿರುವ

ಮಂಗಳೂರಿನ ಜುಡಿತ್ ಮಸ್ಕರೇಞಸ್; ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ ಹಾಗೂ ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ ಪಡೆದ ಕವನ ಸಂಕಲನ 'ಮುಂಜಾವಿಗೆ ಕಾದವಳು' ಹಾಗೂ ಜಿ.ಎಸ್. ಶಿವರುದ್ರಪ್ಪ ಕಾವ್ಯ ಪ್ರಶಸ್ತಿ ಪಡೆದ 'ಪುಟಗಳ ಮಧ್ಯದಲ್ಲೊಂದು ನವಿಲುಗರಿ ರಚಿಸಿದ ತುಳಸಿ ವೇಣುಗೋಪಾಲ್; ಚಿಟ್ಟೆ–ಬಿಟ್ಟೆ ಮಕ್ಕಳ ಕವನ ಸಂಕಲನ, ಅಂಕಣ ಬರಹ 'ಅಂಕುಡೊಂಕು' ಪ್ರಕಟಿಸಿದ, ಪತ್ರಿಕೆಗಳಲ್ಲಿ ಸಹ ಸಂಪಾದಕಿಯಾಗಿದ್ದ, ಆಕಾಶವಾಣಿಗೆ ಲೇಖನಗಳನ್ನು ಬರೆದ, ಕ.ಲೇ.ವಾ. ದ ಕಾರ್ಯದರ್ಶಿಯಾಗಿದ್ದ ನಾಗರತ್ನ ಚಂದ್ರಶೇಖರ್; ಯಕ್ಷಗಾನ ಮತ್ತು ಮಹಿಳೆ ಕುರಿತು ವಿಶೇಷಾಧ್ಯಯನ ಮಾಡಿದ, ಕಥೆಗೆ ಪ್ರಶಸ್ತಿ, ಕವನಕ್ಕೆ ಮೆಚ್ಚುಗೆ ಪಡೆದ ಬಂಟ್ವಾಳದ ನಾಗವೇಣಿ ಮಂಚಿ; ತುಳುವಿನಲ್ಲಿ ' ಪೂಮಾಲೆ' ಕವನ ಸಂಕಲನ ಬರೆದ ಹಾಗೂ ಅದನ್ನು ಧ್ವನಿ ಸುರುಳಿಯ ರೂಪದಲ್ಲಿ ಪ್ರಕಟಿಸಿದ ಮತ್ತು ಪದರಂಗಿತ–ಭಾವಗೀತೆ, ತಾಟಿ ತೆಂಬರೆ–ಶಿಶುಗೀತೆಗಳಲ್ಲದೆ ಕಥನಕವನ, ಗೀತ ರೂಪಕ ರಚಿಸಿದ, ತುಳು ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಪುಸ್ತಕ ಪ್ರಶಸ್ತಿ ಪಡೆದ ಹಾಗೂ ಅದರ ಸದಸ್ಯೆಯಾಗಿದ್ದ, ರಾಣಿ ಅಬ್ಬಕ್ಕದೇವಿ ಪ್ರಶಸ್ತಿ ಪಡೆದ ಪ್ರಮೋದ ಕೆ.ಸುವರ್ಣರವರು; ಮುಗುಳುನಕ್ಕು ಹಗುರಾಗಿ, ಎಂಥದು ಮಾರಾಯ್ರೆ ಇತ್ಯಾದಿ ಎಂಟು ಹಾಸ್ಯ ಲೇಖನ ಸಂಗ್ರಹಗಳನ್ನು ರಚಿಸಿದ, ವಿವಿಧ ಪತ್ರಿಕೆಗಳಲ್ಲಿ 'ಮಂಗಳೂರು ಮುಗುಳ್ನಗೆ', ಲಘುಬಗೆ' ಇತ್ಯಾದಿ ಅಂಕಣ ಬರಹಗಳನ್ನು ಬರೆಯುತ್ತಿರುವ, ನಾಲ್ಕು ಬಾರಿ ಬೀಚಿ ಪ್ರಶಸ್ತಿಯಲ್ಲದೆ 'ರತ್ನಮ್ಮ ಹೆಗ್ಗಡೆ ಪ್ರಶಸ್ತಿ' ಸಾಹಿತ್ಯ ಅಕಾಡಮಿ ಪ್ರಶಸ್ತಿ, ಪಡುಕೋಣೆ ರಮಾನಂದ ಪ್ರಶಸ್ತಿ ಇತ್ಯಾದಿ ಪಡೆದು ಪ್ರಸ್ತುತ ಕಾರ್ಯಾರ್ಥವಾಗಿ ಮಂಗಳೂರಿನಲ್ಲಿ ನೆಲೆಸಿರುವ ಭುವನೇಶ್ವರಿ ಹೆಗಡೆ; ಅರ್ಧಾಂಗಿ, ಆಘಾತ, ಮಂದಾರ, ಪುಣ್ಯದ ಎಣ್ಣೆ ಇತ್ಯಾದಿ ಹತ್ತೊಂಬತ್ತು ಕಾದಂಬರಿಗಳು, ವಸಂತದ ಹೂಗಳು,'ಸಂಜೆ ಬಿಸಿಲು'–ಸಣ್ಣಕತೆಗಳು ಗ್ರಾಮೀಣ ಮಹಿಳೆಯರು, ದಿವ್ಯಪಥ ಇತ್ಯಾದಿ ಏಳು ವೈಚಾರಿಕ ಪುಸ್ತಕಗಳನ್ನು ಪ್ರಕಟಿಸಿದ ರಾಜ್ಯ ಸಾಹಿತ್ಯ ಅಕಾಡಮಿ, ಕನ್ನಡ ಸಾಹಿತ್ಯ ಪರಿಷತ್, ತಮ್ಮಣರಾವ್ ಅಮ್ಮಿನಭಾವಿ ಸ್ಮಾರಕ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಬಹುಮನ, 'ಕಥಾರಂಗಮ್' ಪ್ರಶಸ್ತಿಗಳಲ್ಲದೆ ಹಾಗೂ ಹಲವಾರು ಪತ್ರಿಕೆಗಳ ಸ್ಪರ್ಧೆಗಳಲ್ಲಿ ಬಹುಮಾನಗಳಿಸಿರುವ 'ಮಂದಾರ' ಕಾದಂಬರಿ ಧಾರಾವಾಹಿಯಾಗಿ ಕಿರಿತೆರೆಯಲ್ಲಿ ಪ್ರಸಾರಗೊಳಿಸಿದ, ಆಕಾಶವಾಣಿಗೆ ಕತೆ, ಕಾದಂಬರಿಗಳನ್ನು ನೀಡಿದ ಕ.ಲೇ.ವಾ. ಸಂಘದ ಪ್ರಥಮ ಸಮ್ಮೇಳನಾಧ್ಯಕ್ಷೆ, ಕೆದಂಬಾಡಿಯಲ್ಲಿ ನಡೆದ ಪುತ್ತೂರು ತಾಲ್ಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಹಾಗೂ ಇನ್ನಿತರ ಗೌರವಗಳನ್ನು ಪಡೆದ ಎ.ಪಿ.ಮಾಲತಿ; ಮಧುರ ಮಿಲನ, ರಂಗನ ಅವತಾರ ಕಾದಂಬರಿ 'ಸುರಭಿ' ಕಥಾ ಸಂಕಲನ, 'ಸ್ಮರಣೀಯ ಪ್ರವಾಸ ಕಥನ' ಹಾಗೂ ಸಾಂಸ್ಕೃತಿಕ ತುಳುನಾಡು ರಚಿಸಿದ, ಮರಾಠಿ ಸಣ್ಣಕತೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದ, ತುಳು ಸಾಹಿತ್ಯ ಅಕಾಡೆಮಿಯಿಂದ ಸನ್ಮಾನಿತರಾದ 'ತುಳುಬಾಲೆ' ಕಾವ್ಯನಾಮದ ಯಜ್ಞಾವತಿ ಕೇಶವ್ ಕಂಗೇನ್; ಅಪರಾಜಿತ ಕಾದಂಬರಿ, ಜೇನುಮಾವು, ದೇವಭೂಮಿ ಅನುವಾದಗಳು ಹಾಗೂ ವೈದ್ಯಕೀಯ ಪುಸ್ತಕಗಳನ್ನು ರಚಿಸಿದ ಕಾಸರಗೋಡಿನ ಲಲಿತಾ ಎಸ್.ಎನ್.ಭಟ್; ತಿರುವುಗಳು, ಮೆಟ್ಟಿಲುಗಳು, ಅವಳ ಧ್ವನಿ ಕಥಾ ಸಂಕಲನ, 'ಅಂತರಂಗದ ಮಾತು' ಲೇಖನಗಳ ಸಂಗ್ರಹ ಬರೆದ, ಅತ್ತಿಮಬ್ಬೆ ಪ್ರಶಸ್ತಿ, ನೀಲಗಂಗಾ ದತ್ತಿ ಪ್ರಶಸ್ತಿ, ಮಹಾಕವಿ ಷಡಕ್ಷರಿ ಸಾಹಿತ್ಯ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಜೀಜಾಬಾಯಿ ಪ್ರಶಸ್ತಿ, ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ, ಕಾಸರಗೋಡಿನಲ್ಲಿ ನಡೆದ ರಾಜ್ಯ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಪಡೆದ 'ಅನುಪಮ' ಮಹಿಳಾ ಮಾಸಿಕದ ಸಂಪಾದಕಿಯಾಗಿರುವ ಮುಸ್ಲಿಂ ಮಹಿಳಾ ಸಾಹಿತ್ಯ ಸಂಘದ ಕಾರ್ಯಾಧ್ಯಕ್ಷೆಯಾದ ಶಹನಾಝ್.ಎಂ. ಮಂಗಳೂರು; ಹಣತೆ, ಜಾತ್ರೆ ಇತ್ಯಾದಿ ೮ ಕಾದಂಬರಿಗಳು, ೫೦ಕವನಸಂಕಲನಗಳು, ೩೮ ಕಿರುನಾಟಕಗಳು, ೨೩ ತುಳು ನಾಟಕಗಳು, ೭ಕಥಾ ಸಂಕಲನಗಳು, ೯ನೃತ್ಯರೂಪಕಗಳು ಬರೆದ, ಅಂಬರೀಶ್ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ಜಿ.ಪಿ.ರಾಜರತ್ನಂ ಪ್ರಶಸ್ತಿ , ಜಗಜ್ಯೋತಿ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಳನ್ನು ಪಡೆದ ಶಕುಂತಳಾ ಭಟ್ ಹಳೆಯಂಗಡಿ; ಉರ್ದುವಿನಿಂದ 'ಆಲಂಪನಾ', ಇಂಗ್ಲೀಷ್‌ನಿಂದ 'ಗಾನ್ ವಿತ್ ದ ವಿಂಡ್' ಹಾಗೂ ರಾಮಯ್ಯ ರೈ ಅವರು 'ಮೈ ಡೇಸ್ ಇನ್ ಫೋಲೀಸ್'ಗಳ ಅನುವಾದ, ಸತ್‌ಸಂಚಯ–ಪರಂಪರೆಯ ಕಥನ ಬರೆದಿದ್ದು, ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಬಹುಮಾನ ಪಡೆದ ಮಂಗಳೂರಿನಲ್ಲಿ ಜನಿಸಿದ ಶ್ಯಾಮಾಲಾ ಮಾಧವ; ತುಳುವಿನಲ್ಲಿ ಪಿಂಗಾರ, ಸಂಕ್ರಾಂತಿ, ನಾಗಸಂಪಿಗೆ, ಕರಿಜನ–ಕವನಸಂಕಲನ, ಕಲಾತಪಸ್ವಿ ಕೆ.ಕೆ. ಹೆಬ್ಬಾರ್ ವ್ಯಕ್ತಿ ಪರಿಚಯ ಗದ್ಯ ಲೇಖನಗಳ ಸಂಗ್ರಹವನ್ನು, ಕನ್ನಡದಲ್ಲಿ ನಿನಾದ, ಗಂಗೆ, ಪಯಣ, ಅಕ್ಷಯ ಸಂಪದ ಲೇಖನ ಸಂಗ್ರಹಗಳನ್ನೂ, ಶಿವರಾಮ ಕಾರಂತರ ಕಾದಂಬರಿಯಲ್ಲಿ ಸ್ತ್ರೀ ಕುರಿತ ಪಿಎಚ್‌ಡಿ ನಿಬಂಧವನ್ನೂ, ಪ್ರವಾಸಿಯ ಹೆಜ್ಜೆಗಳು ಪ್ರವಾಸಕಥನವನ್ನೂ ಬರೆದಿದ್ದು, ಕೆಲವು ಪುಸ್ತಕಗಳನ್ನು ಸಂಪಾದಿಸಿದ, ಒಂದು ಅವಧಿಗೆ ತುಳು ಅಕಾಡೆಮಿಯ ಸದಸ್ಯರಾಗಿದ್ದು, ತುಳು ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಪುಸ್ತಕ ಬಹುಮನ, ಪೊಳಲಿಶೀನಪ್ಪ ಹೆಗ್ಗಡೆ ಪ್ರಶಸ್ತಿ, ಎನ್.ಎಸ್.ಕಿಲ್ಲೆ ಪ್ರಶಸ್ತಿ, ರಾಣಿ ಅಬ್ಬಕ್ಕ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಹಾಗೂ ರಾಜ್ಯ ಸರ್ಕಾರದ ಅತ್ತಿಮಬ್ಬೆ ಪ್ರಶಸ್ತಿ ಮತ್ತು ವಿದೇಶಗಳಲ್ಲಿ ಸನ್ಮಾನ ಪಡೆದ ಸುನೀತಾ ಎಂ.ಶೆಟ್ಟಿ, 'ಅವ್ಯಕ್ತ' , ಕಥಾ ಸಂಕಲನ, ವರ್ತುಲ, ಬಂದಳಿಕೆ, ಸ್ವರ್ಗಕ್ಕೆ ದಾರಿ ಕಾದಂಬರಿಗಳು, 'ಸರ್ವಋತುಗಳೂ ನಿನಗಾಗಿ–ಕಾವ್ಯಸಂಕಲನ' 'ಚಿಂಪಿ' ಮಕ್ಕಳ ಪುಸ್ತಕ ಹಾಗೂ ನೂರಾರು ಸಣ್ಣಕಥೆಗಳನ್ನು ಬರೆದ, ಪ್ರಜಾವಾಣಿಯಲ್ಲಿ ಉಪಸಂಪಾದಕಿಯಗಿದ್ದ, ಅತ್ತಿಮಬ್ಬೆ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ರತ್ನಮ್ಮ

ಹೆಗ್ಗಡೆ ಪ್ರಶಸ್ತಿ, ಚೆನ್ನಶ್ರೀ, ಹಾಗೂ ಚೆನ್ನಮ್ಮ ಪ್ರಶಸ್ತಿಗಳನ್ನು ಪಡೆದ, ಮೊದಮೊದಲ ಮುಸ್ಲಿಂ ಬರಹಗಾರ್ತಿಯಾದ ಮಮ್ತಾಜ್ ಬೇಗಂ; ಗೂಡು ದೀಪದ ಬೆಳಕಿಗೆ, ಒಳದನಿ–ಕವನ ಸಂಕಲನಗಳು ಹಾಗೂ ಕತೆ, ವಿಮರ್ಶೆಗಳನ್ನು ಬರೆದ, ಮುಂಬಯಿಯ ಸುಶೀಲ ಶೆಟ್ಟಿ ಸ್ಮಾರಕ ಪ್ರಶಸ್ತಿ, ಸುಬ್ರಾಯ ಅನಂತಪುರ್ ಕಾವ್ಯ ಪ್ರಶಸ್ತಿ ಇತ್ಯಾದಿಗಳಿಸಿದ', ಮೀನಾಕ್ಷಿ ರಾಮಚಂದ್ರ ಸುರತ್ಕಲ್‌ನ ಚಂಚಲ ಶ್ರೀಕಂಠಯ್ಯ, ಮೋಹಿನಿ ಮಂಜುನಾಥ್, ಬಿ.ಎಂ. ರೋಹಿಣಿ, ಶಾರದಾ ಆರ್.ರಾವ್, ಕೆ.ಶ್ರೀಕಲಾ ಉಡುಪ, ಸುಜಾತತೆಕ್ಕೆಮೂಲೆ, ಶಾರದ ಎಸ್.ರಾವ್, ಕೆ.ಲೀಲಾವತಿ, ಲೀಲಾವತಿ ಬಾಯಿ ಕಾಮತ್, ಅನುಬೆಳ್ಳೆ ವತ್ಸಲ ತಾಳಿತ್ತಾಯ, ನಾ.ಫಟೀಮ, ಯಶೋಧ ಜೆನ್ನಿ, ವಾಸಂತಿ ಚಂದ್ರ ಲಲಿತ ಎಸ್.ಎನ್.ಭಟ್ ಮುಂತಾದ ಅನೇಕ ಮಹಿಳಾ ಲೇಖಕರನ್ನು ಜಿಲ್ಲೆಯಲ್ಲಿ ಗುರುತಿಸಬಹುದಾಗಿದೆ. ಇವರಲ್ಲಿ ಕೆಲವರು ಸಂಗೀತ, ನಾಟಕ ಕ್ಷೇತ್ರಗಳಲ್ಲಿರುವುದಲ್ಲದೆ ತುಳು ಕೊಂಕಣಿಗಳಲ್ಲೂ ಸಾಹಿತ್ಯ ರಚನೆ ಮಾಡುತ್ತಿದ್ದಾರೆ.

ಉಳಿದಂತೆ ತುಳು ಭಾಷೆ, ಸಾಹಿತ್ಯ, ಸಂಪ್ರದಾಯ ಕುರಿತು ಬರೆದಿರುವ ಕೆ.ವಿ.ಜಲಜಾಕ್ಷಿ; 'ಕಿರಿಯರಿಗೆ ಹಿರಿಯರ ಕಥೆಗಳು' ಕೃತಿಗೆ ಜಿ.ಪಿ.ರಾಜರತ್ನಂ ಪ್ರಶಸ್ತಿ ಪಡೆದ ಲೀಲಾವತಿ ಎಸ್.ರಾವ್; 'ಏಲು ನಾಮೆ ಮತ್ತು ಇತರ ಕತೆಗಳು' ರಚಿಸಿದ ರತ್ನ ಜಿ.ಕೆ.ಶೆಟ್ಟಿ; ಕನ್ನಡ, ಇಂಗ್ಲೀಷ್, ಹಿಂದಿಗಳಲ್ಲಿ ಕವನ ರಚಿಸಿರುವ ಅಂಬಿಕಾ.ಪಿ.ಎನ್; ತುಳು ನಾಟಕಗಳನ್ನು ರಚಿಸಿ ರತ್ನವರ್ಮ ಹೆಗ್ಗಡೆ ಪ್ರಶಸ್ತಿಯನ್ನು ಹಲವಾರು ಬಾರಿ ಪಡೆದ ಕ್ಯಾಥರೀನ್ ರೋಡ್ರಿಗ್ಸ್; 'ಪ್ರತಿಭೆ' 'ಮುಸ್ಸಂಜೆ' ಕವನ ಸಂಕಲನ ಹೊರತಂದಿರುವ ದೇವಿಕಾ ನಾಗೇಶ್; ಆತ್ಮಕಥನ ಹಾಗೂ ಪ್ರವಾಸ ಕಥನ ರಚಿಸಿರುವ ಪರಮೇಶ್ವರಿ ಲೋಕೇಶ್ವರ್; ೨೦ನೇ ಶತಮಾನದ ಸಾಹಿತ್ಯ ಕುರಿತು ಪಿಎಚ್.ಡಿ ಪದವಿ ಪಡೆದಿರುವ ಹಾಗೂ ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಚಳುವಳಿಗಳು ಕುರಿತು ಗ್ರಂಥ ರಚಿಸಿರುವ ಪ್ರೀತಿ ಶುಭಚಂದ್ರ; ಹಿಂದಿ, ಇಂಗ್ಲೀಷ್, ಮರಾಠಿಗಳಿಂದ ಕನ್ನಡಕ್ಕೆ ಅನುವಾದ ಮಾಡಿರುವ ಮಿತ್ರವಿಂದ ಗುರುರಾಜ ಕುಲಕರ್ಣಿ;'ಕಾಡಿದಳು ಆ ಹುಡುಗಿ' ಕಥಾ ಸಂಕಲನದ ರಂಜನಿಶೆಟ್ಟಿ; ಕವನ ಹಾಗೂ ಕಥಾ ಸಂಕಲನಗಳನ್ನು ಪ್ರಕಟಿಸಿರುವ ರಂಜನಿ ಸುರೇಶ್; 'ಶಕುಂತಲೆಯ ಸಣ್ಣಕತೆ'ಗಳ ಸಂಕಲನ ಹೊರತಂದ ರೂಪಶ್ರೀ ನಾಗರಾಜ್; ಕವನ, ಏಕಾಂಕಗಳ ರಚನಕಾರ್ತಿ ವನಮಾಲಿ ಅಮ್ಮ; ಮಕ್ಕಳ ಕಥೆಗಳ ವಾಣಿ ಗೋಖಲೆ; ಬಾನುಲಿ ನಾಟಕಗಳ ವಿಜಯಲಕ್ಷ್ಮಿ ಶಾನುಭಾಗ್; 'ಮಳೆಗೆ ಬಂದ ಬಿಸಿಲು' ಕವನ ಸಂಕಲನದ ಶಾರದಾ ಶೆಟ್ಟಿ; ಕವನ ಹಾಗೂ ಕಥಾ ಸಂಕಲನಗಳ ರಚನಾಕಾರ್ತಿ ಶಶಿಲೇಖಾ.ಬಿ.; 'ರುಕ್ಮಿಣಿ ಸ್ವಯಂವರ' ಇತ್ಯಾದಿ ಪೌರಾಣಿಕ ನಾಟಕ ಬರೆದಿರುವ ಶಾರದಾ ಶಾಸ್ತ್ರಿ; 'ಅಮೃತವರ್ಷಿಣಿ' ಕವನ ಸಂಕಲನದ ಬಿ.ಕೆ.ಶ್ರೀಮತಿರಾವ್; ಹವ್ಯಕ ಬಾಷೆಯಲ್ಲಿ ಪ್ರಪ್ರಥಮವಾಗಿ 'ಹೂಮಾಲೆ' ಎಂಬ ಕವನಸಂಕಲನ ತಂದ ಸವಿತಾಭಟ್ ಅಡ್ವಾಯಿ; ಹಾಸ್ಯ ಲೇಖನಗಳ ಸತ್ಯವತಿ ಹರಿಕೃಷ್ಣ 'ಕಣ್ಮಣಿ'ಕವನಸಂಕಲನದ ಸುಕನ್ಯಾಭಟ್ ಉರಿಮಜಲು; ಆಕಾಶವಾಣಿಗೆ ಕತೆ, ಕವನ ರಚಿಸಿರುವ ಸ್ನೇಹಲತಾ ದಿವಾಕರ್; 'ಗುತ್ತಿನ ಮನೆಯಿಂದ ಜಗತ್ತಿನಂಗಳಕ್ಕೆ 'ಆತ್ಮಕಥೆ ರಚಿಸಿದ ಡಿ.ಸುವಾಸಿನಿ ಹೆಗ್ಗಡೆ; 'ಮಹಿಳಾ ಕಾದಂಬರಿಗಳಲ್ಲಿ ವಿವಾಹ ಮತ್ತು ಕುಟುಂಬದ ಪರಿಕಲ್ಪನೆ ಕುರಿತು, ಪಿಎಚ್.ಡಿ ಪದವಿ ಪಡೆದ ಕವಿತಾರೈ ಅವರುಗಳಲ್ಲದೆ, ಬಿ.ಆರ್ ರತ್ನಾಕಾಳೇಗೌಡ, ಪ್ರಮೀಳಾ ಚೊಕ್ಕಾಡಿ ಸಂಧ್ಯಾದೇವೀ, ನಳಿನೀ ಆರ್ ಹೆಗಡೆ ಮುಂತಾದವರನ್ನು ಹೆಸರಿಸಬಹುದು.

**ತುಳು ಸಾಹಿತ್ಯ**

ರಾಜ್ಯದ ಕರಾವಳಿ ಭಾಗದಲ್ಲಿ ಈ ಉಪಭಾಷೆ ಹೆಚ್ಚಾಗಿ ಕಂಡುಬರುತ್ತದೆಯಾದರೂ ಅದರಲ್ಲಿಯೂ ಪ್ರದೇಶದಿಂದ ಪ್ರದೇಶಕ್ಕೆ ಭಾಷಾ ಪ್ರಬೇಧವನ್ನು ಗುರುತಿಸಲಾಗಿದೆ. ಅಲ್ಲದೆ ಜನವರ್ಗಗಳಲ್ಲೂ ಭಾಷಾ ವ್ಯತ್ಯಾಸ ಕಂಡುಬರುತ್ತದೆ. ಹಿಂದಿನಿಂದಲೇ ತುಳುವಿಗೆ ಪ್ರತ್ಯೇಕ ಲಿಪಿಯಿದ್ದಂತೆ ಕಂಡುಬರುತ್ತದೆ. ಅದೇ ಲಿಪಿಯನ್ನು ತುಸು ಮಾರ್ಪಾಡಿನೊಂದಿಗೆ ಮಲೆಯಾಳ ಲಿಪಿಯಾಗಿ ಬಳಸಲಾಗುತ್ತದೆ. ತುಳು ನಾಡಿನಿಂದ ಹೊರಟು ಕೇರಳದ ಉದ್ದಗಲಗಳಲ್ಲಿ ಹರಡಿರುವ ಪುರೋಹಿತ ವರ್ಗದವರು ಅಲ್ಲಿನ ಮಲಯಾಳವನ್ನು ಬರೆಯಲು ತುಳು ಲಿಪಿ ಬಳಸಿ ಕೊನೆಗೆ ಅದು ಮಲೆಯಾಳದ ಲಿಪಿಯೇ ಆಯಿತು ಎನ್ನಲಾಗಿದೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಕಾಸರಗೋಡಿನಲ್ಲಿ ದೊರೆತ ೧೬೩೫ರಲ್ಲಿ ವಿಷ್ಣು ಕವಿ ಎಂಬಾತ ರಚಿಸಿದ ಕೃಷ್ಣಲೀಲಾ ಕಾವ್ಯ ತುಳುಲಿಪಿಯಲ್ಲಿದೆ. ಗ್ರಂಥಲಿಪಿಯಲ್ಲಿ ತಾಳೆಗರಿ ಮೇಲೆ ಬರೆದ ೨೦೦ ವರ್ಷಗಳಿಗಿಂತ ಹಳೆಯದಾದ 'ತುಳು ಭಾಗವತೊ' (ವಿಷ್ಣು ತುಂಗ ವಿರಚಿತ); 'ಕಾವೇರಿ' ಹಾಗೂ 'ದೇವಿ ಮಹಾತ್ಮೆ'ಗಳು ದೊರೆತಿವೆ. ಅಲ್ಲದೆ ಕೆಲವು ಸಂಸ್ಕೃತ ಗ್ರಂಥಗಳೂ ತುಳುಲಿಪಿಯಲ್ಲಿದೆ. ಆದರೆ ಇತ್ತೀಚಿನ ಶತಮಾನದಲ್ಲಿ ತುಳು ಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆಯುವುದೇ ಅಧಿಕವಾಗಿದೆ. ಪುಸ್ತಕಗಳು, ಪತ್ರಿಕೆಗಳಲ್ಲಿ ಭಾಷೆ ತುಳುವಾದರೂ ಕನ್ನಡ ಲಿಪಿಯಲ್ಲಿ ಮುದ್ರಿಸಲಾಗುತ್ತಿದೆ. ದಕ್ಷಿಣ ಕನ್ನಡದ (ಉಡುಪಿಯೂ ಸೇರಿದಂತೆ) ಅನೇಕ ಜನಪದ ಪ್ರಕಾರಗಳು, ದೈವಕ್ಕೆ ಸಂಬಂಧಿಸಿದ ಆಚರಣೆಗಳು ತುಳು ಭಾಷೆಯದಾಗಿವೆ. ಅವುಗಳಲ್ಲಿ ಮುಖ್ಯವಾಗಿ ಪಾಡ್ದನಗಳು, ಸಂಧಿ, ಕಬಿತಾ, ಉರಲ್, ಮದಿಪು, ನೃತ್ಯ, ಕಬಿತ, ಗಾದೆ, ಒಗಟು, ಜೋಗುಳ, ಅಜ್ಜಿಕಥೆ

ಇತ್ಯಾದಿಗಳನ್ನು ಉದಾಹರಿಸಬಹುದು. ವಾರ್ಷಿಕ ಹಬ್ಬಗಳಾದ, ಭೂತಾರಾಧನೆಗೆ ಸಂಬಂಧಿಸಿದ ನೇಮ, ಆಯನ, ಕೋಲ, ಬಲಿ, ತಂಬಿಲ, ಅಗೆಲು ಇತ್ಯಾದಿಗಳ ಆಚರಣೆಯಲ್ಲೂ ತುಳು ಗದ್ಯಪದ್ಯಗಳು ಬಳಕೆಯಾಗುತ್ತವೆ.

ತುಳು, ತುಳುವ, ತುಳುನಾಡು, ತುಳುದೇಶ ಎಂದು ಕರೆಯಲ್ಪಡುವ ಭೂಪ್ರದೇಶವು ಉತ್ತರ ಕನ್ನಡ ಜಿಲ್ಲೆಯಿಂದ ಆರಂಭಗೊಂಡು ಘಟ್ಟದ ಪ್ರದೇಶವೂ ಸೇರಿದಂತೆ ಇಂದಿನ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳು, ಕೇರಳ ರಾಜ್ಯದ ಉತ್ತರ ಭಾಗಗಳನ್ನು ಆವರಿಸಿಕೊಂಡಿದೆಯೆಂದು ಸ್ಥೂಲವಾಗಿ ಹೇಳಬಹುದು. ಪಾರಂಪರಿಕ ಹೇಳಿಕೆಯಂತೆ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯಿಂದ ಉತ್ತರದಲ್ಲಿ ಕಲ್ಯಾಣಪುರದವರೆಗಿನ ಕರಾವಳಿ ಪ್ರದೇಶ ತುಳುನಾಡು. ಅಶೋಕನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ 'ಸತಿಯಪುತ' ತುಳುನಾಡು ಇರಬಹುದೆಂದೂ ಟಾಲೆಮಿಯ ಭೂಗೋಳದಲ್ಲಿ ನಮೂದಿತವಾಗಿರುವ ಒಲೊಖೊಯ್ರ ತುಳುನಾಡಿನ ಆಳ್ವಖೇಡ ಇರಬೇಕೆಂದು ಊಹಿಸಲಾಗಿದೆ. ನಂತರ ೮ನೇ ಶತಮಾನದ ಪಲ್ಲವರ ಕಾಲದಿಂದ ಹೊಯ್ಸಳರ ಕಾಲದವರೆಗೆ ತುಳುನಾಡನ್ನು ಉಲ್ಲೇಖಿಸುವ ಅನೇಕ ಶಾಸನಗಳು ದೊರೆಯುತ್ತದೆ. ತುಳುವ ವಂಶದ ವಿಜಯನಗರದ ಕೃಷ್ಣದೇವರಾಯನ ಪೂರ್ವಜರು ತುಳುನಾಡಿನವರೆಂದು ವಿದ್ವಾಂಸರ ಅಭಿಪ್ರಾಯ. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ಅನೇಕ ರಾಜವಂಶಗಳು ಪ್ರಾದೇಶಿಕವಾಗಿ ಆಡಳಿತ ನಡೆಸಿದ್ದು ಸಾಹಿತ್ಯ ಮತ್ತು ಸಂಸ್ಕೃತಿಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಿದೆ.

ತುಳುನಾಡಿನಲ್ಲಿ ಜನಿಸಿದವರಷ್ಟೇ ಅಲ್ಲದೆ, ತುಳು ಸಾಹಿತ್ಯ ಮತ್ತು ಸಂಸ್ಕೃತಿಗೆ ಶ್ರಮಿಸಿದವರೆಲ್ಲರನ್ನೂ ತುಳುವರು ಎಂದು ಕರೆಯಲಾಗಿದೆ. 'ತುಳುವರಿವರು' ಪುಸ್ತಕದಲ್ಲಿ ಪಾದೇಕಲ್ಲು ವಿಷ್ಣುಭಟ್ಟರು ನಾಲ್ಕು ಹಂತದಲ್ಲಿ ತುಳುವಿನ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಯನ್ನು ಗುರುತಿಸುತ್ತಾರೆ. (೧) ೧೯ನೇ ಶತಮಾನದ ಮಧ್ಯಭಾಗದಲ್ಲಿ ಮಂಗಳೂರಿನಲ್ಲಿ ನೆಲೆನಿಂತ ಕ್ರೈಸ್ತ ಮಿಷನರಿಗಳು ಸಂಗ್ರಹಿಸಿ ಮುದ್ರಿಸಿದ ಸಾಹಿತ್ಯ, ಸಂಸ್ಕೃತಿ, ಆಚರಣೆ ಹಾಗೂ ಭಾಷೆಗಳನ್ನು ಕುರಿತ ಪುಸ್ತಕಗಳು ಹಾಗೂ ಲೇಖನಗಳು ಮತ್ತು ತುಳು ಭಾಷೆಯಲ್ಲಿ ರಚಿತವಾದ ಕ್ರೈಸ್ತ ಧಾರ್ಮಿಕ ಗ್ರಂಥಗಳು. (೨) ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯೊಂದಿಗೆ ದೇಶ ಹಾಗೂ ಭಾಷಾ ಪ್ರೇಮಗಳಿಂದ ಪ್ರೇರಿತರಾದ ಸ್ಥಳೀಯ ವಿದ್ವಾಂಸರು ನಡೆಸಿದ ತುಳು ಭಾಷಾ ಪ್ರಚಾರ, ಪುಸ್ತಕ ಮತ್ತು ಲೇಖನಗಳ ಪ್ರಕಟಣೆ, ತುಳುವ ಮಹಾಸಭೆಯ ಸ್ಥಾಪನೆ ಇತ್ಯಾದಿಗಳು. (೩) ಕಳೆದ ಶತಮಾನದ ಆರನೇ ದಶಕದಲ್ಲಿ ತುಳು ಯಕ್ಷಗಾನ ನಾಟಕಗಳ ಹೊಸ ಪ್ರಯೋಗಗಳು ಹಾಗೂ ತುಳು ಸಿನಿಮಾ ನಿರ್ಮಾಣಗಳು ಭಾಷೆ, ಸಾಹಿತ್ಯವನ್ನು ಜನಸಾಮಾನ್ಯರಲ್ಲಿ ವ್ಯಾಪಕವಾಗಿ ಪ್ರಚಾರಪಡಿಸುವಂತಾಯಿತು. (೪) ಈ ಹಂತದಲ್ಲಿ ತುಳು ಸಾಹಿತ್ಯ, ಸಂಶೋಧನೆಗಳು, ಅಧ್ಯಯನಗಳು, ತುಳು ಪತ್ರಿಕೆಯ ಪ್ರಕಟಣೆ, ತುಳು ನಿಘಂಟು ಹಾಗೂ ವ್ಯಾಕರಣಗಳ ಪ್ರಕಟಣೆ, ತುಳು ಉತ್ಸವ ಸಮ್ಮೇಳನಗಳು, ತುಳು ಸಾಹಿತ್ಯ ಆಕಾಡೆಮಿಯ ರಚನೆ ಇವೇ ಮುಂತಾದುವುಗಳಿಂದ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಖಚಿತ ಸ್ವರೂಪ ದೊರೆಯುವಂತಾಯಿತು.

ದಕ್ಷಿಣ ಕನ್ನಡದಲ್ಲಿ ಮುದ್ರಣ ಕಾರ್ಯ ಆರಂಭವಾದುದು, ಬಾಸೆಲ್‌ಮಿಷನರಿಯವರಿಂದ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಜಾನ್‌ವೈಗಲ್ ಎಂಬಾತ ಮುಂಬಯಿಯಿಂದ ಮುದ್ರಣಯಂತ್ರ ತಂದಿದ್ದು (ಕಲ್ಲಚ್ಚಿನ) ಅದರಲ್ಲಿ (೧೮೪೧ರ ಸುಮಾರಿನಲ್ಲಿ) ಮೊದಲು ಪ್ರಕಟಿಸಿದ್ದು, 'ತುಳು ಕೀರ್ತನೆಗಳು' ಎಂಬ ಪುಸ್ತಕ, ಬಾಸೆಲ್ ಮಿಷನ್ನಿನ ಜೆ. ಅಮ್ಮಾನ್, ಜಿ. ಕೆಮರರ್ ಹಾಗೂ ಬ್ಯೂರರ್ ಅವರುಗಳ ಪರಿಶ್ರಮದಿಂದಾಗಿ 'ಮತ್ತಾಯನ ಸುವಾರ್ತೆಗಳು'(೧೮೪೨) 'ಹೊಸ ಒಡಂಬಡಿಕೆ'(೧೮೪೭) 'ತುಳು ಭಾಷೆಯ ಸಮಗ್ರ ಬೈಬಲ್' (೧೮೫೮); 'ತುಳು ಗೀತೆಗಳ ಸಂಕಲನ' (೧೮೬೪); ರೆವರೆಂಡ್ ಬ್ರಿಗೆಲ್ ಅವರ 'ತುಳು ಭಾಷೆಯ ವ್ಯಾಕರಣ' (೧೮೭೨); ೧೮೮೬ರಲ್ಲಿ ರಚಿತವಾದ ರೆವರೆಂಡ್ ಮೆನರ್ ಅವರ 'ತುಳು'–ಇಂಗ್ಲೀಷ್ ನಿಘಂಟು(೧೮೮೮) ಪಾಡ್ದನೊಳು(೧೮೯೯) ಸಹಸಾರ್ಥ ಗಾದೆಲು(೧೮೭೪) ತುಳು ಗೀತೋಳೆ ಪುಸ್ತಕ(೧೮೭೮) ಎ.ಸಿ.ಬರ್ನೆಲ್ ಅವರ The Devil Worship of the Tuluvas ಇತ್ಯಾದಿಗಳು ಹೊರಬಂದವು.

ಮುಂದೆ ತುಳು ಸಾಹಿತ್ಯ, ಯಕ್ಷಗಾನ ರಚಿಸಿದವರ ಬಗ್ಗೆ ಸಂಕ್ಷಿಪ್ತವಾಗಿ ನೋಡಬಹುದು. ಕಾಸರಗೋಡಿನ ಬಾಯಾರುವಿನಲ್ಲಿ ಜನಿಸಿದ(೧೮೨೦–೧೮೯೦) ಸಂಕಯ್ಯ ಭಾಗವತರು ಕನ್ನಡದ ಯಕ್ಷಗಾನ ಕೃತಿಗಳಲ್ಲದೆ, ತುಳುವಿನಲ್ಲಿ 'ಪಂಚವಟಿ ರಾಮಾಯಣ–ವಾಲಿ ಸುಗ್ರೀವರ ಕಾಳಗೊ' ವನ್ನೂ, ಕೆಮ್ತೂರು ದೊಡ್ಡಣ್ಣಶೆಟ್ಟಿಯವರು 'ಅಂಗದ ರಾಜಿಪರ್ಸಂಗೊ', ತಾಳ್ತಜೆ ಕೃಷ್ಣಭಟ್ಟರು 'ರಾವಣಚರಿತೊ' ವನ್ನೂ, ತಲೆಂಗಳ ರಾಮಕೃಷ್ಣಭಟ್ಟರು 'ಚೆನ್ನದ ಮಣೆ' – ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ವಿಟ್ಲದ ಪರ್ಕಳ ಮಾರಪ್ಪ ಶೆಟ್ಟಿಯವರು (೧೮೯೪–೧೯೮೭) 'ಪೊರ್ಲಕಂಟ್' ಮತ್ತು 'ಅಮಲ್ ದೆಪ್ಪೆ' ಎಂಬ ತಮ್ಮ ಕವನಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಮಂಜೇಶ್ವರ ಗಣಪತಿರಾವ್ ಐಗಳ(ನಿ; ೧೯೪೪) ಅವರು 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' ಎಂಬ ಆಕರಗ್ರಂಥವಲ್ಲದೆ, ತುಳುವಿನಲ್ಲಿ 'ಅತ್ತಾವರ ದೈವೊಂಗುಳು'

ಹಾಗೂ 'ತುಳು ಪಾಡ್ದನೊಳು' ವನ್ನೂ, ಬಡಕಬೈಲು ಪರಮೇಶ್ವರಯ್ಯ (೧೮೮೧–೧೯೪೯) ಅವರು ತುಳುವಿನಲ್ಲಿ 'ಭಜಗೋವಿಂದಮ್', 'ತುಳು ನೀತಿ ಪದ್ಯೊಲು', 'ಕಿಟ್ಣರಾಜಿಪರ್ಸಂಗೊ' (ಕೃಷ್ಣಸಂಧಾನ) ಗಳನ್ನೂ, ಎಂ. ಮರಿಯಪ್ಪಭಟ್ಟರು ತುಳು ಇಂಗ್ಲೀಷ್ ಶಬ್ದಕೋಶವನ್ನು ಮುಲ್ಕಿ ನರಸಿಂಗರಾವ್ (೧೮೭೬–೧೯೪೫) ಸಂಸ್ಕೃತದ ಭಗವದ್ಗೀತೆಯನ್ನು ತುಳುವಿನಲ್ಲಿ 'ಗೀತಮಲ್ಲಿಗೆ' ಹೆಸರಿನಲ್ಲಿ ಅನುವಾದಿಸಿ ಪ್ರಕಟಿಸಿದ್ದಾರೆ. ಮಂಗಳೂರು ಬಳಿಯ ಮಂದಾರದಲ್ಲಿ ಜನಿಸಿದ ಕೇಶವಭಟ್ಟರು (೧೯೧೮–೧೯೭) ತುಳುಮಹಾಕವಿ ಎಂದೇ ಪ್ರಸಿದ್ಧರಾಗಿದ್ದು, ಜಾಗಂಟೆ, ಕೆನ್ತ್ತ ಪೊಣ್ಣು, ಬೀರದ ಬೊಲ್ಪು, ಭರತನ ಮೋಕೆ–ಮಾಯದ ಸೂರ್ಪನಕಿಗಳನ್ನು ರಚಿಸಿದ್ದಾರೆ. ಎಲ್ಲಕ್ಕಿಂತ ಅವರ 'ಮಂದಾರ ರಾಮಾಯಣ' ತುಳು ಭಾಷೆಯ ಪ್ರಥಮ ಮಹಾಕಾವ್ಯವೆಂದು ಪ್ರಖ್ಯಾತವಾಗಿದ್ದು, ಅದರಲ್ಲಿ ಕಂಡುಬರುವ ತುಳು ಸಂಸ್ಕೃತಿಯ ಚಿತ್ರಣ ತುಳುತನ, ಆಡುನುಡಿಯ ಭಾಷೆ, ಶೈಲಿಗಳು ಕಾವ್ಯದ ಗಮನಾರ್ಹ ಸಂಗತಿಯಾಗಿದೆ. ಅಮೃತ ಸೋಮೇಶ್ವರ ಅವರು (ಜ; ೧೯೩೫) ತುಳು ಜನಪದ ಸಂಬಂಧಿತ ಪುಸ್ತಕ ಹಾಗೂ ಲೇಖನಗಳನ್ನು ಕನ್ನಡದಲ್ಲಿ ಬರೆದಿರುವದಲ್ಲದೆ ತುಳುವಿನಲ್ಲಿ 'ತಂಬಿಲ', 'ರಂಗಿತ' ಕವನ ಸಂಗ್ರಹಗಳನ್ನೂ, ಕಲೇವಾಲ ಹಾಗೂ ಜೋಕುಮಾರಸ್ವಾಮಿ ನಾಟಕಗಳ ಅನುವಾದವನ್ನೂ, ಗೋಂಧೂಳು ಮುಂತಾದ ಐದು ನಾಟಕಗಳನ್ನೂ, ತುಳು ಗಾದೆಗಳ ಸಂಗ್ರಹವನ್ನೂ, ರೇಡಿಯೋ ರೂಪಕ ಹಾಗೂ ನೃತ್ಯ ರೂಪಕಗಳನ್ನು, ನವಸಾಕ್ಷರರಿಗಾಗಿ ಪುಸ್ತಕವೊಂದನ್ನು ಬರೆದಿದ್ದಾರೆ. ತುಳುವಿನಲ್ಲಿ ಭಾವಗೀತೆಗಳು, ಭಕ್ತಿಗೀತೆಗಳು ನಾಟಕ ಇತ್ಯಾದಿ ಕುರಿತು ಎಂಟು ಧ್ವನಿ ಸುರುಳಿಗಳನ್ನು ಹೊರತಂದಿದ್ದಾರೆ. ತುಳುನಾಡಿಗೆ, ಸಂಸ್ಕೃತಿಗೆ ಸಂಬಂಧಪಟ್ಟಂತೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಲೇಖನಗಳು, ಸಂಪ್ರಬಂಧಗಳು, ಪಿಎಚ್.ಡಿ ನಿಬಂಧಗಳು, ಸಂಶೋಧನಾ ಲೇಖನಗಳು ಕ್ಷೇತ್ರಕಾರ್ಯ ಆಧರಿಸಿದ ವರದಿಗಳು ಸಾಕಷ್ಟು ಸಂಖ್ಯೆಯಲ್ಲಿ ಬಂದಿವೆ ಮತ್ತು ಬರುತ್ತಿವೆ. ಪಂಜೆಮಂಗೇಶರಾಯರು, ಗೋವಿಂದಪೈ ಅವರು ತುಳು ಭಾಷೆ, ಸಂಸ್ಕೃತಿ ಕುರಿತ ಸಂಶೋಧನಾ ಲೇಖನಗಳನ್ನು ಬರೆದವರಲ್ಲಿ ಆದ್ಯರು.

ಭಾಸ್ಕರ ಆನಂದರಾವ್ ಸಾಲೆತ್ತೊರ್ ಅವರು (೧೯೦೦–೦೩) ವಿಟ್ಲ ಸಮೀಪ ಸಾಲತ್ತೊರೆಯಲ್ಲಿ ಜನಿಸಿ, ಮುಂಬಯಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನೂ ಲಂಡನ್ನಿನಲ್ಲಿ ಪಿಎಚ್.ಡಿ ಪದವಿಯನ್ನೂ ಪಡೆದು, ಪುಣೆ ಹಾಗೂ ಅಲಹಾಬಾದ್‌ನಲ್ಲಿ ಪ್ರಾಧ್ಯಾಪಕರಾಗಿದ್ದು, ಭಾರತ ಸರ್ಕಾರದ ಪತ್ರಾಗಾರ ಇಲಾಖೆಯಲ್ಲಿ ನಿರ್ದೇಶಕರಾಗಿದ್ದರು. ನಿವೃತ್ತಿಯ ನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೂ ಕಾರ್ಯ ನಿರ್ವಹಿಸಿದ್ದರು. ಸಾಲೆತ್ತೊರ್ ಅವರು ಬರೆದ ಲೇಖನಗಳು ಹಾಗೂ ಗ್ರಂಥಗಳೆಲ್ಲವೂ ತುಳು ನಾಡಿನ ಆಕರಗಳನ್ನೇ ಒಳಗೊಂಡಿವೆ ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪೈರ್, ಏನ್ಸಿಯಂಟ್ ಕರ್ನಾಟಕ–ಹಿಸ್ಟರಿ ಆಫ್ ತುಳುವ, ಮೆಡಿವಲ್ ಜೈನಿಸಮ್ ವಿತ್ ರೆಫರೆನ್ಸ್ ಟು ವಿಜಯನಗರ ಸ್ಥಾನಿಕ ಅಂಡ್ ದೇರ್ ಹಿಸ್ಟಾರಿಕಲ್ ಇಂಪಾರ್ಟನೆಸ್, ಹಿಸ್ಟರಿ ಆಫ್ ಸೌತ್ ಕೆನರಾ, ಕರ್ನಾಟಕ ಟ್ರಾನ್ಸ್ ಓಶಿಯಾನಿಕ್ ಕಾಂಟೆಕ್ಟ್ಸ್, ವೈಲ್ಡ್ ಟ್ರೈಬ್ಸ್ ಇನ್ ಇಂಡಿಯನ್ ಹಿಸ್ಟರಿ ಇತ್ಯಾದಿಗಳಲ್ಲದೆ, ಜರ್ಮನ್ ಹಾಗೂ ಕನ್ನಡ ಭಾಷೆಗಳಲ್ಲೂ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇದಲ್ಲದೆ ಸಂಶೋಧನಾ ಪತ್ರಿಕೆಗಳಿಗೆ ಕಳಿಸಿದ ಹಲವಾರು ಲೇಖನಗಳು ಸಂಗ್ರಹಿತವಾಗಬೇಕಾಗಿದೆ. ಇವರ ಸಹೋದರರಾದ ಆರ್. ಎನ್. ಸಾಲೆತ್ತೊರ್ 'ಆರ್ಟ್ ಆಫ್ ವಿಜಯನಗರ' ಬರೆದಿದ್ದು, ಇನ್ನೊಬ್ಬ ಸಹೋದರ ಜಿ.ಎನ್. ಸಾಲೆತ್ತೊರ್ ಅವರು ಇತಿಹಾಸತಜ್ಞರಾಗಿದ್ದರು.

ತುಳು ಸಾಹಿತ್ಯ ಸ್ಥಳನಾಮಗಳು ಇತ್ಯಾದಿಯಾಗಿ ಅಧ್ಯಯನ ಮಾಡಿದ ತೆಕ್ಕುಂಜ ಗೋಪಾಲಕೃಷ್ಣಭಟ್ಟರು (೧೯೧೬–೮೦) ತುಳು ವರ್ಣಮಾಲೆಗೆ ಒಂದು ನಿಶ್ಚಿತ ರೂಪವನ್ನು ನೀಡಿದರು. ಪುತ್ತೂರಿನ ಕಬಕದವರಾದ ಕಡವ ಶಂಭುಶರ್ಮರು(೧೮೯೫–೧೯೬೪) ತುಳು ದೇಶಭಾಷಾ ವಿಚಾರವು ಕೃತಿ ಅವರ ನಿಧನಾನಂತರ ಪ್ರಕಟವಾಗಿದ್ದು, ಇನ್ನೊಂದು ತುಳು ಪಾಡ್ದನಗಳ ಕೃತಿ ಅಪ್ರಕಟಿತವಾಗಿಯೆ ಇದೆ. ಪಾಣಾಜೆಯ ವೈದ್ಯ ಶಂಕರ ನಾರಾಯಣಭಟ್ಟರು ತುಳು ನಾಡಿನ ಜನಪದ ವೈದ್ಯ ಪದ್ಧತಿ ಕುರಿತು ಲೇಖನ ಮತ್ತು ಪುಸ್ತಕಗಳನ್ನು ಬರೆದಿದ್ದಾರೆ. ಕೇರಳದ ಕೊಚ್ಚಿಯವರಾದ ಎಲ್.ವಿ.ರಾಮಸ್ವಾಮಿ ಅಯ್ಯರ್ ಅವರು The Tulu verbs, Tulu Puder'Name', Tulu Initial Affricates and Sibilants, Tulu Prose Texts in two dialects, Tulu Problem,Material for a sketch of Tulu Phonology ಗಳನ್ನೂ, ಆಂಧ್ರದ ಪಿ.ಎಸ್. ಸುಬ್ರಹ್ಮಣ್ಯಂ ಅವರು ತಮ್ಮ ದ್ರಾವಿಡ ಭಾಷಾ ಅಧ್ಯಯನ ಗ್ರಂಥಗಳಲ್ಲಿ ತುಳುಭಾಷೆಯ ಬಗ್ಗೆ ಹೇಳಿರುವುದಲ್ಲದೆ ದ್ರಾವಿಡ ಭಾಷಾ ವರ್ಗದಲ್ಲಿ ತುಳುವಿನ ಸ್ಥಾನ ಎಂಬ ಲೇಖನವನ್ನೂ ಹಾಗೂ ಇವರ ಮಾರ್ಗದರ್ಶನದಲ್ಲಿ ಕೆ.ವಿ. ಜಲಜಾಕ್ಷಿ ಅವರು Tulu Grammer-Discriptive and comparative ಎಂಬ ಪಿಎಚ್.ಡಿ ಗ್ರಂಥವನ್ನೂ ಬರೆದಿದ್ದಾರೆ.

ರೆವರೆಂಡ್ ಜೆ ಅಮ್ಮನ್ ಹೊಸ ಒಡಂಬಡಿಕೆಯನ್ನು ೧೮೪೯ರಲ್ಲಿ ತುಳುವಿಗೆ ಅನುವಾದಿಸಿ ಪ್ರಕಟಿಸಿದರು. ರೆ.ಜೆ.ಕೆಮರರ್ ಅಮ್ಮನವರೊಂದಿಗೆ ಸೇರಿ ೧೨೦ ತುಳು ಗೀತೆಗಳ ಪುಸ್ತಕವನ್ನು ೧೮೬೪ರಲ್ಲಿ ಪ್ರಕಟಿಸಿದರು. ರೆ ಅಗಸ್ಟ್ ಮನೇರ್ ೧೮೫೭ರಲ್ಲಿ ಮಂಗಳೂರಿಗೆ

ಬಂದಿದ್ದು ತುಳು ಇಂಗ್ಲೀಷ್ ನಿಘಂಟು, ಇಂಗ್ಲೀಷ್ ತುಳು ನಿಘಂಟು, ೫೦೦ ತುಳುಗಾದೆಗಳು, ತುಳು ಗೀತೋಳಿ ಪುಸ್ತಕ ಇತ್ಯಾದಿ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರೆ.ಕೆ.ಬ್ರಿಗೆಲ್ ತುಳು ಭಾಷೆಗೊಂದು ಶಾಸ್ತ್ರೀಯವಾದ ವ್ಯಾಕರಣ ಗ್ರಂಥವಲ್ಲದೆ ೧೮೩೪ರಲ್ಲಿ ತುಳು ಭಾಷೆಯಲ್ಲಿ ಸ್ತೋತ್ರಗ್ರಂಥಗಳನ್ನು ರಚಿಸಿದ್ದಾರೆ. ೧೮೩೪ರಲ್ಲಿ ಮಂಗಳೂರಿಗೆ ಬಂದಿದ್ದ ಗ್ರೈನರ್ ಹಾಗೂ ದೇಶೀಯರಾದ ಎಲಿಸರ್ ಪಿಕರ್ತ್, ತಿಮೋತಿ ಫುರ್ಟಾಡೋ, ಗಾಬ್ರಿಯಲ್, ಪ್ರೇಮಯ ಕೆರೆಮಿಯಸ್ ಸೊನ್ನ, ನಹಸ್ಸನ್ ಮೀರಾ ಮುಂತಾದವರು ತುಳುವಿನಲ್ಲಿ ಧಾರ್ಮಿಕ ಸಾಹಿತ್ಯ ರಚಿಸಿದ್ದಾರೆ.

ಎ.ಸಿ.ಬರ್ನೆಲ್ ಅವರ 'The Devil worship of the Tuluvas'(೧೮೯೬) ನಲ್ಲಿ ಅನೇಕ ಭೂತಗಳ ಕಥನಗಳನ್ನು ನೀಡಿರುವುದಲ್ಲದೆ, ಕೆಲವು ಪಾಡ್ದನಗಳ ತುಳು ಮೂಲವನ್ನು ರೋಮನ್ ಲಿಪಿಯಲ್ಲಿ ನೀಡಿ ಹಾಗೂ ಕೆಲವನ್ನು ಅನುವಾದಿಸಿ ಇಂಗ್ಲೀಷ್ ಭಾಷೆಯಲ್ಲಿ ನೀಡಿದ್ದಾರೆ. ಗ್ರಂಥದಲ್ಲಿ ಆರ್.ಪಿ. ಟೆಂಪಲ್ ಅವರು ನೀಡಿದ ತುಳುವರ ಭೂತಾರಾಧನೆ ಕುರಿತ ವಿವರ, ಹಲವು ಭೂತ ವೇಷಗಳ ಬಣ್ಣದ ಚಿತ್ರ, ಭೂತಗಳ ಯಾದಿ ಇತ್ಯಾದಿಗಳನ್ನು ವ್ಯವಸ್ಥಿತ ಕ್ಷೇತ್ರ ಕಾರ್ಯದೊಂದಿಗೆ ನಿರ್ವಹಿಸಿ ನೀಡಲಾಗಿದೆ.

ಇವಲ್ಲದೆ ತುಳು ಅಕ್ಷರಮಲೆ, ತುಳು ಜೋಕುಳೆ ಗೀತೆಗಳು, ತುಳು ಬೈಬಲ್ ಕಥೆಗಳು, ತುಳು ರತ್ನಮಾಲೆ, ತುಳುವೆರೆಡ್ ನಡಪು ಭೂತಸೇವೆ ಇತ್ಯಾದಿಗಳು ೧೯ನೆ ಶತಮಾನದ ಅಂತ್ಯದಲ್ಲಿ ಬಂದ ವಿದೇಶಿಯರ ಕೃತಿಗಳಾಗಿವೆ.

ಅನೇಕ ತುಳುವೇತರರು ಮುಖ್ಯವಾಗಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಧಾರ್ಮಿಕರು ತುಳುನಾಟಕ ಹಾಗೂ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಕೃಷಿ ನಡೆಸಿದ್ದಾರೆ. ಮಂಗಳೂರಿನ ಎಂ.ಎಸ್.ಇಬ್ರಾಹಿಂ (ಜ; ೧೯೩೨) 'ಗ್ಲಾಸ್ ಇನ್ಸ್ ಸ್ಟೆಟ್ಟ್', 'ಪೊಣ್ಣು ಸಮಾಜದ ಕಣ್ಣು', 'ನಂಜಿದನಾಲಾಯಿ' ಇತ್ಯಾದಿ 200ಕ್ಕೂ ಹೆಚ್ಚು ತುಳು ನಾಟಕಗಳನ್ನು ಬರೆದು ರಂಗ ಪ್ರದರ್ಶನಕ್ಕೆ ನಿರ್ದೇಶಿಸಿದ್ದಾರೆ. ಇಬ್ರಾಹಿಂ ಅವರಿಗೆ ವಿಶ್ವ ತುಳು ಸಮ್ಮೇಳನದ ಸನ್ಮಾನ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಬಂದಿವೆ. ಅಬ್ದುಲ್ ಜಮೀದ್ ಪಕ್ಕಲಡ್ಕ ಅವರ 'ಒಂತೆ ಉಂತೆಲೆ' ಗೆ ತುಳುಕೂಟದಿಂದ ಪ್ರಶಸ್ತಿ ಬಂದಿದೆ. ತುಳು ಚಲನಚಿತ್ರಗಳನ್ನು ನಿರ್ದೇಶಿಸಿದ ರಿಚರ್ಡ್ ಕ್ಯಾಸ್ಟಲಿನೊ ಅವರು ತುಳು ನಾಟಕಗಳನ್ನು ಬರೆದಿದ್ದಾರೆ. 'ಕೇದಗೆ ಸಿರಿತುಪ್ಪೆ' ಇತ್ಯಾದಿ ನಾಟಕಗಳನ್ನು ರಚಿಸಿದ ನಾಟಕಕಾರ್ತಿ ಕ್ಯಾಥರೀನ್ ರೋಡ್ರಿಗಸ್ ಅವರು 50ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದು, ಹಲವು ಬಾರಿ ರತ್ನವರ್ಮಹೆಗ್ಗಡೆ ಪ್ರಶಸ್ತಿ ದೊರೆತಿದೆ. ಉಳಿದಂತೆ 'ನಾಣಜ್ಜೆರ್ ಸುಧೆ ತಿರ್ಗಾಯೆರ್' ಕಾದಂಬರಿ ಬರೆದ ಕೆ.ಮಹಾಲಿಂಗಮ್, 'ಅಣ್ಣುಬೈದೆನಾ' ಇತ್ಯಾದಿ ನಾಟಕಗಳನ್ನು ಬರೆದ ಜಗನ್ ಪವಾರ್ ಬೇಕಲ್, 'ಎನ್ನ ನಂಬುಲಾ' ಮುಂತಾದ ನಾಟಕಗಳನ್ನು ಬರೆದ ಹಮೀದ್ ಕಂದಕ್, 'ಉಡಲೊಜಿ ಕಡಲೊಂಜಿ' ನಾಟಕ ಬರೆದು ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪಡೆದ ನೂರ್ ಮಹಮ್ಮದ್ ಮಂಜೇರ್ ಅವರುಗಳನ್ನು ಹೆಸರಿಸಬಹುದು. ಪಣಂಬೂರಿನ ಪಿ.ಎಸ್.ರಾವ್ ಅವರು ಸುಮಾರು ನೂರು ತುಳು ನಾಟಕಗಳನ್ನು ಬರೆದಿದ್ದು 'ಈ ಪ್ರೀತಿ ಬದ್ಕೊಡಾ' 'ಎಂಕೆಲಾಮದ್ಮೆ ಆವೊಡು' ಇತ್ಯಾದಿಗಳು ಹೆಚ್ಚು ಪ್ರಸಿದ್ಧವಾಗಿವೆ. ರಾವ್ ಅವರಿಗೆ ತುಳು ಸಾಹಿತ್ಯ ಸಮ್ಮೇಳನ ಸೇರಿದಂತೆ ಅನೇಕ ಪ್ರಶಸ್ತಿಗಳು ಬಂದಿವೆ. ಮಂಗಳೂರಿನ ದೇವೀದಾಸ್ ಕಾಪಿಕಾಡ್ ಅವರು 'ಚಾ ಪರ್ಕ ಕಲಾವಿದೇರ್' ಎಂಬ ನಾಟಕ ತಂಡ ಸ್ಥಾಪಿಸಿ 34ಕ್ಕಿಂತ ಹೆಚ್ಚು ತುಳು ನಾಟಕಗಳನ್ನು ಪ್ರಯೋಗಿಸಿದ್ದಾರೆ. 'ಪುನರ್ ದೀತಿ ಜಿ' ನಾಟಕ ಒಂದು ವರ್ಷದಲ್ಲಿ 247 ಪ್ರದರ್ಶನ ಕಂಡು ದಾಖಲೆ ನಿರ್ಮಿಸಿತು.

ಹಿಂದೆ ತಿಳಿಸಿದಂತೆ ನಾಲ್ಕು ಹಂತಗಳಲ್ಲಿ ತುಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳು ವ್ಯಾಪಕವಾಗಿ ಬೆಳೆದು ವಿಶ್ವಮಾನ್ಯತೆ ಪಡೆದಿದ್ದು, ಹಲವಾರು ವಿದೇಶಿಯರು ವಿಶೇಷವಾದ ಅಧ್ಯಯನಕ್ಕಾಗಿ ತುಳುನಾಡಿಗೆ ಬರುವಂತಾಯಿತು. ಅವರುಗಳಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾದ ಪೀಟರ್ ಜೆಕ್ಲಾಸ್ ಅವರು ೧೯೬೯ರ ಸುಮಾರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟರು ಹಾಗೂ ನಾಡವರನ್ನು ಕುರಿತು ಪಿಎಚ್.ಡಿ ಪದವಿ ಪಡೆದಿದ್ದು ಆನಂತರವೂ ಜಿಲ್ಲೆಯ ಪಾಡ್ದನ ಹಾಗೂ ಭೂತಾರಾಧನೆ ಹಾಡುಗಳು, 'ತುಳು ಸಂಸ್ಕೃತಿಯ ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ ವೀರರು ಹಾಗೂ ವೀರರಮಣಿಯರು,' ತುಳು ಮೌಖಿಕ ಸಂಪ್ರದಾಯಗಳ ದೃಷ್ಟಿಯಲ್ಲಿ ದೈವಾವೇಶಗಳಲ್ಲದೆ, ತುಳುವ ಮೌಖಿಕ ಸಂಪ್ರದಾಯ, ತುಳು ಸಂಸ್ಕೃತಿಯ ಭವಿಷ್ಯ ಇತ್ಯಾದಿ ಕುರಿತು ಹತ್ತಕ್ಕೂ ಹೆಚ್ಚು ಸಂಪ್ರಬಂಧಗಳನ್ನು ರಚಿಸಿದ್ದು, ಅವುಗಳಲ್ಲಿ ಕೆಲವನ್ನು ಆಯ್ಕೆ ಮಡಿ, ಎಂ.ವಿ.ನಾವಡ ಮತ್ತು ಸುಭಾಷ್ ಚಂದ್ರ ಅವರು ಕನ್ನಡಕ್ಕೆ ಅನುವಾದಿಸಿ 'ತುಳುವ ದರ್ಶನ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಫಿನ್ಲೆಂಡಿನ ಜಾನಪದ ತಜ್ಞ ಲೌರಿ ಹಾಂಕೋ(ಜ;೧೯೩೨) ಅವರು ೧೯೮೫ ರಿಂದ ೧೯೯೪ರವರೆಗೆ ಹಲವಾರು ಬಾರಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದು, ವ್ಯಾಪಕವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಉಡುಪಿ, ಧರ್ಮಸ್ಥಳ ಹಾಗೂ ಮಂಗಳೂರುಗಳಲ್ಲಿ ಆಯೋಜಿತಗೊಂಡ ಜಾಗತಿಕ ಮಟ್ಟದ ವಿಚಾರ ಸಂಕಿರಣ ಹಾಗೂ ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ಮುಖ್ಯವಾಗಿ ಓರಲ್ ಎಪಿಕ್ಸ್ ಪ್ರಾಜೆಕ್ಟ್‌ನಲ್ಲಿ ೧೯೯೦ ರಿಂದ ೯೬ರವರೆಗೆ ಪ್ರತಿವರ್ಷವೆಂಬಂತೆ ಭಾರತಕ್ಕೆ ಬಂದು ಉಜಿರೆಯ ಗೋಪಾಲನಾಯ್ಕರ್ ಅವರಿಂದ 'ಸಿರಿ'ಗೆ ಸಂಬಂಧಿಸಿದಂತೆ ಸಮಗ್ರವಾಗಿ ದಾಖಲಾತಿಯನ್ನು ಮಾಡಿ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಹದಿನೈದು ಸಾವಿರದ ಆರುನೂರಕ್ಕೂ ಹೆಚ್ಚು

ಸಾಲುಗಳಿರುವ 'ಸಿರಿ ಪಾಡ್ದನ' ಮೂಲಪಠ್ಯವನ್ನು ಅಂತರರಾಷ್ಟ್ರೀಯ ಧ್ವನಿ ಲಿಪಿಯಲ್ಲಿ ತುಳುನ ಮೂಲ ಹಾಗೂ ಇಂಗ್ಲೀಷ್ ಲಿಪಿಯಲ್ಲಿ ಕೊಡಲಾಗಿದೆ. ಇದಕ್ಕಾಗಿ ಆಧುನಿಕ ಮಾಧ್ಯಮಗಳಾದ ಚಿತ್ರಸುರುಳಿ, ಧ್ವನಿ ಸುರುಳಿ, ವರ್ಣದರ್ಶಿಕೆ, ಛಾಯಾಚಿತ್ರ, ಸಂದರ್ಶನ ಟಿಪ್ಪಣಿಗಳು ಇತ್ಯಾದಿಗಳನ್ನು ಸಮಗ್ರವಾಗಿ ಬಳಸಿಕೊಳ್ಳಲಾಗಿದೆ.

ಮೂಲತಃ ಸಂಸ್ಕೃತ ವಿದೂಷಿ ಹಾಗೂ ನಾಟ್ಯ ನಿರ್ದೇಶಕಿಯಾದ ಹೈಡ್ರೂನ್ ಬ್ರುಕ್ನರ್ ಅವರು ದಕ್ಷಿಣ ಕನ್ನಡದ ಜನಪದ ಆಚರಣೆಗಳನ್ನು ಕುರಿತ ಅಧ್ಯಯನಕಾರ್ತಿ ಹಾಗೂ ಸಂಶೋಧಕಿಯಾಗಿದ್ದಾರೆ. ತುಳು ಜನಪದ ವರ್ಗದ ಪಾಡ್ದನಗಳಲ್ಲಿ ಕನಲ್ಲಾಯ, ಜುಮಾದಿ, ಜಾರಂದಾಯ, ಕೊಡಮಣಿತ್ತಾಯ, ಬಲವಾಂಡಿ ದೈವಗಳ ಪಾಡ್ದಲಗಳನ್ನು, ನಲಿಕೆ ಹಾಗೂ ಪರವಜನಾಂಗದ ಕಲಾವಿದರಿಂದ ಸಂಗ್ರಹಿಸಿ ಹಲವಾರು ಲೇಖನಗಳನ್ನು ಇಂಗ್ಲೀಷ್ ಹಾಗೂ ಜರ್ಮನ್ ಮೂಲದಲ್ಲಿ ನೀಡಿದ್ದಾರೆ. ಪಾಡ್ದನಗಳ ಪರಿಕಲ್ಪನೆ, ಸಂಗ್ರಹ, ಅಧ್ಯಯನದ ಸೈದ್ಧಾಂತಿಕ ಅಧ್ಯಯನ ವಿಧಾನ, ಪಠ್ಯ ಮತ್ತು ಸಂದರ್ಭ, ಆಚರಣೆ ಮತ್ತು ಆರಾಧನೆ, ಸ್ವರೂಪ ಮತ್ತು ವ್ಯಾಪ್ತಿ ಮಯಂತಾದುವುಗಳು ವಿಸ್ತಾರವಾಗಿ ಚರ್ಚಿಸಲಾಗಿದೆ. ೨೫ ಪಾಡ್ದನಗಳ ತುಳು ಪಠ್ಯವನ್ನು ಅಂತರರಾಷ್ಟ್ರೀಯ ಧ್ವನಿ ಲಿಪಿಯಲ್ಲಿ ನೀಡಿದ್ದಾರೆ. ತುಳು ಉಪ ಭಾಷಾವಲಯವನ್ನು ಸೂಚಿಸುವ ಭೂಪಟವೂ ಸೇರಿದಂತೆ ಸಚಿತ್ರಮಯವಾಗಿ ಪ್ರಕಟಿಸಿದ್ದಾರೆ. ಪ್ರಸ್ತುತ ಜರ್ಮನಿಯ ಹೈಡಲ್ ಬರ್ಗ್ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ತುಳು ಕುರಿತು ವಿಶೇಷ ಅಧ್ಯಯನ ಮಾಡುತ್ತಿದ್ದಾರೆ. ಜರ್ಮನಿಯ ಕತ್ರಿನ್ ಬೈಂಡರ್ ಅವರು ಕರಾವಳಿಯ ಯಕ್ಷಗಾನ ಕುರಿತು ವಿಶೇಷ ಅಧ್ಯಯನ ಮಾಡುತ್ತಿದ್ದು 'ಅಭಿಮನ್ಯು ಕಾಳಗ' ವನ್ನು ಜರ್ಮನ್ ಭಾಷೆಗೆ ಅನುವಾದಿಸಿದ್ದಾರೆ.

೧೯೯೪ರಲ್ಲಿ ತುಳು ಅಕಾಡಮಿ ಆರಂಭವಾಗಿದ್ದು, ಮಂಗಳೂರಿನಿಂದ ಕಾರ್ಯನಿರ್ವಹಿಸುತ್ತಿದೆ. ಈವರೆಗೆ ನಾಲ್ಕು ಬಾರಿ ಅಕಾಡಮಿ ಪುನರ್ ಸಂಘಟಿತವಾಗಿದೆ. ಕ್ರಮವಾಗಿ ಬಿ.ಎ. ವಿವೇಕರೈ (೧೯೯೫–೯೮); ಅ.ಬಾಲಕೃಷ್ಣ ಶೆಟ್ಟಿ ಪೊಳಲಿ (೧೯೯೮–೨೦೦೧); ವಾಮನ ನಂದಾವರ(೨೦೦೧–೦೪) ಹಾಗೂ ಎಂ.ಕೆ, ಸೀತಾರಾಮ ಕುಲಾಲ್ (೨೦೦೪–ರಿಂದ) ಅವರುಗಳು ಅಕಾಡಮಿಯ ಅಧ್ಯಕ್ಷರುಗಳಾಗಿದ್ದರು. ತುಳು ಅಕಾಡಮಿಯಿಂದ ವಾರ್ಷಿಕ ಗೌರವ ಪ್ರಶಸ್ತಿ, ಕಮ್ಮಟ, ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ, ಧನಸಹಾಯ ಇತ್ಯಾದಿ ಕಾರ್ಯಕ್ರಮಗಳೊಂದಿಗೆ ತುಳು ಲಿಪಿ ಹಾಗೂ ಭಾಷಾ ಕಲಿಕೆಯ ಬಗ್ಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ವಿಶೇಷವಾಗಿ ಹೊರ ಜಿಲ್ಲೆಗಳಿಂದ ಕಾರ್ಯಾರ್ಥವಾಗಿ ಕರಾವಳಿಗೆ ಬಂದು ನೆಲೆಸಿರುವವರಿಗಾಗಿ ಅಲ್ಪಕಾಲಾವಧಿಯಲ್ಲಿ 'ತುಳು' ಕಲಿಕೆಯ ಬೋಧನೆಯನ್ನು ವೈಜ್ಞಾನಿಕ ಪದ್ಧತಿಯಲ್ಲಿ ಕಲಿಸಲಾಗುತ್ತದೆ. ಶಾಲಾ ಹಂತದಲ್ಲಿ ತುಳು ಭಾಷೆ ಐಚ್ಛಿಕವಾಗಿ ಪಡೆಯುವಂತೆ ಪ್ರೇರೇಪಿಸಿ ಕಲಿಸುವುದಲ್ಲದೆ ಪಠ್ಯಪುಸ್ತಕಗಳನ್ನು ಹೊರತಂದಿದೆ. ಪ್ರಾಚೀನ ಕಾಲದಿಂದಲೇ ಇದ್ದ ತುಳು ಲಿಪಿಯನ್ನು, ಉಳಿದ ಭಾಷಾ ಲಿಪಿಗಳಂತೆ ಕಲಿಸಲಾಗುತ್ತಿದ್ದು ಭಾಷೆಗೆ ಗಟ್ಟಿಯಾದ ನೆಲೆಯೊದಗಿಸುತ್ತಿದೆ. ತುಳು ಅಕಾಡಮಿಯಿಂದ ಗೌರವ ಪ್ರಶಸ್ತಿಗೆ ಪಾತ್ರರಾಗಿರುವವರ ಯಾದಿಯನ್ನು ಇಲ್ಲಿ ನೀಡಲಾಗಿದೆ.

| | |
|---|---|
| ೧೯೯೫–೯೬ | ಕೆದಂಬಾಡಿ ಜತ್ತಪ್ಪರೈ, ಮಂದಾರ ಕೇಶವ ಭಟ್ |
| ೧೯೯೬–೯೭ | ಕೆಲಿಂಜ ಸೀತಾರಾಮ ಆಳ್ವ, ಮಿಜಾರ್ ಅಣ್ಣಪ್ಪ ಬಿ. ರಾಮ ಕೆರೋಡಿಯನ್ |
| ೧೯೯೭–೯೮ | ಸುನೀತ ಎಂ. ಶೆಟ್ಟಿ, ಸೂರ್ಯನಾಥ ಯು. ಕಾಮತ್ |
| ೧೯೯೮–೯೯ | ಅಮೃತ ಸೋಮೇಶ್ವರ, ವೆಂಕಟರಾಜ ಪುಣಿಂಚತ್ತಾಯ, ಮನ್ನುಡೆ ಸಂಜೀವಶೆಟ್ಟಿ |
| ೧೯೯೯–೨೦೦೦ | ಕುದ್ಕಾಡಿ ವಿಶ್ವನಾಥ ರೈ, ಸದಾನಂದ ಸುವರ್ಣ |
| ೨೦೦೦–೦೧ | ಪಿ. ಎಸ್. ರಾವ್, ಪಿಳಿಂಚ ರಾಮಯ್ಯಶೆಟ್ಟಿ |
| ೨೦೦೧–೦೨ | ಕೆ. ವಿ. ರಮೇಶ್, ಬಿ. ಎ. ವಿವೇಕ ರೈ, ಮಚ್ಚೇಂದ್ರನಾಥ ಪಾಂಡೇಶ್ವರ. |
| ೨೦೦೨–೦೩ | ಕೆ. ಜಿ. ವಸಂತಮಾಧವ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಬಿ. ಶೀನಪ್ಪ ಭಂಡಾರಿ, ಪಿ. ಶೀನಪ್ಪ ದಂಡಿಕೇರಿ, |

೨೦೦೩–೦೪ ಎಂ. ಮುಕುಂದ ಪ್ರಭು, ಎ.ವಿ. ನಾವಡ, ಕೆ. ಅನಂತರಾಯ ಬಂಗಾಡಿ

೨೦೦೪–೦೫ ಕೆ. ಚಿನ್ನಪ್ಪ ಗೌಡ, ಶ್ರೀಮತಿ ಜಯಶೀಲ, ಲೋಕಯ ಪಂಬದ

೨೦೦೫–೦೬ ಪಾಲ್ತಾಡಿ ರಾಮಕೃಷ್ಣ ಆಚಾರ್, ವಿ.ಜಿ.ಪಾಲ್, ಐತಪ್ಪ ಮೂರು ಪಬಂದ ಚಿಪ್ಪಾರ್

**ಕೊಂಕಣಿ ಸಾಹಿತ್ಯ**

ಹದಿನಾರನೆಯ ಶತಮಾನದಲ್ಲಿ ಗೋವೆಯನ್ನು ಪೋರ್ಚುಗೀಸರು ವಶಪಡಿಸಿಕೊಂಡ ನಂತರ, ಕೊಂಕಣಿ ಭಾಷಿಕರು ಒಳನಾಡಿಗೆ ವಿಶೇಷವಾಗಿ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ವಲಸೆ ಬಂದರು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಕಾಲೇಜುಗಳು, ಮುದ್ರಣಾಲಯಗಳು ಆರಂಭವಾದ ಮೇಲೆ ಮಂಗಳೂರಿನಿಂದ ಕೊಂಕಣಿ ಸಾಹಿತ್ಯ ರಚನೆ ಆರಂಭವಾಯಿತು. ಫಾ॥ ಪೋಲೆಸೆ ಅವರ ದಿನನಿತ್ಯದ ಪ್ರಾರ್ಥನೆಗಳನ್ನೊಳಗೊಂಡ 'ದಿ ಸ್ಪಡ್ತೊ ಸಾಂಗಾತಿ' ಯು ಜನಪ್ರಿಯಗೊಂಡಿತ್ತು. ಇದಲ್ಲದೆ ಪೋಲೆಸೆ ಅವರು 'ನೊವ್ಯಾ ತೆಸ್ತಾಮೆಂತಾಚ್ಯೊ ಮುಕೆಲ್ ಸಂಗ್ತಿ' 'ಅಕ್ಟೋಬರ್ ಮಯ್ ನೊ', 'ಜೆಜು ಕ್ರೀಸ್ತಾಚಿ ದೇಕ್ ಕಾಣ್ಗೆವ್ಯಾ ವಿಶಾಂತ್' ಇತ್ಯಾದಿ ಧಾರ್ಮಿಕ ಪುಸ್ತಕಗಳನ್ನು ಪ್ರಕಟಿಸಿದರು. ಪಾದ್ರಿ ಮೊನ್ಸಿಞೋರ್ ಮಿಂಗೆಲ್ ಪ್ಲಾಸಿಕ್ ಕುಲಾಸೊರವರು 'ಜೆಜುಚೊ ಮೋಗ್', ಕೊಂಕ್ಣಿ ಭಾಷೆಚೆಂ ಪ್ರಥಮ್ ಪುಸ್ತಕ್', 'ಬಾಳ್ಕಾಂಚಿಂ ಮೆಟಾಂ', 'ಖುರ್ಸಾಂ ಮುಳಿಂ ದುಖಿ ಮಾತಾ' 'ಗುಪಿತ್ ಮ್ಹಜ್ಯಾ ದೆವಾ ತುಕಾ ನಮಸ್ಕಾರ್' 'ಉಠಾ ಉಠಾ ಪ್ರಾಣಿಯಾ', 'ಪಾಪಿಯ ನಿರ್ಬಾಗ್ಯಾ', 'ಸರ್ಗಿಂಥಾವ್ನ್' ಇತ್ಯಾದಿ ಕೊಂಕಣಿ ಪ್ರಾರ್ಥನಾ ಗೀತೆಗಳನ್ನು ಸಂಗ್ರಹಿಸಿ 'ಶೆಂಬರ್ ಕಂತಿಗೊ' ಎಂಬ ಶೀರ್ಷಿಕೆಯಲ್ಲಿ ಕನ್ನಡ ಲಿಪಿಯಲ್ಲಿ ಪ್ರಕಟಿಸಿದರು.

೧೮ನೇ ಶತಮಾನದಲ್ಲಿದ್ದ ಉತ್ತರ ಕರ್ನಾಟಕದವರಾದ ಅಯ್ಯಪ್ಪನ ಗೌಡರ್ ಕೊಂಕಣಿ, ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿ ಭಜನೆಗಳನ್ನು ಹಾಡುತ್ತಾ ಧರ್ಮಸ್ಥಳ ಮಂಜುನಾಥನನ್ನು ಪ್ರಾರ್ಥಿಸಿ ಕಳೆದುಕೊಂಡಿದ್ದ ಕಣ್ಣನ್ನು ಮರಳಿ ಪಡೆದರೆಂದು ಐತಿಹ್ಯವಿದೆ. ೧೮ನೇ ಶತಮಾನದ ಅಂತ್ಯದಲ್ಲಿ ಗೋವೆಯ ಧರ್ಮಬೋಧಕ ಫಾದರ್ ಸ್ಟೀವನ್ ಸನ್ ಕೊಂಕಣಿ ಭಾಷೆಯಲ್ಲಿ ಬರೆದ ಕ್ರಿಸ್ತ ಪುರಾಣವು ಕನ್ನಡದಲ್ಲಿ ಲಿಪ್ಯಂತರಗೊಂಡು ಫಾದರ್ ಲಿಯೊ ಸಾಲ್ಡಾನರು ಪ್ರಕಟಿಸಿದರು. ಫಾದರ್ ಜೋ ಆಕ್ವಿನ್ ಮಿರಾಂಡ ಅವರು ಬರೆದ ರಿಗ್ಲೋ ಜೇಸುವಜನಾ, ಪಾಪಿಯ ನಿರ್ಭಾಗ್ಯ, ಸೊರ್ಗಾಧನ ಮುಂತಾದ ಪ್ರಾರ್ಥನಾ ಗೀತೆಗಳು ಕ್ರೈಸ್ತ ಸಮುದಾಯದಲ್ಲಿ ಪ್ರಚುರಗೊಂಡಿತ್ತು. ೧೮೮೨ರಲ್ಲಿ ಕೊಡಿಯಾ ಬೈಲಿನಲ್ಲಿ ಮುದ್ರಣಾಲಯ ಸ್ಥಾಪಿತಗೊಂಡು ಮೊದಲಿಗೆ ರೋಮನ್ ಲಿಪಿಯಲ್ಲಿ ಕೊಂಕಣಿ ಭಾಷೆಯ ಧಾರ್ಮಿಕ ಗ್ರಂಥಗಳು ಪ್ರಕಟವಾದವು. ಫಾದರ್ ರೆಫೆಲ್(೧೭೭೧–೧೮೪೪) ಅವರು ೧೮೩೨ ರಲ್ಲಿ ಕೊಂಕಣಿ ಭಾಷೆಗೆ ವ್ಯಾಕರಣ ಗ್ರಂಥವೊಂದನ್ನು ರಚಿಸಿದ್ದರು. ಇದೇ ವೇಳೆಯಲ್ಲಿ ಇಟಲಿಯಿಂದ ಮಂಗಳೂರಿಗೆ ಬಂದ ಫಾದರ್ ಆ್ಯಂಜೆಲೋ ಫ್ರಾನ್ಸಿಸ್ಕೋ ಸಾವೆರಿಯೋ ಮಫ್ಫೆ ಅವರು ಸ್ಥಳೀಯ ಭಾಷೆಯನ್ನು ಕಲಿತು ೧೮೮೨ರಲ್ಲಿ ಕೊಂಕಣಿ ವ್ಯಾಕರಣ ಗ್ರಂಥವನ್ನೂ, ೧೮೮೫ರಲ್ಲಿ ಇಂಗ್ಲೀಷ್ ಕೊಂಕಣಿ ನಿಘಂಟನ್ನು ಹಾಗೂ ಇಂಗ್ಲೀಷ್ ನಿಘಂಟನ್ನು ರಚಿಸಿದರು. ಇದೇ ಸಂದರ್ಭದಲ್ಲಿ ನೊವೆ ಟೆಸ್ಟಾಮೆಂಟಾಚೋ ಮುಖ್ಯ ಸಂಗತಿ, ಆಕ್ಟೋಬರ್ ಮ್ಹಯಿನೋ, ಜೇಸುಕ್ರಿಸ್ತಾಜಿ ದೇಖ್ ಧಾರ್ಮಿಕ ಪುಸ್ತಕಗಳು ಪ್ರಕಟಗೊಂಡವು. ಕ್ರಿ. ಶ.೧೮೭೮ರ ನಂತರ ಮಂಗಳೂರಿನಲ್ಲಿ ಸೇಂಟ್ ಅಲೋಸಿಯಸ್ ಕಾಲೇಜ್ ಸ್ಥಾಪನೆಗೊಂಡ ನಂತರ ಅದರ ಆಶ್ರಯದಲ್ಲಿ ಕೊಂಕಣಿ ಅಧ್ಯಯನ ಸಂಸ್ಥೆಯೊಂದು ಸ್ಥಾಪಿತಗೊಂಡು ಕೊಂಕಣಿ ಭಾಷೆಯ ಪ್ರಗತಿಕಾರ್ಯಕ್ಕೆ ಮುಂದಾಯಿತು.

ಕಳೆದ ಶತಮಾನದ ಆರಂಭದ ಮಂಗಳೂರಿನ ಕೊಂಕಣಿ ಸಾಹಿತಿಗಳಲ್ಲಿ ಸ್ವಾಮಿ ಸುಪ್ರಿಯಾ ಅವರು ಕನ್ನಡ ಲಿಪಿಯಲ್ಲಿ ಕೊಂಕಣಿ ಭಾಷೆಯಲ್ಲಿ 25ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದು ಅವುಗಳಲ್ಲಿ 'ಅನ್ಯಾ ಅಕಯ್ ಆಸಿ ಇತರ ಕವನಾಂ' ಜನಪ್ರಿಯವಾಗಿದೆ; ಮತ್ತೊಂದು ಕವನಸಂಕಲನ ಕಾಳಿಚ್ ಮುರ್ಮುರೆಂ,ಜೆ.ಬಿ.ಮೋರೇಸ್(ಜ;೧೯೩೩) ಅವರು ತೀರಾತ್ ಆಜ್ ಉಡ್ಗಾಸೇತಾ, ವೊಕತ್ ನಾತ್ಲೊರೋಗ, ನೋವಿಸೂನ, ಇವರ ನೋವಿವ್ರೋಕಾಲ್ ಕವನಸಂಕಲನ ರಚಿಸಿದ್ದು, ಇವರ ಭಿತೋರ್ಲೆತುಫಾನ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಆಕಾಡೆಮಿ ಪುರಸ್ಕಾರ ದೊರೆತಿದೆ. ಸಿ.ಎಫ್.ಡಿಕೋಸ್ತಾ ಅಚರ ಸೊಸ್ಯಾಚೆಕಾನ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಬಂದಿದೆ. ರಿಚರ್ಡ್ ಲಾಸಾಡ್ರೊ ಅವರು ವ್ಹೋವ್ ಆನಿಮ್ಹಿರಿಮ್ ಕವನಸಂಕಲನ ತಂದಿದ್ದಾರೆ. ಜೆ.ಸಿ.ವೀಗಾಸ್ ಅವರು ಮಾಗಾಂಚ್ಯೋ ಕಥಾ, ಕೊಶೆದಾನ ಕೆಲ್ಲಿಖೂನ ಕಥಾ ಸಂಕಲನಗಳನ್ನೂ, ಸಿ.ಜಿ.ಸಿಕ್ವೇರಾ ಅವರು ಪಾಂಚ್ ಪಾಕಲ್ಯೋ, ಮೋಗಾನಿಉತಾರ್ ಉಲೊಆನಿಝುಲೊ ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ.

ಕೊಂಕಣಿ ಭಾಷೆಯ, ಕನ್ನಡ ಲಿಪಿಯ ಮೊದಲ ಕಾದಂಬರಿ ಜೋಸಾ ಆಲ್ವರಿಸ್ ಅವರ 'ಆ್ಯಂಜಲ್' ಆಗಿದ್ದು ಆನಂತರ ಅವರು 'ಆಗ್ನೇಸ್ ಮಾವ್ರಿ' 'ಮತ್ಲಾಬಿ ಮೊನಿಕಾ' ಇವೇ ಮುಂತಾದ ಐವತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಉಳಿದಂತೆ ಕಾದಂಬರಿಕಾರರಲ್ಲಿ ವಿ.ಜೆ.ಪಿ.ಸಾಲ್ಡಾನ, ಎ.ಟಿ.ಲೋಬೋ, ಎಡ್ವಿನ್ ಡಿ' ಸಿಜಾ, ಸ್ಟ್ಯಾನ್ ಎಜೇರಾ, ಗ್ಯಾಬ್ರಿಯಲ್ ಡಿಸೋಜಾ ಮುಂತಾದವರನ್ನು ಹೆಸರಿಸಬಹುದು. ಮಂಗಳೂರಿನಲ್ಲಿ ಕೊಂಕಣಿ ನಾಟಕ ಸಾಹಿತ್ಯ ಇಪ್ಪತ್ತನೇ ಶತಮಾನದ ಆರಂಭದಲ್ಲೇ ಕಾಣಿಸಿಕೊಂಡಿದ್ದು ಮೋಳಂತೂರ್ ಕೃಷ್ಣ ಪ್ರಭು ಅವರ 'ಚಂದ್ರಹಾಸ' 'ಪ್ರಹ್ಲಾದ', ಕುಂಬ್ಳೆ ನರಸಿಂಹ ಲಕ್ಷ್ಮಣ ನಾಯಕರ 'ಸಾವಿತ್ರಿ ಸತ್ಯವಾನ್'ಗಳು ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ಹಲವಾರು ರಂಗ ಪ್ರಯೋಗಗಳನ್ನು ಕಂಡಿತು. ಇವರಲ್ಲದೆ ಜಿ.ಎನ್. ಲಕ್ಷ್ಮಣ ಪೈ, ಆರ್. ಡಿ. ಕಾಮತ್ ಮುಂತಾದವರಲ್ಲದೆ ಪೆದ್ರುಜಾನ್ ಡಿಸೋಜಾ–ಪ್ಯಸ್ಕಲ್ ಸೆಕ್ವೆರಿಯಾ, ಗೀತನಾಟಕಗಳನ್ನು ರಚಿಸಿದ ಲೂಯೀಸ್ ಮಾಸ್ಕರೆನ್, ಸಾಮಾಜಿಕ ನಾಟಕಗಳ ರಚನೆ ಕಾರ್ರೆಡ್ ಫೆರ್ನಾಂಡಿಸ್, ಹಲವಾರು ನಾಟಕಗಳನ್ನು ರಚಿಸಿದ ವಿ.ಜೆ.ಪಿ.ಸಾಲ್ಡಾನಾ ಹಾಗೂ ಪಿ.ಎಫ್.ಕೋಸ್ತಾ ಮುಂತಾದವರನ್ನು ಹೆಸರಿಸಬಹುದು. ಜೆ.ಬಿ.ಮೊರೆಸಾನಿಯವರು ವೈಚಾರಿಕ ಪ್ರಬಂಧಗಳನ್ನು ಸಂಗ್ರಹಿಸಿ' ಮೊಂಗ್ಯೊಳ್ಚಿ ಉಜ್ವಲರತ್ನ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಮೊನ್ಸಿ ಇಯೋರ್ ರಾಯ್ಮಂದ್ ಮಸ್ಕರ್ಹೇನಸ್‌ರವರು ಮನೆಯಲ್ಲಿಯೇ ಕೊಂಕಣಿ ಕಲಿಯುವಂತೆ 'ಪ್ಲಯೆಂ ಪುಸ್ತಕ್'ವಲ್ಲದೆ ಧಾರ್ಮಿಕ ಭಕ್ತಿಗೀತೆಗಳ 'ದೆವಾ ದಯಾಳ್ ಕುಕುಳ್ತಿಚ್ಯಾ', 'ಸಾಯ್ಬಿಣಿಚೊಲ್ಹಾನ್ ಒಫಿಸ್', 'ಮೆಲ್ಲ್ಯಾಂಚೊ ಒಫಿಸ್', 'ಸಾಯ್ಬಿಣಿಚಿಂ ಹೆರ್ ಗಾಯನಾಂ'ಗಳು ಜನಪ್ರಿಯವಾಗಿವೆ. ಫಾ ಲುವಿಸ್ ಡಿಸೋಜಾರವರು ಕೊಂಕಣಿ ಭಾಷೆಯ ಒಗಟುಗಳು, ಜನಪದ ಗೀತೆಗಳು ಶುಭ ಕಾರ್ಯಗಳಲ್ಲಿ ಹಾಡುವ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಫಾಗ್ರೆಗರಿ ಕುವೆಲ್ಲೊ ಅವರು 'ಯೆ ಮೊರಿಯೊ, ತುಜೆಂ ನಾಂವ್ ವರ್ಣಿತಾಂವ್', 'ಮೊರಿಯೆ ಪರ್ತಿ ಅಮ್ಚೆರ್ ತುಜೆ ದೊಳೆ', 'ಮೊರಿಯೆಕ್ ಹೊಗೊಳ್ಸಿಯಾಂ' ಇತ್ಯಾದಿ ಧಾರ್ಮಿಕ ಗೀತೆಗಳನ್ನು ರಚಿಸಿದ್ದು, 'ಮೊರಿ ಮ್ಹಜಿ ಮಾಂಯ್' ಎಂಬ ಹೆಸರಿನಲ್ಲಿ ಗೀತೆ ಸಂಗ್ರಹ ಹೊರತಂದಿದ್ದಾರೆ. ಫಾ॥ ಬಾಜಿಲ್ ರುಜಾರಿಯೊ ಅವರ ಪುಸ್ತಕದ ಹೆಸರು 'ಚೆಜುಚೊ ಕುರೋವ್'. ಇವೇ ಮುಂತಾದ ಕೊಂಕಣಿ ಪುಸ್ತಕಗಳು ಕನ್ನಡ ಲಿಪಿಯಲ್ಲಿ ಪ್ರಕಟವಾಗಿರುವ ಕ್ರೈಸ್ತ ಸಾಹಿತ್ಯ ಗ್ರಂಥಗಳಾಗಿದ್ದು, ಕನ್ನಡ–ಕೊಂಕಣಿ ಬಾಂಧವ್ಯ ಹೆಚ್ಚಿಸುವುದಲ್ಲದೆ ಕೊಂಕಣಿ ಸಾಹಿತ್ಯ ನೆಲೆ ಕಂಡುಕೊಳ್ಳುವಂತಾಗಿದೆ. ಬಂಟ್ವಾಳದ ಚೋಳಯಾರು ಕೃಷ್ಣ ಪ್ರಭುಗಳು ಕೊಂಕಣಿಯಲ್ಲಿ ನಾಟಕ, ಕವಿತೆಗಳನ್ನು ಬರೆದ ಪ್ರಾರಂಭದ ಬರಹಗಾರರು. ಉಳಿದಂತೆ ಕೊಂಕಣಿ ಮಹಿಳಾ ಸಣ್ಣಕಥೆಗಾರರಲ್ಲಿ ನಂದಿನಿ ಡಿ'ಕೋಸ್ತಾ, ರೊನಾಲ್ಡ್ ಪೆರೇರಾ, ಲಿಯೊ ಡಿ'ಸೌಜ, ಸಿಲ್ವೆಸ್ಟರ್ ಡಿ'ಸೌಜ ಮುಂತಾದವರನ್ನು ಹೆಸರಿಸಬಹುದು.

**ಕೊಂಕಣಿ ಪತ್ರಿಕೋದ್ಯಮ :** ಕೊಂಕಣಿ ಪತ್ರಿಕೋದ್ಯಮದಿಂದ ಧಾರ್ಮಿಕ ಬರಹಗಳೊಂದಿಗೆ ಸಾಹಿತ್ಯದ ರಚನೆಗೂ ಪ್ರೋತ್ಸಾಹ ದೊರೆಯುವಂತಾಯಿತು. ಬೈಂದೂರಿನ ಲುವಿಸ್ ಮಸ್ಕರೇನ್ಹಸ್ ಮತ್ತು ಸರ್ದಾರ್ ಲುವಿಸ್ ಕಣ್ಣಪ್ಪ ಅವರು ಜಿಲ್ಲೆಯ ಮೊದಲ ಕೊಂಕಣಿ ಪತ್ರಿಕೆ 'ಕೊಂಕ್ಣಿ ದಿರ್ವೆಂ'ಯನ್ನು ೧೯೧೨ರಲ್ಲಿ ಆರಂಭಿಸಿದರು. ಸಂಪಾದಕ ಮಸ್ಕರೇನ್ಹಸ್ ಅವರು ಸ್ವತಃ ಸಾಹಿತಿಯಾಗಿದ್ದು, 'ಅಬ್ರಾಂವ್ಚೆಂ ಯಜ್ಞದಾನ್' ಎಂಬ ಮಹಾಕಾವ್ಯ ಬರೆದು 'ಕೊಂಕಣಿಯ ವರಕವಿ' ಎಂದೆನಿಸಿಕೊಂಡಿದ್ದರು. ಇದಲ್ಲದೆ ಅನೇಕ ಕತೆ, ಕಾದಂಬರಿ, ನಾಟಕಗಳನ್ನು ಬರೆದಿದ್ದಲ್ಲದೆ ಇಂಗ್ಲಿಷ್‌ನಿಂದ ಶೇಕ್ಸಪಿಯರ್ ಕೃತಿಗಳೂ ಸೇರಿದಂತೆ ಹಲವಾರು ಪುಸ್ತಕಗಳ ಅನುವಾದ (ಕೊಂಕಣಿಗೆ) ಮಾಡಿದ್ದರು. ೧೯೨೦–೪೦ರ ಅವಧಿಯಲ್ಲಿ ಮುಂಬಯಿಯಲ್ಲಿ ನೆಲೆಸಿದ್ದ ಅಲೆಕ್ಸ್. ಎ. ಪಾಯ್ಸ್‌ರವರು 'ಕೊಂಕ್ಣಿದಿರ್ವೆಂ' ಪತ್ರಿಕೆಯ ಸಂಪಾದಕರಾಗಿದ್ದು, ಅವರೂ ಸಹ ಕೊಂಕಣಿಯಲ್ಲಿ ಹಲವಾರು ಪುಸ್ತಕಗಳನ್ನು ರಚಿಸಿದ್ದರು. ಸ್ಥಳೀಯವಾಗಿ ಪತ್ರಿಕೆಯ ಆಡಳಿತ ನಡೆಸುತ್ತಿದ್ದ ಜೋನ್ ಜೋಸೆಫ್ ರೇಗೊರವರು ಸಹ 'ಸಿಂಗ್ ಎ ಸೊಂಗ್' ಪುಸ್ತಕ ರಚಿಸಿದ್ದಾರೆ. ಪತ್ರಿಕೆ ೧೯೩೭ರಲ್ಲಿ ಬೆಳ್ಳಿಹಬ್ಬ ಆಚರಿಸಿತಾದರೂ ಆರ್ಥಿಕ ಕಾರಣದಿಂದ ೧೯೪೦ರಲ್ಲಿ ಸ್ಥಗಿತಗೊಂಡಿತು. ಆದರೂ ಪತ್ರಿಕೆಯಿಂದಾಗಿ ಇಪ್ಪತ್ತೈದಕ್ಕೂ ಹೆಚ್ಚು ಜನಪ್ರಿಯ ಲೇಖಕರು ಬೆಳಕಿಗೆ ಬಂದು ಕೊಂಕಣಿ ಸಾಹಿತ್ಯದಲ್ಲಿ ಹೆಸರು ಮಾಡುವಂತಾಯಿತು. ಮೊದಲಿಗೆ ಮಾಸಿಕವಾಗಿದ್ದ ಪತ್ರಿಕೆ ನಂತರ ಪಾಕ್ಷಿಕವಾಗಿ ಮುಂದುವರಿಯಿತು.

ಮಂಗಳೂರು ಧರ್ಮಪ್ರಾಂತ್ಯ ೧೯೧೭ರಲ್ಲಿ ಪ್ರಕಟಿಸತೊಡಗಿದ 'ಆಂಜ್' ಧಾರ್ಮಿಕ ಪತ್ರಿಕೆಯಾಗಿದ್ದು, ಫಾ॥ ಕೈತಾನ್ ಗೊನ್ಸಾಲ್ವಿಸ್ ಆರಂಭಿಕ ಸಂಪಾದಕರಾಗಿದ್ದವರು. ನಂತರ ಫಾ॥ ಮಾನ್ವೆಲ್, ಫಾ॥ ಮ್ಯಾಥ್ಯೂ ಪಿಂಟೊ, ಫಾ॥ ಜೋನ್ ಮರಿಯಾಣ್ ಮಿನೇಜಸ್ ಸಂಪಾದಕರುಗಳಾಗಿ ಮುಂದುವರಿದು ಪ್ರಸ್ತುತ ಫಾ॥ ಪಾವ್ಲ್ ಪಿಂಟೊರವರು ಸಂಪಾದಕರಾಗಿದ್ದಾರೆ. ೧೯೩೭ರಲ್ಲಿ ಬೈಂದೂರಿನ ಜೋಸೆಫ್ ಬೇಸಿಲ್ ಮಜಾದೊದರವರು 'ಸಮಾಜಿಚೊದಿವೊ' ಪತ್ರಿಕೆ ಆರಂಭಿಸಿ ಕೆಲ ತಿಂಗಳು ನಡೆಸಿದ್ದು, ನಂತರ ಪತ್ರಿಕೆ ಸ್ಥಗಿತಗೊಂಡಿತು.

ಜಿಲ್ಲೆಯ ಕೊಂಕಣಿ ಪತ್ರಿಕೆಗಳಲ್ಲಿ ಪ್ರಮುಖ ಸ್ಥಾನ ಗಳಿಸಿರುವ ವಾರಪತ್ರಿಕೆ 'ರಾಕ್ಣೊ' ನಿರಂತರವಾಗಿ ೧೯೩೮ರಿಂದ ಹೊರಬರುತ್ತಿದೆ. ಪ್ರಥಮ ಸಂಪಾದಕರಾದ ಸಿಲ್ವೆಸ್ಟರ್ ಮಿನೇಜಸ್ ಅವರು ಕೊಂಕಣಿ ವಿದ್ವಾಂಸರಾಗಿದ್ದು 'ಕ್ರಿಸ್ತಾಚೊ ಪಾಟ್ಲಾವ್', ಕೊಂಕ್ಣಿರಿತುವಾಲ್' 'ಪಾಶಾಂವಾಂಚಿಂ ಗೀತ್', 'ಇಂಗ್ಲಿಷ್ ಕೊಂಕಣಿ ಶಬ್ದ್ ಸಂಗ್ರಹ್' ಸೇರಿದಂತೆ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದವರು. ೧೯೫೫ರಲ್ಲಿ ಫಾ॥ ಜೊನ್ ಮಿನೇಜಸ್ ಅವರು ಸಂಪಾದಕರಾಗಿ ಕಾರ್ಯನಿರ್ವಹಿಸಲಾರಂಭಿಸಿದ್ದು, ಕೊಂಕಣಿಯಲ್ಲಿ ಧಾರ್ಮಿಕ ಕೃತಿಗಳಾದ 'ಚೆಜು ಮರಿಯೆಚೊ ಪೂತ್' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ೧೯೬೧ರಲ್ಲಿ ಪತ್ರಿಕೆ ಫಾ॥ ಅಲೆಗ್ಸಾಂಡರ್ ಡಿಸೋಜಾ ಅವರ ಸಂಪಾದಕತ್ವಕ್ಕೆ ಬಂದಿದ್ದು, ಅವರ ಪ್ರೋತ್ಸಾಹದಿಂದ ಅನೇಕ ಹೊಸ ಲೇಖಕರು ತಯಾರಾಗಿ ಪತ್ರಿಕೆಯ ಚಂದಾದಾರರು ಹೆಚ್ಚಾಗುವಂತಾಯಿತು. ೧೯೬೩ರಲ್ಲಿ ಪತ್ರಿಕೆ ಬೆಳ್ಳಿ ಹಬ್ಬ ಆಚರಿಸಿ ಸ್ಮರಣ ಸಂಚಿಕೆ ಹೊರತಂದಿತು. ಪತ್ರಿಕೋದ್ಯಮದಲ್ಲಿ ತರಬೇತಿ ಹೊಂದಿದ ಫಾ ಮಾರ್ಕ್ ವಾಲ್ಡರ್ ೧೯೭೩ರಲ್ಲಿ ಸಂಪಾದಕತ್ವದ ಹೊಣೆ ಹೊತ್ತು ಪತ್ರಿಕೆಗೆ ೩೫ ವರ್ಷವಾದಾಗ 'ಅಮರ್‌ಕೊಂಕ್ಣಿ', ೪೦ ವರ್ಷವಾದಾಗ 'ರಾಕ್ಣೊ ೪೦' ಎಂಬ ಹೆಸರಿನಲ್ಲಿ ಸ್ಮರಣ ಸಂಚಿಕೆ ಹೊರತಂದಿದ್ದಲ್ಲದೆ ಕಾಲಕಾಲಕ್ಕೆ ಹಲವಾರು ವಿಶೇಷ ಸಂಚಿಕೆಗಳನ್ನು ತಂದರು. ೧೯೮೫ರಲ್ಲಿ ಜನಪ್ರಿಯ ಲೇಖಕರಾದ ಫಾ ವಿನ್ಸೆಂಟ್ ವಿಕ್ಟರ್ ಮಿನೇಜಸ್ ಸಂಪಾದಕರಾಗಿ ಬಂದಿದ್ದು, ೧೯೮೮ರಲ್ಲಿ 'ರಾಕ್ಣೊ–೫೦' ಎಂಬ ಹೆಬ್ಬೊತ್ತಿಗೆ ಪ್ರಕಟಿಸಿದರು. ೧೯೯೩ರಲ್ಲಿ ಸಂಪಾದಕರಾದ ಫಾ॥ ಸಾಮ್ಯುಯಲ್ ಸಿಕ್ವೇರಾ ಪತ್ರಿಕೆಯ ವಿನ್ಯಾಸ ಆಧುನಿಕಗೊಳಿಸಿದ್ದು, ೧೯೯೮ರಲ್ಲಿ ಪತ್ರಿಕೆಯ ಷಷ್ಠ್ಯಾಬ್ದಿ ಆಚರಿಸಿದರು. ನಂತರ ಫಾ ಎರಿಕ್ ಕ್ರಾಸ್ತಾ ರವರು ಸಂಪಾದಕರಾಗಿದ್ದಾರೆ. ಒಟ್ಟಾರೆಯಾಗಿ ಪತ್ರಿಕೆ ಧರ್ಮ, ರಾಜಕೀಯ, ಕೃಷಿ, ವಿಜ್ಞಾನ, ಆರೋಗ್ಯ ಕುರಿತು ಜನಜಾಗೃತಿ ಉಂಟು ಮಾಡಿದೆಯಲ್ಲದೆ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಮಂಗಳೂರಿನಿಂದ ಬ.ವಿ. ಬಾಳಿಗರವರಿಂದ ಪ್ರಾರಂಭವಾಗಿ ದೀರ್ಘಕಾಲ ನಡೆದು ಬಂದ 'ಪಂಚಕಜ್ಜಾಯ್' ಪ್ರಬುದ್ಧ ಕನ್ನಡ ಮಾಸಿಕವಾಗಿದ್ದು, ಇದರ ಸಂಪಾದಕತ್ವಕ್ಕಾಗಿ ಬಾಳಿಗ ರವರಿಗೆ ಹಲವು ಪ್ರಶಸ್ತಿಗಳು ದೊರೆತಿವೆ.

ಕನ್ನಡ ಲಿಪಿಯಲ್ಲಿ ಕೊಂಕಣಿ ಭಾಷೆಯಲ್ಲಿ ಪ್ರಕಟವಾಗುತ್ತಿರುವ ಇನ್ನಿತರ ಪತ್ರಿಕೆಗಳೆಂದರೆ, ಆಮ್ಚಿಮಾಯ್, ಮಿತ್ರ, ಝೆಲೊ, ಜೆಜುರಾಯ್, ಕೊಂಕಣಿ ದಾಯ್ಜ್, ಸೆವಕ್, ಕಾಣಿಕ್, ಅಮರ್ ಕೊಂಕ್ಣಿ, ಅಮ್ಚೊಯುವಕ್ ಕುರೊವ್, ಉಮಾಳೊ ಮುಂತಾದುವನ್ನು ಉದಾಹರಿಸಬಹುದು. ಇವುಗಳಲ್ಲಿ ಕೆಲವು ಪ್ರಕಟಣೆಯನ್ನು ನಿಲ್ಲಿಸಿವೆ. ಇವಲ್ಲದೆ ಮುಂಬಯಿಯಿಂದಲೂ ಕೆಲವು ಕನ್ನಡ ಲಿಪಿಯ ಕೊಂಕಣಿ ಪತ್ರಿಕೆಗಳು ಹೊರಬರುತ್ತಿವೆ. ಮೇಲೆ ಉದಾಹರಿಸಿದ ಒಟ್ಟು ಪತ್ರಿಕೆಗಳಲ್ಲದೆ ಕೆಲಕಾಲ ಜಿಲ್ಲೆಯಲ್ಲಿ ನಡೆದು ಸ್ಥಗಿತಗೊಂಡ ಇನ್ನು ಇಪ್ಪತ್ತನಾಲ್ಕು ಪತ್ರಿಕೆಗಳ ಪಟ್ಟಿ ದೊರೆಯುತ್ತದೆ.

ಮಂಗಳೂರಲ್ಲಿ ಕೊಂಕಣಿ ಅಕಾಡಮಿ ೧೯೯೪ರಲ್ಲಿ ಆರಂಭವಾಗಿದ್ದು ಕ್ರಮವಾಗಿ ವಿ.ಜೆ.ಪಿ. ಸಲ್ದಾನ (೧೯೯೪–೯೫); ಬಿ. ವಿಬಾಳಿಗಾ(೧೯೯೫–೯೭); ಬಸ್ತಿ ವಾಮನ ಶೆಣೈ(೧೯೯೭–೨೦೦೧); ಅಲೆಗ್ಸಾಂಡರ್ ಎಫ್ ಡಿಸೋಜ(೨೦೦೧–೦೪) ಹಾಗೂ ಎರಿಕ್ ಒಝೋರಿಯೊ (೨೦೦೪–) ಅವರುಗಳು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ೧೯೯೫–೯೬ರಿಂದ ಕೊಂಕಣಿ ಅಕಾಡಮಿ ವ್ಯವಸ್ಥಿತವಾಗಿ ಸಾಹಿತ್ಯ, ಜನಪದ, ಸಂಗೀತ, ಪತ್ರಿಕೋದ್ಯಮ ಮುಂತಾದ ಕ್ಷೇತ್ರದಲ್ಲಿನ ಪ್ರತಿಭಾನ್ವಿತರನ್ನು ಗುರುತಿಸಿ ಗೌರವ ಪ್ರಶಸ್ತಿಯನ್ನು ನೀಡುತ್ತಿದೆ. ಜೊತೆಗೆ ಕೊಂಕಣಿ ಭಾಷೆಯ ಉತ್ತಮ ಪುಸ್ತಕಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದೆ. ೨೦೦೪ರಲ್ಲಿ ಅಕಾಡಮಿಗೆ ೧೦ ವರ್ಷಗಳಾದಾಗ ಹಲವಾರು ಕಾರ್ಯಕ್ರಮಗಳ ಜೊತೆಗೆ ಸ್ಮರಣ ಸಂಚಿಕೆಯೊಂದನ್ನು ಹೊರತಂದಿದ್ದಾರೆ. ಭಾಷಾ ಬಾಂಧವ್ಯಕ್ಕೆ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದು, ಬಾಲಪ್ರತಿಭೆ, ಸಾಹಿತ್ಯಗೋಷ್ಠಿ, ನಾಟಕ ಶಿಬಿರ, ಕೊಂಕಣಿ ಕಲಾ ಉತ್ಸವ, ಕೊಂಕಣಿ ಯಕ್ಷಗಾನದ ಪ್ರದರ್ಶನದೊಂದಿಗೆ 'ಕೊಂಕಣಿ ಸಮಾನಾಂತರ ಶಬ್ದಕೋಶ', 'ಕೊಂಕಣಿ ಕಳೊ' ಪುಸ್ತಕಗಳನ್ನು ಪ್ರಕಟಿಸಿದ್ದಾರೆ.
ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡಮಿಯಿಂದ ಪ್ರಶಸ್ತಿ ಪಡೆದ ದಕ್ಷಿಣ ಕನ್ನಡ ಜಿಲ್ಲೆಯವರು

೧೯೯೫ ಎಂ.ಟಿ. ಲೋಬೊ, ವಿಲ್ಫಿ ರೆಬಿಂಬಸ್

೧೯೯೬ ವಿ.ಜೆ.ಪಿ ಸಲ್ಡಾನ್ಹಾ, ಅಲೆಕ್ಸಾಂಡರ್ ಎಫ್ ಡಿಸೋಜ

೧೯೯೭ ಎಡ್ವಿನ್ ಜೆ. ಎಫ್, ಡಿಸೋಜ, ಜೆ.ಬಿ. ರಾಸ್ಕೀ ಞ್, ವಸಂತಿ ಆರ್. ನಾಯಕ್

೧೯೯೮ ಜೆರಿ ಕುಲಶೇಖರ, ಎರಿಕ್ ಒಝಾರಿಯೊ, ಜೋಕಿಂ ಪಿರೇರ, ಬಿ.ವಿ.ಬಾಳಿಗ, ರಾಕ್ಣೊ ವಾರಪತ್ರಿಕೆ.

೧೯೯೯ ವಿಲಿಯಂ ದ ಸಿಲ್ವಾ, ಎಂ. ವೆಂಕಟೇಶ ಪ್ರಭು, ಡೋಲ್ಫಿ ಎಫ್, ಲೋಬೊ

೨೦೦೦ ವಿಕ್ಟರ್ ರೋಡ್ರಿಗಸ್, ಮೆಲ್ವಿನ್ ಪೆರಿಸ್

೨೦೦೧ ಎನ್. ಬಿ. ಕಾಮತ್, ಹೆನ್ರಿ ಡಿಸೋಜ

೨೦೦೨ ಲೂವಿ ನೆಟ್ಟೋ, ಕ್ಲೊಡ್ ಡಿಸೋಜ, ಲಿಯೋ ಜಾನ್ ಡಿಸೋಜ

೨೦೦೩ ಐರಿನ್ ಕಾಸ್ತಿಲಿನೊ, ಸಂತ ಜೋಸೆಫರ ನಾಟಕ ಸಂಘ

೨೦೦೪ ಗ್ಲೇಡಿಸ್ ರೇಗೊ, ಫೆಲಿಕ್ಸ್ ಸಲ್ಡಾನ್ಹ ಕೆ. ನಾರಾಯಣ ಖಾರ್ಡಿ

೨೦೦೫ ಎಡ್ವಿನ್ ನೆಟ್ಟೊ

## ಬ್ಯಾರಿ ಸಾಹಿತ್ಯ

ಸ್ಥಳೀಯವಾಗಿ ಬೆಳೆದ ಬಂದ 'ಬ್ಯಾರಿ' ಸಮುದಾಯದವರದೇ ಆದ ಸಾಹಿತ್ಯ, ಸಂಸ್ಕೃತಿಗಳಿದ್ದು, ಕಳೆದ ಶತಮಾನದಿಂದೀಚೆಗೆ ಕನ್ನಡ ಲಿಪಿಯಲ್ಲಿ 'ಬ್ಯಾರಿ' ಭಾಷೆಯ ಸಾಹಿತ್ಯ ರಚನೆಯಾಗುತ್ತಿದೆಯಲ್ಲದೆ ಗಣನೀಯ ಪ್ರಮಾಣದಲ್ಲಿ ರಾಜ್ಯ ಮಟ್ಟದಲ್ಲಿ ಸಾಹಿತಿಗಳು ಕ್ರಿಯಾಶೀಲರಾಗಿದ್ದಾರೆ. ಟಿಪ್ಪುವಿನ ಕಾಲದಲ್ಲಿ ಬ್ರಿಟಿಷರೊಂದಿಗೆ ಹೋರಾಡಿದ ಬಂಟ್ವಾಳದ ಸಾಧುರಿ ಬೇಹಾರಿಯನ್ನು ಕುರಿತು ವೀರಗಾಥೆಗಳಿವೆ. ಬ್ಯಾರಿಗಳ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ವಿಶೇಷ ಅಧ್ಯಯನವನ್ನು ಪಿ. ಸುಶೀಲ ಉಪಾಧ್ಯಾಯ, ಭಾಸ್ಕರಾನಂದ ಸಾಲೆತ್ತೂರು, ಬಿ. ಎಂ. ಇಚ್ಲಂಗೋಡು ಮುಂತಾದವರು ಕೈಗೊಂಡಿದ್ದು, ಇವರುಗಳ ಪ್ರಕಾರ ಸ್ಥಳೀಯ 'ಮಾಪ್ಲ' ಗಳಿಗಿಂತ 'ಬ್ಯಾರಿ' ಭಿನ್ನವೆಂದೂ ತುಳು ಹಾಗೂ ಕನ್ನಡಗಳೊಂದಿಗೆ ಹೆಚ್ಚಿನ ಸಂಬಂಧ ಹೊಂದಿದೆಯೆಂದೂ ತಿಳಿದುಬರುತ್ತದೆ. ಇಚ್ಲಂಗೋಡು ಅವರು ಕೇರಳದ ಮಾಪ್ಲ ತಾಬೀಸ್‌ಗಳಲ್ಲೂ, ಕೊಡಗಿನ ಜಾನಪದ ಹಾಡುಗಳು, ಕಥೆಗಳಲ್ಲಿಯೂ ಬ್ಯಾರಿ ಭಾಷಾ ಪ್ರಭಾವ ಗುರುತಿಸಿದ್ದಾರೆ. ಮೊಗ್ರಾಲ್ ಕುಂಞ ಪಕ್ಕಿ ಅವರು ಬರೆದು ತುಳು ಭಾಷೆಯ "ಓ ಬೇಲೆ" ಧಾಟಿಯ ಜನಪದ ಹಾಡಿನಲ್ಲಿ ಬ್ಯಾರಿ ಜಾನಪದದ ಹಿನ್ನೆಲೆಯಿದೆ. ಪುಸ್ತಕ ರೂಪದಲ್ಲಿ ಬ್ಯಾರಿ ಸಾಹಿತ್ಯ ಪ್ರಕಟವಾಗತೊಡಗಿದ್ದು, 'ದುನಿಯಾವು', 'ಮೆಲ್ತಿರಿ', 'ಕಮ್ಮನೆ' ಕವನ ಸಂಕಲನಗಳು; 'ಕಿನಾವು', 'ಪೆರ್ನಾಲ್', ಚೆಲ್ತೊನ್ನು ಚೇಲೊನ್ನು'– ಕಥಾ ಸಂಕಲನಗಳು, 'ಪೊಂಚಿರಿ'– 'ಗಾದೆಗಳ ಸಂಗ್ರಹ', 'ಮುತ್ತುಮಾಲೆ' ವೈಚಾರಿಕ ಗ್ರಂಥ ಹೊರ ಬಂದಿದೆ. ಎ. ವಹಾಬ್ ದೊಡ್ಡಮನೆಯವರು ಬ್ಯಾರಿ–ಇಂಗ್ಲಿಷ್–ಕನ್ನಡ ಅರ್ಥಕೋಶ ಹೊರತಂದಿದ್ದಾರೆ. ಜಿಲ್ಲೆಯ ಬ್ಯಾರಿ ಸಾಹಿತಿಗಳಲ್ಲಿ ಬಿ. ಎಂ. ಇದಿನಬ್ಬ, ಅಬೂ ರೈಹಾನ್ ನೂರಿ, ಇಬ್ರಾಹಿಮ್ ತಣ್ಣೀರುಭಾವಿ, ಬಿ. ಎ. ಮಹಮ್ಮದಾಲಿ, ಅಬ್ದುಲ್ ರಹೀಮ್ ಟೀಕೆ, ಎಂ. ಮಹಮದ್ ಮಾರಿಪಳ್ಳ, ಮಕ್ಸೂದ್ ಅಹಮದ್, ಮಹಮದ್ ಬಡ್ಡೂರು, ಯು.ಎ. ಕಾಸಿಮ್, ಉಳ್ಳಾಲ, ಹಾಜಿ ಅಬ್ದುಲ್ ಖಾದರ್ ಗೋಳ್ತಮಜಲ್. ಅಬ್ದುಲ್ ರೆಹ್ಮಾನ್ ಕುತ್ತೆತ್ತೂರು, ಅಬ್ದುಲ್ ಖಾದರ್ ಕುತ್ತೆತ್ತೂರು, ಶರೀಫ್ ನಿರ್ಮುಂಜೆ, ಖಾಲಿದ್ ತಣ್ಣೀರುಭಾವಿ, ಪಿ. ಹುಸೈನ್ ಕಾಟಿಪಳ್ಳ, ಎಂ. ಅಥಾವುಲ್ಲ ಜೋಕಟ್ಟೆ ರಹೀಂ ಉಚ್ಚಿಲ್ ಮುಂತಾದ ಸಾಹಿತಿಗಳನ್ನು ಬಿ. ಎಂ. ಇಚ್ಲಂಗೋಡು ಅವರು ಉದಾಹರಿಸುತ್ತಾರೆ. ಎಂ.ಎಸ್. ಇಬ್ರಾಹಿಂ ಅವರು ಬ್ಯಾರಿ ಭಾಷೆಯಲ್ಲಿ 'ಭಸ್ಮಾಸುರ–ಮೋಹಿನಿ ಯಕ್ಷಗಾನ' ಬರೆದಿದ್ದಾರೆ.

ಬ್ಯಾರಿ ಭಾಷೆಯಲ್ಲಿ ಪತ್ರಿಕೆಗಳು ಪ್ರಕಟವಾಗುತ್ತಿದ್ದು, ಬಶೀರ್ ಬೈಕಂಪಾಡಿಯವರ ಸಂಪಾದಕತ್ವದಲ್ಲಿ 'ಬ್ಯಾರಿ ವಾರ್ತೆ' ಪ್ರಕಟಗೊಳ್ಳುತ್ತಿದೆ. 'ಬ್ಯಾರಿ ಟೈಂಸ್' ಪತ್ರಿಕೆಯಲ್ಲಿ ಇಂಗ್ಲಿಷ್, ಕನ್ನಡ, ಬ್ಯಾರಿ ಮಿಶ್ರಿತ ಲೇಖನಗಳು ಕೂಡಿ ಬರುತ್ತಿದೆ. ಇವಲ್ಲದೆ ಇನ್ನೂ ಹಲವು ಪತ್ರಿಕೆಗಳು ಇರುವಂತೆ ತಿಳಿದುಬರುತ್ತದೆ. ಅವುಗಳಲ್ಲಿ ಮುಖ್ಯವಾಗಿ ಸನ್ಮಾರ್ಗ, ತವನಿಧಿ, ಅಲ್ ಅನ್ಸಾರ್, ಮೊಯಿಲಂಜಿ, ಪವಿತ್ರ ಸಂದೇಶ್, ಅಲ್ ಇಹ್‌ಸಾನ್, ಕಿತ್ತಳೆನಾಡು, ಇಶಾ ಪತ್ರಿಕೆ, ಪಯಸ್ವಿನಿ, ಇಸ್ಲಾಂ ಆ್ಯಂಡ್ ಸೈನ್ಸ್, ಇಸ್ಲಾಮಿಕ್ ಗೈಡೆನ್ಸ್‌ಗಳನ್ನು ಉದಾಹರಿಸಬಹುದು. ಮಂಗಳೂರಿನಲ್ಲಿ 'ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್' ನೋಂದಣಿಯಾಗಿದ್ದು, ಜನಾಬ್ ಅಬ್ದುಲ್ ರಹೀಮ್ ಟೀಕೆ ಸ್ಥಾಪಕ ಅಧ್ಯಕ್ಷರಾಗಿದ್ದರು. ಸಂಸ್ಥೆಯಿಂದ ಬ್ಯಾರಿ ಭಾಷೆಯ ಹಲವಾರು ಪುಸ್ತಕಗಳು, ಧ್ವನಿಸುರಳಿಗಳನ್ನು ಹೊರತರಲಾಗಿದೆ. ವಾಚನಾಲಯ, ಮಾಹಿತಿ ಕೇಂದ್ರಗಳನ್ನು ಹೊಂದಿದೆ. ಬೈಕಂಪಾಡಿಯಲ್ಲಿ 'ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ'ವಿದ್ದು ಬ್ಯಾರಿ ಜಾನಪದ ಹಾಗೂ ರಂಗಭೂಮಿಗಳ ಬಗ್ಗೆ ಆಸ್ತೆ ವಹಿಸಿದ್ದು, ವಾರ್ಷಿಕ ಸ್ಪರ್ಧೆಗಳು, ಬಹುಮಾನ ವಿತರಣೆ, ದೂರದರ್ಶನದಲ್ಲಿ ಕಾರ್ಯಕ್ರಮ ನೀಡುವಿಕೆ ಇತ್ಯಾದಿ ಚಟುವಟಿಕೆಗಳಲ್ಲಿ ನಿರತವಾಗಿದೆ. ಅಲ್ಲದೆ ಮಂಗಳೂರಿನಲ್ಲಿ 'ಮುಸ್ಲಿಂ ಲೇಖಕಿಯರ ಸಂಘ' ಹಾಗೂ 'ಮುಸ್ಲಿಂ ಲೇಖಕರ ಸಂಘ' ಸಹ ಇದೆ. ಲೇಖಕರ ಸಂಘಕ್ಕೆ ಹೊರ ಜಿಲ್ಲೆಯವರೂ ಸದಸ್ಯರಾಗಿದ್ದಾರೆ. ಬ್ಯಾರಿ ಸಂಘಟನೆಗಳು ಹೊರತಂದ 'ಪಿರ್ಸ', 'ಮಂಚಿಲ' ಎಂಬ ನಾಟಕಗಳು 'ಸಂದೋಲ', 'ಉಂಜಾಲ್' ಎಂಬ ಬ್ಯಾರಿ ಹಾಡುಗಳ ಧ್ವನಿ ಸುರಳಿಗಳು ಜನಪ್ರಿಯವಾಗಿವೆ. ೧೯೯೮ರಲ್ಲಿ ಬಿ. ಎಂ. ಇದಿನಬ್ಬ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ 'ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನ' ಹಾಗೂ ೧೯೯೯ರಲ್ಲಿ ಅಬ್ದುಲ್ ಖಾದಿರ್ ಹಾಜಿ ಅವರ ಅಧ್ಯಕ್ಷತೆಯಲ್ಲಿ ಬಂಟ್ವಾಳದಲ್ಲಿ 'ದ್ವಿತೀಯ

ಬ್ಯಾರಿ ಸಾಹಿತ್ಯ ಸಮ್ಮೇಳನ' ಅರ್ಥಪೂರ್ಣವಾಗಿ ನೆರವೇರಿತು. ಜಿಲ್ಲೆಯ ಹೈದರ್ ಅವರು ೧೯೧೯ರಲ್ಲಿಯೇ 'ಅಂತರಂಗ' ಪತ್ರಿಕೆಯಲ್ಲಿ ಬರೆಯುತ್ತಿದ್ದು, ೧೯೩೭ರಲ್ಲಿ ಪ್ರಥಮವಾಗಿ ಕುಂಬಳೆಯಿಂದ 'ಜ್ಯೋತಿ' ಎಂಬ ಪತ್ರಿಕೆ ಆರಂಭಿಸಿದರು. ೧೯೫೩ರಲ್ಲಿ ಅಬ್ದುಲ್ ರಹೀಮ್ 'ಹಂದರ್ದ್'; ೧೯೪೭ರಲ್ಲಿ ಒಡೆಯರ್ ಅವರ 'ಉದಯ ಚಂದ್ರ'; ಸಿ.ಕೆ. ಹುಸೇನ್‌ರ 'ದಿವ್ಯವಾಣಿ'; ವಹ್ಹಾಬ್‌ರವರ 'ಅಪ್ಸರಾ'; ಶಾಫಿ ಅವರ 'ಹಿಲಾಲ್'; ಎಂ. ಎ. ರಹೀಂ ಅವರ 'ಅಮಾನತ್'; ಎಂ. ಜಿ. ಹುಸೇನ್ ಅವರ 'ಅಗ್ನಿ'; ಮೊಹಿಸಿನ್ ಹಾಜಿ ಕಾಸಿಂ 'ನವನೀತ' (ಕಾಪು) ಇನ್ನಿತರ ಪತ್ರಿಕೆಗಳಾಗಿದ್ದು ಬಹುತೇಕ ಸ್ಥಗಿತವಾಗಿವೆ.

**ಕನ್ನಡ ಸಾಹಿತ್ಯ ಸಮ್ಮೇಳನಗಳು**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರೆಗೆ ಐದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಜರುಗಿವೆ. ೧೯೨೭ರಲ್ಲಿ ಮಂಗಳೂರಿನಲ್ಲಿ ಆರ್. ತಾತಾಚಾರ್ ಅವರ ಅಧ್ಯಕ್ಷತೆಯಲ್ಲಿ ೧೩ನೆಯ, ಕಾಸರಗೋಡಿನಲ್ಲಿ ತಿರುಮಲೆ ತಾತಾಚಾರ್ಯಶರ್ಮರ ಅಧ್ಯಕ್ಷತೆಯಲ್ಲಿ ೧೯೪೮ರಲ್ಲಿ ೩೧ನೆಯ, ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದಲ್ಲಿ ೧೯೭೯ರಲ್ಲಿ ೫೧ನೆಯ; ೧೯೯೭ರಲ್ಲಿ ಮಂಗಳೂರಿನಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರ ಅಧ್ಯಕ್ಷತೆಯಲ್ಲಿ ೬೬ನೆಯ ಹಾಗೂ ೨೦೦೩ರಲ್ಲಿ ಮೂಡಬಿದಿರೆಯಲ್ಲಿ ಕಮಲ ಹಂಪನಾ ಅವರ ಅಧ್ಯಕ್ಷತೆಯಲ್ಲಿ ೭೧ನೆಯ ಸಮ್ಮೇಳನಗಳು ಜರುಗಿದವು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲೆ ಹಾಗೂ ತಾಲೂಕು ವ್ಯಾಪ್ತಿಯಲ್ಲಿಯೂ ಕಾರ್ಯಕ್ರಮ ಆಲೋಚಿಸಿದ್ದು ೧೯೭೧ ರಿಂದ ಜಿಲ್ಲಾ ಹಾಗೂ ತಾಲೂಕು ಸಮ್ಮೇಳನಗಳೂ ನಡೆಯುತ್ತಿವೆ. ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ ೧೯೮೫ರಲ್ಲಿ ಕಯ್ಯಾರ ಕಿಞ್ಞಣ್ಣ ರೈ, ೧೯೮೭ರಲ್ಲಿ ಮುಲ್ಕಿಯಲ್ಲಿ ಪಾ.ವೆಂ. ಆಚಾರ್ಯ, ೧೯೮೮ರಲ್ಲಿ ಮೂಡಬಿದಿರೆಯಲ್ಲಿ ಶಿವರಾಮ ಕಾರಂತ, ೧೯೯೨ರಲ್ಲಿ ಪುತ್ತೂರಿನಲ್ಲಿ ಕು.ಶಿ. ಹರಿದಾಸಭಟ್, ೧೯೯೪ ರಲ್ಲಿ ಸುಳ್ಯದಲ್ಲಿ ಕೆ. ಕುಶಾಲಪ್ಪಗೌಡರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮ್ಮೇಳನಗಳು ನಡೆದವು,

ತಾಲೂಕು ಸಮ್ಮೇಳನಗಳು ಬಂಟ್ವಾಳ ತಾಲೂಕಿನಲ್ಲಿ ೧೯೯೨ರಲ್ಲಿ ಬಂಟ್ವಾಳದ ನರಹರಿ ಪರ್ವತ ಪ್ರದೇಶದಲ್ಲಿ ಪಾಡಾರು ಮಹಾಬಲೇಶ್ವರ ಭಟ್ ಹಾಗೂ ೧೯೯೪ರಲ್ಲಿ ಬಂಟ್ವಾಳದಲ್ಲಿ ಏರ್ಯ ಲಕ್ಷ್ಮೀನಾರಾಯಣ ಆಳ್ವ, ೧೯೯೫ರಲ್ಲಿ ಅದೇ ಪ್ರದೇಶದಲ್ಲಿ ನೀರ್ಪಾಜೆ ಭೀಮ ಭಟ್, ೧೯೯೪ರಲ್ಲಿ ವಿಟ್ಲದಲ್ಲಿ ಶಿರಂಕಲ್ಲು ಈಶ್ವರ ಭಟ್, ೧೯೯೭ರಲ್ಲಿ ಕಾರಂಜದಲ್ಲಿ ಗಣಪತಿ ದಿವಾಣ; ಮಂಗಳೂರು ತಾಲೂಕಿನಲ್ಲಿ, ೧೯೯೩ರಲ್ಲಿ ಕಿನ್ನಿಗೋಳಿಯಲ್ಲಿ ಹೊಸಬೆಟ್ಟು ಸೀತಾರಾಮ ಆಚಾರ್ಯ, ೧೯೯೪ರಲ್ಲಿ ಸುರತ್ಕಲ್‌ನಲ್ಲಿ ಚ. ರಾಮಚಂದ್ರ ಉಚ್ಚಿಲ್, ೧೯೯೫ರಲ್ಲಿ ಪಾವಂಜೆಯಲ್ಲಿ ರಾ.ಮೊ. ವಿಶ್ವಾಮಿತ್ರ ೧೯೯೬ರಲ್ಲಿ ಕಾಟಿಪಳ್ಳದಲ್ಲಿ ಮಂದಾರ ಕೇಶವಭಟ್, ೧೯೯೬ರಲ್ಲಿ ಪಣಂಬೂರಿನಲ್ಲಿ ಸೀತಾರಾಮಾಚಾರ್ಯ ಹೊಸಬೆಟ್ಟು; ಪುತ್ತೂರು ತಾಲೂಕಿನಲ್ಲಿ ೧೯೯೪ರಲ್ಲಿ ಪುತ್ತೂರಿನಲ್ಲಿ ಕೆದಂಬಾಡಿ ಜತ್ತಪ್ಪರೈ, ೧೯೯೫ರಲ್ಲಿ ಪುತ್ತೂರಿನಲ್ಲಿ ತಾಳ್ತಜೆ ಕೃಷ್ಣಭಟ್, ೧೯೯೬ರಲ್ಲಿ ಪಾಣಾಜೆಯಲ್ಲಿ ಬೋಳಂತಕೋಡಿ ಈಶ್ವರ ಭಟ್, ೧೯೯೭ರಲ್ಲಿ ಸವಣೂರಿನಲ್ಲಿ ಲೀಲಾಭಟ್ ಹಾಗೂ ಅದೇ ವರ್ಷ ಕಡಬದಲ್ಲಿ ವಿ.ಬಿ. ಮೊಳೆಯಾರ; ಸುಳ್ಯ ತಾಲೂಕಿನಲ್ಲಿ ೧೯೯೨ರಲ್ಲಿ ಸುಬ್ರಹ್ಮಣ್ಯದಲ್ಲಿ ಸುಬ್ರಾಯ ಚೊಕ್ಕಾಡಿ, ೧೯೯೫ರಲ್ಲಿ ಸಂಪಾಜೆಯಲ್ಲಿ ಕೆ. ಸಚ್ಚಿದಾನಂದಯ್ಯ, ೧೯೯೬ರಲ್ಲಿ ಚಾಲ್ನೂರಿನಲ್ಲಿ ಜಯಮ್ಮ ಬ. ಚೆಟ್ಟಿಮೂಡ, ೧೯೯೭ರಲ್ಲಿ ಆರಂತೋಡುವಿನಲ್ಲಿ ಟಿ. ಜಿ. ಮೂಡೂರು; ಬೆಳ್ತಂಗಡಿ ತಾಲೂಕಿನಲ್ಲಿ ೧೯೯೪ರಲ್ಲಿ ಉಜಿರೆಯಲ್ಲಿ ಕೆ. ಟಿ. ಗಟ್ಟಿ, ೧೯೯೫ರಲ್ಲಿ ಬೆಳ್ತಂಗಡಿಯಲ್ಲಿ ಕೆ. ಎನ್. ಭಟ್ ಶಿರಾಡಿಪಾಲ್, ಅದೇ ಸ್ಥಳದಲ್ಲಿ ೧೯೯೬ರಲ್ಲಿ ಟಿ. ರಾಘುಚಂದ್ರಶೆಟ್ಟಿ, ೧೯೯೭ರಲ್ಲಿ ಮಡ್ಯಂತಾರುವಿನಲ್ಲಿ ಕ. ಪು. ಸೀತಾರಾಮ ಕೆದಿಲಾಯ ಶಿಶಿಲ ಅವರುಗಳ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನಗಳು ನಡೆದವು. ದಕ್ಷಿಣ ಜಿಲ್ಲಾ ಸಾಹಿತ್ಯ ಪರಿಷತ್ತು ಅಮೃತ ಮಹೋತ್ಸವವನ್ನು ೧೯೯೦ರಲ್ಲಿ ಕಟೀಲಿನಲ್ಲಿ ನಡೆಸಲಾಯಿತು.

ಪ್ರತಿ ಸಮ್ಮೇಳನಗಳಿಗೂ ವೈಶಿಷ್ಟ್ಯಪೂರ್ಣವಾದ, ಉಪಯುಕ್ತ ಲೇಖನಗಳಿಂದ ಕೂಡಿದ ಸ್ಮರಣ ಸಂಚಿಕೆಗಳನ್ನು ಹೊರತರಲಾಗಿದೆ. ಅಲ್ಲದೆ ಸ್ಥಳೀಯವಾಗಿ ಸಾಹಿತ್ಯ ಸಂಸ್ಕೃತಿಗಳಲ್ಲಿ ತೊಡಗಿಸಿಕೊಂಡ ಅನೇಕರಿಗೆ ಸನ್ಮಾನಗಳನ್ನು ಮಾಡಲಾಗಿದೆ. ಮೂಲ್ಕಿಯವರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಒಂದು ಅವಧಿಗೆ ಸೇವೆ ಸಲ್ಲಿಸಿದ್ದು, ಅವರ ಅಧಿಕಾರಾವಧಿಯಲ್ಲಿ ರಾಜ್ಯಾದ್ಯಂತ ಅನೇಕ ಕಾರ್ಯಕ್ರಮಗಳು ನಡೆದವಲ್ಲದೆ ನೂರಾರು ಪುಸ್ತಕಗಳು ಪ್ರಕಟವಾಗಿ, ಕಡಿಮೆ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ದೊರೆಯುವಂತಾಯಿತು. ಶ್ರೀಯುತರ ಅವಧಿಯಲ್ಲಿ ಪರಿಷತ್ತಿನ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಣೆ ಹೊಂದಿತ್ತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕಲೆ–ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾಧಕರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡುವ ಅನೇಕ ಸಂಘ ಸಂಸ್ಥೆಗಳಿವೆ. ಬಹಳಷ್ಟು ಸಾಹಿತಿಗಳು ತಾವೇ ಸ್ವತಃ ಇಲ್ಲವೆ ಅವರ ವಂಶಸ್ಥರು ಪ್ರಶಸ್ತಿಗಳನ್ನು ಇರಿಸಿರುವುದುಂಟು, ಮೂಡಬಿದಿರೆಯ ವರ್ಧಮಾನ ಪ್ರಶಸ್ತಿ, ಸಂದೇಶ ಪ್ರಶಸ್ತಿಯಲ್ಲದೆ ನಿರತ ಸಾಹಿತ್ಯ ಪ್ರಶಸ್ತಿ, ಸಾಹಿತಿಗಳಾದ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಸೇಡಿಯಾಪು ಕೃಷ್ಣ ಭಟ್, ಮುಳಿಯ ತಿಮ್ಮಪ್ಪಯ್ಯ, ಬೇಕಲ್ ವಸಂತ ನಾಯ್ಕ, ಪೊಳಲಿ ಶೀನಪ್ಪ ಹೆಗ್ಡೆ ಪರಮೇಶ್ವರ ಭಟ್, ನಿರಂಜನ, ಕಡೆಂಗೋಡ್ಲು, ಕಿಲ್ಲೆ, ಎಂ.ಎ.ಇನಾಂದಾರ್, ಮಾತೋಶ್ರೀ ರತ್ನಮ್ಮ ಹೆಗ್ಗಡೆ, ಮುಂತಾದ ಸಾಹಿತಿಗಳ ಹೆಸರಿನಲ್ಲಿಯೂ ಧರ್ಮಸ್ಥಳದ ರತ್ನವರ್ಮ ಹೆಗ್ಗಡೆ ಅವರ ಹೆಸರಿನಲ್ಲಿ ತುಳುನಾಟಕಗಳಿಗಾಗಿಯೂ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಅಲ್ಲದೆ ತಾಲೂಕು, ಜಿಲ್ಲೆ, ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿ, ಉತ್ಸವಗಳಲ್ಲಿ ವಿದ್ವಾಂಸರನ್ನು ಗೌರವಿಸಲಾಗುತ್ತದೆ. ಅಕಾಡಮಿಗಳು ವಾರ್ಷಿಕ ಗೌರವ ಪ್ರಶಸ್ತಿ ನೀಡುತ್ತಿವೆ.

## ಜನಪದ

### ಯಕ್ಷಗಾನ

ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಒಂದು ಪ್ರದರ್ಶನ ಕಲೆಯಾಗಿ ಯಕ್ಷಗಾನಕ್ಕೆ ಪ್ರಮುಖ ಸ್ಥಾನವಿದೆ. ಇದಕ್ಕೆ ಸಾದೃಶ್ಯವಿರುವ ಆಂಧ್ರಪ್ರದೇಶದ ಕೂಚಿಪುಡಿ ಮತ್ತು ಬೀದಿನಾಟಕ, ತಮಿಳು ನಾಡಿನ ತೆರುಕೂತ್ತು ಮತ್ತು ಭಾಗವತಮೇಳ, ಕೇರಳದ ಕೃಷ್ಣನಾಟಂ, ಕೂಡಿಯಾಟ್ಟಂ ಮತ್ತು ಕಥಕ್ಕಳಿ ಮುಂತಾದುವು ಯಕ್ಷಗಾನದ ಸೋದರ ಕಲೆಗಳಾಗಿ ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿವೆ. ಕರ್ನಾಟಕದ ಯಕ್ಷಗಾನದಲ್ಲಿಯೂ ಮೂಡಲಪಾಯ ಮತ್ತು ಪಡುವಲಪಾಯ, ಸಣ್ಣಾಟ–ದೊಡ್ಡಾಟ, ಕೃಷ್ಣಪಾರಿಜಾತ, ದಾಸರಾಟ ಇತ್ಯಾದಿ ಮುಖ್ಯ ಪ್ರಭೇದಗಳಿವೆ. ಪಶ್ಚಿಮ ಕರಾವಳಿ ತೀರದಲ್ಲಿ ಪ್ರಚಲಿತವಿರುವುದು ಪಡುವಲಪಾಯವೆಂದು ಗುರುತಿಸಲಾಗಿದೆ. ಇದರಲ್ಲಿಯೂ ಕಾಸರಗೋಡನ್ನು ಒಳಗೊಂಡಂತೆ ದಕ್ಷಿಣ ಕನ್ನಡದಲ್ಲಿ 'ತೆಂಕುತಿಟ್ಟು' ಹಾಗೂ ಉಡುಪಿ ಜಿಲ್ಲೆಯಲ್ಲಿ 'ಬಡಗುತಿಟ್ಟು' ಎಂಬ ಪ್ರಭೇದಗಳು ಪ್ರಚಲಿತವಾಗಿವೆ. ಈ ಎರಡು ಯಕ್ಷಗಾನ ಕಲಾಸಂಪ್ರದಾಯಗಳಲ್ಲಿ ಕೆಲವೊಂದು ಹೋಲಿಕೆಗಳಿದ್ದರೂ ಸಾಕಷ್ಟು ವ್ಯತ್ಯಾಸಗಳಿದ್ದು ತಮ್ಮದೇ ಆದ ಅನನ್ಯತೆಯನ್ನು ಹೊಂದಿವೆ.

ಹಳೆಗನ್ನಡ ಕಾವ್ಯಗಳಾದ ನಾಗವರ್ಮನ ಮಲ್ಲಿನಾಥಪುರಾಣ ಹಾಗೂ ಅಗ್ಗಳ ರಚಿಸಿದ ಚಂದ್ರಪ್ರಭ ಪುರಾಣಗಳಲ್ಲಿ 'ಎಕ್ಕಲಗಾಣ' ಎಂಬ ಕಲಾಪ್ರಕಾರದ ಕುರಿತು ಹೇಳಿದ್ದು, ಈ ಪದದಿಂದಲೇ ಯಕ್ಷಗಾನ ಎಂಬ ಹೆಸರು ಬಂದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಪೌರಾಣಿಕ ಕಥಾನಕಗಳನ್ನೇ ಬೇಸಗೆ ಕಾಲದಲ್ಲಿ ಗದ್ದೆ–ಬಯಲುಗಳಲ್ಲಿ ವೇದಿಕೆ ನಿರ್ಮಿಸಿ ಪ್ರದರ್ಶಿಸುತ್ತಿದ್ದುದರಿಂದ ಇದನ್ನು ದಶಾವತಾರ ಆಟ ಹಾಗೂ ಬಯಲಾಟವೆಂಬುದಾಗಿ ರೂಢಿಯಲ್ಲಿ ಕರೆಯುತ್ತಿದ್ದುದೂ ಇದೆ. ಇದಲ್ಲದೆ ಮಳೆಗಾಲದಲ್ಲಿ ವೇಷಭೂಷಣ ನೃತ್ಯಗಳಿಲ್ಲದೆ ಕೇವಲ ಹಿಮ್ಮೇಳ ಮತ್ತು ಅರ್ಥ ನಿರೂಪಣೆಯ ಪ್ರದರ್ಶನ ಹೊಂದಿರುವ 'ತಾಳಮದ್ದಲೆ' ಎಂಬ ಪ್ರಕಾರವೂ ಇದೆ. ಯಕ್ಷಗಾನದ ಗೊಂಬೆಯಾಟ ಪ್ರದರ್ಶನಗಳೂ ಕಳೆದ ಶತಮಾನದಲ್ಲಿ ಬೆಳೆದು ಬಂದಿವೆ.

ಯಕ್ಷಗಾನವು ಮನೋರಂಜನೆಯೇ ಪ್ರಧಾನವಾಗಿ ಉಳ್ಳ ಕಲೆಯಾಗಿರುವುದಾದರೂ ಅದರಲ್ಲಿ ಆರಾಧನೆಯ ಅಂಶವೂ ಸೇರಿದೆ. ಈ ಕಲೆಯು ದೇವಾಲಯದ ಕಲೆಯಾಗಿ ಬೆಳೆದು ಬಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ದೇವಸ್ಥಾನದ ಹೆಸರುಗಳಲ್ಲಿ ದೇವಸ್ಥಾನಗಳಿಂದಲೇ ಯಕ್ಷಗಾನ ಮೇಳಗಳು ಸೇವೆಯಾಟ ಆಡಿ ತಿರುಗಾಟಕ್ಕೆ ಹೊರಡುತ್ತವೆ. ತಿರುಗಾಟದ ಕೊನೆಯಲ್ಲಿ ಪುನಃ ಆಯಾ ದೇವಸ್ಥಾನಗಳಲ್ಲಿ ಸೇವೆಯಾಟವಾಡಿ ಆ ವರ್ಷದ ಕಲಾಸೇವೆಯನ್ನು ಕೊನೆಗೊಳಿಸುತ್ತವೆ. ದೇವರ ಸೇವೆಯೆಂದು ಜನರು ಹರಕೆಯ ಆಟಗಳನ್ನಾಡಿಸುತ್ತಾರೆ. ಪೌರಾಣಿಕ ಕತೆಗಳ ಪ್ರದರ್ಶನ, ಮೇಳದ ದೇವರು, ಮೇಳದ ಡೇರೆಯಲ್ಲಿ ಚೌಕಿಪೂಜೆ, ಪ್ರಸಾದ ವಿತರಣೆ, ರಂಗಸ್ಥಳದಲ್ಲಿ ಪೂರ್ವರಂಗದ ದೇವತಾಸ್ತುತಿ, ಪ್ರದರ್ಶನದ ಕೊನೆಗೆ ರಂಗಸ್ಥಳದಲ್ಲಿ ಆರತಿ ಹಾಗೂ ಚೌಕಿಯಲ್ಲಿ ಮಂಗಳಾರತಿ ಇತ್ಯಾದಿಗಳು ಯಕ್ಷಗಾನದಲ್ಲಿ ದೈವಾರಾಧನೆ ಇರುವುದರ ಸೂಚಕಗಳಾಗಿವೆ.

ಯಕ್ಷಗಾನವೆಂಬುದು ನಾಟ್ಯ, ಅಭಿನಯ, ಮುಖವರ್ಣಿಕೆ, ವೇಷಭೂಷಣ, ಸಂಭಾಷಣೆ ಇತ್ಯಾದಿಗಳು ಹಿತಮಿತವಾಗಿ ಬೆಸೆದುಕೊಂಡ ಸಂಕೀರ್ಣ ಕಲೆ. ಪೌರಾಣಿಕ ಕಥೆಯನ್ನಾಧರಿಸಿದ ವಿವಿಧ ರಾಗ–ತಾಳಗಳಲ್ಲಿ ಬರೆದ ಪದ್ಯಗಳುಳ್ಳ ಪ್ರಸಂಗಪಠ್ಯವೇ ಯಕ್ಷಗಾನದ ಮೂಲ ದ್ರವ್ಯ. ಇದನ್ನು ಜನರ ಮುಂದೆ ಪ್ರದರ್ಶನ ಮಾಡುವಲ್ಲಿ ಹಾಡುಗಾರಿಕೆ ಚೆಂಡೆ–ಮದ್ದಲೆಗಳ ಹಿಮ್ಮೇಳಕ್ಕೆ ಅನುಗುಣವಾಗಿ ರಂಗಸ್ಥಳದಲ್ಲಿ ಪಾತ್ರೋಚಿತವಾದ ಮುಖವರ್ಣಿಕೆ ಹಾಗೂ ವೇಷಭೂಷಣಗಳನ್ನು ಧರಿಸಿದ ಕಲಾವಿದರು ನೃತ್ಯಾಭಿನಯವನ್ನು ಮಾಡಿ ಆಶುಸಂಭಾಷಣೆಯ ಮೂಲಕ ಕಥೆಯನ್ನು ವಿವಿಧ ದೃಶ್ಯಗಳೊಂದಿಗೆ ಮುನ್ನಡೆಸುತ್ತಾರೆ. ಅಂದರೆ ಯಕ್ಷಗಾನದಲ್ಲಿ ರಾಗ–ತಾಳ–ಲಯಬದ್ಧವಾದ ಸಂಗೀತವಿದೆ,

ಛಂದೋಬದ್ಧವಾದ ಸಾಹಿತ್ಯವಿದೆ; ಚಿತ್ರಕಲಾ ನೈಪುಣ್ಯತೆಯ ಮುಖವರ್ಣಿಕೆ ಇದೆ; ವೈಶಿಷ್ಟ್ಯಪೂರ್ಣವಾದ ವೇಷ ಭೂಷಣಗಳಿವೆ; ತನ್ನದೇ ಅನನ್ಯತೆಯುಳ್ಳ ನಾಟ್ಯ ಪ್ರಕಾರವಿದೆ. ಎಲ್ಲಕ್ಕಿಂತ ಮಿಗಿಲಾಗಿ ಸಾಮಾನ್ಯವಾಗಿ ಶಾಸ್ತ್ರೀಯ ಎನ್ನುವ ಯಾವ ಕಲೆಯಲ್ಲಿಯೂ ಕಂಡುಬಾರದ ಅರ್ಥಗಾರಿಕೆ ಇದೆ. ಅಂದರೆ ಪಾತ್ರಧಾರಿಯು ತಾನೇ ಪಾತ್ರವಾಗಿ ಪ್ರತ್ಯುತ್ಪನ್ನಮತಿಯಿಂದ ರಂಗಸ್ಥಳದಲ್ಲೇ ಸೃಷ್ಟಿಸುವ ಸಂವಾದವೇ ಅರ್ಥಗಾರಿಕೆ.

ಯಕ್ಷಗಾನವು ರಾತ್ರಿಇಡೀ ಪ್ರದರ್ಶನಗೊಳ್ಳುವ ಕಲೆಯಾಗಿ ಎಂದಿನಿಂದ ಬೆಳೆದು ಬಂದಿತೆಂಬ ಬಗ್ಗೆ ನಿಖರ ಆಧಾರಗಳಿಲ್ಲ. ಮೂಲದಲ್ಲಿ ಇದು ಸಹ ಕಿರು ಪ್ರದರ್ಶನಗಳ ಪ್ರಕಾರವಾಗಿದ್ದು, ಮತ್ತೆ ಕಾಲಾನುಕ್ರಮದಲ್ಲಿ ಬೆಳಗಿನ ತನಕ ಪ್ರಸಂಗವಿಸ್ತಾರವನ್ನು ಪಡೆಯಿತೇ ಎಂಬ ಬಗ್ಗೆಯೂ ಹೆಚ್ಚಿನ ಚರ್ಚೆ ನಡೆದಂತಿಲ್ಲ. ಅಂದರೆ ಸದ್ಯ ತಿಳಿದಿರುವ ಯಕ್ಷಗಾನದ ಇತಿಹಾಸದಲ್ಲಿ ಅದು ರಾತ್ರಿ ಸುಮಾರು ಒಂಬತ್ತು ಗಂಟೆಗೆ ಆರಂಭವಾದರೆ ಬೆಳಗಾಗುವ ತನಕವೂ ಜರಗುತ್ತಿತ್ತೆಂದು ವರ್ಣಿಸಲಾಗಿದೆ. ಪ್ರಾಯಶಃ ಯಾವುದೇ ಶಾಸ್ತ್ರೀಯ ಕಲೆ ಇಷ್ಟೊಂದು ದೀರ್ಘಕಾಲ ಪ್ರದರ್ಶನಗೊಳ್ಳುವ ಪದ್ಧತಿ ಇಲ್ಲ. ಕೇರಳದಲ್ಲಿ ಕಥಕ್ಕಳಿ ಪ್ರದರ್ಶನವು ಇಡೀರಾತ್ರಿ ನಡೆದರೂ ಅದರಲ್ಲಿ ನೃತ್ಯಾಭಿನಯಗಳಿವೆಯಷ್ಟೇ ಹೊರತು ಅರ್ಥಗಾರಿಕೆ ಇಲ್ಲ. ಆದರೆ ಯಕ್ಷಗಾನದ ರಂಗಸ್ಥಳದಲ್ಲಿ ಭಾಗವತರ ಹಾಡನ್ನಾಧರಿಸಿ ಪಾತ್ರಗಳ ಮಧ್ಯೆ ಆಶು ಸಂಭಾಷಣೆ ನಡೆಯುತ್ತದೆ. ಹೀಗಾಗಿ ಇದು ನಿರಕ್ಷರಕುಕ್ಷಿಗಳಿಗೂ ತಲುಪುವ ಒಂದು ಸಮರ್ಥ ಕಲಾ ಪ್ರಕಾರವಾಗಿ ಬೆಳೆದು ಬಂತು.

ಯಕ್ಷಗಾನ ಪ್ರದರ್ಶನದಲ್ಲಿ ಮುಮ್ಮೇಳ ಮತ್ತು ಹಿಮ್ಮೇಳಗಳ ಸಾಂಗತ್ಯವು ಬಹುಮುಖ್ಯವಾದುದು. ಪ್ರಸಂಗದ ಪದ್ಯಗಳನ್ನು ಸನ್ನಿವೇಶಕ್ಕೆ ಸೂಕ್ತವಾದ ರಾಗ–ತಾಳದೊಂದಿಗೆ ಹಾಡುವ ಭಾಗವತರು ಇಡೀ ಪ್ರದರ್ಶನದ ಸೂತ್ರಧಾರರು. ಅವರೇ ರಂಗಸ್ಥಳದ ನಿರ್ದೇಶಕರು. ಹಿಮ್ಮೇಳದಲ್ಲಿ ಅವರೊಂದಿಗೆ ಚಂಡೆವಾದಕರು, ಮದ್ದಳೆವಾದಕರು ಹಾಗೂ ಚಕ್ರತಾಳ ಬಾರಿಸುವವರು ಸಹಕಲಾವಿದರಾಗಿರುತ್ತಾರೆ. ಭಾಗವತರ ಹಾಡಿಗೆ ಶ್ರುತಿಯ ತಳಹದಿ ನೀಡಲು ಹಾರ್ಮೋನಿಯಂ ಬಾರಿಸುವವರೂ ಬೇಕಾಗುತ್ತಾರೆ. ಇತ್ತೀಚೆಗೆ ಇಲೆಕ್ಟ್ರೋನಿಕ್ ಶ್ರುತಿ ಪೆಟ್ಟಿಗೆಯನ್ನು ಉಪಯೋಗಿಸುವ ಭಾಗವತರೂ ಇದ್ದಾರೆ. ಹಿಮ್ಮೇಳದ ಗಾನ–ವಾದನಕ್ಕೆ ಅನುಗುಣವಾಗಿ ಮುಮ್ಮೇಳದಲ್ಲಿ ವೇಷಧಾರಿಗಳು ನೃತ್ಯಾಭಿನಯ ಹಾಗೂ ಸಂಭಾಷಣೆಯ ಮೂಲಕ ಕಥೆಯನ್ನು ಪ್ರಸ್ತುತಪಡಿಸುತ್ತಾರೆ.

ಮುಖವರ್ಣಿಕೆ ಹಾಗೂ ವೇಷಭೂಷಣಗಳೊಂದಿಗೆ ನೃತ್ಯಾಭಿನಯ ಮತ್ತು ಆಶು ಸಂಭಾಷಣೆಯ ಮೂಲಕ ಪಾತ್ರ ನಿರ್ವಹಿಸುವವರೆಲ್ಲ ಮುಮ್ಮೇಳದ ಕಲಾವಿದರಾಗಿ ಗುರುತಿಸಲ್ಪಡುತ್ತಾರೆ. ಪ್ರದರ್ಶನದ ಕಥಾನಕಗಳು ಪೌರಾಣಿಕವಾದುದರಿಂದ ರಂಗಸ್ಥಳದಲ್ಲಿ ಭ್ರಮಾದ್ಭುತ ಲೋಕವನ್ನು ಸೃಷ್ಟಿಸುವ ಪುರಾಣದ ಪಾತ್ರಗಳು ರಂಜಿಸುತ್ತವೆ. ತೆಂಕುತಿಟ್ಟು ಯಕ್ಷಗಾನದಲ್ಲಿ ಚೆಂಡೆಯ ಅಬ್ಬರ, ಗಿರಿಕಿ ಹಾಕುವ ಗುತ್ತುಗಳು, ಸಂಕೀರ್ಣ ಮುಖವರ್ಣಿಕೆಯ ರಾಕ್ಷಸ ಪಾತ್ರಗಳ ರೌದ್ರ–ಭೀಕರತೆಗಳು ವಿಶಿಷ್ಟವೆನ್ನಿಸುತ್ತವೆ. ಆದರೆ ಬಡಗುತಿಟ್ಟಿನಲ್ಲಿ ಮದ್ದಲೆಯ ಸ್ಪಷ್ಟನುಡಿತ, ಹಿತವಾದ ಚೆಂಡೆ ಹಾಗೂ ಸರಳಮುಖವರ್ಣಿಕೆಯ ಕಸೆವೇಷಗಳ ನೃತ್ಯಾಭಿನಯ ಪ್ರೌಢಿಮೆಯು ಆಕರ್ಷಕವೆನಿಸುತ್ತದೆ. ಯಕ್ಷಗಾನದ ತಿಟ್ಟು–ಭೇದಗಳ ಬಗ್ಗೆ ಸಮದರ್ಶಿತ್ವವಿದ್ದವರಿಗೆ ಎಲ್ಲಾ ಪ್ರಕಾರದ ಪ್ರದರ್ಶನಗಳು ಗ್ರಾಹ್ಯವೆನಿಸುತ್ತವೆ.

ತೆಂಕುತಿಟ್ಟಿನ ಯಕ್ಷಗಾನದಲ್ಲಿ ಕೋಲುಕಿರೀಟ, ಪಕಡಿವೇಷ, ಬಣ್ಣದ ವೇಷ, ಹೆಣ್ಣುಬಣ್ಣ, ಸ್ತ್ರೀವೇಷ, ತುರಾಯಿ ಕಟ್ಟಿದವೇಷ, ಬಿಟ್ಟಮಂಡೆ (ಅಂದರೆ ಕಿರೀಟ ಧರಿಸದ ರಾಕ್ಷಸಪಾತ್ರಗಳು), ಹಾಸ್ಯವೇಷಗಳು ಹೀಗೆ ವಿವಿಧ ಪ್ರಕಾರದ ವೇಷಗಾರಿಕೆ ಇದೆ. ಪಾತ್ರಧಾರಿಯ ಆಳಂಗ, ಮಾತಿನಪ್ರೌಢಿಮೆ, ನಾಟ್ಯಾಭಿನಯದ ಸಾಮರ್ಥ್ಯ ಹಾಗೂ ರಂಗಸ್ಥಳದ ಅನುಭವದ ಆಧಾರದಲ್ಲಿ ಸೂಕ್ತವಾದ ಪಾತ್ರವನ್ನು ಭಾಗವತರು ನೀಡುತ್ತಾರೆ. ಶ್ರೀರಾಮ, ದೇವೇಂದ್ರ, ಅರ್ಜುನ, ಕರ್ಣ, ಅತಿಕಾಯ, ಇಂದ್ರಜಿತು, ಕಾರ್ತವೀರ್ಯ ಮುಂತಾದ ಪಾತ್ರಗಳು ರಂಗಸ್ಥಳದಲ್ಲಿ ಕೋಲು ಕಿರೀಟ ಧರಿಸಿದ ರಾಜವೇಷಗಳೆಂಬುದಾಗಿ ಗುರುತಿಸಲ್ಪಡುತ್ತವೆ. ಇನ್ನು ಅಭಿಮನ್ಯು, ಶ್ರೀಕೃಷ್ಣ, ಬಭ್ರುವಾಹನ, ದೇವತೆಗಳ ಬಲಗಳು ಇತ್ಯಾದಿ ಯುವ ಪಾತ್ರಗಳಿಗೆ ಪಕಡಿವೇಷ ಕಟ್ಟುತ್ತಾರೆ. ರಾವಣ, ಬಕಾಸುರ, ಶುಂಭ–ನಿಶುಂಭ, ನರಕಾಸುರ, ಹಿರಣ್ಯಕಶಿಪು, ವಾಲಿ, ಕಂಸ ಮುಂತಾದ ರಾಜತ್ವ ಹೊಂದಿದ ಖಳಪಾತ್ರಗಳಿಗೆ ಕೇಶಾವರಿ ತಟ್ಟಿ ಅಥವಾ ಬಟ್ಟಲು ಕಿರೀಟದ ಬಣ್ಣದವೇಷ ಮಾಡುತ್ತಾರೆ. ಇನ್ನೂ ಅನೇಕ ವಿಧದ ರಾಕ್ಷಸ ಭೂಮಿಕೆಗಳೂ ಯಕ್ಷಗಾನದಲ್ಲಿವೆ. ಬಾಲ್ದಿಯಾಕಾರದ ಕಿರೀಟ ಧರಿಸಿದ ಹೆಣ್ಣು ಬಣ್ಣದ ವೇಷಗಳೆಂದರೆ ಶೂರ್ಪನಖಿ, ಲಂಕಿಣಿ, ಪೂತನಿ ಮುಂತಾದುವು. ಇವೆಲ್ಲ ಪಾತ್ರಗಳಿಗೆ ಉದ್ದ ಕೈಯ ಅಥವಾ ಅರ್ಧಕೈಯ ದಗಲೆ, ಬಾಲ್‌ಮುಂಡು, ಸೋಗೆವಲ್ಲಿ ಮುಂತಾದ ಹೊಲಿದ ಬಟ್ಟೆಗಳ ಮೇಲೆ ಭುಜಕೀರ್ತಿ, ಎದೆಪದಕ, ಕೈಕಟ್ಟು, ತೋಳ್‌ಕಟ್ಟು ಮುಂತಾದ ಮಣಿಸಾಮಾನಿನ ವೇಷಭೂಷಣಗಳನ್ನು ಕಟ್ಟುತ್ತಾರೆ. ಕೈಕೆ, ಸೀತೆ, ದ್ರೌಪದಿ, ಮಂಡೋದರಿ, ತಾರೆ ಮುಂತಾದ ರಾಣಿಯರ ಸ್ತ್ರೀವೇಷಗಾರಿಕೆ ಯಕ್ಷಗಾನದಲ್ಲಿ ವಿಶಿಷ್ಟವಾಗಿದೆ. ಇನ್ನು ಚಂಡ–ಮುಂಡರು, ಮಧು–ಕೈಟಭರು ಇತ್ಯಾದಿ ರಾಕ್ಷಸ ಪಾತ್ರಗಳಿಗೆ ಹಾಗೂ ಸ್ವಪ್ನದ ಕಂಸ ಇತ್ಯಾದಿ ಪಾತ್ರಗಳಿಗೆ ವೇಷಭೂಷಣ ಆಭರಣಗಳಿದ್ದರೂ ಕಿರೀಟ ಇಲ್ಲದ ಬಿಟ್ಟಮಂಡೆಯ ವೇಷಗಳೆಂಬ ಪ್ರತ್ಯೇಕ ವೇಷಗಾರಿಕೆ ಇದೆ. ಹಾಸ್ಯವೇಷಗಳಲ್ಲಿ

ಸಾಕಷ್ಟು ವೈವಿಧ್ಯತೆ ಇದೆ. ದೇವತೆಗಳ ಹಾಗೂ ಕ್ಷತ್ರಿಯ ರಾಜರುಗಳ ದೂತರು ಹಾಗೂ ರಾಕ್ಷಸದೂತರ ಮುಖವರ್ಣಿಕೆ ಹಾಗೂ ವೇಷಗಾರಿಕೆಯಲ್ಲಿ ವಿಶಿಷ್ಟತೆ ಇದೆ. ದೇವಿ ಹಾಗೂ ಧರ್ಮರಾಯ ಪಾತ್ರಗಳಿಗೆ ವಿಶಿಷ್ಟ ಬಗೆಯ ಕಿರೀಟವಿದೆ. ತೆಂಕುತಿಟ್ಟಿನ ವೇಷಭೂಷಣಗಳಿಗೂ ಕೇರಳದ ಕಥಕ್ಕಳಿಯ ವೇಷಭೂಷಣಗಳಿಗೂ ಸಾಮ್ಯತೆ ಇದೆ ಎಂಬುದಾಗಿ ಕೆಲ ವಿದ್ವಾಂಸರು ತರ್ಕಿಸಿದ್ದಾರೆ. ಆದರೆ ಇದು ಕೇವಲ ಮೇಲ್ನೋಟದ ಸಾಮ್ಯತೆ ಅಷ್ಟೇ ಆಗಿದೆ. ಸೂಕ್ಷ್ಮವಾಗಿ ಅವಲೋಕಿಸಿದರೆ ತೆಂಕುತಿಟ್ಟು ಯಕ್ಷಗಾನದ ವೇಷಭೂಷಣಗಳಿಗೆ ತನ್ನದೇ ಆದ ಅನನ್ಯತೆ ಇದೆ. ಇವುಗಳ ವಿನ್ಯಾಸ ಮತ್ತು ರಚನೆಯಲ್ಲಿ ಇಲ್ಲಿನ ಕಲಾವಿದರ ಸೃಜನಶೀಲ ಮನಸ್ಸು ಕೆಲಸ ಮಾಡಿದೆ. ಮುಖ್ಯವಾಗಿ ಮುಖವರ್ಣಿಕೆಯ ವಿನ್ಯಾಸದಲ್ಲಿ ಸಾಕಷ್ಟು ಆವಿಷ್ಕಾರಗಳಾಗಿವೆ. ಮುಂದೆ ರಾಕ್ಷಸಭೂಮಿಕೆಯ ಚುಟ್ಟಿ ಇಡುವ ಕ್ರಮದಲ್ಲಿ ವೈವಿಧ್ಯತೆಗಳು ಬಂದುವು.

ಕುಂಬಳೆಯ ಪಾರ್ಥಿಸುಬ್ಬ ಕವಿಯ ರಾಮಾಯಣ ಪ್ರಸಂಗಗಳೇ ಯಕ್ಷಗಾನದ ಮೂಲಪಠ್ಯಗಳಾಗಿದ್ದವು. ಕುಕ್ಕಿಲ ಕೃಷ್ಣಭಟ್ಟರು ಪಾರ್ತಿಸುಬ್ಬನ ಯಕ್ಷಗಾನಗಳ ಪ್ರತಿಗಳನ್ನು ಕಲೆ ಹಾಕಿ 'ಪಾರ್ತಿಸುಬ್ಬನ ಯಕ್ಷಗಾನಗಳು' ಎಂಬ ಸಂಪಾದಿತ ಕೃತಿ ಪ್ರಕಟಿಸಿದ್ದಾರೆ. ನಂತರ ಮಹಾಭಾರತ ಹಾಗೂ ಭಾಗವತರ ಕತೆಗಳನ್ನಾಧರಿಸಿ ಬೇರೆಬೇರೆ ಕವಿಗಳು ಪ್ರಸಂಗರಚನೆ ಮಾಡಿದರು. ಕವಿ ಮುದ್ದಣ್ಣ ಕೂಡಾ ಕುಮಾರವಿಜಯ ಮತ್ತು ರತ್ನಾವತಿ ಕಲ್ಯಾಣ ಎಂಬ ಪ್ರಸಂಗಗಳನ್ನು ಬರೆದಿದ್ದ. ಆದರೆ ತೀರಾ ಇತ್ತೀಚೆಗೆ ಅಂದರೆ ಕಳೆದ ೧೯೭೦–೮೦ರ ದಶಕದಲ್ಲಿ ಹಾಗೂ ಆ ಬಳಿಕ ಪೌರಾಣಿಕ ಪ್ರಸಂಗಗಳ ಜಾಗದಲ್ಲಿ ತುಳು ಜಾನಪದೀಯ ಕತೆಗಳನ್ನಾಧರಿಸಿದ ಹೊಸ ಪ್ರಸಂಗಗಳು ಆಕ್ರಮಿಸಿವೆ. ಜನಸಾಮಾನ್ಯರ ಆಡುಭಾಷೆಯಾದ ತುಳುವಿನಲ್ಲಿ ರಂಗಸ್ಥಳದ ಅರ್ಥಸಾಹಿತ್ಯ ಮೂಡಿ ಬಂದದ್ದು ಸ್ಥಳೀಯ ಜನರಿಗೆ ಹೊಸ ಆಕರ್ಷಣೆಯಾಯಿತು. ಕಳೆದ ಎರಡು ಮೂರು ದಶಕಗಳಲ್ಲಿ ಅಂದರೆ ೧೯೭೦ ರಿಂದೀಚೆಗೆ ತುಳು ಯಕ್ಷಗಾನ ಪ್ರಸಂಗ ಪ್ರದರ್ಶನಗಳೇ ವಿಜೃಂಭಿಸಿದುವು. ಪರಿಣಾಮವಾಗಿ ಕನ್ನಡ ಭಾಷೆಯ ಪೌರಾಣಿಕ ಪ್ರಸಂಗ ಪ್ರದರ್ಶನಗಳು ಮೂಲೆಗುಂಪಾದುವು. ಕೇವಲ ಹರಕೆಯ ಬಯಲಾಟಗಳಿಗಷ್ಟೇ ಪೌರಾಣಿಕ ಪ್ರಸಂಗಗಳು ಸೀಮಿತಗೊಂಡವು. ಯಕ್ಷಗಾನದ ಹವ್ಯಾಸಿ ಕಲಾವಿದರು ಸಂಘಟಿಸಿದ ಪ್ರದರ್ಶನಗಳು, ಕಟೀಲು ಹಾಗೂ ಧರ್ಮಸ್ಥಳ ಮೇಳಗಳ ಪ್ರದರ್ಶನಗಳಲ್ಲಿ ಮಾತ್ರ ಪರಂಪರಾಗತ ಯಕ್ಷಗಾನ ಕಲೆ ಉಳಿದು ಬಂದಿದೆಯೆನ್ನಬಹುದು.

ಹಿಂದಿನ ಕಾಲದಲ್ಲಿ ಯಕ್ಷಗಾನ ಮೇಳಗಳು ಒಂದೊಂದು ಊರಿನಲ್ಲಿಯೂ ೮–೧೦ ದಿನಗಳ ಕಾಲ ತಂಗಿ ನಿತ್ಯವೂ ಪ್ರದರ್ಶನಗಳನ್ನು ನೀಡುತ್ತಿದ್ದುವು. ಊರಿನ ಗಣ್ಯರ ಆರ್ಥಿಕ ಬೆಂಬಲದಿಂದ ನಡೆಯುತ್ತಿದ್ದ ಈ ಬಯಲಾಟಗಳು ಬೆಳೆ ಕಟಾವು ಮಾಡಿದ ಭತ್ತದ ಗದ್ದೆಗಳ ಮಧ್ಯೆ ಹಾಕಿದ ನಾಲ್ಕು ಕಂಬಗಳ ನಡುವೆ ಹೊನ್ನೆಣ್ಣೆಯ ದೀಪದ ಮಂದ ಬೆಳಕಿನಲ್ಲಿ ಜರುಗುತ್ತಿದ್ದುವು. ಭಾಗವತರೂ, ಚಂಡೆ–ಮದ್ದಳೆವಾದಕರೂ ನಿಂತುಕೊಂಡೇ ರಾತ್ರಿ ಪೂರ್ತಿ ಹಿಮ್ಮೇಳ ಪೂರೈಸುತ್ತಿದರು. ಕಾಲಾನುಕ್ರಮದಲ್ಲಿ ಹಿಮ್ಮೇಳದವರಿಗೆ ಮೇಜಿನ ವ್ಯವಸ್ಥೆಯಾಗಿ ಭಾಗವತರೂ ಮದ್ದಳೆವಾದಕರು ಹಾಗೂ ಶ್ರುತಿಯವರು ಕುಳಿತುಕೊಳ್ಳುವುದು ಹಾಗೂ ಚೆಂಡೆಯವರು ನಿಂತುಕೊಂಡೇ ಬಾರಿಸುವ ಪದ್ಧತಿ ಮುಂದುವರಿದು ಬಂದಿದೆ. ಹೊನ್ನೆಣ್ಣೆಯ ದೀಪಗಳ ಜಾಗಕ್ಕೆ ಕೆಲವು ಕಾಲ ಪೆಟ್ರೋಮೆಕ್ಸ್ ದೀಪಗಳು ಬಂದು ಈಗ ವಿದ್ಯುತ್‌ದೀಪ ಹಾಗೂ ಧ್ವನಿವರ್ಧಕಗಳ ವ್ಯವಸ್ಥೆಯೊಂದಿಗೆ ಯಕ್ಷಗಾನ ಜರುಗುತ್ತದೆ.

ಯಕ್ಷಗಾನ ಪ್ರದರ್ಶನದ ದಿನ ವೀಳ್ಯನೀಡಿ ಆಟ ಆಡಿಸುವ ಆಢ್ಯರ ಮನೆಯಲ್ಲಿ ಸಂಜೆ ಹಿಮ್ಮೇಳದವರು ಹೋಗಿ ಯಕ್ಷಗಾನದ ಸ್ತುತಿ ಪದ್ಯಗಳನ್ನು ಹಾಡುವ ಕ್ರಮವಿತ್ತು. ಇದನ್ನು ತಾಳಮದ್ದಲೆ ಹಾಕುವುದು ಎನ್ನುತ್ತಿದ್ದರು. ಇದಾದ ಬಳಿಕ ಊರಿನ ಎತ್ತರದ ದಿಬ್ಬದ ಮೇಲೆ ಏರಿ ಚೆಂಡೆ–ಮದ್ದಳೆ ನುಡಿಸುತ್ತಿದ್ದರು. ಇದೊಂದು ರೀತಿಯ ಪ್ರಚಾರ ತಂತ್ರವಾಗಿತ್ತು. ನಂತರ ರಾತ್ರಿ ಚೌಕಿಯಲ್ಲಿ ಮೇಳದ ದೇವರ ಪೂಜೆ ಮಾಡಿ ಬಯಲಾಟ ಆಡಿಸುವವರಿಗೆ ಪ್ರಸಾದ ನೀಡಲಾಗುತ್ತಿತ್ತು. ಚೌಕಿ ಎಂದರೆ ಯಕ್ಷಗಾನದ ನೇಪಥ್ಯ ಅಥವಾ ಪ್ರಸಾಧನದ ಡೇರೆ. ಇಲ್ಲಿ ದೇವರ ಸ್ಥಾಪನೆ ಮಾಡಿ ಎದುರಲ್ಲಿ ಉದ್ದಕ್ಕೆ ದೀಪಗಳನ್ನಿಟ್ಟು ಎರಡೂ ಬದಿಗಳಲ್ಲಿ ವೇಷಧಾರಿಗಳು ಕುಳಿತು ಸ್ವತಃ ಮುಖವರ್ಣಿಕೆ ಮಾಡಿಕೊಳ್ಳುತ್ತಾರೆ. ಕುಳಿತುಕೊಳ್ಳುವಾಗ ಪೀಠಿಕೆ ವೇಷದವರು, ಇದಿರು ವೇಷದವರು, ೧ನೇ ಬಣ್ಣದವರು, ೨ನೇ ಬಣ್ಣದವರು ಹೀಗೆಲ್ಲ ಸ್ಥಾನಗೌರವದ ಪ್ರಕಾರ ಕುಳಿತುಕೊಳ್ಳುತ್ತಾರೆ. ಕೊನೆಯಲ್ಲಿ ದೇವರಿಗೆ ಅಭಿಮುಖವಾಗಿ ಹಾಸ್ಯಗಾರನು ಮುಖವರ್ಣಿಕೆ ಮಾಡಿಕೊಳ್ಳುತ್ತಾನೆ. ಪಾತ್ರಧಾರಿಗಳಿಗೆ ಮುಖವರ್ಣಿಕೆ ಮಾಡಿಕೊಂಡ ಬಳಿಕ ವೇಷಭೂಷಣ ಕಟ್ಟಲು ಸಹಾಯಕರಿರುತ್ತಾರೆ.

ಇಡೀ ರಾತ್ರೆ ನಡೆಯುವ ಯಕ್ಷಗಾನ ಪ್ರದರ್ಶನಗಳಲ್ಲಿ ಆರಂಭಕ್ಕೆ ಚೌಕಿಯಲ್ಲಿ ಗಣಪತಿ ಪೂಜೆ, ನಂತರ ರಂಗಸ್ಥಳದಲ್ಲಿ ಕೋಡಂಗಿವೇಷ, ಬಾಲಗೋಪಾಲರು, ಸ್ತ್ರೀವೇಷ, ಹಾಸ್ಯ, ಕಸೆ ಸ್ತ್ರೀವೇಷ ಮುಂತಾಗಿ ಒಂದೊಂದೇ ವೇಷಗಳ ನಾಟ್ಯಾಭಿನಯಗಳ ಪೂರ್ವ ರಂಗ ಎಂಬ ಪದ್ಧತಿ ಇದೆ. ಇದಕ್ಕೆ ಸುಮಾರು ಒಂದು ಗಂಟೆಯ ಅವಧಿ ಬೇಕಾಗುತ್ತದೆ. ನಂತರ ಯಕ್ಷಗಾನದ ಪ್ರಧಾನ ವಾದ್ಯವಾದ ಚಂಡೆಯ

ವಾದನದ ಮೂಲಕ ಪೀಠಿಕೆ ಹೊಡೆದು ಕಥೆ ಪ್ರಾರಂಭವಾಗುತ್ತದೆ. ಆ ಬಳಿಕ ಬೆಳಗಿನ ತನಕ ಆಯ್ದುಕೊಂಡ ಪ್ರಸಂಗದ ಪ್ರದರ್ಶನ ನಡೆಯುತ್ತದೆ. ಹಳ್ಳಿಗಳ ಕೇಂದ್ರಗಳಲ್ಲಿ ಜರಗುವ ಈ ಪ್ರದರ್ಶನಗಳಿಗೆ ಬೆಳಗ್ಗಿನ ತನಕವೂ ಪ್ರೇಕ್ಷಕರಿರುತ್ತಿದ್ದರು. ಮರುದಿನ ಹಗಲಲ್ಲಿ ನಿದ್ರೆ ಮಾಡಿದ ಪ್ರೇಕ್ಷಕರು ಸಂಜೆ ಹೊತ್ತಿನಲ್ಲಿ ಮುನ್ನಾರಾತ್ರಿಯ ಬಯಲಾಟದ ವಿಮರ್ಶೆ ನಡೆಸುತ್ತಿದ್ದರು. ಕಲಾವಿದರ ಬೆಳವಣಿಗೆಗೆ ಈ ವಿಮರ್ಶೆಯು ಸಹಕಾರಿಯಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಸ್ಥಾನಗಳಿಂದ ಹೊರಡುತ್ತಿದ್ದ ಪ್ರಸಿದ್ಧ ಮೇಳಗಳೆಂದರೆ ಕಟೀಲು ಮೇಳ, ಕೂಡ್ಲು ಮೇಳ, ಕುಂಡಾವು ಮೇಳ, ಧರ್ಮಸ್ಥಳ ಮೇಳ, ಅಡೂರು ಮೇಳ, ಕದ್ರಿಮೇಳ, ಸುರತ್ಕಲ್ ಮೇಳ, ಪುತ್ತೂರು ಮೇಳ, ಬಪ್ಪನಾಡು ಮೇಳ, ಅರುವ ಮೇಳ, ಕುಂಬಳೆ ಮೇಳ, ಸುಂಕದಕಟ್ಟೆ ಮೇಳ, ಮಲ್ಲಮೇಳ, ತಲಕಳ ಮೇಳ, ಇಚ್ಲುಂಪಾಡಿ ಮೇಳ, ಇರಾ ಸೋಮನಾಥೇಶ್ವರ ಮೇಳ, ಕೊರಕೋಡು (ಕಾಸರಗೋಡು) ಮೇಳ, ಮರ್ಕಂಜ ಮೇಳ, ನಾರಾವಿ ಮೇಳ, ನಿಟ್ಟೆ ಮೇಳ, ಪಡ್ರೆ ಮೇಳ, ಮುಲ್ಕಿ ಮೇಳ, ಪೊಳಲಿ ಮೇಳ, ವೇಣೂರು ಮೇಳ, ಭಂಡಿಹೋಳೆ ಮೇಳ, ಅಡ್ಯಾರು ಮೇಳ, ಭಗವತೀ ಮೇಳ, ಎಡನೀರು ಮೇಳ, ಸುಬ್ರಹ್ಮಣ್ಯ ಮೇಳ ಮುಂತಾದವು. ಇವುಗಳಲ್ಲಿ ಕಟೀಲು ಮತ್ತು ಧರ್ಮಸ್ಥಳದ ಮೇಳಗಳು ಬಹುವರ್ಷಗಳಿಂದ ನಡೆದು ಬಂದಿವೆ. ಉಳಿದಂತೆ ವ್ಯವಸ್ಥಾಪಕರ ಸಾಮರ್ಥ್ಯಕ್ಕನುಗುಣವಾಗಿ ಕೆಲವು ವರ್ಷ ಮಾತ್ರ ಅಸ್ತಿತ್ವದಲ್ಲಿದ್ದು ಮರೆಯಾಗಿವೆ. ಮತ್ತೆ ಕೆಲವು ಪುನರುಜ್ಜೀವನಗೊಂಡಿವೆ. ಅಂತೆಯೇ ಹವ್ಯಾಸಿ ಕಲಾವಿದರ ಅನೇಕ ಯಕ್ಷಗಾನ ಸಂಘಗಳು ಅಲ್ಲಲ್ಲಿ ಹುಟ್ಟಿಕೊಂಡು ಸಕ್ರಿಯವಾಗಿವೆ. ಈಗ ಅವುಗಳ ಸಂಖ್ಯೆಯೇ ಇನ್ನೂರಕ್ಕೂ ಮಿಕ್ಕಿ ಇದೆ.

ತೆಂಕುತಿಟ್ಟಿನ ಯಕ್ಷಗಾನದ ಹಿಮ್ಮೇಳವನ್ನು ಶಾಸ್ತ್ರೀಯತೆಯ ಹೊಸ್ತಿಲಲ್ಲಿ ತಂದಿಟ್ಟು ಯಕ್ಷಗಾನದ ಪ್ರದರ್ಶನಗಳಲ್ಲಿ ಸುಧಾರಣೆಯನ್ನು ತಂದವರೆಂದರೆ ಬಲಿಪ ನಾರಾಯಣ ಭಾಗವತರು. ಅವರಂತೆ ಪ್ರಸಿದ್ಧರಾದವರೆಂದರೆ, ಪುತ್ತಿಗೆ ಭಾಗವತರು, ಅಗರಿ ಶ್ರೀನಿವಾಸ ಭಾಗವತರು, ಇರಾ ಗೋಪಾಲಕೃಷ್ಣ ಭಾಗವತರು, ದಾಮೋದರ ಮಂಡೆಚ್ಚ, ಪ್ರಸ್ತುತ ನಿವೃತ್ತರಾಗಿರುವ ಕಡತೋಕಾ ಮಂಜುನಾಥ ಭಾಗವತರು, ಕುರಿಯ ಗಣ್ಯಪತಿ ಶಾಸ್ತ್ರಿ ಮುಂತಾದವರು ಯಕ್ಷಗಾನ ಹಿಮ್ಮೇಳಕ್ಕೆ ಶಾಸ್ತ್ರೀಯ ಅಸ್ತಿಭಾರ ಹಾಕಿದವರು. ಇವರೊಂದಿಗೆ ಚೆಂಡೆ–ಮದ್ದಳೆ ವಾದಕರಾಗಿ ಕುದ್ರೆಕೂಡ್ಲು ರಾಮಭಟ್, ಕಾಸರಗೋಡು ವೆಂಕಟ್ರಮಣ, ನೆಡ್ಲೆ ನರಸಿಂಹಭಟ್, ದಿವಾಣ ಭೀಮಭಟ್, ಚಿಪ್ಪಾರು ಕೃಷ್ಣಯ್ಯ ಬಲ್ಲಾಳ, ಪುಂಡಿಕ್ಯಾ ಕೃಷ್ಣಭಟ್, ಮಾಂಬಾಡಿ ಸುಬ್ರಹ್ಮಣ್ಯ ಭಟ್, ಬಿ. ಗೋಪಾಲಕೃಷ್ಣ ಕುರೂಪ್, ಹರಿನಾರಾಯಣ ಬೈಪಾಡಿತ್ತಾಯ ಎಂ. ಪ್ರಭಾಕರ ಗೋರೆ ಮುಂತಾದವರು ಹಿಮ್ಮೇಳದ ಅಂದವನ್ನು ಹೆಚ್ಚಿಸಿದ್ದಾರೆ. ಪ್ರಸಿದ್ಧ ವೇಷಧಾರಿಗಳಾಗಿ ಈ ರಂಗಕ್ಕೆ ಅನೇಕರು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಬಣ್ಣದ ಮಾಲಿಂಗ, ಕೋಲುಳಿಸುಬ್ಬ, ಒತ್ತೆಕಿವಿಸುಬ್ಬ, ಗರಳಸುಬ್ಬ, ಮದವೂರು ತಿಮ್ಮಪ್ಪ ಬಣ್ಣದ ಕುಟ್ಯಪ್ಪು, ಚಂದ್ರಗಿರಿ ಅಂಬು, ಕಾವು ಕುಞ, ಕುಂಬಳೆ ಶಂಕರ, ಬೆಳ್ಳಾರೆ ಸುಬ್ಬಯ್ಯ ಶೆಟ್ಟಿ, ಬೋಳಾರ ನಾರಾಯಣ ಶೆಟ್ಟಿ, ಪುತ್ತೂರು ನಾರಾಯಣ ಹೆಗ್ಡೆ, ವೇಣೂರು ವೆಂಕಟ್ರಮಣ ಭಟ್, ಕಟೀಲು ಪುರುಷೋತ್ತಮಭಟ್, ಕದ್ರಿವಿಷ್ಣು, ಪುತ್ತೂರು ಕೃಷ್ಣಭಟ್, ಅಳಿಕೆರಾಮಯ್ಯ ರೈ, ಪುಳಿಂಚ ರಾಮಯ್ಯ ರೈ, ವಿಟ್ಲ ಗೋಪಾಲಕೃಷ್ಣ ಜೋಶಿ, ಕೇದಗಡಿ ಗುಡ್ಡಪ್ಪಗೌಡ, ಕಲ್ಲುಗುಂಡಿ ಶೀನಪ್ಪರೈ, ರೆಂಜಾಳ ರಾಮಕೃಷ್ಣರಾವ್, ಪಡ್ರೆ ಚಂದು, ಕರ್ಗಲ್ಲು ಸುಬ್ಬಣ್ಣಭಟ್, ಕೆ. ಗೋವಿಂದಭಟ್, ಕೊಳ್ಯೂರು ರಾಮಚಂದ್ರ ರಾವ್, ಪಾತಾಳ ವೆಂಕಟ್ರಮಣಭಟ್ ಮುಂತಾದವರು ರಂಗಸ್ಥಳದಲ್ಲಿ ವಿವಿಧ ಪಾತ್ರಗಳಲ್ಲಿ ಮಿಂಚಿದ್ದಾರೆ. ಇನ್ನು ಈ ಕಲಾಪ್ರಕಾರದಲ್ಲಿ ವಿಶೇಷ ಸುಧಾರಣೆಯ ಪ್ರಯತ್ನ ಮಾಡಿದವರೆಂದರೆ ಕುರಿಯ ವಿಠಲಶಾಸ್ತ್ರಿಗಳು. ಅವರು ವೇಷಗಾರಿಕೆಯಲ್ಲಿ ಹಾಗೂ ನಾಟ್ಯ ಪ್ರಕಾರಗಳಲ್ಲಿ ಸೌಂದರ್ಯವನ್ನೂ ಲಾಲಿತ್ಯವನ್ನೂ ತುಂಬಿದವರು. ಇನ್ನು ಹರಿದಾಸರಾಗಿದ್ದು, ತಾಳಮದ್ದಳೆ ಕ್ಷೇತ್ರದಲ್ಲಿ ಹೆಸರು ಮಾಡಿ ಯಕ್ಷಗಾನದ ರಂಗಸ್ಥಳದಲ್ಲಿ ಅರ್ಥಗಾರಿಕೆಯ ಮೂಲಕ ಈ ರಂಗವನ್ನು ಶ್ರೀಮಂತಗೊಳಿಸಿದವರೆಂದರೆ ಮಲ್ಪೆ ಶಂಕರನಾರಾಯಣ ಸಾಮಗ, ಶೇಣಿ ಗೋಪಾಲಕೃಷ್ಣಭಟ್, ರಾಮದಾಸ ಸಾಮಗ, ಕುಂಬಳೆ ಸುಂದರರಾವ್ ಮುಂತಾದವರು.

ಯಕ್ಷಗಾನ ಬಯಲಾಟಗಳನ್ನು ಆಡಿಸುವವರ ಸಂಖ್ಯೆ ಕಡಿಮೆಯಾದಾಗ ಮೇಳದ ಸಂಘಟಕರೇ ಟೆಂಟ್ (ಡೇರೆ) ಹಾಕಿ ಟಿಕೇಟು ನೀಡಿ ಪ್ರದರ್ಶನಗಳ ವ್ಯವಸ್ಥೆ ಮಾಡಿದರು. ಜನರು ಹಣ ನೀಡಿ ಆಸನಗಳ ಸೌಲಭ್ಯದಲ್ಲಿ ಪ್ರದರ್ಶನ ನೋಡುವಂತಾಯಿತು. ಹೀಗೆ ಮೇಳಗಳು ಬಯಲಾಟ ಆಡಿಸುವವರ ಮರ್ಜಿಯಿಂದ ಮುಕ್ತಗೊಂಡುದಲ್ಲದೆ ಮುಕ್ತ ಬಯಲಾಟವಿದ್ದದ್ದು ಮುಚ್ಚಿದ ಟೆಂಟ್ ಆಟವಾಗಿ ಪರಿವರ್ತನೆಗೊಂಡಿತು. ಒಂದು ರೀತಿಯಲ್ಲಿ ಇದು ಸ್ವತಂತ್ರ ಭಾರತದಲ್ಲಿ ಜರುಗಿದ ಸಾಮಾಜಿಕ–ಆರ್ಥಿಕ–ರಾಜಕೀಯ ಸ್ಥಿತ್ಯಂತರಗಳಿಗೆ ಈ ಕಲಾಪ್ರಕಾರವು ಸ್ಪಂದಿಸಿದ ವಿಧಾನವಾಗಿತ್ತು. ಟೆಂಟ್‌ಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಲಾರಿಗಳು ಲಭ್ಯವಾದಾಗ ಒಂದೊಂದು ಊರಿನಲ್ಲಿ ಆಟ ಆಡುವ ದಿನಗಳ ಸಂಖ್ಯೆ ಕಡಿಮೆಯಾಯಿತು. ಕೊನೆಗೆ ಒಂದು ಊರಿನಲ್ಲಿ ಒಂದೇ ಆಟ ಆಡಿ ಮರುದಿನ ಬೇರೆ ಊರಿಗೆ ಪ್ರಯಾಣಿಸುವ ಪದ್ಧತಿ ಬಂತು. ಇದರಿಂದ ಯಕ್ಷಗಾನ ಕಲೆಯು ತೀವ್ರವಾದ ವಾಣಿಜ್ಯೀಕರಣಕ್ಕೆ ಪಕ್ಕಾಯಿತು.

ಕಲಾವಿದರು ಹಾಗೂ ಪ್ರೇಕ್ಷಕರ ನಡುವಿನ ಸಂವಹನ ಕುಂಠಿತಗೊಂಡಿತು. ಇದೇ ಸಂದರ್ಭದಲ್ಲಿ ಸಂಭವಿಸಿದ ಇನ್ನೊಂದು ಬೆಳವಣಿಗೆಯೆಂದರೆ ಈ ಜಿಲ್ಲೆಯ ಜನರ ಆಡುಭಾಷೆಯಾದ ತುಳುವಿನಲ್ಲಿ ಪ್ರದರ್ಶನಗಳು ಏರ್ಪಟ್ಟಿರುವಂತಹುದು.

ತುಳು ಪ್ರಸಂಗಗಳು ಜನಪ್ರಿಯಗೊಂಡು ತೆಂಕುತಿಟ್ಟು ಯಕ್ಷಗಾನದ ಸ್ವರೂಪ ರಕ್ಷಣೆಗೆ ತೊಡರಾದದ್ದು ಒಂದು ಗಮನೀಯ ಐತಿಹಾಸಿಕ ಘಟ್ಟವೆನ್ನಬಹುದು. ಸ್ಥಳೀಯ ಜನಪದ ಕತೆಗಳೆಂಬ ಕಾಲ್ಪನಿಕ ಕತೆಗಳನ್ನು ಪ್ರಸಂಗರೂಪವಾಗಿ ಪ್ರದರ್ಶನಕ್ಕೆ ತಂದಾಗ ಸಹಜವಾಗಿ ಜನರ ಆಸಕ್ತಿಯು ತಮ್ಮ ಆಡುಭಾಷೆಯ ಪ್ರದರ್ಶನಗಳತ್ತ ಹೊರಳಿತು. ಪರಿಣಾಮವಾಗಿ ಪರಂಪರೆಯ ಯಕ್ಷಗಾನ ವೇಷಗಳನ್ನು ಬಿಟ್ಟು ನಾಟಕೀಯ ವೇಷಗಾರಿಕೆಯೊಂದಿಗೆ ಸಂಭಾಷಣಾ (ಅರ್ಥಗಾರಿಕೆ) ಪ್ರಧಾನವಾಗಿ ಯಕ್ಷಗಾನ ಜರುಗತೊಡಗಿತು. ಇದಕ್ಕೆ ಹೆಚ್ಚಿನ ನಾಟ್ಯ ಪ್ರಾವೀಣ್ಯತೆಯ ಅಗತ್ಯವೂ ಇಲ್ಲವಾಯಿತು. ಟೆಂಟ್ ಮೇಳಗಳ ಇಂತಹ ಪ್ರದರ್ಶನಗಳಿಂದ ಉತ್ತಮ ಆದಾಯ ಬರುತ್ತಿದ್ದುದು ಈ ತುಳು ಆಟಗಳ ಒಲವನ್ನು ಕಲಾವಿದರಲ್ಲಿಯೂ ಪ್ರೇಕ್ಷಕರಲ್ಲಿಯೂ ಹೆಚ್ಚಿಸಿತು. ಆದರೆ ಈ ಪ್ರವೃತ್ತಿ ಬಹಳ ಕಾಲ ಉಳಿಯಲಿಲ್ಲ. ೨೦೦೪–೦೫ರ ಹೊತ್ತಿಗೆ ತುಳು ಆಟಗಳ ಡೇರೆಗಳು ತುಂಬಲಿಲ್ಲ. ಟಿಕೇಟ್ ಕೊಂಡು ಜನ ಬರಲಿಲ್ಲ. ಆಗ ಪೌರಾಣಿಕ ಪ್ರಸಂಗಗಳನ್ನು ತುಳುಭಾಷೆಯಲ್ಲಿ ಆಡುವ ಪ್ರವೃತ್ತಿ ಪ್ರಾರಂಭವಾಯಿತು. ಈಗ ಪುನ: ಪರಂಪರೆಯತ್ತ ಕಲೆ ಹೊರಳಿರುವುದರ ಸೂಚನೆಗಳು ಸಿಗುತ್ತಿವೆ.

ಸುಮಾರು ೧೯೬೦–೭೦ರ ದಶಕದಲ್ಲಿ ಯಕ್ಷಗಾನದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಡಾ॥ಎಂ. ಪ್ರಭಾಕರ ಜೋಶಿಯವರು ಸುದೀರ್ಘವಾಗಿ ಗುರುತಿಸಿದ್ದಾರೆ. ಅವರ ಅಭಿಪ್ರಾಯದಂತೆ ಮುಖ್ಯವಾಗಿ ಆಟಗಳ ರೀತಿ, ಆಡಳಿತ, ಸಂಚಾರ ಕ್ರಮ, ಸ್ಥಳ ನಿರ್ಣಯ, ಶಿಸ್ತುಗಳಲ್ಲಿ ಬದಲಾವಣೆಗೊಂಡಿದ್ದು, ಮುಖವರ್ಣಿಕೆಗಳಿಗೆ ಸಸ್ಯಜನ್ಯ ಬಣ್ಣಗಳ ಬದಲು ಮಾರುಕಟ್ಟೆಯಲ್ಲಿ ಸಿದ್ಧವಾಗಿ ಸಿಗುವ ವರ್ಣಗಳ ಬಳಕೆ; ಮರದ ಭೂಷಣಗಳ ಬದಲು ಮಣಿಗಳ ಬಳಕೆ; ಕ್ಯಾಲೆಂಡರ್‌ಗಳಲ್ಲಿ (ಪ್ರಕಟವಾಗುವ ಅಗ್ಗದ ಚಿತ್ರಗಳಂತೆ) ಕಂಡುಬರುವಂತೆ ವೇಷಗಳು; ವಾದ್ಯ, ಭಾಗವತಿಕೆಯಲ್ಲಿ ದಕ್ಷಿಣಾದಿ ಪದ್ಧತಿಯ (ಗಾಯನ) ಬಳಕೆ; ಆಟದ ಆರಂಭದಲ್ಲಿ ಭರತನಾಟ್ಯ ಇತ್ಯಾದಿ ಬೇರೆ ಪ್ರಕಾರದ ನೃತ್ಯಗಳು; ಕೆಲಕಾಲ ಸ್ಥಗಿತಗೊಂಡಿದ್ದ ಜೋಡಿ ಆಟಗಳು; ರಂಗದ ಮೇಲೆ ಬದಲಾಗುವ ರಂಗ ಸಜ್ಜಿಕೆ (ಟ್ರಾನ್ಸ್‌ಫರ್ ಸೀನ್)ಯ ಅಳವಡಿಕೆ ಹಾಗೂ ತೆಂಕು ಮತ್ತು ಬಡಗು ತಿಟ್ಟುಗಳನ್ನು ಮಿಶ್ರಗೊಳಿಸುವಿಕೆ; ಒಮ್ಮೆಗೇ ಎರಡು ರಂಗ ಸ್ಥಳಗಳಲ್ಲಿ ಒಂದೇ ಕಥೆ, ಒಂದೇ ಆಟ ಆದರೆ ಎರಡು ಪ್ರತ್ಯೇಕ ಹಿಮ್ಮೇಳಗಳಿಂದ ಕೂಡಿದಂತೆ ಪ್ರಸಂಗ ನಡೆಸುವಿಕೆ; ಒಂದು ಕ್ಯಾಂಪ್‌ನಲ್ಲಿ ಹಲವಾರು ಆಟಗಳ ಬದಲು ಒಂದೇ ಆಟವನ್ನು ನಿರಂತರ ಆಡುವಿಕೆ; ಮಾತುಗಾರಿಕೆಗೆ ಹೆಚ್ಚಿನ ಮಾನ್ಯತೆ; ತೆಂಕು ತಿಟ್ಟಿನಲ್ಲಿ ಪದ್ಯಾಭಿನಯ; ಪಾತ್ರಗಳ ವರ್ಗೀಕರಣ ಇಲ್ಲವಾಗಿಸುವಿಕೆ; ಬರಿಯ ನೃತ್ಯದಿಂದಲೇ ಕಥೆಯ ಕೆಲವು ಅಂಶ ನಿರ್ವಹಿಸುವಿಕೆ; ತುಳು ಭಾಷೆಯಲ್ಲಿ ಯಕ್ಷಗಾನ ಸೇರಿದಂತೆ, ಅರೆ ಪೌರಾಣಿಕ, ಸಾಮಾಜಿಕ ವಿಷಯಗಳಲ್ಲೂ ಕಥಾ ಪ್ರಸಂಗ ನಡೆಸುವಿಕೆ; ಹೊಸ ಪ್ರಸಂಗಗಳ ಸಂಯೋಜನೆಯಲ್ಲಿ ಕಲಾವಿದರ ಆರ್ಥಿಕ ಸ್ಥಿತಿ ಸುಧಾರಿಸಿ ಸಂಭಾವನೆಯ ಸೌಲಭ್ಯ ಹೆಚ್ಚಾಗಿರುವಿಕೆ; ಸಾಹಿತ್ಯ ಗುಣ ನಾಟಕೀಯತೆ ಹೆಚ್ಚಾಗಿರುವಿಕೆ; ಬಾಲಕಲಾವಿದರ ಮೇಳಗಳನ್ನು ಸಂಘಟಿಸುವಿಕೆ ಇತ್ಯಾದಿ ಹಲವಾರು ಅಂಶಗಳನ್ನು ಎಂ. ಪ್ರಭಾಕರ ಜೋಶಿ ಅವರು ಗುರುತಿಸಿದ್ದಾರೆ.

ಯಕ್ಷಗಾನ ಕಲೆಯು ಸಂಕೀರ್ಣವಾಗಿರುವುದರಿಂದಲೇ ಅದರ ಸಂಘಟನೆಯು ಸಂಕಷ್ಟದಾಯಕವಾದುದಾಗಿದೆ. ಹಾಗಾಗಿಯೇ ೧೯೭೫ ರಿಂದೀಚೆಗೆ ಕಳಪೆ ಯಕ್ಷಗಾನ ಪ್ರದರ್ಶನಗಳಾದಾಗ ಅದನ್ನು ತಡೆಯುವ ಒಳವ್ಯವಸ್ಥೆ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಕಳಪೆ ಯಕ್ಷಗಾನಗಳನ್ನು ಪ್ರತಿಭಟಿಸಿ ಯಕ್ಷಗಾನದ ಸ್ವರೂಪ ರಕ್ಷಣೆಗಾಗಿ ಸುಳ್ಯದಲ್ಲಿ ಡಾ॥ಚಂದ್ರಶೇಖರ ದಾಮ್ಲೆಯವರ ಸಂಚಾಲಕತ್ವದಲ್ಲಿ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆ ಹುಟ್ಟಿಕೊಂಡಿತು. ಈ ವೇದಿಕೆಯು ಶೇಣಿ ಗೋಪಾಲಕೃಷ್ಣಭಟ್ಟರ ನಿರ್ದೇಶನದಲ್ಲಿ ಯಕ್ಷಗಾನ ಹಿಮ್ಮೇಳ ಅಧ್ಯಯನ ಶಿಬಿರ, ಪೂರ್ವರಂಗ ದಾಖಲಾತಿ, ಅನೇಕ ವಿಚಾರ ಸಂಕಿರಣಗಳು, ಬಣ್ಣದ ಮಾಲಿಂಗರ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ೨೦೦೪–೦೫ ರಲ್ಲಿ ರಾಮಾಯಣ ಬಯಲಾಟ ಮಾಲಿಕೆಯನ್ನು ಸುಳ್ಯದ ಚೆನ್ನಕೇಶವದೇವಳದಲ್ಲಿ ಏರ್ಪಡಿಸಿ ತಿಂಗಳಿಗೊಂದರಂತೆ ಹನ್ನೆರಡು ಪ್ರದರ್ಶನಗಳನ್ನು ನೀಡಿದೆ.

ಪ್ರಸ್ತುತ ಇರುವ ಮೇಳಗಳಲ್ಲಿ ನೂರಾರು ವ್ಯವಸಾಯಿ ಕಲಾವಿದರು ದುಡಿಯುತ್ತಿದ್ದಾರೆ. ಇನ್ನು ಸಂಘಗಳನ್ನು ಕಟ್ಟಿ ಯಕ್ಷಗಾನ ಪ್ರದರ್ಶನಗಳನ್ನು ನೀಡುವ ಸಾವಿರಾರು ಕಲಾವಿದರು ಈ ಜಿಲ್ಲೆಯಲ್ಲಿದ್ದಾರೆ. ಇಂದು ಈ ರಂಗದಲ್ಲಿ ಕಾಲೇಜು ಉಪನ್ಯಾಸಕರು, ವೈದ್ಯರು, ವಕೀಲರು, ಇಂಜಿನಿಯರರು ಹೀಗೆ ಉನ್ನತ ವಿದ್ಯಾಭ್ಯಾಸ ಹೊಂದಿದವರೂ ಹವ್ಯಾಸಿಗಳಾಗಿ ವೇಷ ಹಾಕುತ್ತಾರೆ. ಈ ರೀತಿಯ ಪ್ರದರ್ಶನಗಳಿಗೆ ವೇಷ ಭೂಷಣಗಳನ್ನು ಬಾಡಿಗೆಗೆ ಒದಗಿಸುವ ಕಲಾವಿದರಿದ್ದಾರೆ. ಹೀಗೆ ಈ ಪ್ರದರ್ಶನ ಕಲಾ ಪ್ರಕಾರವು ನಿರಂತರ ಚಲನಶೀಲತೆಯಿಂದ ಬೆಳೆದಿದೆ.

ಯಕ್ಷಗಾನದ ಉಳಿವಿಗೆ ಪ್ರಸ್ತುತ ಎರಡು ಸಾಧ್ಯತೆಗಳಿವೆ. ಮೊದಲನೆಯದಾಗಿ ಉತ್ತಮ ನಿರ್ದೇಶನದಲ್ಲಿ ಕಾಲಮಿತಿಯ ಪ್ರದರ್ಶನಗಳನ್ನು ಏರ್ಪಡಿಸುವುದು ಹಾಗೂ ಎರಡನೆಯದಾಗಿ ಮಕ್ಕಳ ಮೇಳಗಳನ್ನು ಸ್ಥಾಪಿಸಿ ಬೆಳೆಸುವುದು. ಚಂದ್ರಶೇಖರ ದಾಮ್ಲೆಯವರೇ ತೆಂಕುತಿಟ್ಟು ವೇದಿಕೆಯ ಮಕ್ಕಳ ಮೇಳವನ್ನು ಸ್ಥಾಪಿಸಿ ನೂರಕ್ಕೂ ಮಿಕ್ಕಿ ಪ್ರದರ್ಶನಗಳನ್ನು ರಾಜ್ಯದ ವಿವಿದೆಡೆಗಳಲ್ಲಿ ನೀಡಿದ್ದಾರೆ. ಈಗ ಅಲ್ಲಲ್ಲಿ ಮಕ್ಕಳ ಮೇಳಗಳು ರೂಪುಗೊಂಡಿರುವುದು ಯಕ್ಷಗಾನದ ಪುನರುತ್ಥಾನದ ಸೂಚಕವಾಗಿದೆ. ಅಂತೆಯೇ ಮಹಿಳಾ ಯಕ್ಷಗಾನಗಳು ಹಾಗೂ ತಾಳಮದ್ದಳೆ ಪ್ರಯೋಗಗಳಾಗುತ್ತಿವೆ. ಸ್ತ್ರೀಯರು ಯಕ್ಷಗಾನವನ್ನು ಕಲಿತರೆ ಮತ್ತೆ ಇಡೀ ಸಮಾಜವೇ ಕಲಿಯುವಂತೆ ಮಾಡುತ್ತಾರೆ. ಹೀಗೆ ಮಹಿಳೆಯರಲ್ಲಿ ಮತ್ತು ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಯಕ್ಷಗಾನವು ಮುಂದಿನ ದಿನಗಳಲ್ಲಿ ಅಭಿವೃದ್ಧಿ ಹೊಂದುವ ಕೆಲಸಗಳಾಗುತ್ತಿವೆ.

**ತಾಳಮದ್ದಳೆ:** ಯಕ್ಷಗಾನದ ಆಂಶಿಕ ಪ್ರದರ್ಶನದ ಒಂದು ಪ್ರಭೇದವಾಗಿ ತಾಳಮದ್ದಲೆ ಎಂಬ ಪ್ರಕಾರವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಹಿಂದಿನಿಂದಲೇ ಪ್ರಚಲಿತವಿದೆ. ಇದನ್ನು ಕೂಟವೆಂದೂ ಕರೆಯುತ್ತಾರೆ. ಪಾತ್ರಧಾರಿಗಳು ವೇಷಧರಿಸಿ ಕುಣಿಯುವ ನೃತ್ಯಾಭಿನಯದ ಅಂಶವನ್ನು ಹೊರತುಪಡಿಸಿ ಉಳಿದೆಲ್ಲಾ ಅಂಶಗಳು ತಾಳಮದ್ದಳೆಯಲ್ಲಿವೆ. ಆದರೆ ಇವುಗಳಲ್ಲಿಯೂ ಆಶು ಸಂಭಾಷಣೆಯ ಅರ್ಥಗಾರಿಕೆಯು ಹೆಚ್ಚು ಮಹತ್ವಪೂರ್ಣವಾಗಿ ಬೆಳೆದಿದೆ. ಇಲ್ಲಿ ಪಾತ್ರ ಚಿಂತನೆ ಮತ್ತು ಪ್ರಸ್ತುತಿಯು ವೈಚಾರಿಕ ತರ್ಕಗಳ ಮೂಲಕ ಬೆಳೆಯುತ್ತದೆ. ಪ್ರತ್ಯುತ್ಪನ್ನ ಮತಿಯಿಂದ ನಡೆಯುವ ಪ್ರಶ್ನೋತ್ತರಗಳು ಆಕರ್ಷಕವಾಗಿರುತ್ತವೆ. ತಾಳಮದ್ದಳೆಗಳು ಹೆಚ್ಚಾಗಿ ಮನೆಯಂಗಳದಲ್ಲಿ ಪೂಜಾ ಕಾರ್ಯಗಳ ದಿನಗಳಂದು ಜರುಗುತ್ತಿದ್ದವು. ಮನೆಗೆ ಬಂದ ನೆಂಟರಿಗೆ ಸಮಯ ಕಳೆಯುವ ಉತ್ತಮ ಮನರಂಜನೆಯ ಕಾರ್ಯಕ್ರಮಗಳಾಗಿರುತ್ತಿದ್ದುವು. ದೇವಸ್ಥಾನಗಳಲ್ಲಿಯೂ ಜಾತ್ರೆ–ಉತ್ಸವಗಳ ಸಂದರ್ಭದಲ್ಲಿ ತಾಳಮದ್ದಳೆಗಳನ್ನು ಏರ್ಪಡಿಸುತ್ತಿದ್ದರು. ಕಾಲಕ್ರಮದಲ್ಲಿ ಕೇವಲ ಪ್ರಸಂಗದ ಪದ್ಯಗಳ ಭಾವಾನುವಾದ ಹೇಳುವಲ್ಲಿಂದ ಮುಂದುವರಿದು ಪಾತ್ರಧಾರಿಗಳ ವೈಚಾರಿಕ ಚರ್ಚೆ ನಡೆಸುವ ಉನ್ನತಿಗೇರಿದ್ದರಿಂದ ತಾಳಮದ್ದಳೆಯೇ ಯಕ್ಷಗಾನದ ಒಂದು ವಿಶಿಷ್ಟ ಪ್ರಕಾರವಾಗಿ ಬೆಳೆದಿದೆ.

ವೇದಿಕೆಯ ಹಿಂಭಾಗದಲ್ಲಿ ಭಾಗವತರು, ಅವರ ಬಲಕ್ಕೆ ಶ್ರುತಿ ಹಿಡಿವವರು ಮತ್ತು ಮದ್ದಳೆಯವರು ಹಾಗೂ ಎಡಕ್ಕೆ ಚಂಡೆಯವರು ಕುಳಿತುಕೊಳ್ಳುತ್ತಾರೆ. ಇವರ ಮುಂದೆ ಎರಡೂ ಬದಿಗಳಲ್ಲಿ ಪಾತ್ರಧಾರಿಗಳು ಮುಖಾಮುಖಿಯಾಗಿ ಕುಳಿತುಕೊಳ್ಳುತ್ತಾರೆ. ಹಿಮ್ಮೇಳದವರು ಗಣಪತಿ ಸ್ತುತಿ ಮಾಡಿ ಪ್ರಸಂಗದ ಪದ್ಯವನ್ನು ಹೇಳಿದ ಬಳಿಕ ಪೀಠಿಕೆಯ ಅರ್ಥಧಾರಿ ಮಾತಾಡುತ್ತಾರೆ. ಮತ್ತೆ ಪ್ರಸಂಗದ ಪದ್ಯಗಳಿಗನುಸಾರ ಪಾತ್ರಧಾರಿಗಳು ಅರ್ಥ ಹೇಳಿ ಕಥಾನಕವನ್ನು ಮುನ್ನಡೆಸುತ್ತಾರೆ. ಹಿಂದೆ ತಾಳಮದ್ದಳೆಗಳು ರಾತ್ರಿಕಾಲದಲ್ಲಿ ಮಾತ್ರ ಬೆಳಗ್ಗಿನ ತನಕ ಜರಗುತ್ತಿದ್ದುವು. ಈಗ ಸಣ್ಣ ಪ್ರಸಂಗಗಳನ್ನಾಯ್ದು ಕಾಲಮಿತಿಯ ಪ್ರದರ್ಶನಗಳನ್ನು ಹಗಲಿನಲ್ಲಿಯೂ ಏರ್ಪಡಿಸುತ್ತಾರೆ.

ತಾಳಮದ್ದಳೆಯಲ್ಲಿ ತಮ್ಮ ವಾಕ್ಚತುತ್ವ ತೀಕ್ಷ್ಣವಾದ ತರ್ಕ, ಪುರಾಣಜ್ಞಾನ, ಪ್ರತ್ಯುತ್ಪನ್ನಮತಿಯಿಂದ ನಡೆಸುವ ಚರ್ಚೆ ಇತ್ಯಾದಿಗಳಿಂದ ತಾರಾಮೌಲ್ಯಗಳಿಸಿದ ಕಲಾವಿದರಿದ್ದರು. ಈಗಲೂ ಇದ್ದಾರೆ. ಇವರಲ್ಲಿ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿ, ನಾರಾಯಣ ಕಿಲ್ಲೆ, ಪೊಳಲಿ ಶಂಕರನಾರಾಯಣ ಶಾಸ್ತ್ರಿ ಬಾಲಕೃಷ್ಣರಾವ್, ಅರ್ಕುಳ ಸುಬ್ರಾಯ ಆಚಾರ್ಯ, ಕೀರಿಕ್ಕಾಡು ಮಾಸ್ತರ್, ವಿಷ್ಣುಭಟ್, ಮಲ್ಪೆ ಶಂಕರನಾರಾಯಣ ಸಾಮಗ, ದೇರಾಜೆ ಸೀತಾರಾಮಯ್ಯ, ಶೇಣಿ ಗೋಪಾಲಕೃಷ್ಣ ಭಟ್, ಶ್ರೀಮಲ್ಪೆ ರಾಮದಾಸ ಸಾಮಗ, ಕುಂಬಳೆ ಸುಂದರರಾವ್, ಡಾ. ಎಂ. ಪ್ರಭಾಕರ ಜೋಶಿ, ಪ್ರೊ ಶಂಭುಶರ್ಮ, ಜಬ್ಬಾರ್ ಸಮೋ, ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಮುಂತಾದವರು ಕರಾವಳಿಯಲ್ಲಿ ಅರ್ಥಧಾರಿಗಳಾಗಿ ಪ್ರಸಿದ್ಧರಾದವರು.

**ಮಕ್ಕಳ ಯಕ್ಷಗಾನ:** ಎಳೆಯ ಮಕ್ಕಳಿಗೆ ಯಕ್ಷಗಾನ ನಾಟ್ಯಾಭ್ಯಾಸ ನೀಡಿ ಪ್ರದರ್ಶನಗಳನ್ನು ಏರ್ಪಡಿಸುವ ಕಾರ್ಯಕ್ರಮಗಳು ಅನೇಕ ಕಡೆ ನಡೆಯುತ್ತಿವೆ. ಶಾಲಾ ಕಾಲೇಜುಗಳ ಶಿಕ್ಷಕರು ಯಕ್ಷಗಾನಾಸಕ್ತರಾಗಿದ್ದ ಸಂದರ್ಭದಲ್ಲಿ ಯಕ್ಷಗಾನ ನಾಟ್ಯಾಭ್ಯಾಸದ ತರಬೇತಿ ನೀಡಿ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರದರ್ಶನಗಳು ಜರುಗುತ್ತವೆ. ಮಟ್ಟಿ ಸುಬ್ಬರಾವ್, ಡಾ। ಚಂದ್ರಶೇಖರ ದಾಮ್ಲೆ, ಕೋಡ್ಲ ಗಣಪತಿ ಭಟ್, ದೇವಕಾನ ಕೃಷ್ಣಭಟ್, ವೆಂಕಟೇಶ್‌ಮಯ್ಯ, ಯಕ್ಷಕೂಟ ಪುತ್ತೂರು, ಇವರೆಲ್ಲ ಮಕ್ಕಳ ಯಕ್ಷಗಾನ ತಂಡಗಳನ್ನು ಕಟ್ಟಿ ಬೆಳೆಸಿದವರು. ಮಂಗಳೂರಿನ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ವಿಶ್ವವಿದ್ಯಾಲಯ ಮಟ್ಟದ ಯಕ್ಷಗಾನ ಸ್ಪರ್ಧೆ ಪ್ರತಿವರ್ಷವೂ ಅನೇಕ ವರ್ಷಗಳಿಂದ ಜರುಗುತ್ತಿದೆ.

ಜೋಡಾಟ, ಕೂಡಾಟ, ಗೊಂಬೆಯಾಟ, ದ್ವಂದ್ವಯಕ್ಷಗಾನ ಇತ್ಯಾದಿ ಪರಿಕಲ್ಪನೆಗಳು ಯಕ್ಷಗಾನದಲ್ಲಿವೆ. ಜೋಡಾಟವೆಂದರೆ ಅಕ್ಕಪಕ್ಕದಲ್ಲಿ ವೇದಿಕೆಗಳನ್ನು ನಿರ್ಮಿಸಿ ಏಕಕಾಲದಲ್ಲಿ ಯಕ್ಷಗಾನ ಪ್ರದರ್ಶನವನ್ನು ಸ್ಪರ್ಧಾತ್ಮಕವಾಗಿ ಏರ್ಪಡಿಸುವುದಾಗಿತ್ತು. ಇದು ಯಾವಾಗಲಾದರೊಮ್ಮೆ

ಜರುಗುತ್ತಿದ್ದ ಪ್ರದರ್ಶನ ಮಾತ್ರ ಕೂಡಾಟದಲ್ಲಿ ಎರಡು ತಿಟ್ಟುಗಳ ಕಲಾವಿದರು ಇದಿರು ಬದಿರು ಪಾತ್ರಧಾರಿಗಳಾಗಿ ತಮ್ಮದೇ ಹಿಮ್ಮೇಳದೊಂದಿಗೆ ಪ್ರದರ್ಶನ ನೀಡುವುದಾಗಿದೆ. ಒಂದು ತಿಟ್ಟಿನವರು ಪಾಂಡವರಾದರೆ ಮತ್ತೊಂದು ತಿಟ್ಟಿನವರು ಕೌರವರು ಹೀಗೆ ಒಂದು ಪ್ರಸಂಗವನ್ನು ಕೂಡಿ ಆಡುವ ಕ್ರಮ ಇದಾಗಿದೆ. ದ್ವಂದ್ವ ಎಂಬುದು ಭಾಗವತಿಕೆಗೆ ಸಂಬಂಧಿಸಿದ್ದಾಗಿದ್ದು, ಒಂದೇ ಪದ್ಯವನ್ನು ಇಬ್ಬರು ಭಾಗವತರು ಒಬ್ಬರು ಹಾಡಿದ್ದಾಕ್ಷಣ ಇನ್ನೊಬ್ಬರು ತಮ್ಮದೇ ಶೈಲಿಯಲ್ಲಿ ಹಾಡುವ ಕ್ರಮ. ಇನ್ನು ಗೊಂಬೆಯಾಟದಲ್ಲಿ ಸುಮಾರು ಒಂದೂವರೆ ಅಡಿಯಿಂದ ಎರಡು ಅಡಿ ಎತ್ತರದ ಗೊಂಬೆಗಳಿಗೆ ಯಕ್ಷಗಾನ ವೇಷಭೂಷಣಗಳನ್ನು ತೊಡಿಸಿ, ಹಿನ್ನೆಲೆಯಲ್ಲಿ ಭಾಗವತಿಕೆ ಹಾಗೂ ಅರ್ಥಗಾರಿಕೆ ಮಾಡುತ್ತ ಸಣ್ಣವೇದಿಕೆಯಲ್ಲಿ ಗೊಂಬೆಗಳನ್ನು ಕುಣಿಸುತ್ತಾರೆ. ಇದು ಸೂತ್ರದ ಗೊಂಬೆಯಾಟವೆಂದು ಕೂಡಾ ಕರೆಯಲ್ಪಡುತ್ತದೆ. ದಕ್ಷಿಣಕನ್ನಡದ ತೆಂಕುತಿಟ್ಟಿಗೆ ಸಂಬಂಧಿಸಿದಂತೆ ಕಾಸರಗೋಡಿನ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಸಂಘ ಹಾಗೂ ಬೆಳ್ತಂಗಡಿಯ ಶ್ರೀ ಮಹಾಮ್ಮಾಯಿ ಗೊಂಬೆಯಾಟ ಮೇಳಗಳಿವೆ.

**ಜಾನಪದ ಹಾಡು–ಕುಣಿತಗಳು:** ಜಿಲ್ಲೆಯ ಜನಪದ ಕಲಾ ಪ್ರಕಾರಗಳಲ್ಲಿ ಕುಣಿತಗಳು, ವಾದ್ಯಗಾರಿಕೆ, ರಂಗ ಪ್ರಯೋಗಗಳ ಬಗ್ಗೆ ನೋಡಬಹುದು. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು ಕುಣಿತಗಳನ್ನು ಆರಾಧನಾ ಕುಣಿತಗಳು, ಮಾಂತ್ರಿಕ ಕುಣಿತಗಳು ಕೃಷಿ ಸಂಬಂಧೀ ಕುಣಿತಗಳು, ಮತ ಸಂಬಂಧಿ ಮತ್ತು ಕುಟುಂಬ ಸಂಬಂಧಿ ಕುಣಿತಗಳೆಂದು ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. ಸಾಮಾನ್ಯವಾಗಿ ಕುಣಿತ ಅಥವಾ ಆಚರಣೆಗಳ ಮೊದಲು ಹಾಗೂ ಅಂತ್ಯದಲ್ಲಿ ದೈವದ ಆರಾಧನೆ ಮಾಡುವುದಿದೆ. ಆದರೆ, ಭೂತಕೋಲ, ನಾಗಮಂಡಲ, ಪಾಣರಾಟಗಳಲ್ಲಿ ಆರಾಧನೆ ಮುಖ್ಯವಾದರೂ ಕುಣಿತವೂ ಉಂಟು. 'ಆಟಿ ಕಳಂಜ' ವನ್ನು ಮಾಂತ್ರಿಕ ಕುಣಿತವಾಗಿ ಪರಿಗಣಿಸಿದ್ದು, ಮುಖಕ್ಕೆ ಬಣ್ಣ ಬಳಿದುಕೊಂಡು ತೆಂಗಿನ ತಿರಿಯಿಂದಲೇ ರೂಪಿಸಿದ ವೇಷಭೂಷಣ ಧರಿಸಿದ 'ಕಳಂಜ' ವೇಷಧಾರಿ ತಂಬರೆ ವಾದ್ಯದ ನಾದಕ್ಕೆ ಪಾಡ್ದನದ ರಾಗಕ್ಕೆ ಪೂರಕವಾಗಿ ಕುಣಿಯುತ್ತಾ ಮನೆಮನೆಗಳಿಗೆ ಹೋಗಿ ಅವರು ನೀಡುವ ಆಹಾರ ಪದಾರ್ಥ ಸ್ವೀಕರಿಸಿ ಮಾರಿರೋಗ ಪರಿಹರಿಸುವ ಅಭಯ ನೀಡುತ್ತಾನೆ. ವೇಷದಲ್ಲಿ ಪ್ರಾದೇಶಿಕ ವ್ಯತ್ಯಾಸವೂ ಇದೆ. ಬಿಲ್ಲವ ಸಮಾಜದವರು ನಡೆಸುವ ಕೋಟಿ–ಚೆನ್ನಯ್ಯ ಪಾತ್ರಧಾರಿಗಳ ಸಾವುಕೋಲ, ಹೆದರಿಕೆಯಿಂದ ಭಯಗೊಂಡವರ ಭಯಕಳೆಯಲು 'ಭಯಾನಕ ವೇಷಕೋಲ' ಎಳೆ ಮಕ್ಕಳ ರೋಗ ನಿವಾರಣೆಗಾಗಿ ಬರುವ ಕೊರಗತನಿಯ, ಮಾನಸಿಕ ರೋಗಿಯನ್ನು ಆವರಿಸಿಕೊಂಡಿರುವ 'ಕುಲೆ'ಯನ್ನು ಹೋಗಲಾಡಿಸಲು ನಡೆಸುವ ರಾಹು–ಗುಳಿಗ ಕೋಲಗಳನ್ನು ಮಾಂತ್ರಿಕ ಕುಣಿತಗಳಿಗೆ ಉದಾಹರಿಸಿದ್ದಾರೆ.

ಬೆಳ್ತಂಗಡಿ ಭಾಗದಲ್ಲಿ ಮೇರರು 'ಪಿಲಿಪಂಜಿ ಕುಣಿತ' ಕಾಡು ಪ್ರಾಣಿಗಳ ಉಪದ್ರವ ನಿವಾರಿಸುವ ಆಚರಣೆಯಂತಿದ್ದು, ಪಾತ್ರಧಾರಿಗಳು ಅಡಿಕೆ ಹಾಳೆಯಲ್ಲಿ ರಚಿಸಿದ ಹುಲಿ, ಹಂದಿ, ಜಿಂಕೆಗಳ ಮುಖವಾಡ ಧರಿಸಿ ಆ ಪ್ರಾಣಿಗಳಂತೆ ನಡಿಗೆ ಹಾಕುತ್ತಿದ್ದು, ಬೇಟೆಗಾರ ವೇಷಧಾರಿ ಅವುಗಳನ್ನು ಕೊಲ್ಲುವಂತೆ ಅಭಿನಯಿಸುತ್ತಾನೆ. ಇದು ಆ ಪ್ರದೇಶದ ಬೆಳೆ ಹಾನಿ ಮಾಡುವ ಪ್ರಾಣಿಗಳ ಭಯ ನಿವಾರಣೆಗೆ ರಚಿಸಿಕೊಂಡ ಕುಣಿತವಾಗಿದೆ. 'ಕರ್‌ಗೋಲ್' ಕುಣಿತದಲ್ಲಿ ನಾಲ್ವರು ಯುವಕರು, ಮೈಮೇಲೆ ಜೇಡಿ ಮಣ್ಣಿನಿಂದ ಚುಕ್ಕೆ ಗೆರೆ, ಬಳೆ, ಇತ್ಯಾದಿ ಆಕಾರಗಳನ್ನು ಬರೆದುಕೊಂಡು, ತಲೆಗೆ ಬಿಳಿ ಬಟ್ಟೆಯ ಪಟ್ಟಿಕಟ್ಟಿಕೊಂಡು, ಕಾಲಿಗೆ ಗೆಜ್ಜೆಕಟ್ಟಿ ಕೈಯಲ್ಲಿ ನೆಕ್ಕಿಸೊಪ್ಪು ಹಿಡಿದು ಹಿಂದೆ ಮುಂದೆ ಚಲಿಸುವಂತೆ ದೊಣ್ಣೆ ಹಿಡಿದ ಮುದುಕ ವೇಷಧಾರಿಯೊಬ್ಬನೊಂದಿಗೆ ಕುಣಿಯುವ ಮಾಂತ್ರಿಕ ಆಚರಣೆ ಇದಾಗಿದೆ. ಕಾಡಿನ ಕಾಟದರೆಂಬ ಸಾಂಸ್ಕೃತಿಕ ವೀರರು ಕ್ಷಾಮ ಪೀಡಿತ ಪ್ರದೇಶಗಳಿಗೆ ವಿಶಿಷ್ಟ ಭತ್ತದ ತಳಿ ತಂದು ತಮ್ಮ ಕಾರಣಿಕ (ಮಾಂತ್ರಿಕ) ತನದಿಂದ ಬೆಳೆ ತೆಗೆಯುವುದು ಈ ಕುಣಿತದ ಆಶಯವಾಗಿದೆ. ಮಾರಿರೋಗ ನಿವಾರಣೆಗಾಗಿ 'ಕಂಗೀಲು' ಕುಣಿತ ಆಡುತ್ತಾರೆ.

ಕೃಷಿ ಸಂಬಂಧಿತ ಕುಣಿತದಲ್ಲಿ ಕಂಬಳ, ಭೂತ, ನಾಗರ ದೇವತೆಗಳಿಗೆ 'ಕೋಲ' ಆಚರಣೆ ನಡೆಯುತ್ತವೆ. ಕೃಷಿ ಸಂರಕ್ಷಣೆಗಾಗಿ 'ಕೆಡ್ಡಸ' ಹಬ್ಬ ಆಚರಿಸುತ್ತಿದ್ದು, 'ಕೆಡ್ಡಸದ ಹೇಳಿಕೆ ಕುಣಿತ' ಕಾಡು ಪ್ರಾಣಿಗಳ ಬೇಟೆಯ ಕುರಿತಾಗಿದೆ. ಭತ್ತದ ಕೊಯ್ಲಾದ ನಂತರ ನಲ್ಕೆ ಜನಾಂಗದ ಸ್ತ್ರೀಯರು ಹಾಡು ಕುಣಿತಗಳ ಮೂಲಕ ಭತ್ತ ಬಡಿದು ಕೊಂಡೊಯ್ಯುವ ಆಚರಣೆಯಾಗಿದ್ದು, ಇದಕ್ಕೆ 'ಪೊಲ್ಸೊಡಿ ಪೋಪಿನಿ' ಎಂದು ಕರೆಯುತ್ತಾರೆ. 'ನಲ್ಕೆ' ಜನಾಂಗದವರಿಗೂ ಕೃಷಿ ಸಂಬಂಧಿತ ಹಾಗೂ ಭೂತ ಕುಣಿತಗಳಿಗೂ ಪರಸ್ಪರ ಸಂಬಂಧವಿದೆ.

ಮತ ಸಂಬಂಧೀ ಕುಣಿತಗಳಲ್ಲಿ ಜೋಗಿ ಪುರುಷ, ಸೋಣದ ಜೋಗಿ, ಕಾವೇರಿ ಪುರುಷ, ಸಿದ್ಧ ವೇಷ ಮತ್ತು ಮತ್ತು ಬಾಲೆ ಸಾಂತುಗಳನ್ನು ಉದಾಹರಿಸಿದೆ. ಸಿದ್ಧವೇಷ ಸುಳ್ಯ ಪರಿಸರದಲ್ಲಿ ಗೌಡ ಜನಾಂಗದವರು ನಡೆಸುತ್ತಿದ್ದು, ಅವರೊಂದಿಗೆ ಸನ್ಯಾಸಿ, ಬ್ರಾಹ್ಮಣ ಮತ್ತು ದಾಸಯ್ಯರ ವೇಷಗಳಿರುತ್ತವೆ. ಪಂಚೆ, ಮುಂಡಾಸು, ನಿಲುವಂಗಿ, ಸೊಂಟಕ್ಕೆ ದಟ್ಟಿಕಟ್ಟಿದ ಯುವಕರು; ಬಾಳೆಲೆಯಿಂದ ಮೈ ಮುಚ್ಚಿಕೊಂಡ ಸನ್ಯಾಸಿ ದೊಣ್ಣೆ ಹಿಡಿದುಕೊಂಡಿದ್ದು, ನಾಥಪಂಥ ಹಾಗೂ ವೈದಿಕ ಧರ್ಮದ ಬಗ್ಗೆ ನಡೆದ ಸಂಘರ್ಷವನ್ನು ಉಳಿದವರು

ಪರಸ್ಪರ ಜಗಳಾಡಿದಂತೆ ಸಾಂಕೇತಿಕವಾಗಿ ಅಭಿನಯಿಸಿ, ನಿಷ್ಕ್ರಮಿಸಿದ ನಂತರ ಯುವಕರು ಜಾಗಟೆ ಬಾರಿಸುತ್ತಾ ಕುಣಿತ ನಡೆಸುತ್ತಾರೆ. ಉಳಿದ ಕುಣಿತಗಳೂ ಕಾಸರಗೋಡು, ವಿಟ್ಲ ಪ್ರದೇಶದಲ್ಲಿ ನಡೆಯುತ್ತಿದ್ದು, 'ನಲಿಕೆ' ಜನಾಂಗದವರು ನಡೆಸಿಕೊಡುತ್ತಾರೆ. ಜೋಗಿ ಅರಸು ಮನೆತನದ ಪಟ್ಟಾಭಿಷೇಕದ ನೆನಪಿಗಾಗಿ 'ಜೋಗಿ ಅರಸು' ಕುಣಿತ ಆಚರಿಸಲಾಗುತ್ತಿತ್ತು. ಕೆಲವು ಕುಣಿತಗಳನ್ನು ಕುಟುಂಬ ಸಂಬಂಧಿಗಳೆಂದು ಗುರುತಿಸಲಾಗಿದೆ. ಕುಟುಂಬದಲ್ಲಿರುವ ಅಸಹನೆ ಹಾಗೂ ಜಗಳಗಳನ್ನು, ವಸ್ತುವಾಗಿರಿಸಿಕೊಂಡು ಕುಣಿಯುವ ಚೆನ್ನು ಕುಣಿತ, ಅಂತರಜಾತೀಯ ವಿವಾಹ ವಿರೋಧ ಕುರಿತ 'ಕನ್ಯಾಪು ಕುಣಿತ'; ಅತ್ತಿಗೆ ನಾದಿನಿಯರನ್ನು ಕುರಿತ 'ಮಾಯಿದ ಪುರುಷೇರ್ ಕುಣಿತ', ಪ್ರಕೃತಿ ಹಾಗೂ ಸ್ತ್ರೀ ಸಂಕೇತಿಸಿದ 'ಸೋಣೋದ ಮದಿಮಲ್' ಕುಣಿತಗಳನ್ನು ಹೆಸರಿಸಿದೆ. ಇದು ಮಹಿಳೆಯರು ನಡೆಸುವುದಾದರೆ ಉಳಿದವು ಪುರುಷರು ಹಾಗೂ ಸ್ತ್ರೀ ವೇಷಧಾರಿ ಪುರುಷರು ನಡೆಸಿಕೊಡುವುದಾಗಿವೆ.

ಉಳಿದ ಜಿಲ್ಲೆಗಳಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಜನಪದ ಗೀತೆಗಳು ವೈವಿಧ್ಯಮಯವಾಗಿದ್ದು, ಟಿ. ಕೇಶವಭಟ್ಟರು ಗುರುತಿಸಿದ್ದಾರೆ. ತುಳುವಿನಲ್ಲಿ 'ಪಾರ್ದನ' (ಪಾರ್ತನ) ಎಂದು ಕರೆಯುವ ಗೀತ ಪ್ರಕಾರವೊಂದಕ್ಕೆ ಪಾಡ್ದನ, ಪಾಡ್ದನೆ, ಪಾಡೆನೆ ಇತ್ಯಾದಿಯಾಗಿ ಹೆಸರಿಸಲಾಗುತ್ತದೆ. ಭೂತಕ್ಕೆ ಸಲ್ಲಿಸುವ ಸೇವೆಯ ಉತ್ಸವಗಳಾದ ಆಯನ, ನೇಮ ಕೋಲಗಳಲ್ಲಿ ಭೂತಪಾತ್ರಿಗೆ ಆವೇಶ ಬರುವಂತೆ ಆಯಾ ಭೂತಗಳನ್ನು ಕುರಿತು ಹಾಡುತ್ತಾರೆ. ಆಯನ, ನೇಮಗಳು ಪ್ರತಿ ವರ್ಷ ನಿಶ್ಚಿತ ದಿನ ಭೂತಗಳಿಗೆ ಸಲ್ಲಿಸುವ ಸೇವೆಯಾಗಿದ್ದು, ಕೆಲವೊಂದು ಪಂಗಡದವರು ಆಯಾ ಭೂತಗಳ ಹುಟ್ಟು, ಸಂಚಾರ, ನೆಲೆ ಇತ್ಯಾದಿಗಳನ್ನು ಕಥನ ರೂಪದಲ್ಲಿ ಪದ್ಯಗಳ ಮೂಲಕ ಹಾಡುವ ಪ್ರಕಾರ ಇದಾಗಿದೆ. ಇದಲ್ಲದೆ ದುಡಿದು ದಣಿದ ಜನ ವರ್ಗ ಸಂಜೆ ಮನೆಯಲ್ಲಿಯೇ ದುಡಿ ನುಡಿಸುತ್ತ ಇಲ್ಲವೆ ಬೇಸಾಯದ ಕಾಲದಲ್ಲಿ ನಾಟಿಯ ಸಂದರ್ಭದಲ್ಲಿ ಪಾರ್ದನಗಳನ್ನು ಹಾಡುವುದುಂಟು. ಅವುಗಳಲ್ಲಿ 'ಕೋಟಿ ಚೆನ್ನಯರ' ಪಾರ್ದನ ಜಿಲ್ಲೆಯಲ್ಲಿ ಪ್ರಸಿದ್ಧವಾಗಿದ್ದು, ಸಹೋದರರಾದ ಈ ಯೋಧರು ಬಲ್ಲಾಳ ರಾಜನ ಪೋಷಣೆಯಲ್ಲಿದ್ದು, ದುಷ್ಟ ಮಂತ್ರಿಯ ಕುತಂತ್ರಕ್ಕೆ ನೊಂದು ಆತನನ್ನು ವಧಿಸಿದ್ದು, ರಾಜನ ಆಗ್ರಹಕ್ಕೆ ಪಾತ್ರರಾಗಿ ಇನ್ನೊಬ್ಬ ರಾಜನಲ್ಲಿ ಆಶ್ರಯ ಪಡೆದು ಹಂದಿ ಬೇಟೆಯ ನಿಮಿತ್ತ ನಡೆದ ಯುದ್ಧದಲ್ಲಿ ವಿಷಯುಕ್ತ ಬಾಣದಿಂದ ಕೋಟಿ ಅಸುನೀಗಿದನು. ಅದರ ಮೊದಲು ಎರಡೂ ರಾಜರಿಗೆ ಕೈ ಹಿಡಿಸಿ ಸ್ನೇಹದಿಂದ ಇರುವಂತೆ ಪ್ರತಿಜ್ಞೆ ಮಾಡಿಸಿದ. ಸಹೋದರನ ಅಗಲಿಕೆಯಿಂದ ಚೆನ್ನಯ್ಯ ಸಹ ಕಲ್ಲಿಗೆ ತಲೆ ಚಚ್ಚಿ ಸತ್ತಿದ್ದು, ಎಣ್ಮೂರಿನಲ್ಲಿ ಅಲ್ಲಿಯ ಸಿಂಧೂ ಬಲ್ಲಾಳರಸು ಇಬ್ಬರಿಗೂ ದೇವಾಲಯ ಕಟ್ಟಿಸಿದ್ದು ಉಳಿದುಬಂದಿದೆ. ಕಥೆಯಲ್ಲಿ ಬೇಟೆ–ಕಂಬಳಗಳ ವರ್ಣನೆ, ಸೇಡು ತೀರಿಸುವ ಛಲ, ನುಡಿದಂತೆ ನಡೆವ ಧೀರ ಪ್ರವೃತ್ತಿ, ದೈವ ಭಕ್ತಿ, ಸ್ವಾಮಿನಿಷ್ಠೆ, ಸೋದರ ಪ್ರೇಮಗಳಲ್ಲದೆ ದುಃಖಾಂತದಲ್ಲಿಯ ಕಥನ ರಸಭರಿತವಾಗಿದೆ. ಇನ್ನೊಂದು ಪ್ರಸಿದ್ಧ ಪಾರ್ದನ 'ಸಿರಿ' ಸಂಧಿ – ಬಂಟ ಸಮಾಜದ ಸ್ತ್ರೀಯೊಬ್ಬಳು ತನಗೆ ಗಂಡ ಮಾಡಿದ ಅನ್ಯಾಯವನ್ನು ಪ್ರತಿಭಟಿಸಿ ಬಾಳಿದ ರಮ್ಯ ದುರಂತ ಕಥಾನಕ. ಇದನ್ನು ಫಿನ್‌ಲ್ಯಾಂಡ್‌ನ ಜಾನಪದ ವಿದ್ವಾಂಸ ಲಾರಿ ಹ್ಯಾಂಕೊ ಎನ್ನುವವರು ಇಂಗ್ಲೀಷ್‌ಗೆ ಅನುವಾದಿಸಿ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ೧೫,೬೮೩ ಚರಣಗಳ ಇದು ಪ್ರಪಂಚದ ಮಹಾಕಾವ್ಯಗಳ ಸಾಲಿನಲ್ಲಿ ನಿಲ್ಲಬಲ್ಲ ಕಥಾನಕ ಎಂದು ಲಾರಿ ಹಾಂಕೊ ಅಭಿಪ್ರಾಯಪಡುತ್ತಾರೆ. ಇದಲ್ಲದೆ ಮಹಿಷಂತಾಯ ಭೂತ, ಪಂಜುರ್ಲಿ ಪಾರ್ದನಗಳು, ನಲಿಕೆ ಹಾಡುಗಳು, ನೇಜಿ (ನಾಟಿ)ಯ ಹಾಡುಗಳು, ಲಾವಣಿ ಹಾಡುಗಳು, ಮದ್ದಿನ ಹಾಡುಗಳು, ನಕ್ಷತ್ರ ವೃಕ್ಷಗಳ ವರ್ಣನೆ ಇತ್ಯಾದಿ ಜನಪದ ಗೀತ ಪ್ರಕಾರಗಳು ತುಳುವಿನಲ್ಲಿವೆ.

ಭೂತಗಳ ಪರಿಕಲ್ಪನೆ ತುಳುನಾಡಿನಲ್ಲಿ ವಿಶೇಷವಾಗಿದ್ದು, ಒಂದು ಜನಪದ ನಂಬಿಕೆಯ ಆಚರಣೆಯಾಗಿ ಸಮುದಾಯದ ಒಟ್ಟು ಜನರಿಂದ ಆಚರಿಸಲ್ಪಡುತ್ತವೆ. ಈ ಬಗ್ಗೆ ಪ್ರೌಢ ಅಧ್ಯಯನ ಮಾಡಿರುವ ಕೆ. ಚಿನ್ನಪ್ಪಗೌಡರು ಭೂತಗಳ ಹುಟ್ಟು, ಚಾರಿತ್ರಿಕತೆ, ವರ್ಗೀಕರಣ, ಸಾಂಸ್ಕೃತಿಕ ಸ್ವರೂಪ, ಕಲಾತ್ಮಕತೆ, ಸಾಂಸ್ಕೃತಿಕ ಸಂಬಂಧ, ಸಾಮಾಜಿಕತೆಗಳಲ್ಲದೆ ಕಾಲ ಕಾಲದ ಮಾರ್ಪಾಡಿನ ಬಗ್ಗೆ ವ್ಯಾಪಕವಾಗಿ ಪರಿವೀಕ್ಷಣೆ ಕೈಗೊಂಡು ಗ್ರಂಥ ರಚಿಸಿದ್ದಾರೆ. "ತುಳು ನಾಡಿನ ಜನರು 'ಭೂತ'ಗಳನ್ನು ದೈವಿಕ ಶಕ್ತಿಗಳೆಂದು ನಂಬಿ ಆರಾಧಿಸುತ್ತಾರೆ. ನಿಗದಿ ಮಾಡಿದ ಸ್ಥಳ, ಕಾಲ ಮತ್ತು ಅವಧಿಯಲ್ಲಿ ಅಲೌಕಿಕ ಆವರಣವನ್ನು ನಿರ್ಮಿಸಿಕೊಂಡು, ತಾವು ನಂಬಿಕೊಂಡು ಬಂದ ಅನೇಕ ಭೂತಗಳನ್ನು ಪೂಜಿಸುತ್ತಾರೆ. ಆರಾಧನೆಯ ಈ ಪದ್ಧತಿಯು ಯಾವುದೇ ಒಂದು ಪ್ರದೇಶ ಹಾಗೂ ಯಾವುದೇ ಒಂದು ಜಾತಿಯ ಜನರು ಮತ್ತು ಕುಟುಂಬಸ್ಥರಿಗೆ ಮಾತ್ರ ಸೀಮಿತವಾಗಿಲ್ಲ. ನೂರಾರು ಸಂಖ್ಯೆಯ ಭೂತಗಳು, ಅವುಗಳ ಗುಡಿಗಳು ಆರಾಧನೆಗೆ ಸಂಬಂಧಪಟ್ಟಂತೆ ಇರುವ ಆಯುಧಗಳು, ಭೂತಗಳ ಮುಖವಾಡಗಳು ಇವೆಲ್ಲವನ್ನು ಜನರು ಗೌರವ ಶ್ರದ್ಧೆಗಳಿಂದ ನೋಡಿಕೊಳ್ಳುತ್ತಾರೆ. ತುಳು ನಾಡಿನಲ್ಲಿ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿರುವ ನಲಿಕೆ, ಪರವ, ಪಂಬದ ಜಾತಿಯ ಜನರು ಸಾಂಸ್ಕೃತಿಕ ಸ್ವರೂಪದ ಆರಾಧನೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಬಣ್ಣ, ವೇಷ ಭೂಷಣ, ಹಾಡು, ಮಾತು, ಮೊದಲಾದ ರಂಗ ಪರಿಕರಗಳನ್ನು ಬಳಸಿಕೊಂಡು, ತಾಂತ್ರಿಕ ಸ್ವರೂಪದ ಆರಾಧನೆಯನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತಾರೆ" ಎಂದು ಹೇಳುವ ಚಿನ್ನಪ್ಪಗೌಡರು ಆರಾಧನೆಯಲ್ಲಿ

ಮೇಲುವರ್ಗದವರೂ ಪಾಲುಗೊಳ್ಳುವಿಕೆ, ಆರಾಧನೆಯಲ್ಲಿ ಕಂಡುಬರುವ ಭಯ ಹಾಗೂ ಅದರ ನಿವಾರಣೆಗಳಲ್ಲಿ ದೊರೆಯುವ ಮಾನಸಿಕ ಸಮಾಧಾನ, ಗತಿಸಿದ ಪೂರ್ವಜರು ಪಾತ್ರಿಯ ಮೂಲಕ ದರ್ಶನ ಕೊಟ್ಟು ಸಾಂತ್ವನ ಹೇಳುವರೆಂಬ ನಂಬಿಕೆ, ದುಷ್ಟ ಪ್ರಾಣಿಗಳ ಉಪಟಳದೊಂದಿಗೇ ಬದುಕಬೇಕಿದ್ದು, ಅವುಗಳ ಬಗ್ಗೆ ಇರುವ ಭಯ ಹಾಗೂ ಆರಾಧನೆಯಿಂದ ಒಲಿಸಿಕೊಳ್ಳಬಹುದೆಂಬ ಭಕ್ತಿ ಭಾವಗಳನ್ನು ಕುರಿತು ವಿವರಿಸುತ್ತಾರೆ. ವೈದಿಕ ಹಾಗೂ ಅವೈದಿಕ ಸಂಬಂಧಗಳೂ ಸಂಶೋಧಕರ ಪ್ರಬಂಧಗಳಿಗೆ ವಸ್ತುವಾಗಿದೆ. ಭೂತಗಳಲ್ಲಿ ಅವುಗಳ ಪ್ರಾದೇಶಿಕ ವ್ಯಾಪ್ತಿಗೆ ಸಂಬಂಧಿಸಿದಂತೆ ವರ್ಗೀಕರಣ ಮಾಡಲಾಗಿದೆ. ಸೀಮೆಭೂತಗಳು; ನಾಡಭೂತಗಳು; ಮಾಗಣೆ ಭೂತಗಳು; ಗ್ರಾಮ ಭೂತಗಳು; ಜಾಗದ ಭೂತಗಳು; ಗುತ್ತಿನ ಭೂತಗಳು ಹಾಗೂ ಕುಟುಂಬದ ಭೂತಗಳು ಎಂಬಂತೆ ಇದ್ದು ಅವುಗಳನ್ನು ಕೋಲ, ನೇಮ, ಬಂಡಿಜಾತ್ರೆ, ಮೈಮೆ, ದೊಂಪದ ಬಲಿ, ಕೆಂಡಸೇವೆ ಮೆಚ್ಚಿ (ಹೊಗಳುವಿಕೆ), ಜಾಲಾಟ (ಗದ್ದೆಯ ಆವರಣ) ಇತ್ಯಾದಿ ಪ್ರಕಾರಗಳಲ್ಲಿ ಆರಾಧಿಸಲಾಗುತ್ತದೆ.

ಜನಪದ ಗೀತ ಪ್ರಕಾರಗಳ ಹಾಡುಗಳಲ್ಲಿ ಮಕ್ಕಳಿಗಾಗಿ ಜೋಗುಳ ಹಾಡು, ವಿವಿಧ ವಸ್ತು ಕುರಿತಂತೆ, ಲಾಲನೆ–ಪಾಲನೆಯ ಸಂದರ್ಭದ ಹಾಡುಗಳು, ಆಟದ ಹಾಡುಗಳು, ವಿನೋದ ಪರವಾದ ಹಾಡುಗಳು, ಪುರುಷರಿಗಾಗಿ ಯಕ್ಷಗಾನದ ಹಾಡುಗಳಲ್ಲಿ ಬಿಡಿಯಾದ ಹಾಗೂ ಕಥಾ ಸಂದರ್ಭದ ಹಾಡುಗಳು, ಮಹಿಳೆಯರಿಗೆ ಕೆಲಸ ಕಾರ್ಯ, ಕಥೆ, ಬಾಂಧವ್ಯ, ಸೋಬಾನೆ ಇತ್ಯಾದಿ ಸಂದರ್ಭದ ಹಾಡುಗಳು ಗುರುತಿಸಲ್ಪಟ್ಟಿವೆ. ಅಲ್ಲದೆ ದಾಸರ ಪದಗಳು ಅನುಭವಾಮೃತ ಪದಗಳನ್ನೂ ಈ ಪ್ರಕಾರಕ್ಕೆ ಹೆಸರಿಸಿದೆ. ಗೋವಿನ ಕಥೆಗೆ ಸಂಬಂಧಿಸಿದ ಹಸ್ತಪ್ರತಿಯಲ್ಲಿ ೨೩೭ ಪದ್ಯಗಳಿದ್ದು (ಸಾಮಾನ್ಯವಾಗಿ ಬೇರೆಡೆ ನೂರರಿಂದ ನೂರ ನಲವತ್ತು ಪದ್ಯಗಳು ದೊರೆಯುತ್ತವೆ), ಕಥೆ ಇನ್ನಷ್ಟು ವಿಸ್ತಾರವಾಗಿದೆ. ಮೇಲೆ ಉದಾಹರಿಸಿದ ಜನಪದ ಗೀತೆಗಳಲ್ಲಿ ಬಹುತೇಕ ತ್ರಿಪದಿಗಳಾಗಿದ್ದು, ಅವೂ ಸೇರಿದಂತೆ ಅನೇಕವು ತಾಳ, ಲಯ, ಛಂದೋಬದ್ಧವಾಗಿರುವುದನ್ನು ಗಮನಿಸಲಾಗಿದೆ.

**ಉತ್ಸವಗಳು**

ಜಿಲ್ಲೆಯಲ್ಲಿ ವಾರ್ಷಿಕವಾಗಿ ಅನೇಕ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಮುಖ್ಯವಾಗಿ ಕದ್ರೋಳಿ ಗೋಕರ್ಣನಾಥ ದೇವಾಲಯದ ನವರಾತ್ರಿ ಉತ್ಸವ ಪ್ರಸಿದ್ಧವಾದುದು. ದೇವಾಲಯ ೧೯೧೨ರಲ್ಲಿ ಸ್ಥಾಪನೆಯಾಗಿದ್ದು, ಭಿತ್ತಿಯ ಮೇಲೆ ಕಾವಿಕಲೆಯ ಚಿತ್ರಗಳಿವೆ. ಈಚೆಗೆ ೧೯೯೧ರಲ್ಲಿ ದೇವಾಲಯ ಇಡಿಯಾಗಿ ಜೀರ್ಣೋದ್ಧಾರಗೊಂಡು, ದಸರಾ ಮೆರವಣಿಗೆ ಸಹ ಜನಪದ ಕುಣಿತ, ಟ್ಯಾಬಲೋ, ಪಂಜಿನ ಮೆರವಣಿಗೆ ಇತ್ಯಾದಿಗಳಿಂದ ಕೂಡಿ ಆಕರ್ಷಕವಾಗಿ ನಡೆಯುತ್ತಿದೆ. ಕೃಷ್ಣ ಜಯಂತಿಯಲ್ಲಿ ಇಡೀ ಜಿಲ್ಲೆಯ ಅನೇಕ ದೇವಾಲಯಗಳಲ್ಲಿ ಮಕ್ಕಳಿಗೆ ಕೃಷ್ಣವೇಷ ಸ್ಪರ್ಧೆ ಹಾಗೂ ಗೀತಗಾಯನ ಇತ್ಯಾದಿ ಸ್ಪರ್ಧೆಗಳು ನಡೆಯುತ್ತವೆ. ಜಿಲ್ಲಾಡಳಿತ ವಾರ್ಷಿಕವಾಗಿ ಕರಾವಳಿ ಉತ್ಸವ ಆಚರಿಸುತ್ತಿದ್ದು, ಕಡಲತಡಿಯಲ್ಲಿ ಸಾಹಿತ್ಯ, ಸಂಸ್ಕೃತಿ ಕುರಿತಂತೆ ಅನೇಕ ಮನರಂಜನಾ ಕಾರ್ಯಕ್ರಮ, ಜಾನಪದ ಕುಣಿತ, ನೃತ್ಯ ನಾಟಕಗಳು, ಹಲವಾರು ಸ್ಪರ್ಧೆಗಳು ನಡೆಯುತ್ತವೆ.

ಖಾಸಗಿಯಾಗಿ 'ಟೀಮ್ ಮಂಗಳೂರು' ಎಂಬ ಸಂಸ್ಥೆ ೧೯೬೬ರಲ್ಲಿ ಸ್ಥಾಪನೆಯಾಗಿ, ಗಾಳಿಪಟ ಹಾರಿಸುವ ಕಾರ್ಯಕ್ರಮ ಜನಪ್ರಿಯಗೊಳಿಸುತ್ತಿದೆ. ಇಂಗ್ಲೆಂಡ್, ಫ್ರಾನ್ಸ್‌ಗಳಲ್ಲೂ ಪಟ ಹಾರಿಸುವ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಿತವಾಗಿವೆ. ಮಂಗಳೂರಲ್ಲೂ ರಾಜ್ಯ, ರಾಷ್ಟ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನು ನಡೆಸುತ್ತವೆ. ವಿವಿಧ ವಿನ್ಯಾಸದ, ತೀರ ದೊಡ್ಡ ಅಳತೆಯ ಪಟಗಳನ್ನು ಕ್ರಿಯಾತ್ಮಕವಾಗಿ ಸೃಜಿಸುವುದು ಕುತೂಹಲವಾಗಿದೆ. ಜಿಲ್ಲೆಯ ಯಕ್ಷಿಣಿ(ಮ್ಯಾಜಿಕ್)ಕಲಾವಿದರು ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಯಕ್ಷಿಣಿ ಪ್ರದರ್ಶನಗಳನ್ನು ಉತ್ಸವದಂತೆ ಆಚರಿಸುವುದುಂಟು. ರಂಗಮಂದಿರವಲ್ಲದೆ, ಬಯಲಿನಲ್ಲಿಯೂ ಕಣ್ಕಟ್ಟು, ಮೋಡಿ, ಇತ್ಯಾದಿ ಜನಪದ ಮನರಂಜನಾ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಿದ್ದು ಭಾರತಾದ್ಯಂತದಿಂದ ಕಲಾವಿದರು ಪಾಲುಗೊಳ್ಳುತ್ತಾರೆ.

ಈಚೆಗೆ ಹೆಚ್ಚು ಪ್ರಸಿದ್ಧವಾಗುತ್ತಿರುವುದು ಮೂಡಬಿದಿರೆಯ ಮೋಹನ್ ಆಳ್ವ ಸಂಯೋಜಿಸುವ 'ಆಳ್ವಾಸ್ ನುಡಿಸಿರಿ' ಹಾಗೂ 'ವಿರಾಸತ್' ಗಳು ನುಡಿಸಿರಿ ಪ್ರತಿವರ್ಷ 'ಕನ್ನಡದ ಮನಸ್ಸು' ವಿನ ಮೂಲಕ ಸಾಹಿತ್ಯಕ ಸವಾಲು, ಬೌದ್ಧಿಕ ಸ್ವಾತಂತ್ರ್ಯ, ಪ್ರಚಲಿತ ಪ್ರಶ್ನೆಗಳು ಇತ್ಯಾದಿ ಕುರಿತ ವಿಚಾರಗೋಷ್ಠಿಗಳೊಂದಿಗೆ, ನೃತ್ಯ, ಸಂಗೀತ, ಚಿತ್ರಕಲೆ, ಕವಿಸಮಯ, ಪುಸ್ತಕ ಪ್ರದರ್ಶನ ಇತ್ಯಾದಿ ಅನೇಕ ಸಾಂಸ್ಕೃತಿಕ, ಮನೋರಂಜಕ ಕಾರ್ಯಕ್ರಮಗಳೊಂದಿಗೆ ನಡೆಯುತ್ತದೆ. ಜೊತೆಗೆ ಸಾಹಿತ್ಯ, ಭಾಷೆ, ಸಂಘಟನೆ, ಜಾನಪದ, ಸಂಶೋಧನೆ, ಸುಗಮ ಸಂಗೀತ ಇವೇ ಮುಂತಾದ ಕ್ಷೇತ್ರದ ಗಣ್ಯರನ್ನು ಆಹ್ವಾನಿಸಿ ಸನ್ಮಾನಿಸಲಾಗುತ್ತದೆ. 'ಆಳ್ವಾಸ್ ವಿರಾಸತ್' ಹಲವಾರು ವರ್ಷಗಳಿಂದ

ನಡೆಯುತ್ತಿದೆ. 'ವಿರಾಸತ್' ಎಂದರೆ ಪರಂಪರೆ, ವೈಭವ, ಸಂಭ್ರಮ ಇತ್ಯಾದಿ ಅರ್ಥಗಳಿದ್ದು. ಹೆಸರಿಗೆ ತಕ್ಕಂತೆ ರಾಷ್ಟ್ರಮಟ್ಟದ ಸಂಗೀತ, ನೃತ್ಯ ಕಾರ್ಯಕ್ರಮಗಳು ೩–೪ ದಿನಗಳ ಕಾಲ ನಡೆಯುತ್ತವೆ. ರಾಜ್ಯದ ಖ್ಯಾತ ಕಲಾವಿದರು ಸಂಗೀತ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದ್ದಾರೆ. ರಾಷ್ಟ್ರಮಟ್ಟದ ಸಂಗೀತ–ನೃತ್ಯ ಕಲಾವಿದರು ಮುಖ್ಯವಾಗಿ ದೇಶೀಯ ಪರಂಪರೆಯ ಕಲಾವಿದರು ಭಾಗವಹಿಸಿದ್ದು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮೋಹನ್ ಆಳ್ವ ಅವರು ಸ್ಥಳೀಯರ ಸಹಕಾರದೊಂದಿಗೆ ನಡೆಸುತ್ತಿದ್ದಾರೆ. ಕೆಲವರ್ಷಗಳಿಂದ ಒಟ್ಟು ಕಾರ್ಯಕ್ರಮದ ಯಾರಾದರೊಬ್ಬ ಕಲಾವಿದರನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಧರ್ಮಸ್ಥಳದಲ್ಲಿ ಮೊದಲಿನಿಂದಲೂ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಸರ್ವಧರ್ಮ ಸಮ್ಮೇಳನ, ಸಾಹಿತ್ಯ ಜನಪದ ಕಲೆ ಕುರಿತ ಸಮ್ಮೇಳನ, ಕಮ್ಮಟ. ವಿಚಾರ ಸಂಕಿರಣ ಇತ್ಯಾದಿಗಳು ಹಾಗೂ ನಿಶ್ಚಿತ ಕಾಲಾವಧಿಯಲ್ಲಿ ನಡೆಯುವ ಮಸ್ತಕಾಭಿಷೇಕ ಹಾಗೂ 'ನಡಾವಳಿ'ಗಳು ನಡೆಯುತ್ತಿದ್ದು, ಪ್ರೇಕ್ಷಕರಿಗೆ ರಂಜನೆ ಹಾಗೂ ಬೋಧನೆ ನೀಡುವುದಲ್ಲದೆ, ಹೊಸ ಪ್ರತಿಭೆಗಳು ಹೊರಬರಲು ಅವಕಾಶವಾಗಿದೆ. ಸ್ಥಳೀಯವಾಗಿ ಯಕ್ಷಗಾನ ತಂಡವಿದ್ದು ದೇಶ–ವಿದೇಶಗಳಲ್ಲಿ ಕಲೆ ಪ್ರದರ್ಶಿಸಿದೆ. ಯಕ್ಷಗಾನ ತರಬೇತಿ ಕೇಂದ್ರ ಕ್ರಮಬದ್ಧವಾಗಿ ಶಿಕ್ಷಣ ನೀಡುತ್ತದೆ ಅಲ್ಲದೆ, ಹೊರಗಿನ ಅನೇಕ ಮೇಳಗಳು ಇಲ್ಲಿಗೆ ಬಂದು ತಮ್ಮ ಕಲಾಪ್ರದರ್ಶನ ನೀಡುತ್ತಾರೆ.

## ಪತ್ರಿಕೋದ್ಯಮ

ಮಂಗಳೂರಿನಿಂದ ೧೮೪೩ರಲ್ಲಿ ಹರ್ಮನ್ ಮೊಗ್ಲಿಂಗ್‌ನ ಸಂಪಾದಕತ್ವದಲ್ಲಿ 'ಮಂಗಳೂರ ಸಮಾಚಾರ' ಕನ್ನಡ ಪತ್ರಿಕೆಯು ಪ್ರಕಟವಾಗತೊಡಗಿದ್ದು, ಇದುವೆ ಕನ್ನಡದ ಪ್ರಥಮ ಪತ್ರಿಕೆಯೆಂದು ತಿಳಿಯಲಾಗಿದೆ. ಬಾಸಲ್‌ಮಿಷನ್ ಮುದ್ರಣಾಲಯದಲ್ಲಿ ಪತ್ರಿಕೆ ಬರುತ್ತಿತ್ತೆಂದು ತಿಳಿಸುವ ಶ್ರೀನಿವಾಸ ಹಾವನೂರ ಅವರು ಪತ್ರಿಕೆಯ ಹುಟ್ಟು ಬೆಳವಣಿಗೆ ಹಾಗೂ ವಿಷಯಗಳ ಬಗ್ಗೆ ವಿವರವಾಗಿ ಹೇಳುತ್ತಾರೆ. ಅದರಂತೆ, ಜನರ ಬಾಯಿಂದ ಬಾಯಿಗೆ ಸಮಾಚಾರಗಳು ಹರಡಿ ವಿರೂಪಗೊಳ್ಳುವುದನ್ನು ಕಂಡು ಮೊಗ್ಲಿಂಗ್ ಪತ್ರಿಕೆಯನ್ನು ನಾಲ್ಕು ಪುಟಗಳ ಕಲ್ಲಚ್ಚಿನ ಮುದ್ರಣ ಮಾಧ್ಯಮದಲ್ಲಿ ಹೊರತಂದಿದ್ದು, ಪತ್ರಿಕೆಯಲ್ಲಿ ಊರ ವರ್ತಮಾನ, ಸರ್ಕಾರಿ ನಿರೂಪಗಳು ಹಾಗೂ ಕಾನೂನುಗಳು, ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು, ಕಥೆಗಳು ಹಾಗೂ ಹೊರ ರಾಜ್ಯಗಳ ವರ್ತಮಾನ ನೀಡಲು ನಿಶ್ಚಯಿಸಿದ್ದು, ಅದರಂತೆ ಸ್ಥಳೀಯ ವಿದ್ಯಮಾನಗಳು ವಿಶೇಷವಾಗಿ ನ್ಯಾಯಾಲಯ ನೀಡಿದ ಶಿಕ್ಷೆಗಳು, ಊರಲ್ಲಿ ನಡೆದ ಮತೀಯ ಗಲಭೆ, ಮೈಸೂರು ಅರಮನೆಯಲ್ಲಿ ನಡೆದ ವಿವಾಹ ಮಹೋತ್ಸವ, ವಿವಿಧ ರಾಜ್ಯಗಳಲ್ಲಿ/ದೇಶಗಳಲ್ಲಿ ನಡೆಯುತ್ತಿದ್ದ ಯುದ್ಧಗಳು, ವಿವಿಧ ಸಂಸ್ಥಾನಗಳಿಂದ ತರಿಸಿದ ಅಂಕಿ ಅಂಶಗಳ ಆಧಾರಿತವಾದ ಹಿಂದೂಸ್ಥಾನದ ಜನಗಣತಿಗಳಲ್ಲದೆ ಸಿಂಧೂದೇಶ, ಮುಂಬಯಿಗಳಲ್ಲಿ ಮಿಡತೆಗಳ ಹಾವಳಿ, ಸಣ್ಣ ಮತ್ತು ದೊಡ್ಡ ಕಥೆಗಳು, ದಾಸರ ಪದ ಅಥವಾ ಸಂಸ್ಕೃತ ಶ್ಲೋಕಗಳೊಂದಿಗೆ ಅದಕ್ಕೆ ಸಮನಾದ ಬೈಬಲ್ ಉಕ್ತಿಗಳು ಇವೇ ಮುಂತಾದ ಹಲವಾರು ವಿಷಯಗಳಿದ್ದವು. ಆ ನಿಮಿತ್ತದಿಂದ ಪುರಂದರದಾಸರ ಮೂರು, ನಾಲ್ಕು ಪದಗಳು ಪ್ರಥಮತಃ ಮುದ್ರಣ ರೂಪದಲ್ಲಿ ಇಲ್ಲಿ ಹೊರಬರುವಂತಾಯಿತು. ಪಾಕ್ಷಿಕ (೧೫ ದಿನಗಳಿಗೊಮ್ಮೆ) ಪ್ರಕಟವಾಗುತ್ತಿದ್ದ ಪತ್ರಿಕೆಗೆ ರಾಜ್ಯದ ಉಳಿದ ಭಾಗಗಳಿಂದ, ಬೇಡಿಕೆಯಿದ್ದುದರಿಂದ ಅದರಲ್ಲೂ ಮಂಗಳೂರು ಸೇರಿದಂತೆ ಮೈಸೂರು, ತುಮಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳ್ಳಿ, ಸಿರಸಿ, ಹೊನ್ನಾವರ ಇತ್ಯಾದಿ ಸ್ಥಳಗಳಿಂದಲೂ ಜನರು ಪತ್ರಿಕೆ ತರಿಸಿಕೊಳ್ಳುತ್ತಿದ್ದರಿಂದ ಮುದ್ರಣ ಕಾರ್ಯ ಸುಲಭವಾಗಲೆಂದು ಬಳ್ಳಾರಿಯ ಛಾಪಾಖಾನೆ (ಮುದ್ರಣಾಲಯ)ಗೆ ವರ್ಗಾಯಿಸಲಾಯಿತು. ಅಲ್ಲಿ ಮಾರ್ಚ್ ೧೮೪೪ರಿಂದ 'ಕಂನಡ ಸಮಾಚಾರ' ಎಂಬ ಹೆಸರಿನಲ್ಲಿ ಬಿಡಿ ಮೊಳೆಗಳ ಅಕ್ಷರ ಜೋಡಣೆಯ ವಿನ್ಯಾಸದಲ್ಲಿ ಪ್ರಕಟವಾಗತೊಡಗಿದ್ದು, ಆ ವರ್ಷದ ಅಂತ್ಯದಲ್ಲಿಯೇ ಸ್ಥಗಿತಗೊಂಡಿತು. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಮೊದಲ ಪ್ರಯತ್ನವಾದರೂ ಇಂದಿನ ಪತ್ರಿಕೆಗಳ ಅನೇಕ ನಿಬಂಧನೆ, ನಿಯಮಾವಳಿಗಳನ್ನು ಅನುಸರಿಸಿ ಮೊಗ್ಲಿಂಗ್ ಒಂದು ಭದ್ರ ಬುನಾದಿ ಒದಗಿಸಿದ್ದು, ಮಂಗಳೂರಿನಿಂದ ಒಟ್ಟು ಹದಿನಾರು ಸಂಚಿಕೆಗಳು ಪ್ರಕಟವಾದವು. 'ಮಂಗಳೂರ ಸಮಾಚಾರ' ಪ್ರಕಟವಾದ ೧ನೇ ಜುಲೈ ೧೮೪೩ರ ನೆನಪಿಗಾಗಿ ಪ್ರತಿ ವರ್ಷ ಜುಲೈ ಒಂದನೇ ತಾರೀಖಿನಂದು 'ಪತ್ರಿಕಾ ದಿನ'ವೆಂದು ಆಚರಿಸಲಾಗುತ್ತಿದೆ.

ಬಳ್ಳಾರಿಯಿಂದ ಪ್ರಕಟವಾಗುತ್ತಿದ್ದ 'ಕಂನಡ ಸಮಾಚಾರ' ನಿಂತು ಹೋದ ನಂತರ ಪತ್ರಿಕಾ ಕ್ಷೇತ್ರ ಸ್ಥಬ್ಧವಾಗಿದ್ದು, ಮತ್ತೆ ಮೊಗ್ಲಿಂಗ್‌ನೇ ಮಂಗಳೂರಿನಿಂದ ೧೮೫೭ರಲ್ಲಿ "ಕಂನಡ ವಾರ್ತಿಕ" (Canerese Massengar) ಎಂಬ ಪಾಕ್ಷಿಕವನ್ನು ಕನ್ನಡ ಭಾಷೆಯಲ್ಲಿ ತಂದನು. ಆವೇಳೆಗೆ ಬಾಸೆಲ್ ಮಿಷನ್‌ನವರಲ್ಲಿ ಬಿಡಿ ಮೊಳೆಗಳ ಜೋಡಣೆಯ ಅಚ್ಚುಕೂಟ ಬಂದಿದ್ದು ಪತ್ರಿಕೆ ಸುಂದರವಾಗಿ ಮುದ್ರಿತವಾಗ ತೊಡಗಿತಾದರೂ ಬೆಂಬಲವಿಲ್ಲದೆ ಒಂದು ವರ್ಷದಲ್ಲೇ ಸ್ಥಗಿತಗೊಂಡಿತು. ಆ ಅವಧಿಯಲ್ಲಿ ಮೊಗ್ಲಿಂಗ್ ಕೊಡಗು ಜಿಲ್ಲೆಯಲ್ಲಿ ಇದ್ದರೂ ಪತ್ರಿಕೆಯೊಂದಿಗೆ ನಿಕಟ ಸಂಬಂಧ ಇರಿಸಿಕೊಳ್ಳಲು ಸಾಧ್ಯವಿಲ್ಲವಾಗಿತ್ತು. ಪ್ರಸ್ತುತ 'ಕಂನಡ ವಾರ್ತಿಕ'ದಲ್ಲಿ ೧೮೫೭ರ ಸಿಪಾಯಿ ದಂಗೆಯ

ಬಗ್ಗೆ (೬ನೇ ಸಂಚಿಕೆ–೧೯–೯–೧೮೪೭ರ ಯಲ್ಲಿ) ಉಲ್ಲೇಖಗೊಂಡಿದ್ದು ಸಮಾಕಾಲೀನ ಐತಿಹಾಸಿಕ ದಾಖಲೆಯಾಗಿದೆ. ಅಲ್ಲದೆ, ಬಾಸೆಲ್‌ಮಿಷನ್‌ಗೆ ಸಂಬಂಧಿಸಿದ ವಾರ್ತೆಗಳೂ ಇದ್ದವು.

ಮತ್ತೆ ೧೮೬೨ರಲ್ಲಿ ಮಂಗಳೂರಿನಿಂದ 'ವಿಚಿತ್ರ ವರ್ತಮಾನ ಸಂಗ್ರಹ' (Illustrated Canerese Journal) ಪಾಕ್ಷಿಕವಾಗಿ ಪ್ರಕಟಗೊಳ್ಳಲಾರಂಭಿಸಿದ್ದು, ಪತ್ರಿಕೆಗೆ ಕಿಟಲ್ ಮತ್ತು ಮ್ಯಾಕ್ ಅವರುಗಳು ಸಂಪಾದಕರಾಗಿದ್ದರು. ಇದು ಮುಂಬಯಿಯ 'Bombay Canerese Vernacular Society' ಯ ವತಿಯಿಂದ ಪ್ರಕಟವಾಗುತ್ತಿತ್ತು. ಇದರೊಂದಿಗೆ 'The Canerese Messengar' (ಇಂಡಿಯಾ ಮತ್ತು ಅನ್ಯ ದೇಶದ ವಾರ್‌ತಿಕ) ಎಂಬ ಪತ್ರಿಕೆಯೂ ಹೊರಡುತ್ತಿದ್ದು, ಅದರ ಕೆಲವು ಪ್ರತಿಗಳು ಲಂಡನ್‌ನ ಬ್ರಿಟಿಷ್ ಮ್ಯೂಸಿಯಂನಲ್ಲಿ ಇರುವುದಾಗಿ ತಿಳಿದುಬರುತ್ತದೆ. ಬಾಸೆಲ್ ಮಿಷನ್‌ರವರೇ ೧೮೬೮ರಲ್ಲಿ 'ಸಭಾಪತ್ರ' ಎಂಬ ನಿಯತಕಾಲಿಕೆ ತರುತ್ತಿದ್ದು, ಕೆಲವು ದಶಕಗಳವರೆಗೆ ಮುಂದುವರಿಯಿತು. ಮೊದಲ ಎರಡು ಸಂಪುಟಗಳಲ್ಲಿ (೧೮೬೮–೬೯) 'ಬಾಲಪತ್ರ' ಎಂದು ಮಕ್ಕಳಿಗಾಗಿಯೇ ಪುರವಣಿ ಸೇರಿಸಲಾಗಿತ್ತು. ಮತ ವಿಚಾರವೇ ಪತ್ರಿಕೆಯ ಉದ್ದೇಶವಾದರೂ ದೇಶ ವಿದೇಶಗಳ ಸುದ್ದಿಯನ್ನು ನೀಡಲಾಗುತ್ತಿತ್ತು. (ಪತ್ರಿಕಾ ಅಕಾಡೆಮಿಯ ಪ್ರಕಟಣೆಯಲ್ಲಿ ೧೮೬೯ರಲ್ಲಿ 'ಕ್ರೈಸ್ತ ಸಭಾಪತ್ರ' ಎಂಬ ಪತ್ರಿಕೆ ಆರಂಭವಾದಂತೆ (೧೮೬೩ರ 'ಸಭಾ ಪತ್ರ'ದ ವಿನಾ) ತಿಳಿಸಿದ್ದು, ಶ್ರೀನಿವಾಸ ಹಾವನೂರ ಅವರು ಇವೆರಡೂ ಒಂದೇ ಪತ್ರಿಕೆ ಎಂಬಂತೆ ತೋರಿಸಿದ್ದಾರೆ. (ಪಿ. ಗೋಪಾಲಕೃಷ್ಣ ೧೯೯೯) ಅದೇ ವರ್ಷ (೧೮೬೮) 'ನ್ಯಾಯ ಸಂಗ್ರಹ' ಎಂಬ ಕಾಯಿದೆಗೆ ಮೀಸಲಾದ ಪತ್ರಿಕೆ ಉಭಯ ಗೋಪಾಲ ಕೃಷ್ಣಯ್ಯರವರ ಸಂಪಾದಕತ್ವದಲ್ಲಿ ಪಾಕ್ಷಿಕವಾಗಿ ಸುಮಾರು ಒಂದು ವರ್ಷಗಳ ಕಾಲ ಪ್ರಕಟವಾಯಿತು. ೧೮೭೧ರಲ್ಲಿ ಮಂಗಳೂರಿನಿಂದ 'ಸುಬೋಧಿನಿ' ಎಂಬ ವಾರಪತ್ರಿಕೆ, ವಾರ್ತೆಗಳಿಗೆ ಪ್ರಾಧಾನ್ಯ ನೀಡುವ ದೃಷ್ಟಿಯಿಂದ A Chronicle of general news ಆರಂಭವಾಯಿತು. ಇವಲ್ಲದೆ ೧೮೮೪ರಲ್ಲಿ ಮಂಜೇಶ್ವರದಿಂದ ಅನಂತರಾವ್ ಅವರ ಸಂಪಾದಕತ್ವದಲ್ಲಿ 'ಕನ್ನಡ ಕೇಸರಿ'; ೧೮೮೭ರಲ್ಲಿ ಬಿ. ನರಸಿಂಗರಾಯರ–ಮೊದಲು ದೈನಿಕ ನಂತರ ಸಾಪ್ತಾಹಿಕವಾದ 'ಸರ್ವೋದಯ ಪ್ರಕಾಶಿಕ' ಹಾಗೂ ೧೮೯೬ರಲ್ಲಿ ಫ್ರೆಡ್ರಿಕ್‌ಜತ್ತನ್ನ ಹೊರತಂದ 'ಸತ್ಯ ದೀಪಿಕೆ'ಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಮಂಗಳೂರಿನಿಂದ ಹೊರಬರುತ್ತಿದ್ದ ಪತ್ರಿಕೆಗಳಾಗಿವೆ. ಮುಂದೆ ಸುಮಾರು ೭೫ ವರ್ಷಗಳ ನಂತರ ಕ್ರೈಸ್ತ ಮಿಷನರಿಗಳೇ 'ಸತ್ಯದೀಪಿಕ' ಮತ್ತೆ ಆರಂಭಿಸಲು ಪ್ರಯತ್ನಿಸಿದ್ದರೆಂದು ತಿಳಿದುಬರುತ್ತದೆ.

ಈ ವೇಳೆಗೆ ಸ್ಥಳೀಯರು ಬರವಣಿಗೆಗಳನ್ನು ಆರಂಭಿಸಿದ್ದು, ಬಾಸೆಲ್‌ಮಿಷನ್‌ರವರ 'ಸತ್ಯದೀಪಿಕ' ಸೇರಿದಂತೆ ಹಲವಾರು ಪತ್ರಿಕೆಗಳಿಗೆ ಬರೆಯುತ್ತಿದ್ದರು. ಇವರುಗಳಲ್ಲಿ ಎಂ.ಎನ್. ಕಾಮತ್ ೧೯೧೩ರಲ್ಲಿ 'ಬೋಧಿನಿ' ಎಂಬ ಮಾಸಪತ್ರಿಕೆ ಹಾಗೂ ಮುಳಿಯ ತಿಮ್ಮಪ್ಪಯ್ಯ ಅವರು ೧೯೧೬ರಲ್ಲಿ 'ಕನ್ನಡ ಕೋಗಿಲೆ' ಎಂಬ ಮಾಸ ಪತ್ರಿಕೆಯನ್ನು ಸಂಪಾದಿಸಿ ಹೊರತಂದರು. ಈ ವೇಳೆಗಾಗಲೇ ಮಂಗಳೂರಿನಿಂದ, ಬೋಳಾರ ವಿಠಲರಾವ್ ಅವರ 'ಸುವಾಸಿನಿ' (೧೯೦೦); ವಿ.ಎಸ್. ಕಾಮತ್‌ರ ಸಾಪ್ತಾಹಿಕ 'ಸ್ವದೇಶಾಭಿಮಾನಿ' (೧೯೦೭); ಎಫ್. ಎಚ್. ಒಡೆಯರ್ ಅವರ ಸಾಪ್ತಾಹಿಕ 'ಉದಯಚಂದ್ರ' (೧೯೦೭); ನರೇಂದ್ರ ಮೆಂಡನ್ ಅವರ ಸಾಪ್ತಾಹಿಕ 'ಸಂಗ್ರಾಮ' (೧೯೧೩) ಹಾಗೂ ಎಂ. ಎನ್. ಕಾಮತ್ ಅವರೇ ೧೯೧೬ರಲ್ಲಿ 'ಆನಂದ' ಎಂಬ ಪಾಕ್ಷಿಕವನ್ನು ಬಂಟ್ವಾಳದಿಂದ ಹೊರತಂದಿದ್ದರು. ಬೋಳಾರ ವಿಠಲರಾಯರ 'ಸುವಾಸಿನಿ' ಒಂದು ಅರ್ಥದಲ್ಲಿ ಸಾಹಿತ್ಯ ಪತ್ರಿಕೆಯಾಗಿದ್ದು ಕಥೆ, ಕವಿತೆ, ಕಲೆ–ಇತಿಹಾಸ, ಧಾರವಾಹಿ ಕಥೆಗಳಿಂದ ಕೂಡಿದ್ದು, ಪಂಜೆ ಮಂಗೇಶರಾಯರು ಸಂಪಾದಕೀಯ ಬರೆಯುತ್ತಿದ್ದರು. ವಿ. ಎಸ್. ಕಾಮತ್‌ರ 'ಸ್ವದೇಶಾಭಿಮಾನಿ' (೧೯೦೭) ರಾಜಕೀಯ ವರ್ತಮಾನವುಳ್ಳ ಪತ್ರಿಕೆಯಾಗಿ ಹೆಸರಿಗೆ ತಕ್ಕಂತೆ ದೇಶಾಭಿಮಾನದ ಸಂಕೇತವೆನಿಸಿತ್ತು. ಅಲ್ಲದೆ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದು, ಗೋವಿಂದ ಪೈ ಅವರ ಪ್ರಾಸ ತ್ಯಜಿಸಿದ ಮೊದಲ ಕವಿತೆ ಪ್ರಕಟವಾದುದು 'ಸ್ವದೇಶಾಭಿಮಾನಿ'ಯಲ್ಲಿಯೇ (೧೯೧೨). ಅಲ್ಲದೆ ಕಾರಂತರ 'ಹಳ್ಳಿಯ ಹತ್ತು ಸಮಸ್ತರು', 'ನಗರದ ನವನಾಯಕರು' ಇತ್ಯಾದಿಗಳು ಧಾರವಾಹಿಯಾಗಿ ಪ್ರಕಟವಾದವು. ಸ್ಥಿರ ಶೀರ್ಷಿಕೆಗಳು, ವಿಶೇಷ ಸಂಚಿಕೆಗಳು, ಸಾಹಿತ್ಯ ಪುರವಣಿಗಳೂ ಜೊತೆಯಲ್ಲಿರುತ್ತಿತ್ತು. ೧೯೪೦ರಲ್ಲಿ ಪತ್ರಿಕೆಯ ಬೆಲೆ ೧ ಆಣೆ ಇದ್ದು, ವಾರ್ಷಿಕ ಚಂದಾ ಮೂರು ರೂಪಾಯಿಗಳಾಗಿತ್ತು. ಕನ್ನಡ ಪತ್ರಿಕೆಗಳಲ್ಲಿ ಚಿನ್ನದ ಹಬ್ಬ ಕಂಡ ಮೊದಲ ಪತ್ರಿಕೆ ಇದಾಗಿತ್ತು.

ಮುಂದೆ ಲೇಖನಗಳನ್ನು ಬರೆದು ಪತ್ರಿಕೋದ್ಯಮದಲ್ಲಿ ಅನುಭವ ಉಳ್ಳವರು, ಸಾಹಿತಿ ಬರಹಗಾರರೂ ಹಾಗೂ ಸ್ವಂತ ಮುದ್ರಣಾಲಯ ಉಳ್ಳವರುಗಳು ಪತ್ರಿಕೆಗಳಿಗೆ ಸಂಪಾದಕರಾಗಿ ಇಲ್ಲವೆ ಸ್ವಂತವಾಗಿಯೇ ಪತ್ರಿಕೆಗಳನ್ನು ಹೊರತಂದರು. ಇವುಗಳಲ್ಲಿ ಮುಖ್ಯವಾಗಿ ಹಿಂದೆ ಹೇಳಿದ ಉದಯ ಚಂದ್ರ (೧೯೦೭), ಕನ್ನಡ ಕೋಗಿಲೆ (೧೯೧೪) ಆನಂದ (೧೯೧೬) ಗಳಲ್ಲದೆ ತಿಲಕ ಸಂದೇಶ (೧೯೧೮) ಕಂಠೀರವ (೧೯೧೯) ನವಯುಗ (೧೯೨೧) ರಾಷ್ಟ್ರಬಂಧು (೧೯೨೮) ಪ್ರಭಾತ (೧೯೩೪) ಇತ್ಯಾದಿಗಳನ್ನು ಉದಾಹರಿಸಬಹುದು. ಆದರೆ ಇವು ಸಾಪ್ತಾಹಿಕ ಇಲ್ಲವೆ ಮಾಸ ಪತ್ರಿಕೆಗಳಾಗಿದ್ದು ದೈನಿಕಗಳಾಗಿರಲಿಲ್ಲ.

ದೈನಿಕ ಪತ್ರಿಕೆಗಳಲ್ಲಿ ೧೮೮೦ರಲ್ಲಿಯೇ ಸರ್ವೋದಯ ಪ್ರಕಾಶಿಕ ಪ್ರಯತ್ನಿಸಿತ್ತಾದರೂ ಅದು ಸಾಪ್ತಾಹಿಕವಾಗಿ ಪರಿವರ್ತಿತವಾಯಿತು. ಎಚ್. ರಾಮರಾಯ ಮಲ್ಯರು ೧೯೩೦ರಲ್ಲಿ ತಂದ 'ಸ್ವತಂತ್ರ ಭಾರತ' ದೈನಿಕವೂ ಹೆಚ್ಚು ಕಾಲ ಮುಂದುವರಿಯಲಿಲ್ಲ. ಮುಂದೆ ಪತ್ರಿಕೋದ್ಯಮ ಹಾಗೂ ಮುದ್ರಣ ತಾಂತ್ರಿಕತೆಯ ಪರಿಣತಿ ಹೊಂದಿದ್ದ ವಾಮನ ಶ್ರೀನಿವಾಸ ಕುಡ್ವ ಅವರು ೧೯೪೧ರಲ್ಲಿ ಮೊದಲಿಗೆ ಅರ್ಧ ಕ್ರೌನ್ ಗಾತ್ರದ ಎರಡು ಪುಟಗಳ ಹಾಗೂ ನಂತರ ಡೆಮಿ ಗಾತ್ರದ ನಾಲ್ಕು ಪುಟಗಳ ಪೂರ್ಣಪ್ರಮಾಣದ 'ನವಭಾರತ' ಎಂಬ ದೈನಿಕವನ್ನು ಹೊರತಂದಿದ್ದು, ೧೯೮೪ರವರೆಗೆ ನಿರಂತರವಾಗಿ ನಡೆಯಿತು. 'ನವಭಾರತ'ಕ್ಕೆ ಅಂದಿಗೆ ಆಧುನಿಕವೆನಿಸಿದ್ದ ರೋಟರಿ ಮುದ್ರಣ ಯಂತ್ರ, ಮಾನೋಟೈಪ್ ಯಂತ್ರ, ಬ್ಲಾಕ್ ಮೇಕಿಂಗ್ ಇತ್ಯಾದಿ ಸಲಕರಣೆ ಹೊಂದಿದ್ದ ಸ್ವಂತ ಮುದ್ರಣಾಲಯವಿತ್ತಲ್ಲದೆ ಜಿಲ್ಲೆಯಾದ್ಯಂತ ತಲುಪಿಸಲು ಬಸ್ ವ್ಯವಸ್ಥೆ, ಆದಾಯಕ್ಕಾಗಿ ಜಾಹಿರಾತು ಸಂಗ್ರಹಣೆ, ಸ್ವಂತ ವರದಿಗಾರರಲ್ಲದೆ ವಾರ್ತೆ ನೀಡುವ ಸಂಸ್ಥೆಗಳ ಸಂಪರ್ಕ ಇತ್ಯಾದಿಗಳು ವ್ಯವಸ್ಥಿತವಾಗಿದ್ದು ಕುಡ್ವ ಅವರ ಪರಿಶ್ರಮ ಕಾಣಬಹುದಿತ್ತು. ಜೊತೆಗೆ 'ಸಿಂಗಣ್ಣ' ರೆಂದು ಖ್ಯಾತರಾಗಿದ್ದ ರಘು (ರಾಮಕೃಷ್ಣ) ಅವರ ವ್ಯಂಗ್ಯ ಚಿತ್ರಗಳು ಶೋಭೆಯನ್ನು ಹೆಚ್ಚಿಸಿತ್ತು. ಪತ್ರಿಕೆ ನ್ಯೂಸ್ ಪೇಪರ್ಸ್ ಪಬ್ಲಿಷರ್ಸ್ ಲಿ., ಸಂಸ್ಥೆಯ ಒಡೆತನದಲ್ಲಿತ್ತು. 'ನವಭಾರತ'ದ ಆರಂಭಕ್ಕಿಂತ ಕೆಲದಿನ ಮೊದಲು 'ಸಾರಸ್ವತ' ಎಂಬ ಪತ್ರಿಕೆ ಸಂಸ್ಥೆಯಿಂದ ಹೊರಬಂದು ಆರುವರ್ಷ ಕಾಲ ನಡೆಯಿತೆಂದೂ, ಅಲ್ಲದೆ 'ನವಭಾರತ' ಎಂಬ ಹೆಸರಿನಲ್ಲೇ ವಾರಪತ್ರಿಕೆಯೊಂದನ್ನು ಸಂಸ್ಥೆ ಹೊರತರುತ್ತಿತ್ತೆಂದೂ ತಿಳಿದುಬರುತ್ತದೆ. ಕುಡ್ವರವರು ಪ್ರಧಾನ ಸಂಪಾದಕರಾಗಿದ್ದು, ಸಂಪಾದಕ ವರ್ಗದಲ್ಲಿ ಅನೇಕರು ಆಗಾಗ್ಗೆ ಪತ್ರಿಕೆಗೆ ಸೇರಿ ತಮ್ಮ ಅನುಭವ ಕ್ಷೇತ್ರವನ್ನು ಹೆಚ್ಚಿಸಿಕೊಂಡರು. ಹಾಗೂ ಬರಹಗಾರರ ದೊಡ್ಡ ಬಳಗವೊಂದು ರೂಪುಗೊಂಡಿತು. ವೃದ್ಧಾಪ್ಯದಲ್ಲಿ ಕುಡ್ವರವರು ಪತ್ರಿಕೆಯ ಸಂಪಾದಕತ್ವವನ್ನು ಮಕ್ಕಳಿಗೆ ವಹಿಸಿಕೊಟ್ಟಿದ್ದು (೧೯೭೦) ಮುಂದೆಯೂ ಅದೇ ರೀತಿ ಪತ್ರಿಕೆ ನಡೆಯಿತು. ಪತ್ರಿಕೆ ಕೆಲವು ವಿಶೇಷ ಸಂಚಿಕೆಗಳನ್ನು ಪ್ರಕಟಿಸಿದೆ (ಇಲ್ಲಿಯ ವಿವರಗಳಿಗೂ ಪಿ. ಗೋಪಾಲ ಕೃಷ್ಣ ಅವರ ಕನ್ನಡ ಪತ್ರಿಕಾ ಇತಿಹಾಸ ಭಾಗ–೧ ಕ್ಕೂ ಕೆಲವು ವ್ಯತ್ಯಾಸಗಳಿವೆ.)೧೯೬೧ರಲ್ಲಿ 'ಕನ್ನಡವಾಣಿ' ದೈನಿಕ ಆರಂಭವಾಗಿ ಮೂರು ವರ್ಷಗಳು ನಡೆಯಿತು. ೧೯೮೪ರಲ್ಲಿ ವಡ್ಡರ್ಸೆ ರಘುರಾಮ ಶೆಟ್ಟರು 'ಮುಂಗಾರು' ದಿನಪತ್ರಿಕೆ ಆರಂಭಿಸಿದ್ದು, ಕೆಳವರ್ಗದ ಧ್ವನಿಯಾಗಿ ಪತ್ರಿಕೆ ಹೊರಬಂದಿತಾದರೂ, ಬಯಸಿದ ಮಟ್ಟ ಏರಲಾರದೆ ಡಿ.ಸಿ. ಚೌಟರವರಿಗೆ ಪತ್ರಿಕೆ ವಹಿಸಿದ್ದು ೧೯೯೫ರಲ್ಲಿ ಸ್ಥಗಿತಗೊಂಡಿತು. ಕೆ. ನಾರಾಯಣ ಶೆಟ್ಟರವರ ಸಂಪಾದಕತ್ವದಲ್ಲಿ ೧೯೭೮ರಲ್ಲಿ ಆರಂಭವಾದ 'ಹೊಸ ದಿಗಂತ' ಪತ್ರಿಕೆಗೆ ಮುಂದೆ ದಿನಕರ ಇಂದಾಜೆ ಅವರು ಸಂಪಾದಕರಾದರು. ಸದರಿ ಪತ್ರಿಕೆಯ ಬೆಂಗಳೂರು ಆವೃತ್ತಿಯನ್ನು ೧೯೯೩ರಲ್ಲಿ ಶರತ್‌ಕುಮಾರ್ ಅವರ ಸಂಪಾದಕತ್ವದಲ್ಲಿ ಆರಂಭಿಸಿದ್ದು, ನಂತರ ದು.ಗು. ಲಕ್ಷ್ಮಣರು ಸಂಪಾದಕರಾದರು. ೯೦ರ ದಶಕದಲ್ಲಿ ಬಿ.ವಿ. ಸೀತರಾಂ ಅವರು 'ಕನ್ನಡ ಜನ ಅಂತರಂಗ' ಎಂಬ ದೈನಿಕ ಆರಂಭಿಸಿದರು. ಬಿ.ಪಿ. ಶಿವಾನಂದರವರು ಸುಳ್ಯ ಹಾಗೂ ಪುತ್ತೂರುಗಳಿಂದ 'ಸುದ್ದಿ ಬಿಡುಗಡೆ' ಎಂಬ ದೈನಿಕ ಹೊರತಂದರು.

ಜಿಲ್ಲೆಯಲ್ಲಿ ಸಂಜೆ ವೇಳೆ ಹೊರಬರುವ ಪತ್ರಿಕೆಗಳೂ ಕೆಲವಿದ್ದವು. 'ಸಂಜೆಯ ದೈನಿಕ ಪತ್ರಿಕೋದ್ಯಮ' ಎಂಬ ಹೊಸ ಆಯಾಮ ೧೯೫೪ರಲ್ಲೇ ಎಚ್.ಮನೋಹರ ಕಾಮತ್‌ರು ನೀಡಿದ್ದು, 'ಸಂಧ್ಯಾದೀಪ' ವೆಂಬ ಸಂಜೆ ಪತ್ರಿಕೆ ಹೊರತಂದು ಹದಿನಾರು ವರ್ಷಗಳ ಕಾಲ ನಡೆಸಿದರು. ಮಲ್ಲಿಕಾರ್ಜುನಯ್ಯರವರ 'ಮಂಗಳೂರು ಮಿತ್ರ', ಬಿ.ವಿ. ಸೀತಾರಾಂ ಅವರ 'ಕರಾವಳಿ ಅಲೆ' ಇತ್ಯಾದಿಗಳು ಸಂಜೆ ಪತ್ರಿಕೆಗಳು.

ಹಿಂದೆ ನೋಡಿದಂತೆ 'ನವಭಾರತ' ವಲ್ಲದೆ ಇನ್ನೂ ಹಲವಾರು ಪತ್ರಿಕೆಗಳು ಕಾಲುಶತಮಾನ ಕಂಡಿದ್ದಿದೆ. ೧೯೨೮ರಲ್ಲಿ ಕುಡ್ಪಿ ವಾಸುದೇಶ ಶೆಣೈ ಅವರು ಆರಂಭಿಸಿದ 'ಪ್ರಭಾತ' ಸಾಪ್ತಾಹಿಕ ೧೯೭೫ರವರೆಗೆ ನಡೆಯಿತು. ಮೊದಲಿಗೆ ದೈನಿಕವಾಗಿತ್ತು. ಪತ್ರಿಕೆಯಲ್ಲಿ ವೈದ್ಯ, ಜ್ಯೋತಿಷ್ಯಗಳಲ್ಲದೆ, ಒಗಟು, ಕಥೆ, ಕವನ, ದೇಶವಿದೇಶಗಳ ಸುದ್ದಿ, ಮಹಿಳಾ ಸಾಧನೆ, ವಿಜ್ಞಾನ ಸಾಧನೆ, ಸ್ವಾತಂತ್ರ್ಯ ಹೋರಾಟ ಇತ್ಯಾದಿ ಸಂಗತಿಗಳಿಂದ ಕೂಡಿದ್ದು, ತುಳುವಿನಲ್ಲಿ ಎರಡು ಪುಟಗಳ ಬರಹಗಳಿದ್ದವು. 'ರಾಷ್ಟ್ರ ಬಂಧು' ಎಂಬ ಸಾಪ್ತಾಹಿಕವನ್ನು ೧೯೨೮ರಲ್ಲಿ ಯು. ರಾಮರಾಯರು ಆರಂಭಿಸಿದ್ದು, ಮೊದಲಿಗೆ ಕಡೆಂಗೋಡ್ಲು ಶಂಕರಭಟ್ಟರು ಸಂಪಾದಕರಾಗಿದ್ದರು. ಸ್ವತಃ ಕವಿ ಸಾಹಿತಿಯಾಗಿದ್ದ ಶಂಕರಭಟ್ಟರ ಪರಿಶ್ರಮದಿಂದಾಗಿ ಪತ್ರಿಕೆಯಲ್ಲಿ ಕಥೆ, ಕಾದಂಬರಿ, ನಾಟಕ, ಕವಿತೆ ಇತ್ಯಾದಿಗಳು ಪ್ರಕಟವಾಗಿ ಸಾಹಿತ್ಯಕ ಪತ್ರಿಕೆ ಎನಿಸಿಕೊಂಡಿತ್ತು. ಆದರೆ ಆರಂಭದ ಇಪ್ಪತ್ತೈದು ವರ್ಷಗಳ ನಂತರ ಪತ್ರಿಕೆಯ ಪಠ್ಯವಸ್ತುವಿನಲ್ಲಿ ಬದಲಾದಂತೆ ಕಂಡುಬರುತ್ತದೆ. ಹಲವಾರು ಸಂಪಾದಕರನ್ನು ಉತ್ತಮ ಲೇಖಕರನ್ನು ಪತ್ರಿಕೆ ನೀಡಿದೆ ಮರುವರ್ಷ (೧೯೬೯) 'ರಾಷ್ಟ್ರಮತ' ಎಂಬ ಪತ್ರಿಕೆ ಆರಂಭವಾಯಿತು.

ಎಂ. ಗೋಪಾಲಕೃಷ್ಣರಾಯರು ಆಯುರ್ವೇದದಲ್ಲಿ ಹಾಗೂ ಆರೋಗ್ಯ ಶಾಸ್ತ್ರದಲ್ಲಿ ಪ್ರಸಿದ್ಧರಾಗಿದ್ದು, ಲೈಂಗಿಕ ವಿಜ್ಞಾನ ಕುರಿತ 'ಕಲಿಯುಗ' ಪತ್ರಿಕೆಯನ್ನು ಧಾರವಾಡದಲ್ಲಿ ೧೯೩೬ ರಲ್ಲಿ ಆರಂಭಿಸಿ, ಇಪ್ಪತ್ತು ವರ್ಷಗಳ ನಂತರ ಮಂಗಳೂರಿಗೆ ವಾಸ್ತವ್ಯ ಬದಲಿಸಿದಾಗ ಪತ್ರಿಕೆಯನ್ನು ಮಂಗಳೂರಿನಿಂದಲೇ ಹೊರತರಲಾರಂಭಿಸಿದ್ದು, ೧೯೫೬ರಲ್ಲಿ ಪತ್ರಿಕೆ ಸ್ಥಗಿತಗೊಂಡಿತು. ಗೋಪಾಲ ಕೃಷ್ಣರಾಯರೇ ೧೯೫೪ರಲ್ಲಿ

'ದೀರ್ಘಾಯು' ಎಂಬ ತ್ರೈಮಾಸಿಕ ಆರಂಭಿಸಿದ್ದು, ಎರಡು ವರ್ಷಗಳ ನಂತರ ರಾಯರು ಬೆಂಗಳೂರಿಗೆ ಬಂದಿದ್ದು, ೧೯೮೯ರ ನಂತರವೂ ಪತ್ರಿಕೆ ಹೊರಬರುತ್ತಿತ್ತು. ೧೯೧೯ರಲ್ಲಿ ಮೊಳಹಳ್ಳಿ ಶಿವರಾವ್ ಅವರಿಂದ ಆರಂಭವಾದ 'ಸಹಕಾರಿ' ಪತ್ರಿಕೆ ಹಲವಾರು ಬಾರಿ ತಡೆದು ಹಾಗೂ 'ಕನ್ನಡ ಸಹಕಾರಿ', 'ದಕ್ಷಿಣ ಕನ್ನಡ ಸಹಕಾರಿ' ಇತ್ಯಾದಿ ಹಲವಾರು ಬಾರಿ ಹೆಸರು ಬದಲಿಸಿಕೊಂಡು ಬರುತ್ತಿರುವ ಪತ್ರಿಕೆ. ೧೯೫೭ರಲ್ಲಿ ಬಿಡಿ ಪತ್ರಿಕೆಯ ಬೆಲೆ ಆರು ಆಣೆಗಳಾಗಿದ್ದವು. ವಾರ್ಷಿಕ ಚಂದಾ ೪ ರೂಪಾಯಿ. ಪತ್ರಿಕೆಯಲ್ಲಿ ರೈತರಿಗಲ್ಲದೆ ವಿದ್ಯಾರ್ಥಿಗಳಿಗೂ ಅಂಕಣಗಳಿರುತ್ತಿದ್ದವು. ೧೯೬೩ರಲ್ಲಿ ನರಸಿಂಗರಾವ್ ಪತ್ರಿಕೆಯ ಸಂಪಾದಕರಾಗಿದ್ದು ಸಂಪಾದಕ ಮಂಡಳಿಯಲ್ಲಿ ಪೆರಾಜೆ ಶ್ರೀನಿವಾಸರಾವ್, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಜಿ. ಎಸ್. ಆಚಾರ್ ಮುಂತಾದವರಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮದಲ್ಲಿ ಮಾಸಪತ್ರಿಕೆಯಾದ 'ಯುಗ ಪುರುಷ'ಕ್ಕೆ ಪ್ರತ್ಯೇಕ ಸ್ಥಾನ ನೀಡಬಹುದಾಗಿದ್ದು, ಪತ್ರಿಕೆ ೧೯೪೭ರಲ್ಲಿ ಉಡುಪಿಯಿಂದ ಆರಂಭವಾಗಿ ೧೯೪೯ಕ್ಕೆ ಮಂಗಳೂರು ತಾಲೂಕಿನ ಕಿನ್ನಿಗೋಳಿಗೆ ವರ್ಗಾವಣೆಗೊಂಡಿತು. ಆರಂಭದಲ್ಲಿ ಕೊ.ಅ.ಉಡುಪ, ಬನ್ನಂಜೆ ರಾಮಾಚಾರ್ಯ ಹಾಗೂ ಎಸ್. ಎನ್. ನಾರಾಯಣ ಭಟ್ ಅವರ ಸಂಪಾದಕತ್ವದಲ್ಲಿದ್ದು, ಈಗ ಕೊಡತ್ತೂರು ಅನಂತ ಪದ್ಮನಾಭ ಉಡುಪರು (೧೯೯೦ ರಲ್ಲಿ)ಪ್ರಕಾಶಕ ಹಾಗೂ ಸಂಪಾದಕರಾಗಿದ್ದಾರೆ. ಆರಂಭದಿಂದಲೂ ಮಾಸಪತ್ರಿಕೆಯಾಗಿ ಕಥೆ, ಕಾವ್ಯ ಇತ್ಯಾದಿ ಸಾಹಿತ್ಯಕ ವಿಷಯಗಳಿಗೆ ಆದ್ಯತೆ ನೀಡಿದೆ. ವರ್ಷಕ್ಕೆ ಎರಡು ವಿಶೇಷಾಂಕಗಳನ್ನು ನೀಡುತ್ತಿದ್ದು, ಅವೂ ಕಥೆ, ಕಾವ್ಯ, ವಿಮರ್ಶೆ, ಮಹಿಳೆ ಇತ್ಯಾದಿ ಯಾವುದಾದರೊಂದು ನಿಶ್ಚಿತ ವಿಷಯವನ್ನು ಕೇಂದ್ರೀಕರಿಸಿರುತ್ತದೆ. ಕಲಾವಿದ ಆರ್.ಕೆ. ದೇವಾಡಿಗಾರ್ ಅವರ ಕಲಾಕೃತಿಗಳನ್ನು ಮುಖಪುಟಕ್ಕೆ (ವಿಶೇಷ ಸಂಚಿಕೆಗಳ) ಅಳವಡಿಸಲಾಗುತ್ತಿದೆ. ಪತ್ರಿಕೆಯಲ್ಲದೆ 'ಯುಗಪುರುಷ' ಪ್ರಕಟಣಾಲಯವೂ ಆಗಿದ್ದು, ಇನ್ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಿದೆ. ಚಂದಾದಾರರನ್ನು ಒಳಗೊಂಡು ವರ್ಷಾವಧಿಯಲ್ಲಿ ಇಂತಿಷ್ಟೆಂಬಂತೆ ಕೃತಿಗಳನ್ನು ನೀಡುತ್ತಿದೆ. ಯುಗಪುರುಷ ಪತ್ರಿಕೆಗೆ ಬರೆಯುವ ನಾಡಿನಾದ್ಯಂತದ ಲೇಖಕರ 'ಯುಗಪುರುಷ ಲೇಖಕ ಬಳಗ' ವೊಂದು ರೂಪುಗೊಂಡಿದೆ.

ಬೆನಗಲ್ ಶಿವರಾವ್ (೧೮೯೧–೧೯೭೫) ಮಂಗಳೂರಿನಲ್ಲಿ ಜನಿಸಿದ್ದು 'ನ್ಯೂ ಇಂಡಿಯಾ' ಪತ್ರಿಕೆಯ ಸಹ ಸಂಪಾದಕರಾಗಿದ್ದರು. ಮಹಾತ್ಮ ಗಾಂಧಿ ಅವರ 'ಎಂಗ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಯಾಗಿ ೧೯೩೧ರಲ್ಲಿ ಲಂಡನ್‌ನಲ್ಲಿ ನಡೆದ ಪ್ರಥಮ ಚಕ್ರಗೋಷ್ಠಿಯಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಮುಂದೆ 'ದಿ ಹಿಂದು' ಪತ್ರಿಕೆಯ ಪ್ರತಿನಿಧಿಯಾಗಿ ದೆಹಲಿಯಲ್ಲದೆ ಯೂರೋಪಿನ ಹಲವಾರು ದೇಶಗಳಲ್ಲಿ ಕಾರ್ಯನಿರ್ವಹಿಸಿದರು. ಸಂವಿಧಾನ ರಚನಾ ಸಭೆಯೂ ಸೇರಿದಂತೆ ಹಲವಾರು ಪ್ರತಿಷ್ಠಿತ ಸಭೆಗಳಲ್ಲಿ ಸದಸ್ಯ, ನಿಯೋಗಗಳ ಪ್ರತಿನಿಧಿಗಳಾಗಿದ್ದರು. ಕೆನಡಿ, ಮ್ಯಾಕ್ಮಿಲನ್‌ರವರುಗಳಿಗೆ ವಿಶ್ವ ಶಾಂತಿಯ ಕುರಿತ ಮನವಿ ನೀಡುವ ನಿಯೋಗದಲ್ಲಿ ಒಬ್ಬರಾಗಿದ್ದರು. ಪತ್ರಿಕೋದ್ಯಮದಿಂದ ನಿವೃತ್ತರಾದ ಮೇಲೆ ಮಂಗಳೂರಿನಿಂದ ರಾಜ್ಯಸಭೆ, ಲೋಕಸಭೆಗಳಿಗೆ ಸದಸ್ಯರಾಗಿದ್ದರು. ಶಿವರಾವ್ ಅವರು 'ದಿ ಇಂಡಸ್ಟ್ರಿಯಲ್ ವರ್ಕರ್ ಇನ್ ಇಂಡಿಯಾ' 'ಇಂಡಿಯಾಸ್ ಫ್ರೀಡಮ್ ಸ್ಟ್ರಗಲ್ ಸಮ್ ನೋಟಬಲ್ ಫಿಗರ್ಸ್'ಗಳನ್ನು ರಚಿಸಿದ್ದು, ಬಿ. ಎನ್. ರಾವ್ ಅವರ ಪತ್ರಗಳನ್ನು 'ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್ ಇನ್‌ದ ಮೇಕಿಂಗ್' ಎಂಬ ಹೆಸರಿನಲ್ಲಿ ಸಂಪಾದಿಸಿದ್ದಾರೆ. 'ಫ್ರೇಮಿಂಗ್ ಆಫ್ ಇಂಡಿಯಾಸ್ ಕಾನ್‌ಸ್ಟಿಟ್ಯೂಷನ್'ನ ಐದು ಸಂಪುಟಗಳ ಬೃಹತ್ ಗ್ರಂಥಕ್ಕೆ ಮುಖ್ಯ ಸಂಪಾದಕರಾಗಿದ್ದರು. ಕೇಂದ್ರ ಸರ್ಕಾರದಿಂದ ೧೯೬೭ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದಿದ್ದರು.

ಸಾಹಿತ್ಯ ಹಾಗೂ ರಾಜಕೀಯ ಇತ್ಯಾದಿಗಳಿಂದ ಹೊರತಾಗಿ ಮತ್ತು ವೃತ್ತಿನಿರತ ಪತ್ರಕರ್ತರಲ್ಲದವರು ಹೊರತಂದ ಇಲ್ಲವೆ ಸಂಪಾದಕರಾಗಿದ್ದ ಹಲವಾರು ಪತ್ರಿಕೆಗಳು ಬಂದಿದ್ದು ಜಿಲ್ಲೆಯ ಒಂದು ವಿಶೇಷವೆಂದು ಹೇಳಬಹುದು. ಕಾಸರಗೋಡಿನ 'ಪ್ರವಾಸಿ', ನರಸಪ್ಪರವರ 'ವಿನೋದ ಭಾರತ', ಶಿಂಗಣ್ಣ(ಕನ್ನೆಪಾಡಿ ರಾಮಕೃಷ್ಣ) ರವರ 'ಇಂದ್ರಧನುಷ್, (ಹಾಸ್ಯ ಪತ್ರಿಕೆ) ವಿದ್ಯಾಭ್ಯಾಸ ಕುರಿತ 'ಭೋಧಿನಿ', ಸಹಕಾರಿ ಕ್ಷೇತ್ರದ 'ಸಹಕಾರಿ', ಕಾರ್ಮಿಕರಿಗಾಗಿ 'ಕಾರ್ಮಿಕ ಹಿತರಕ್ಷಣೆ', ಕೃಷಿ ಕ್ಷೇತ್ರಕ್ಕೆ 'ಕೃಷಿಲೋಕ', 'ಅಡಿಕೆ ಪತ್ರಿಕೆ', ಆರೋಗ್ಯ ಕ್ಷೇತ್ರದಲ್ಲಿ 'ಆಯುರ್ವೇದ', 'ಕಲಿಯುಗ', ವಿಜ್ಞಾನ ರಂಗದಲ್ಲಿ 'ವಿಜ್ಞಾನಲೋಕ', 'ಸುದರ್ಶನ, ಮತ್ಸ್ಯೋದ್ಯಮ ಕುರಿತ 'ಮೀನುಗಾರ' 'ಮತ್ಸ್ಯಲೋಕ, ಮಕ್ಕಳಿಗಾಗಿ 'ಬಾಲಜಗತ್', 'ಮಕ್ಕಳ ಪತ್ರಿಕೆ', ಚಲನಚಿತ್ರ ಕುರಿತ 'ಚಿತ್ರ', ಪರಿಸರ ಕುರಿತ' 'ನಿಸರ್ಗಲೋಕ' ಧರ್ಮಸ್ಥಳದ ಧಾರ್ಮಿಕ ಪತ್ರಿಕೆಗಳಾದ 'ಚೈತನ್ಯ ಕುಸುಮಾವಳಿ', ಮಂಜೂರಾತಿ', ಸ್ಕೌಟ್‌ಗಳಿಗಾಗಿ 'ಹಿಂದೂಸ್ಥಾನ್ ಸ್ಕೌಟ್', ಕಡಲು ಕುರಿತ 'ಮೆರೈನ್ ಇನ್‌ಫರ್‌ಮೇಶನ್ ಬ್ಯೂರೋ', 'ಫೋರ್ಟ್‌ನ್ಯೂಸ್' ಇತ್ಯಾದಿ ಹೆಸರಿಸಬಹುದು.

ಜಿಲ್ಲೆಯಲ್ಲಿ ಮುಸ್ಲಿಂ ಭಾಷಾ ಬಾಂಧವರಿಗೆ ಪತ್ರಿಕೆಗಳು ಪ್ರೋತ್ಸಾಹ ನೀಡಿದವು. ಪಣೆಯಾಡಿಯವರ 'ಅಂತರಂಗ' ಪತ್ರಿಕೆ ೧೯೧೯ರಲ್ಲಿಯೇ ಯುವ ಬರಹಗಾರ ಹೈದರ್ ಅವರನ್ನು ಬೆಳಕಿಗೆ ತಂದಿತ್ತು. ಕೇಶವಕಾಮತರ 'ಸ್ವತಂತ್ರ ಭಾರತ' ವೂ ೧೯೩೪ರಲ್ಲಿ

ಮುಸ್ಲಿಂ ಲೇಖಕರಿಗೆ ಪ್ರೋತ್ಸಾಹನೀಡಿತ್ತು. ಮುಂದೆ ಹೈದರ್ ಅವರು ೧೯೩೭ರಲ್ಲಿ 'ಜ್ಯೋತಿ', ಅಬ್ದುಲ್ ರಹೀಂ ಅವರು ೧೯೩೯ರಲ್ಲಿ ಪ್ರಕಟಿಸಿದ, ಮಹಜರ್ ಅವರು ಸಂಪಾದಕರಾಗಿದ್ದ, ಹಂದರ್ದ್' ಸ್ವಾತಂತ್ರ್ಯಪೂರ್ವದ ಪ್ರಕಟಣೆಗಳು. ಆ ನಂತರ ಸಿ.ಕೆ. ಹುಸೇನ್ ರವರ 'ದಿವ್ಯವಾಣಿ' , ವಹ್ಹಾಬ್ ಅವರ 'ಅಪ್ಸರ', ಶಾಫಿ ಅವರ 'ಹಿಲಾಲ್', ಎಂ.ಎ,ರಹೀಂ ಅವರ 'ಅಮಾನತ್', ಕೆ.ಎಂ.ಜಿ. ಹುಸೇನ್‌ರ 'ಅಗ್ನಿ', ಮಹಮ್ಮದ್ ಯೂಸುಫ್ ಅವರ 'ಯುಗರಶ್ಮಿ', ಬಿ.ಎಂ.ಇಚ್ಲಂಗೋಡು ಅವರ 'ತವನಿಧಿ' ಇಬ್ರಾಹಿಂ ಸಯೀದ್ ಅವರ 'ಸನ್ಮಾರ್ಗದ' ಇವೇ ಮುಂತಾದ ಹಲವಾರು ಪತ್ರಿಕೆಗಳು ಕಳೆದ ಶತಮಾನದ ಅಂತ್ಯದಲ್ಲಿ ಮುಸ್ಲಿಂ ಭಾಷಿಕರಿಂದ ಬಂದ ಪತ್ರಿಕೆಗಳು.

ರಾಜಕಾರಣಿ ಜಾರ್ಜ್ ಫರ್ನಾಂಡಿಸ್ (೧೯೩೦) ಅವರು ೧೯೪೯ರಲ್ಲಿ 'ಕೊಂಕಣಿ ಯುವಕ' ಪತ್ರಿಕೆಯ ಸಂಪಾದಕರಾಗಿದ್ದು ೧೯೫೦ರಲ್ಲಿ 'ರೈತವಾಣಿ', ೧೯೫೨–೫೩ರಲ್ಲಿ 'ಡಾಕ್ಮನ್' ಎಂಬ ಇಂಗ್ಲೀಷ್‌ನ ಕಾರ್ಮಿಕಪತ್ರಿಕೆ ಹಾಗೂ ೭೦ರ ದಶಕದಲ್ಲಿ ದೆಹಲಿಯ ಹಿಂದಿ ಸಾಪ್ತಾಹಿಕ 'ಪ್ರತಿಪಕ್ಷ'ಗಳ ಸಂಪಾದಕರಾಗಿದ್ದರು.

ಜಿಲ್ಲೆಯಿಂದ ಹೊರಬಂದ ಇಂಗ್ಲೀಷ್ ಪತ್ರಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ನೋಡಬಹುದು. ೧೮೬೨ರಲ್ಲಿ ಮೋಗ್ಲಿಂಗ್, ಕಿಟ್ಟೆಲ್ ಮತ್ತು ಮ್ಯಾಕ್ ಅವರ ಸಂಪಾದಕತ್ವದಲ್ಲಿ 'Illustrated Canarase Journal ' ೧೯೦೩ ರಲ್ಲಿ ಎಫ್.ಎಚ್.ರೌಲೇಂದರ್ ಅವರ 'India Magazine' ೧೯೨೭ರಲ್ಲಿ ಎ.ಎಲ್. ಪಿಂಟೋರವರ Mangalore Sunday News ಹಾಗೂ ಎಫ್.ಎಚ್.ರೌಲೇಂಡರ್ ಅವರ 'B.M.Press Magazine' ೧೯೩೦ರಲ್ಲಿ ಜಾರಪ್ಪ ಅವರ 'The Friend of Poor' ೧೯೩೯ರಲ್ಲಿ 'The way of Christ', ೧೯೪೯ರಲ್ಲಿ 'The Bapu's Magazine', ೧೯೬೧ರಲ್ಲಿ ಜೆ.ಎಂ.ಲೋಬೋ ಪ್ರಭು ರವರ 'The Karnataka Telegraph' ಇತ್ಯಾದಿಗಳಲ್ಲದೆ 'Vision', 'Educated India', Indian cronical', Human Affairs'.ಇತ್ಯಾದಿಗಳನ್ನು ಹೆಸರಿಸಬಹುದು.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ರಾಜ್ಯ ವಾರ್ತಾ ಇಲಾಖೆಯವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರುತ್ತಿದ್ದ ಪತ್ರಿಕೆಗಳ ಬಗ್ಗೆ ಪಟ್ಟಿ ನೀಡಿದ್ದು, ಅದರಂತೆ ಮಂಗಳೂರಿನಿಂದ–ಹೊಸದಿಗಂತ, ಮಂಗಳೂರು ರಿಪೋರ್ಟರ್ಸ್, ಮೆರೈನ್ ಇನ್ಫರ್ಮೇಶನ್ ಬ್ಯೂರೋ; ಆಶಾವಾದಿ, ದಿವ್ಯವಾಣಿ, ಅಮೃತ, ರಾಕ್ಣೊ, ಸನ್ಮಾರ್ಗ, ಮಿತ್ರ, ಜಗದರ್ಶಿ, ಇನ್ಸೈಟ್, ಕಾನಿಕ, ಮಾಯಾಂಗಾವ್, ಮಜ್ದೂರ್ ವಾರ್ತಾ, ಮಂಜುವಾಣಿ(ಉಜಿರೆ), ಕಲಾದರ್ಶನ, ಪಂಚಕದಾಯಿ, ಡಿ.ಕೆ. ಸಹಕಾರಿ, ಮಂಗಳೂರು ಮಾಸಿಕ, ಝಲೋ, ಯುಗರಶ್ಮಿ, ಕಲಾಕಿರಣ್, ಸೇವಾಮೃತ, ಯುಗಪುರುಷ, ಮಿಲಾತ್, ಪೋರ್ಟ್ ನ್ಯೂಸ್. ಭೂಲೋಕ ಪಾಕ್ಷಿಕ(ಬೆಳ್ತಂಗಡಿ), ಆರಕ್ಷಕವಾಣಿ, ತಿಂಗಳಬೆಳಕು, ಕಾರ್ಕೋಟಕ(ಪುತ್ತೂರು), ಸುದ್ದಿ ಬಿಡುಗಡೆ(ಸುಳ್ಯ), ಪಾಂಚಜನ್ಯ(ಪುತ್ತೂರು), ಸಂಶೋಧಕ(ಪುತ್ತೂರು), ಇಶಾ(ಪುತ್ತೂರು) ಸುಮಸೌರಭ(ಪುತ್ತೂರು) ಗಳು ಹೊರಬರುತ್ತಿದ್ದವು.

ಕಾಸರಗೋಡಿನಲ್ಲಿ ೧೯೪೭ರಲ್ಲಿ ೩೧ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿದ್ದು ಅದರ ಸ್ಮರಣ ಸಂಚಿಕೆ 'ತೆಂಕನಾಡು' ವಿನಲ್ಲಿ ಹುರಾಳಿಭೀಮರಾಯರು ಆವರೆಗೆ ಜಿಲ್ಲೆಯಲ್ಲಿ ಬಂದ ಪತ್ರಿಕೆಗಳ ವಿವರ ನೀಡುತ್ತಾರೆ. ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿದ್ದ 'ಅಂತರಂಗ' ಕನ್ನಡ ಸುವಾರ್ತಿಕ, ಕರ್ನಾಟಕ ಪತ್ರಿಕೆ, ಸುವಾರ್ತಾ ಪ್ರಸಾರಕ, ಸುವಾರ್ತಾದೂತ, ಸತ್ಯವ್ರತ, ವಿದ್ಯಾಭಿವರ್ಧಿನಿ, ವರ್ತಕಧುರೀಣ, ರಾಜಭಕ್ತಿ ಇತ್ಯಾದಿ ಈ ಮುಂದಿನ ಪಟ್ಟಿಕೆಗಳಲ್ಲಿ ಇಲ್ಲದ ಕೆಲವು ಪತ್ರಿಕೆಗಳ ಹೆಸರುಗಳು ಅದರಲ್ಲಿ ನಮೂದಾಗಿದೆ. ಪುಸ್ತಕ ಪ್ರಕಾಶನ ಸಂಸ್ಥೆಗಳು ಪ್ರಾಯಶಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವಷ್ಟು ಬೇರೆ ಜಿಲ್ಲೆಗಳಲ್ಲಿ ಇರಲಾರದು. ಮೊದಲಿಗೆ ಬಾಸೆಲ್ ಮಿಷನ್ ಹಾಗೂ ರೋಮನ್ ಕ್ಯಾಥೋಲಿಕ್ ಸಂಸ್ಥೆಯವರು, ಆನಂತರ ಸಾಹಿತಿಗಳಾದ ಪಂಜೆಮಂಗೇಶರಾಯರ 'ಬಾಲ ಸಾಹಿತ್ಯ ಮಂಡಲ', ಶಿವರಾಮಕಾರಂತರ ಹರ್ಷ ಪ್ರಕಟನಾಲಯ, ವಾಸುದೇವ ಶೆಣೈಯವರ 'ಒಂದಾಣೆ ಮಾಲೆ' ಇತ್ಯಾದಿಗಳು, ಪತ್ರಿಕೋದ್ಯಮಿಗಳಾದ ಕಿನ್ನಿಗೋಳಿಯ 'ಯುಗಪುರುಷ'; ಪುತ್ತೂರು, ಉಜಿರೆ ಮುಂತಾದೆಡೆಯ ಕನ್ನಡ ಸಂಘಗಳು; ಶಾಲಾ ಕಾಲೇಜುಗಳಾದ ಸೆಂಟ್ ಎಲೋಷಿಯಸ್ ಕಾಲೇಜು, ಪುತ್ತೂರಿನ ಸಂತ ಫಿಲೋಮಿನ ಕಾಲೇಜು, ವಿವೇಕಾನಂದ ಕಾಲೇಜು ಇತ್ಯಾದಿಗಳು, ಧಾರ್ಮಿಕ ಕ್ಷೇತ್ರಗಳಾದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ದೇವಾಲಯಗಳವರು; ಮಂಗಳೂರಿನ ವಿಶ್ವವಿದ್ಯಾಲಯ ಹಾಗೂ ತುಳು, ಕೊಂಕಣಿ ಅಕಾಡಮಿಗಳು ಪುಸ್ತಕ ಪ್ರಕಟಣೆಗಳನ್ನು ಕೈಗೊಂಡಿದ್ದು, ಇಂದಿಗೂ ಅನೇಕವು ಕ್ರಿಯಾಶೀಲವಾಗಿವೆ. ಜಿಲ್ಲೆಯ ಪ್ರತಿ ತಾಲೂಕುಗಳಲ್ಲೂ ಹತ್ತಾರು ಪ್ರಕಾಶನ ಸಂಸ್ಥೆಗಳಿವೆ. ಹಾಗೂ ಅವರದೇ ಮಾರಾಟ ವ್ಯವಸ್ಥೆಯೂ ಇದೆ. ಮಂಗಳೂರಿನ 'ಅತ್ರಿ ಬುಕ್ ಸೆಂಟರ್', ಕರಾವಳಿಯ ಕನ್ನಡ ಪುಸ್ತಕಗಳೂ ಸೇರಿದಂತೆ ರಾಜ್ಯಾದ್ಯಂತ ಕನ್ನಡ ಪುಸ್ತಕಗಳ ವ್ಯವಸ್ಥಿತ ಮಾರಾಟಮಳಿಗೆಯಾಗಿದೆ. ವ್ಯವಸ್ಥಾಪಕರಾದ ಜಿ.ಎನ್. ಅಶೋಕವರ್ಧನ (೧೯೫೨)ರವರು 'ಸಾಹಸಕ್ರೀಡೆ, ಚಾರಣ ಶಿಬಿರಗಳ ತಂಡಗಳನ್ನು ಬೆಳೆಸಿದ್ದು, ತಾತಾರ್ ಶಿಖರಾರೋಹಣ, ಚಕ್ರವರ್ತಿಗಳು–ಪ್ರವಾಸ ಕಥನ; ಪುಸ್ತಕ ಮಾರಾಟ–ಹೋರಾಟ, ಬೆಟ್ಟಗುಡ್ಡಗಳು–ಲೇಖನ ಸಂಗ್ರಹಗಳನ್ನು ಹೊರತಂದಿದ್ದಾರೆ. ಮಂಗಳೂರ ಬಳಿ 'ಅಶೋಕವನ' ವೆಂಬ ಅರಣ್ಯಪ್ರದೇಶ

ರೂಪಿಸಿದ್ದಾರೆ. ಹುಬ್ಬಳ್ಳಿಯ ಪುಸ್ತಕ ಪ್ರಕಾಶನ ಸಂಸ್ಥೆಯ ಗೋವಿಂದರಾಯರು ಮಂಗಳೂರಿನವರಾಗಿದ್ದು ಜನರಲ್ಲಿ ಪುಸ್ತಕಾಭಿರುಚಿ ಬೆಳೆಸಿದರು.

ಪತ್ರಿಕಾ ಪ್ರಕಟಣೆಗಳೊಂದಿಗೆ ಸಂಬಂಧವಿರಿಸಿಕೊಂಡ ಅನೇಕರು ಜಿಲ್ಲೆಯ ಒಳ–ಹೊರಗೆ ಇದ್ದಾರೆ. ಹೊರಗಿನ ಜಿಲ್ಲೆಯವರೂ ಕಾರ್ಯಾರ್ಥವಾಗಿ ಇಲ್ಲಿ ನೆಲೆಸಿದ್ದಾರೆ. ಪ್ರಜಾವಾಣಿಯ ಪ್ರತಿನಿಧಿಯಾಗಿ ನೆಲೆಸಿರುವ ಗಣೇಶ ಅಮೀನಗಡ ಅವರು ಸ್ಥಳೀಯ ಸಂಸ್ಕೃತಿಯನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. ಮಂಗಳೂರಿನಲ್ಲಿ 'ಉದಯವಾಣಿ' ಪತ್ರಿಕೆಯಲ್ಲಿ ಸುದ್ದಿ ವಿಭಾಗದ ಮುಖ್ಯಸ್ಥರಾಗಿರುವ ಮನೋಹರ ಪ್ರಸಾದ್ ೨೫೦೦ಕ್ಕೂ ಹೆಚ್ಚು ತನಿಖಾ ವರದಿ, ಸಂದರ್ಶನ, ನುಡಿಚಿತ್ರಗಳನ್ನು ಪ್ರಕಟಿಸಿದ್ದಾರೆ. ೨೦೦೫ರ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ  ಅನೇಕ ಪ್ರಶಸ್ತಿಗಳು ಶ್ರೀಯುತರಿಗೆ ಬಂದಿವೆ. ಬೆಂಗಳೂರಿನಿಂದ 'ಗಾಂಧಿಬಜಾರ್' ಪತ್ರಿಕೆ ತರುತ್ತಿರುವ ಬಾಲಕೃಷ್ಣ(ಬಾಕಿನ); ಪ್ರಜಾವಾಣಿಯ ಬಿ.ಎ.ಹನೀಫ್, ಕನ್ನಡ ಪ್ರಭದ ಅಬ್ದುಲ್ ರಶೀದ್, ವಿಜಯಕರ್ನಾಟಕದ ಅರವಿಂದನಾವಡ ಮುಂತಾದ ಅನೇಕರು ಜಿಲ್ಲೆಗೆ ಸಂಬಂಧಿಸಿದವರು.

ಪತ್ರಿಕೋದ್ಯಮದೊಂದಿಗೆ ೧೯೫೦ರಲ್ಲಿ ಪತ್ರಕರ್ತರ ಸಂಘವೊಂದು ಸ್ಥಾಪನೆಯಾಗಿ ಸಮ್ಮೇಳನವೊಂದನ್ನು ನಡೆಸಿತು. ೭೦ರ ದಶಕದಲ್ಲಿ 'ಮಂಗಳೂರು ಪ್ರೆಸ್‌ಕ್ಲಬ್' ಆರಂಭವಾಗಿ ಹಲವು ಕಾರ್ಯಕ್ರಮ ನಡೆಸಿತು. ಜಿಲ್ಲೆಯ ಕಾರ್ಯನಿರತ ಪತ್ರಕರ್ತರ ಸಂಘ ಆರಂಭಗೊಂಡಿದ್ದು, ಟ್ರೇಡ್ ಯೂನಿಯನ್ ನಿಯಮಾವಳಿಯಂತೆ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ ತಾಲೂಕು ಮಟ್ಟದಲ್ಲೂ ಪತ್ರಕರ್ತರ ಸಂಘಟನೆಗಳಿವೆ. ಉಡುಪಿ ಜಿಲ್ಲೆ ಪ್ರತ್ಯೇಕವಾದ ಮೇಲೆ ಸಂಘವೂ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಮೂರು (೧೯೮೬) ರಲ್ಲಿ ರಾಜ್ಯದ ಪತ್ರಿಕೆಗಳ ಪಟ್ಟಿಯಿದ್ದು, ಅದರಲ್ಲಿ ನಮೂದಾಗಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ (ಉಡುಪಿ ಜಿಲ್ಲಾ ವಿನಾ) ಪತ್ರಿಕೆಗಳನ್ನು ಅಕಾರಾದಿಯಾಗಿ ಈ ಕೆಳಗೆ ನೀಡಿದೆ.

| ಹೆಸರು | ಅವಧಿ | ಸ್ಥಳ | ವರ್ಷ | ಸಂಪಾದಕ/ಪ್ರಕಾಶಕ |
|---|---|---|---|---|
| ೧ | ೨ | ೩ | ೪ | ೫ |
| ಅರುಣ | ಮಾ/ವಾ | ಮಂಗಳೂರು | ೧೯೪೭ | ಯು.ಎನ್. ಶ್ರೀನಿವಾಸ ಭಟ್ |
| ಆನಂದ | ಮಾ/ವಾ | ಬಂಟ್ವಾಳ | ೧೯೧೬ | ಎಂ.ಎನ್.ಕಾಮತ್/ ಎಸ್. ಸಂಪತ್ತಯ್ಯಂಗಾರ್ |
| ಆಶಾಜ್ಯೋತಿ | ಮಾ | ಮೂಲ್ಕಿ | ೧೯೫೪ | ಎಂ. ಎನ್. ಕಾಮತ್ |
| ಉದಯಚಂದ್ರ | ವಾ | ಮಂಗಳೂರು | ೧೯೦೭–೫೦ | ಎಸ್.ಎಸ್.ಒಡೆಯರ/ ಎಚ್. ಎಫ್. ಒಡೆಯರ |
| ಉದಯ ಭಾರತ | ತ್ರೈ/ಮಾ/ಪಾ | ಉಡುಪಿ/ಮಂಗಳೂರು | ೧೯೨೭ | ಅಲೆವೂರು ಶೇಷಪ್ಪಯ್ಯ |
| ಕಂಠೀರವ | ಮಾ | ಮಂಗಳೂರು | ೧೯೧೯–೩೬ | ಬೋಳಾರ ವಿಠಲರಾವ್ |
| ಕನ್ನಡ ಕೇಸರಿ | ಮಾ | ಮಂಗಳೂರು (ಮಂಜೇಶ್ವರ) | | ೧೮೮೫ ಮಂಜೇಶ್ವರ ಅನಂತರಾವ್ |
| ಕನ್ನಡ ಕ್ರೈಸ್ತ ಬಂಧು | ಪಾ/ಮಾ | ಮಂಗಳೂರು | ೧೯೩೨ | ಎಂ. ಬೇಂಝ್/ ಕೆ. ಆರ್. ಕರುಣಾಕರ |
| ಕನ್ನಡ ಕೋಗಿಲೆ | ಪಾ/ಮಾ | ಮಂಗಳೂರು | ೧೯೧೬–೧೯ | ಪಿ.ಭೋಜರಾಜ್/ ಮುಳಿಯ ತಿಮ್ಮಪ್ಪಯ್ಯ |
| ಕನ್ನಡವಾರ್ತಿಕ (ಕ/ಇಂ) | ಪ | ಮಂಗಳೂರು | ೧೮೬೨ | – |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ಕನ್ನಡ ಸಹಕಾರಿ | ಮಾ | ಪುತ್ತೂರು | ೧೯೧೯ | ಉಗ್ರಾಣ ಮಂಗೇಶರಾವ್/ ಮಂ. ಅನಂತರಾಯರು |
| ಕನ್ನಡ ಸಹಕಾರಿ | ಮಾ | ಮಂಗಳೂರು | ೧೯೩೬–೭೨ | ಪಿ. ನರಸಿಂಹರಾವ್/ ವಿ. ಪ್ರಭಾಕರರಾವ್ |
| ಕಲಾ | ವಾ | ಮಂಗಳೂರು | ೧೯೪೭–೪೯ | ವೈ. ಉಮೇಶರಾವ್ |
| ಕಲಾವಿದ | ಮಾ | ಮಂಗಳೂರು | ೧೯೪೭ | ಎಂ. ಎಸ್. ಶೆಟ್ಟಿ |
| ಕಲಿಯುಗ | ತ್ರೈ/ಮಾ | ಧಾರವಾಡ/ ಮಂಗಳೂರು | ೧೯೩೬–೫೬ | ಎಂ. ಗೋಪಾಲಕೃಷ್ಣರಾವ್ |
| ಕರ್ನಾಟಕ ಕೇಸರಿ | ವಾ | ಮಂಗಳೂರು | ೧೯೨೮ | ಮಂಜೇಶ್ವರ ಅನಂತರಾವ್ |
| ಕರ್ನಾಟಕ ಕೇಸರಿ | ಮಾ | ಪುತ್ತೂರು | ೧೯೨೯ | ಮಂಜೇಶ್ವರ ಅನಂತರಾವ್ |
| ಕ್ರೈಸ್ತ ಸಭಾಪತ್ರ | ಮಾ | ಮಂಗಳೂರು | ೧೮೬೭–೧೯೧೯ | ಸಿ. ಸ್ಟೊಲ್ಜ/ ಜೆ.ಜೆ. ಬ್ರಿಗೇಲ, "ವತ್ಸ" |
| ಕ್ರೈಸ್ತ ಹಿತವಾದಿ | ಮಾ | ಮಂಗಳೂರು | ೧೯೨೪–೩೨ | ಐ.ಎಲ್. ಜೋಶುವಾ ಜತ್ತಣ್ಣ |
| ಚಿತ್ರ | ಮಾ | ಮಂಗಳೂರು | ೧೯೩೭–೩೯ | ಕುಮಾರ ವೆಂಕಣ್ಣ/ |
| ಚಿತ್ರವಾಣಿ | ಮಾ/ಪಾ | ಮಂಗಳೂರು | ೧೯೫೨ | ಕುಮಾರ ಮಂಗಳೂರು |
| ಚೈತನ್ಯ ಕುಸುಮಾವಳಿ | ಮಾ | ಧರ್ಮಸ್ಥಳ | ೧೯೩೪ | – |
| ಜನಪದ | ವಾ | ಮಂಗಳೂರು | ೧೯೫೦ | ನಾರಾಯಣ ಕಲ್ಲೆ |
| ಜನಪ್ರಿಯ | ದ್ವೈ.ಮಾ | ಮಂಗಳೂರು | ೧೯೫೪ | ಮುನಿಪಾಲರಾಜು |
| ಜನಪ್ರಿಯ | ವಾ | ಮಂಗಳೂರು | ೧೯೫೪–೫೫ | ಎಫ್.ಐ.ಅಲಸಿಯದಾಸ್ |
| ಜನಯುಗ | ಪಾ/ವಾ | ಕಟಪಾಡಿ | ೧೯೫೨–೫೩ | ಎಂ.ವಿ.ಹೆಗಡೆ |
| ಜೈನಬಂಧು | ಮಾ | ಕೊಕ್ಕರ್ಣೆ | ೧೯೧೧–೧೪ | ಎಸ್.ಎ.ನಾಭಿರಾಜಯ್ಯ |
| ಜ್ಯೋತಿ | ಪಾ/ವಾ | ಮಂಗಳೂರು | ೧೯೫೦–೫೯ | ಬಿ.ಎಫ್.ಭಾಸ್ಕರ ರೈ/ ಎಂ.ರಾಮನಾಥ |
| ಜ್ಯೋತಿಷ್ಯ | ಮಾ | ಧರ್ಮಸ್ಥಳ | ೧೯೫೭ | ಕೆ.ಎಸ್.ಉಪಾಧ್ಯಾಯ |
| ತರುಣ | ಮಾ | ಮಂಗಳೂರು | ೧೯೫೧ | ಕೆ.ರಾಮದಾಸ ನಾಯಕ, ಬಿ.ಎಸ್.ಪಾಟೀಲ್ |
| ತಿಲಕ ಸಂದೇಶ | ವಾ.ಮಾ | ಮಂಗಳೂರು | ೧೯೧೮ | ದ.ಕೃ. ಭಾರದ್ವಾಜ |
| ತ್ರಿವೇಣಿ | ಮಾ | ಮಂಗಳೂರು | ೧೯೩೩–೩೭ | ಟಿ.ನಾರಾಯಣಭಟ್/ ಎಂ. ಬಾಬುರಾವ್ ಪ್ರಭು |
| ತುಣುಕು ಮಿಣುಕು | ಮಾ | ಕೊಡಿಯಾಬೈಲು | ೧೯೨೮ | ಎಂ.ಪಿ. ಭಟ್/ |
| ಅ. ಶೇಷಪ್ಪಯ್ಯ | | | | |
| ತುತ್ತೂರಿ | ಮಾ | ಮಂಗಳೂರು | ೧೯೫೨ | ರಾ.ಮೋ. ವಿಶ್ವಾಮಿತ್ರ |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ದಾಸವಾಣಿ | ಮಾ | ಮಂಗಳೂರು | – | ಬಿ. ಕೇಶವದಾಸ |
| ದೀರ್ಘಾಯು | ತ್ರೈಮಾ | ಮಂಗಳೂರು/ ಬೆಂಗಳೂರು | ೧೯೫೪ | ಎಂ.ಆರ್.ಭಟ್ ಬಿ.ಗೋಪಾಲಕೃಷ್ಣರಾವ್ |
| ದೇಶಭಕ್ತ | ಮಾ | ಮಂಗಳೂರು | ೧೯೪೦ | ಜಯದೇವಜೀ |
| ದೇಶರಂಜನ | ದ್ವೈಮಾ/ಮಾ/ಪಾ | ಮಂಗಳೂರು | ೧೯೩೧ | ಬಿ. ರಾಘವೇಂದ್ರರಾಯರು |
| ನವಜೀವನ | ಮಾ/ತ್ರೈಮಾ | ಸೂರತ್ಕಲ್ | ೧೯೪೯–೫೦ | ಪಾವಂಜೆ. ಎಂ.ಸಾಲಿಯಾನ |
| ದೇಶರಂಜನ | ದ್ವೈಮಾ/ಮಾ/ಪಾ | ಮಂಗಳೂರು | ೧೯೩೧ | ಬಿ. ರಾಘವೇಂದ್ರರಾಯರು |
| ನವಜೀವನ | ಮಾ/ತ್ರೈಮಾ | ಸೂರತ್ಕಲ್ | ೧೯೪೯–೫೦ | ಪಾವಂಜೆ. ಎಂ. ಸಾಲಿಯಾನ |
| ನವಭಾರತ | ದಿ/ವಾ | ಮಂಗಳೂರು | ೧೯೪೨ | ಕೆ.ವಿ.ಶೆಣೈ/ ವಿ.ಎಸ್. ಕುಡ್ವ |
| ನವಶಕ್ತಿ | ಮಾ | ಉಡುಪಿ/ಮಂಗಳೂರು | ೧೯೩೮ | ಪಿ. ಬಿ. ಎನ್. ರಾಮಾಚಾರ್ |
| ನವಶಕ್ತಿ | ಪಾ | ಮಂಗಳೂರು | ೧೯೫೨ | ಕೆ. ಎಂ. ಜಿ. ಹುಸೇನ್ |
| ನಾಡನುಡಿ | ಮಾ | ಮಂಗಳೂರು | ೧೯೩೮–೩೯ | ಪಿ. ಮುರಹರಿರಾವ್ |
| ನ್ಯಾಯಸಂಗ್ರಹ | ಪಾ | ಮಂಗಳೂರು | ೧೮೬೮–೬೯ | ಯು. ಗೋಪಾಲಕೃಷ್ಣಯ್ಯ |
| ನ್ಯಾಯಾಧಿಕರಣ | ಮಾ | ಮಂಗಳೂರು | ೧೮೭೭ | ಎಂ. ಸುಬ್ಬರಾವ್ |
| ಪ್ರಕಾಶಿನಿ | ವಾ/ಪಾ | ಸುರತ್ಕಲ್ | ೧೯೪೨ | ಟಿ. ಶ್ರೀಪತಿ/ ಕೆ. ರಾಜಗೋಪಾಲಚಾರ್ |
| ಪ್ರಪಂಚ | ಮಾ | ಮಂಗಳೂರು | ೧೯೪೭ | ಬಿ. ನರಸಪ್ಪ |
| ಪ್ರಭಾತ | ವಾ/ದಿ | ಮಂಗಳೂರು | ೧೯೩೫–೭೮ | ಕೆ. ವಿ. ಶೆಣೈ/ ಎಚ್. ಎಂ. ಕಾಮತ್ |
| ಪ್ರವಾಸಿ | ವಾ | ಮಂಗಳೂರು | ೧೯೫೩–೫೪ | ಕೆ. ಶ್ರೀನಿವಾಸ ಉಪಾಧ್ಯಾಯ ಬಿ. ಈಶ್ವರಭಟ್ |
| ಪ್ರವಾಹ | ವಾ | ಮಂಗಳೂರು | ೧೯೫೧ | ಎನ್. ಎಂ. ಎ. ರಾವ್ |
| ಪ್ರಸಂಗ | ಮಾ | ಬಂಟ್ವಾಳ | ೧೯೧೬–೧೮ | – |
| ಬಡವರ ಬಂಧು | ಮಾ/ವಾ | ಮಂಗಳೂರು | ೧೯೩೧ | ಜಾರಪ್ಪ |
| ಬಾಲಚಂದ್ರ | ಪಾ/ಮಾ | ಮಂಗಳೂರು/ಉಡುಪಿ | ೧೯೨೯–೪೨ | ಕೆ. ಸುಬ್ರಹ್ಮಣ್ಯ |
| ಬಾಲಪತ್ರ | ಮಾ | ಮಂಗಳೂರು | ೧೮೬೬ | ಬಾಸಲ್‌ಮಿಷನ್ (ಪ್ರಕಾಶಕರು) |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ಭಕ್ತಿ ಸಂದೇಶ | ಮಾ | ಬೆಂಗಳೂರು/ ಮಂಗಳೂರು | ೧೯೦೬ | ದ. ಕೃ. ಭಾರದ್ವಾಜ್ |
| ಭಾರತಿ | ಮಾ | ಮುಲ್ಕಿ | ೧೯೩೩–೩೮ | ಯು. ವಾಮನ ಶೆಣೈ |
| ಮಂಗಳೂರ ಸಮಾಚಾರ | ಪಾ | ಮಂಗಳೂರು | ೧೮೪೩–೪೪ | ಹರ್ಮನ್ ಮೊಗ್ಲಿಂಗ್ |
| ಮಕ್ಕಳ ಪತ್ರಿಕೆ | ಮಾ | ಮಂಗಳೂರು | – | ಕೆ. ಎಚ್. ಕಾರಂತ |
| ಮಕ್ಕಳ ಪುಸ್ತಕ | ಮಾ | ಮಂಗಳೂರು | ೧೯೪೯ | ಕೆ. ಎಸ್. ಶರ್ಮಾ |
| ಮಲೆನಾಡು | ಮಾ | ಮುಂಡಾಜೆ | ೧೯೪೭–೪೯ | ಎಂ. ವಿ. ಗುರುಬಸಪ್ಪ ಶೆಟ್ಟಿ |
| ಮಹಾವೀರ | ತ್ರೈ. ಮಾ | ಕಾಪು | ೧೯೩೯ | ಬಿ. ಎಸ್. ಪಡುಬಿದ್ರಿ |
| ಯುಗಪುರುಷ | ಮಾ | ಉಡುಪಿ/ ಕಿನ್ನಿಗೋಳಿ | ೧೯೪೭ | ಕೆ. ಅನಂತ ಪದ್ಮನಾಭ ಉಡುಪ |
| ರತ್ನಮಾಲಿಕೆ | ಮಾ | ಮಂಗಳೂರು | ೧೯೦೧ | – |
| ರಾಷ್ಟ್ರಜ್ಯೋತಿ | ವಾ | ಮಂಗಳೂರು | ೧೯೫೧ | ಕೆ. ಕೆ. ಶೆಟ್ಟಿ |
| ರಾಷ್ಟ್ರಬಂಧು | ವಾ/ದಿ | ಮಂಗಳೂರು | ೧೯೨೮–೬೭ | ಭಿಡೆ ಶೇಷಭಟ್.ಕೆ. ಶಂಕರಭಟ್ |
| ರಾಷ್ಟ್ರಮತ | ವಾ | ಮಂಗಳೂರು | ೧೯೫೪–೭೫ | ಕೆ. ಶಂಕರಭಟ್, ಜಿ. ಜಯಲಕ್ಷ್ಮಿ |
| ರೈತವಾಣಿ | ವಾ | ಮಂಗಳೂರು | ೧೯೪೮–೫೦ | ಎನ್.ವಿಠಲದಾಸ |
| ವಿಕಾಸ | ಮಾ | ಮಂಗಳೂರು | ೧೯೫೪ | ಕೆ.ಎಲ್. ಸೂರ್ಯನಾರಾಯಣ |
| ವಿಚಾರವಾಣಿ | ವಾ | ಪುತ್ತೂರು | ೧೯೪೭ | ಎಂ.ಬಿ. ಮರಕಿಣಿ |
| ವಿಚಾರವಾಣಿ | ವಾ | ಮಂಗಳೂರು | ೧೯೫೦–೫೫ | ಎಂ. ಜನಾರ್ಧನ |
| | | | | ಕೆ. ಶಿವರಾಮ ಕಾರಂತ |
| ವಿಚಿತ್ರ ವರ್ತಮಾನ ಸಂಗ್ರಹ | ಪಾ | ಮಂಗಳೂರು | ೧೮೬೨–೬೫ | ಜೆ. ಮ್ಯಾಕ್, ಕಿಟಲ್ |
| ವಿದ್ಯೋದಯ | ಮಾ | ಮಂಗಳೂರು | ೧೯೪೧ | ಎಸ್. ಮುಕುಂದರಾವ್<br>ಯು. ಶ್ರೀನಿವಾಸ ಕಿಣಿ |
| ವಿನೋದ ಭಾರತ | ವಾ | ಮಂಗಳೂರು | ೧೯೩೪ | ಎಂ. ಜಾರಪ್ಪ, ಬಿ. ನರಸಪ್ಪ |
| ವಿವೇಕಾಭ್ಯುದಯ | ಮಾ | ಮಂಗಳೂರು | ೧೯೩೩ | ಶಾಂತರಾಜಶಾಸ್ತ್ರಿ |
| ವಿಶ್ವಕರ್ಮ | ಮಾ | ಮಂಗಳೂರು | ೧೯೫೪ | ಬಿ. ಹರಿಶ್ಚಂದ್ರಾಚಾರ್ |
| ವೇದಸಂದೇಶ | ಮಾ | ಮಂಗಳೂರು/ಕೆಂಗೇರಿ | ೧೯೨೬–೩೦ | ದರ್ಮದೇವ |
| ವೈದಿಕ ಮಿತ್ರ | ತ್ರೈಮಾ/ಪ | ಮಂಗಳೂರು | ೧೯೧೦–೧೩ | (ಪ್ರ) ಬಾಸೆಲ್‌ಮಿಷನ್ ಬುಕ್ಸ್ ಮತ್ತು ಟ್ರ್ಯಾಕ್ಸ್ ರಿಪೊಸಿಟರಿ |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ಶಾಂತಿಸಂದೇಶ (ಕ/ಇಂ) | ಪ | ಮಂಗಳೂರು | ೧೯೫೩ | ಎಂ.ಶಾಹಿ/ ಎಂ.ಎ. ಮೌಲ್ವಿ |
| ಶೋಭಾ | ತ್ರೈ | ಮಂಗಳೂರು | ೧೯೫೦–೫೫ | ಎಸ್. ಪಿ. ಭಟ್<br>ಬಿ.ಎನ್. ಭಟ್ |
| ಸಂಗಾತಿ | ಪಾ | ಮಂಗಳೂರು | ೧೯೪೯–೬೨ | ಎಂ. ನವೀನಚಂದ್ರಪಾಲ |
| ಸಂಧ್ಯಾದೀಪ | ದಿ | ಮಂಗಳೂರು | ೧೯೫೪–೬೯ | ಎಚ್.ಮನಮೋಹನ ಕಾಮತ್ |
| ಸಣ್ಣ ಕಥೆಗಳು | ಪ | ಮಂಗಳೂರು | ೧೯೩೫ | – |
| ಸತ್ಯ | ದಿ | ಮಂಗಳೂರು | ೧೯೫೩ | – |
| ಸತ್ಯದೀಪಿಕೆ | ವಾ | ಮಂಗಳೂರು | ೧೮೯೬–೧೯೧೪ | ಬಿ. ಲೂತಿ/ ಫಾದರ್ ಜತ್ತನ್ನ |
| ಸದ್ಧರ್ಮ ಪ್ರಚಾರಕ (ಕ/ಇ) | ಮಾ | ಮಂಗಳೂರು | ೧೯೩೩–೩೬ | ಬಿ. ಲಕ್ಷ್ಮಣದೇವ ವಿದ್ಯಾರ್ಥಿ |
| ಸಮಾಜವಾದಿ | ವಾ | ಮಂಗಳೂರು | ೧೯೫೬ | ವಾಸುದೇವ ಕೈಂತಜೆ |
| ಸಮದರ್ಶಿ | ಮಾ/ವಾ | ಮಂಗಳೂರು | ೧೯೩೯–೪೭ | ಎಸ್. ಎನ್. ಹೊಳ್ಳ |
| ಸಮಾಚಾರ | ಮಾ/ವಾ | ಮಂಗಳೂರು | ೧೯೫೪–೧೯೬೨ | ಎಚ್. ಆರ್. ಮಲ್ಯ |
| ಸರ್ವೋದಯ | ವಾ | ಮಂಗಳೂರು | ೧೯೪೮–೫೫ | ನಾರಾಯಣ ಎಸ್. ಕಲ್ಲೆ ಮತ್ತು<br>ಕೆ.ಕೆ. ಶೆಟ್ಟಿ |
| ಸಹಕಾರಿ | ಮಾ | ಮಂಗಳೂರು | – | ಎಂ. ಶಿವರಾವ್ |
| ಸ್ವದೇಶಾಭಿಮಾನಿ | ಪ/ವಾ | ಮಂಗಳೂರು | ೧೯೦೭–೫೦ | ವಿ. ಶ್ರೀನಿವಾಸ ಕಾಮತ್ |
| ಸ್ವತಂತ್ರ ಭಾರತ | ವಾ/ದಿ | ಉಡುಪಿ/ಮಂಗಳೂರು | ೧೯೩೭–೪೭ | ಎಚ್. ಆರ್. ಮಲ್ಯ/<br>ಕೆ. ಹೈದರ್ |
| ಸ್ವದೇಶೀ ಪ್ರಚಾರಕ | ಮಾ | ಮಂಗಳೂರು | ೧೯೩೨–೩೬ | ಎಂ. ಬಾಬುರಾವ್ ಪ್ರಭು |
| ಸಾರಥಿ | ಮಾ | ಮಂಗಳೂರು | ೧೯೪೮–೫೨ | ಕೆ. ಕೃಷ್ಣಮಾಚಾರ್ಯ |
| ಸಾಹಿತ್ಯ | ತ್ರೈಮಾ | ಪೆರಡಾಲ(ಕಾಸರಗೋಡು) | ೧೯೨೯ | – |
| ಸುಬೋಧಿನಿ | ಪಾ | ಮಂಗಳೂರು | ೧೮೭೧ | – |
| ಸುವಾಸಿನಿ | ಮಾ | ಮಂಗಳೂರು | ೧೯೦೦–೨೬ | ಬೋಳಾರ ವಿಠಲರಾವ್<br>ಬೆನಗಲ್ ರಾಮರಾವ್ |
| ಸುವಾಸಿನಿ | ಮಾ | ಮಂಗಳೂರು | ೧೯೪೯–೫೧ | ಕೆ. ವಾರಿಜಾದೇವಿ<br>ಬಿ. ಮೋಹಿನಿ ದೇವಿ |
| ಹಿಂದೂ ಸಂರಕ್ಷಣೆ | ಮಾ | ಮಂಗಳೂರು | – | – |
| ಹಿಂದೂಸ್ಥಾನ್ ಸ್ಕೌಟ್ | ಮಾ | ಮಂಗಳೂರು | ೧೯೪೦–೪೭ | ಬಿ. ಶ್ರೀನಿವಾಸರಾವ್. |

ಸದರಿ ರಾಜ್ಯ ಗ್ಯಾಸೆಟಿಯರ್‌ನಲ್ಲಿ ಪ್ರಕಟವಾಗಿರುವ ಪತ್ರಿಕೆಗಳ ಪಟ್ಟಿಯಲ್ಲದೆ, ಕರ್ನಾಟಕ ಪತ್ರಿಕಾ (ಮಾಧ್ಯಮ) ಅಕಾಡೆಮಿ ಪ್ರಕಟಿಸಿರುವ 'ಕರ್ನಾಟಕ ಪತ್ರಿಕಾ ಇತಿಹಾಸ ಸಂಪುಟ–೧' ರಲ್ಲಿ ಪಿ.ಗೋಪಾಲಕೃಷ್ಣ ಅವರು (ಈಗ ದಿವಂಗತ), ಸ್ವತಃ ಹುಡುಕಿದ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮದ ಬಗ್ಗೆ ವಿಶೇಷ ಅಧ್ಯಯನ ಮಾಡಿದ ಪಿ. ಎಸ್. ಈಶ್ವರ ಭಟ್ (ಈಶ್ವರ ದೈತೋಟ) ಅವರ ಲೇಖನ ಆಧರಿಸಿ ೨೦೬ ಪತ್ರಿಕೆಗಳ ಪಟ್ಟಿಯನ್ನು ನೀಡುತ್ತಾರೆ. (ಪಟ್ಟಿ ೧೯೯೯ರಲ್ಲಿ ಪ್ರಕಟವಾಗಿದ್ದರೂ ಅವುಗಳಿಗೆ ಸಂಗ್ರಹಿಸಿದ ಮಾಹಿತಿ ಅದಕ್ಕೂ ನಾಲ್ಕೈದು ವರ್ಷ ಹಿಂದಿನದು) ಮುಂದೆ ಮೇಲೆ ಹೇಳಿದ ಗ್ಯಾಸೆಟಿಯರ್ ಪಟ್ಟಿಯಲ್ಲಿ ನಮೂದಾಗದ ಆದರೆ ಪಿ. ಗೋಪಾಲಕೃಷ್ಣರ ಪಟ್ಟಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಗಳ ವಿವರ ನೀಡಿದೆ– ಪ್ರಕಟಿತ ವರ್ಷಗಳನ್ನು ಅನುಸರಿಸಿದೆ.

**ಕ–ಕನ್ನಡ/ಇಂ–ಇಂಗ್ಲೀಷ್/ತು–ತುಳು/ಕೊಂ–ಕೊಂಕಣಿ/ತ–ತಮಿಳು/ಮ–ಮಲೆಯಾಳಂ/ಹಿಂ–ಹಿಂದಿ**

**ದಿ–ದಿನಪತ್ರಿಕೆ/ವಾ–ವಾರಪತ್ರಿಕೆ/ಪಾ–ಪಾಕ್ಷಿಕ/ಮಾ–ಮಾಸಪತ್ರಿಕೆ/ದ್ವೈಮಾ–ದ್ವೈಮಾಸಪತ್ರಿಕೆ/ತ್ರೈ–ತ್ರೈಮಾಸಿಕ/ಅ.ವಾ–ಅರವಾರ್ಷಿಕ/ವಾ–ವಾರ್ಷಿಕ**

| ಹೆಸರು | ಅವಧಿ | ಸ್ಥಳ | ವರ್ಷ | ಸಂಪಾದಕ/ಪ್ರಕಾಶಕ |
|---|---|---|---|---|
| ೧ | ೨ | ೩ | ೪ | ೫ |
| ಸಭಾಪತ್ರ | – | ಮಂಗಳೂರು | ೧೮೮೩ | – |
| ಬೋಧಿನಿ | ಮಾ | ಮಂಗಳೂರು | ೧೯೧೩ | ಎಂ. ಎನ್. ಕಾಮತ್ |
| ಸಂಗ್ರಾಮ | ವಾ | ಮಂಗಳೂರು | ೧೯೧೩ | ನರೇಂದ್ರ ಮೆಂಡನ್ |
| ಸತ್ಯಾಗ್ರಹಿ * | ವಾ | ಮಂಗಳೂರು | ೧೯೨೧ | ಎಚ್. ರಾಮರಾಯ ಮಲ್ಯ |
| ವಸಂತ * | ಮಾ | ಮಂಗಳೂರು | ೧೯೨೩ | ಕೋಟ ಶಿವರಾಮ ಕಾರಂತ |
| ಸದ್ಗುರು ಪಾದಸೇವೆ * | – | ಮಂಗಳೂರು | ೧೯೨೬ | ಕೆ. ವೆಂಕಟೇಶ ಶರ್ಮಾ |
| ಕರ್ನಾಟಕ ಕ್ರೈಸ್ತ ಬಂಧು | ಪಾ | ಮಂಗಳೂರು | ೧೯೩೦ | ಆರ್. ಕರುಣಾಕರ್ |
| ಆಶಾವಾದಿ | ವಾ | ಮಂಗಳೂರು | ೧೯೪೩ | ಕೆ. ವಿ. ಭಟ್ |
| ದೇಶಪ್ರೇಮಿ | ವಾ | ಮಂಗಳೂರು | ೧೯೪೪ | ಎಂ. ನಾರಾಯಣ ಕಾಸರಗೋಡು |
| ಸಮಾಚಾರ | ವಾ | ಕಾಸರಗೋಡು | ೧೯೪೪ | ವೈ. ಮಹಾಲಿಂಗಭಟ್ |
| ಸಂದೇಶ | ದೈ | ಮಂಗಳೂರು | ೧೯೪೫ | ವಿ. ಎನ್. ಶ್ರೀನಿವಾಸಭಟ್ |
| ನಮಚೇತನ | ಮಾ | ಪೆರಡಾಲ | ೧೯೪೫ | ಕೆ. ಕೇಶವಭಟ್ |
| ಭವಿಷ್ಯ | ಮಾ | ಧರ್ಮಸ್ಥಳ | ೧೯೪೬ | ಕೆ. ಎನ್. ಉಪಾಧ್ಯಾಯ |
| ಮಧುವನ | ಮಾ | ಮಂಗಳೂರು | ೧೯೪೭ | ಪಿ. ಲಕ್ಷ್ಮೀನಾರಾಯಣ ರಾವ್ |
| ಜನಮತ | ವಾ | ಮಂಗಳೂರು | ೧೯೪೯ | ಮಂಜುನಾಥ ನಾಯಕ್ |
| ಭಾರತ | ವಾ | ಪುತ್ತೂರು | ೧೯೫೦ | ಎ. ವೆಂಕಟರಮಣ ಭಟ್ |
| ದಿವ್ಯವಾಣಿ | ಪಾ | ಮಂಗಳೂರು | ೧೯೫೧ | ಸಿ. ಕೆ. ಹುಸೈನ್ |
| ಗ್ರಾಮಹಿತ | ವಾ | ಮಂಗಳೂರು | ೧೯೫೧ | ಎಸ್. ಮುಕುಂದರಾವ್ |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ಕನ್ನಡವಾಣಿ | ದ್ವೈ | ಮಂಗಳೂರು | ೧೯೬೧ | ಯು. ನರಸಿಂಹರಾವ್ |
| ಒಳನೋಟ | ಸಾ | ಮಂಗಳೂರು | ೧೯೬೧ | ಜೆ. ಎಂ. ಲೋಬೋಪ್ರಭು |
| ಶ್ರೀಗುರುವಾಣಿ | – | ಮಂಗಳೂರು | ೧೯೬೧ | ಪಿ. ವಿ. ನಾಯಕ್ |
| ಅಪ್ಸಾ | ಮಾ | ಮಂಗಳೂರು | ೧೯೬೨ | ಎ. ಮಹಾಬ್ |
| ಇಂದ್ರಧನುಷ್ | ಮಾ | ಪುತ್ತೂರು | ೧೯೬೨ | ಕೆ. ರಾಮಕೃಷ್ಣ |
| ಸಮದರ್ಶಿ | ಸಾ | ಮಂಗಳೂರು | ೧೯೬೨ | ಎಸ್. ಎನ್. ಹೊಳ್ಳ |
| ನಮ್ಮಕೀರ್ತಿ | ಸಾ | ಮಂಗಳೂರು | ೧೯೬೨ | ಎ. ಜಗನ್ನಿವಾಸ ಶೆಟ್ಟಿ |
| ಸೇವಾಮೃತ | ಮಾ | ವಿಟ್ಲ | ೧೯೬೨ | ಮಡಿಯಾಲ ನಾರಾಯಣ ಭಟ್ |
| ಐಕ್ಯರಂಗ | ಮಾ | ಮಂಗಳೂರು | ೧೯೬೪ | ಎಂ. ಎಂ. ಶೆಟ್ಟಿ |
| ವಾರ್ತಾಲೋಕ | ದ್ವೈ | ಮಂಗಳೂರು | ೧೯೬೪ | ಪಿ. ಗೋಪಾಲಕೃಷ್ಣ |
| ಭಾರತೀಯ ಕೆಲಸಗಾರ | ಪಾ | ಮಂಗಳೂರು | ೧೯೬೫ | ಪಿ. ಡಿ. ಬಂಗೇರ |
| ಸುಧೇನು | ಮಾ | ಮಂಗಳೂರು | ೧೯೬೫ | ಎಂ.ಪಿ. ಉಮೇಶ ಆಚಾರ್ಯ |
| ಆತ್ಮಮಿತ್ರ | ಮಾ | ಮಂಗಳೂರು | ೧೯೬೬ | ಕೆ.ಸಿ. ಭಕ್ತಾನಂದಸ್ವಾಮಿ |
| ವಿಜ್ಞಾನಲೋಕ | ಮಾ | ಶ್ರೀನಿವಾಸನಗರ | ೧೯೬೬ | ಅಡ್ಯನಡ್ಕ ಕೃಷ್ಣ ಭಟ್ |
| ಅಗ್ನಿ | ಪಾ | ಮುಲ್ಕಿ | ೧೯೬೭ | ಕೆ. ಎಂ. ಜಿ. ಹುಸೈನ್ |
| ಪೂಜಾರಿ ಬಂಧು | ಸಾ | ಮಂಗಳೂರು | ೧೯೬೭ | ಮಂಗಳೂರು ಜಾರಪ್ಪ |
| ಹಿಲಾಲ್ | ಸಾ | ಮಂಗಳೂರು | ೧೯೬೭ | ಟಿ. ಎಂ. ಎ. ಶಾಫಿ |
| ವಾರ್ತಾವಾಣಿ | ದ್ವೈ | ಮಂಗಳೂರು | ೧೯೬೭ | ಎಂ. ವಸುಕುಮಾರ್ |
| ದೇಶಪ್ರೇಮಿ | ಸಾ | ವಿಟ್ಲ | ೧೯೬೮ | ಮುಳಿಯ ಶಂಕರ ಭಟ್ |
| ಮೊಗವೀರ | ಮಾ | ಸುರತ್ಕಲ್ | ೧೯೬೮ | ಸಂಜೀವ |
| ಅಮಾನತ್ | – | ಮಂಗಳೂರು | ೧೯೭೦ | ಎಂ. ಎ. ರಹೀಮ್ |
| ಜನದೀಪ | ಸಾ | ಮಂಗಳೂರು | ೧೯೭೦ | ಡಿ. ಎಸ್. ಕಾಮತ್ |
| ಜನದರ್ಶಿ | ಸಾ | ಮಂಗಳೂರು | ೧೯೭೧ | ವಿ. ವೈ. ರೋಹಿದಾಸ ಪೈ |
| ಕಲಾದರ್ಶನ | ಮಾ | ಮಂಗಳೂರು | ೧೯೭೧ | ವಿ. ಬಿ. ಹೊಸಮನೆ |
| ವ್ಯವಹಾರ | ಮಾ | ಮಂಗಳೂರು | ೧೯೭೧ | ಕೆ. ಪಿ. ಹೆಗ್ಡೆ |
| ತುಳುಕೂಟ | ಮಾ | ಮಂಗಳೂರು | ೧೯೭೧ | ಎಂ. ರತ್ನಕುಮಾರ್ |

...ಮುಂದುವರಿದಿದೆ

| ೧ | ೨ | ೩ | ೪ | ೫ |
|---|---|---|---|---|
| ದಿವ್ಯವಾಣಿ | ಸಾ | ಮಂಗಳೂರು | ೧೯೭೩ | ರಾಘವೇಂದ್ರ ಎಂ. ನಾಗೋರಿ |
| ಮುಂಗಾರು | ತ್ರೈ | ಮಂಗಳೂರು | ೧೯೭೩ | – |
| ಚಿಂತಾಮಣಿ | – | ಮಂಗಳೂರು | – | – |
| ಚಿತ್ರಾ | ಮಾ | ಮಂಗಳೂರು | – | ವೆಂಕಣ್ಣಾ |
| ದೇಶರಂಜನ | ಮಾ | ಮಂಗಳೂರು | – | ಬಿ. ರಾಘವೇಂದ್ರ |
| ಸದ್ಧರ್ಮಪ್ರಚಾರಕ | ಮಾ | ಮಂಗಳೂರು | – | ಲಕ್ಷ್ಮಣದೇವ ವಿದ್ಯಾರ್ಥಿ |
| ಧರ್ಮವೀರ | ಮಾ | ಮಂಗಳೂರು | – | ಕೃಷ್ಣಗೋಪಾಲ್ |
| ಜಯಮಾಲ | ಪಾ | ಮಂಗಳೂರು | – | ಎಂ. ಕೆ. ಬಾಬು |
| ಜ್ಯೋತಿ | ಪಾ | ಮಂಗಳೂರು | – | ಬಿ. ಎನ್. ಬಾಸ್ಕರರಾವ್ |
| ಕೃಪೆಯ ಸುವಾರ್ತೆ | – | ಮಂಗಳೂರು | – | – |
| ಮತ್ಸಲೋಕ | – | ಸುರತ್ಕಲ್ | – | – |
| ನಾಡನುಡಿ | – | ಮಂಗಳೂರು | – | – |
| ಪಂಚ | ಮಾ | ಮಂಗಳೂರು | – | – |
| ರೋಶಿನಿ | – | ಮಂಗಳೂರು | – | (ಪ್ರ) ಪ್ರಾಂಶುಪಾಲರು, ರೋಶಿನಿ ನಿಲಯ |
| ಸಂದರ್ಶನ | – | ಮಂಗಳೂರು | – | – |
| ಉದಯ ಭಾರತ | ತ್ರೈ | ಮಂಗಳೂರು | – | ಎಸ್. ಪುರುಷೋತ್ತಮ ಭಟ್ |
| ವಿನೋದ ಭಾರತ | ಮಾ | ಮಂಗಳೂರು | – | ಬಿ ನರಸಪ್ಪ |
| ವಿವೇಕ | ಮಾ | ಪೆರಡಾಲ | – | ಪಿ. ವೆಂಕಟರಾಜ ಪುಣಿಂಚತ್ತಾಯ |
| ಪ್ರಿಯದರ್ಶಿನಿ | – | ಮಂಗಳೂರು | – | – |

* ಈ ಚಿಹ್ನೆ ಹಾಕಿರುವ ಪತ್ರಿಕೆಗಳು ಉಡುಪಿ ಜಿಲ್ಲೆಯಿಂದ ಬರುತ್ತಿದ್ದಂತೆ ಗ್ಯಾಸೆಟಿಯರ್‌ನಲ್ಲಿ ನಮೂದಿಸಿದೆ.

ಈ ಕೆಳಗೆ ದಕ್ಷಿಣಕನ್ನಡ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಿಯಮಾನುಸಾರ ನೋಂದಣಿಯಾದ ಪತ್ರಿಕೆಗಳ ಪಟ್ಟಿಯನ್ನು ನೀಡಿದೆ. ಕೆಲವು ಪತ್ರಿಕೆಗಳೂ ಹಿಂದಿನಿಂದಲೂ ಬರುತ್ತಿದ್ದು ಪುನರ್ ನೋಂದಣಿ ಆದಂತೆ ತೋರುತ್ತದೆ. ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಪತ್ರಿಕೆಗಳು ತಮ್ಮದೇ ಮೂಲ ಹೆಸರಿಂದ ಆದರೆ ಬೇರೆ ಬೇರೆ ಭಾಗಗಳಲ್ಲಿ ಏಕಕಾಲದಲ್ಲಿ ಪ್ರಕಟವಾಗುತ್ತಿದ್ದು, ಹಲವಾರು ಪತ್ರಿಕೆಗಳು ಮಂಗಳೂರಿನಿಂದಲೂ ಹೊರಬರುತ್ತಿದೆ. ಅವು ಪ್ರತ್ಯೇಕವಾಗಿ ಜಿಲ್ಲಾಧಿಕಾರಿಯವರಲ್ಲಿ ನೋಂದಣಿ ಮಾಡಿಸಿದೆ. ಸಂಪಾದಕರು, ಮಾಲಿಕರು, ಕಾರ್ಯಾಲಯ ಇರುವ ವಿಳಾಸ, ಮುದ್ರಣವಾಗುವ ಸ್ಥಳ ಇತ್ಯಾದಿ ಅನುಸರಿಸಿ ಪತ್ರಿಕೆ ಪ್ರಕಟವಾಗುವ ಸ್ಥಳ ನಿರ್ಧರಿಸಿದೆ.

## ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿರುವ ಪತ್ರಿಕೆಗಳ ವಿವರ

| ಪತ್ರಿಕೆಯ ಹೆಸರು | ಭಾಷೆ | ಅವಧಿ | ಸಂಪಾದಕರು | ನೋಂದಣಿವರ್ಷ | ಸ್ಥಳ |
|---|---|---|---|---|---|
| ೧ | ೨ | ೩ | ೪ | ೫ | ೬ |
| ಪ್ರಜಾವಾಣಿ | ಕನ್ನಡ | ದಿನ | ಕೆ.ಎನ್. ಶಾಂತಕುಮಾರ್ | ೧೯೪೮ | ಮಂಗಳೂರು |
| ಕನ್ನಡ ಪ್ರಭ | ಕನ್ನಡ | ದಿನ | ಎಚ್.ಆರ್. ರಂಗನಾಥ್ | ೨೦೦೧ | ವೈಯ್ಯಾಡಿ (ಮಂಗಳೂರು) |
| ಹೊಸ ದಿಗಂತ | ಕನ್ನಡ | ದಿನ | ಜಿ.ಯು. ಲಕ್ಷ್ಮಣ | ೨೦೦೩ | ವೈಯ್ಯಾಡಿ (ಮಂಗಳೂರು) |
| ವಾರ್ತಾಭಾರತಿ | ಕನ್ನಡ | ದಿನ | ಎ.ಎಸ್. ಪುತ್ತಿಗೆ | ೨೦೦೪-೦೬ | ಮಂಗಳೂರು |
| ವಿಜಯ ಕರ್ನಾಟಕ | ಕನ್ನಡ | ದಿನ | ಯು.ಕೆ. ಕುಮಾರನಾಥ್ | ೨೦೦೩-೦೫ | ಮಂಗಳೂರು |
| ದಿ ಹಿಂದು | ಇಂಗ್ಲೀಷ್ | ದಿನ | ಎನ್. ರಾಮ್ | ೨೦೦೩-೦೫ | ಮಂಗಳೂರು |
| ಬಿಸಿನೆಸ್ ಲೈನ್ | ಇಂಗ್ಲೀಷ್ | ದಿನ | ಎನ್. ರಾಮ್ | ೨೦೦೩-೦೫ | ಮಂಗಳೂರು |
| ಇಂಡಿಯನ್ ಎಕ್ಸ್‌ಪ್ರೆಸ್ | ಇಂಗ್ಲೀಷ್ | ದಿನ | ಮನೋಜ್ ಕುಮಾರ್ | - | ಮಂಗಳೂರು |
| ವಿಜಯ ಟೈಮ್ಸ್ | ಇಂಗ್ಲೀಷ್ | ದಿನ | ಎಲ್. ರಮಾನಂದ್ | ೨೦೦೨ | ಮಂಗಳೂರು |
| ಡೆಕ್ಕನ್ ಹೆರಾಲ್ಡ್ | ಇಂಗ್ಲೀಷ್ | ದಿನ | ಕೆ. ರಾಮಚಂದ್ರ | - | ಮಂಗಳೂರು |
| ಮಾಧ್ಯಮನ್ | ಮಲೆಯಾಳಂ | ದಿನ | ಪಿ.ಎ. ಅಬ್ದುಲ್ | ೨೦೦೩ | ಮಂಗಳೂರು |
| ಹಲೋ ಮಂಗಳೂರು | ಕನ್ನಡ | ದಿನ | ರಹೀಮ್ ಉಜ್ಜಿಲ್ | ೧೯೯೫ | ಮಂಗಳೂರು |
| ಕೆನರಾ ಟೈಮ್ಸ್ | ಇಂಗ್ಲಿಷ್ | ದಿನ | ಬಿ.ಎಸ್. ಶಿವಪ್ರಸಾದ್ | ೧೯೮೯ | ಮಂಗಳೂರು |
| ಮಂಗಳೂರು ಮಿತ್ರ | ಕನ್ನಡ | ದಿನ | ಎಸ್.ಕೆ.ಸುನಿಲ್ | ೨೦೦೩-೦೫ | ಮಂಗಳೂರು |
| ಕರಾವಳಿ ಅಲೆ | ಕನ್ನಡ | ದಿನ | ಬಿ.ಎಸ್. ಶಿವಪ್ರಸಾದ್ | ೨೦೦೩-೦೫ | ಮಂಗಳೂರು |
| ವಿಜಯ ಕಿರಣ್ | ಕನ್ನಡ | ದಿನ | ಹಿತೇಂದ್ರ ಪ್ರಸಾದ್ | ೨೦೦೩ | ಮಂಗಳೂರು |
| ಕರಾವಳಿ ಮಿತ್ರ | ಕನ್ನಡ | ದಿನ | ಸುದೇಶ್ ಕುಮಾರ್ | ೨೦೦೧ | ಮಂಗಳೂರು |
| ಸಂಜೀವಿನಿ | ಕನ್ನಡ | ಸಂಜೆ | ಬಿ.ಟಿ.ಅಮುಥನ್ | ೨೦೦೩-೦೫ | ಮಂಗಳೂರು |
| ಸಂಜೆ ಅಲೆ | ಕನ್ನಡ | ದಿನ | ಬಿ.ಎಸ್. ಶಿವಪ್ರಸಾದ್ | ೨೦೦೪-೦೬ | ಮಂಗಳೂರು |
| ಸುದ್ದಿ ಮಾಹಿತಿ | ಕನ್ನಡ | ದಿನ | ಯು.ಪಿ. ಶಿವಾನಂದ | ೨೦೦೩ | ಪುತ್ತೂರು |
| ಸುದ್ದಿ ಬಿಡುಗಡೆ | ಕನ್ನಡ | ದಿನ | ಯು.ಪಿ. ಶಿವಾನಂದ | ೨೦೦೩-೦೫ | ಪುತ್ತೂರು |
| ಜಾನ್‌ವೆಲ್‌ಮೆರಿನ್ ಇನ್‌ಫರ್‌ಮೇಶನ್ | ಇಂಗ್ಲೀಷ್ | ದಿನ | ಕೆ. ಜಾನ್ | ೨೦೦೩-೦೫ | ಮಂಗಳೂರು |

...ಮುಂದುವರಿದಿದೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ಬಲಶಾಲಿ | ಕನ್ನಡ | ವಾರ | ಸಿ.ಎನ್. ಶ್ರೀನಿವಾಸರಾವ್ | ೧೯೯೩ | ಸುಳ್ಯ |
| ಜನಬಿಂಬ ಪತ್ರಿಕೆ | ಕನ್ನಡ | ವಾರ | ಎಸ್. ಗೋಪಾಲಕೃಷ್ಣ | ೧೯೯೮ | ಬೆಳ್ತಂಗಡಿ |
| ಸನ್ಮಾರ್ಗ | ಕನ್ನಡ | ವಾರ | ಎಂ. ಸದೀಲ್ಲಾ | ೧೯೯೪ | ಮಂಗಳೂರು |
| ಕೃತಿಕ ಬ್ರಹ್ಮ | ಕನ್ನಡ | ವಾರ | ಬಿ.ಎನ್. ಅಶೋಕ ಶೆಟ್ಟಿ | ೧೯೯೦ | ಬಂಟ್ವಾಳ |
| ಅಜೇಯ ವಾಹಿನಿ | ಕನ್ನಡ | ವಾರ | ಕೆ.ಪಿ. ಮಂಜುನಾಥ್ | ೧೯೯೫ | ಮಂಗಳೂರು |
| ಚೇತನ | ಇಂಗ್ಲೀಷ್ | ವಾರ | ವೆಂಕಟ ದೊಂಬಿಕೋಡಿ | ೧೯೯೫ | ಮಂಗಳೂರು |
| ಆಶಾವಾದಿ | ಕನ್ನಡ | ವಾರ | ಕೆ.ವಿ. ಭಟ್ | ೨೦೦೩–೦೫ | ಮಂಗಳೂರು |
| ರಾಕ್ಣೋ | ಕೊಂಕಣಿ | ವಾರ | ರೆವರೆಂಡ್ ಫಾದರ್ ಎರಿಕ್ ಕ್ರಾಸ್ಟಾ | ೧೯೫೮ | ಮಂಗಳೂರು |
| ಮಾನಿಷ್ ಮರ್ಜೆಂಟ್ ರಿಫೋರ್ಟ್ಸ್ | ಕ/ಇಂ | ವಾರ | ವೀಣಾ ಕೃಷ್ಣಮೂರ್ತಿ | ೧೯೯೯ | ಮಂಗಳೂರು |
| ಅಲ್–ಅನ್ಸಾರ್ | ಕನ್ನಡ | ವಾರ | ಇಬ್ರಾಹಿಂ ಮುಸ್ಲಿಯಾರ್ | ೨೦೦೧ | ಬಂಟ್ವಾಳ |
| ಅಭಿಯಾನ | ಕನ್ನಡ | ವಾರ | ಲತಾ ಕುಮಾರಿ | ೨೦೦೧ | ಮಂಗಳೂರು |
| ಅನಂತಪ್ರಕಾಶ ವಾರ್ತೆ | ಕನ್ನಡ | ವಾರ | ಕೆ. ಸಚ್ಚಿದಾನಂದ ಉಡುಪ | ೨೦೦೧ | ಮಂಗಳೂರು |
| ಕಡಲತೀರದ ಕ್ರೈಂ | ಕನ್ನಡ | ವಾರ | ಬಾವ ಪದರಂಗಿ | ೨೦೦೧ | ಮಂಗಳೂರು |
| ಪಯಸ್ವಿನಿ | ಕನ್ನಡ | ವಾರ | ಅಬ್ದುಲ್ ಸತ್ತಾರ್ | – | ಸುಳ್ಯ |
| ಕ್ವಿಜ್ ಟೈಮ್ | ಇಂಗ್ಲೀಷ್ | ವಾರ | ತಾರಾನಾಥ್ ಕಾಪಿಕಾಡ್ | ೨೦೦೨ | ಮಂಗಳೂರು |
| ಇದು ಸುದ್ದಿರಾಜಧಾನಿ | ಕನ್ನಡ | ವಾರ | ಮನೋಜ್ ತೋಕೂರ್ | ೨೦೦೨ | ಮೂಡಬಿದಿರೆ |
| ದಿ ಹಿಂದು | ಇಂಗ್ಲೀಷ್ | ವಾರ | ಎನ್. ರವಿ | ೨೦೦೩–೦೫ | ಮಂಗಳೂರು |
| ಪಟ್ಲರ್ ನ್ಯೂಸ್ | ಕನ್ನಡ | ವಾರ | ಸುಪ್ರೀತ್ ಪಾಟೀಲ್ | ೨೦೦೨ | ಪುತ್ತೂರು |
| ಸುದ್ದಿ ದಿಗಂತ | ಕನ್ನಡ | ವಾರ | ಪಿ. ಶಬೀರ ಅಹಮದ್ | ೨೦೦೨ | ಬೆಳ್ತಂಗಡಿ |
| ಸಂಡೆ ವಿಜಯ ಟೈಮ್ಸ್ | ಇಂಗ್ಲೀಷ್ | ವಾರ | ಸುರೇಶ್ ಮೆನಸ್ | ೨೦೦೨ | ಮಂಗಳೂರು |
| ಕಡಲ ನಾಡು | ಕನ್ನಡ | ವಾರ | ರಾಧಾಕೃಷ್ಣ ಅಂಚನ್ | ೨೦೦೨ | ಮಂಗಳೂರು |
| ನಮ್ಮ ಭೂಮಿ | ಕನ್ನಡ | ವಾರ | ಬಿ.ಎನ್. ಅಶೋಕ ಶೆಟ್ಟಿ | ೨೦೦೩ | ಮಂಗಳೂರು |
| ಸುದ್ದಿ ಸಂಪದ | ಕನ್ನಡ | ವಾರ | ಶಿವರಾಮ ಇರುವೈಲು | ೨೦೦೩ | ಮಂಗಳೂರು |
| ಸುದ್ದಿ ಬಿಡುಗಡೆ | ಕನ್ನಡ | ವಾರ | ಯು.ಪಿ. ಶಿವಾನಂದ | ೨೦೦೩ | ಪುತ್ತೂರು |
| ಲಾಠಿ ಚಾರ್ಜ್ | ಕನ್ನಡ | ವಾರ | ಪಿ. ಇಸ್ಮಾಯಿಲ್ | ೨೦೦೪ | ಮಂಗಳೂರು |

...ಮುಂದುವರಿದಿದೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ಸನಾತನ ಪ್ರಭಾತ | ಕನ್ನಡ | ವಾರ | ವಿವೇಕಾನಂದ ಪ್ರಭು | ೨೦೦೩–೦೫ | ಮಂಗಳೂರು |
| ಸುಳ್ಯ ಸುದ್ದಿ ಬಿಡುಗಡೆ | ಕನ್ನಡ | ವಾರ | ಯು.ಪಿ. ಶಿವಾನಂದ | ೨೦೦೪ | ಪುತ್ತೂರು |
| ಜಯದರ್ಶಿನಿ | ಕನ್ನಡ | ವಾರ | ಸಚಿನ್ ರಾಜ್ ಶೆಟ್ಟಿ | ೨೦೦೪ | ಸುಳ್ಯ |
| ಪಿಂಜಾರ | ಕನ್ನಡ | ವಾರ | ರಮೋಂದ್ ತಕ್ಕೊಡೆ | ೨೦೦೪–೦೬ | ಮಂಗಳೂರು |
| ಕ್ರೈಮ್ ಕೌಂಟರ್ | ಕನ್ನಡ | ವಾರ | ಸತೀಶ್ ಅಮೀನ್ | ೨೦೦೪ | ಮಂಗಳೂರು |
| ಸಂಡೆ ಟೈಮ್ಸ್ ಆಫ್ ಇಂಡಿಯಾ | ಇಂಗ್ಲೀಷ್ | ವಾರ | ಎಚ್.ಎಸ್. ಬಲರಾಂ | – | ಮಂಗಳೂರು |
| ವ್ಯವಸ್ಥೆಯ ಪ್ರತಿಬಿಂಬ | ಕನ್ನಡ | ವಾರ | ಎಸ್. ಶಂಕರ್ ಭಟ್ | ೨೦೦೨ | ಪುತ್ತೂರು |
| ಕನ್ನಡಿಗರ ಸಂಗಾತಿ | ಕನ್ನಡ | ಪಕ್ಷ | ನಳಿನ್ ಕುಮಾರ್ ರೈ | ೧೯೯೬ | ಮಂಗಳೂರು |
| ಹಲೊ ಮಂಗಳೂರು | ಕನ್ನಡ | ಪಕ್ಷ | ರಹೀಮ್ ಉಚ್ಚಿಲ್ | ೧೯೯೫ | ಮಂಗಳೂರು |
| ಜೈ ಕನ್ನಡಮ್ಮ ಕೂಸು | ಕನ್ನಡ | ಪಕ್ಷ | ದೇವಿ ಪ್ರಸಾದ್ | ೧೯೯೭ | ಮಂಗಳೂರು |
| ಬೆರ್ರಿ ವಾರ್ತೆ | ಕನ್ನಡ | ಪಕ್ಷ | ಬಶೀರ್ ಬೈಕಂಪಾಡಿ | – | ಮಂಗಳೂರು |
| ಪಟ್ಟಾಂಗ ಪತ್ರಿಕೆ | ಕನ್ನಡ | ಪಕ್ಷ | ಆನ್ಡ್ರೊ ಪಾಲ್ ಪುತ್ತೂರು | ೨೦೦೪ | ಮಂಗಳೂರು |
| ೧ ಸ್ಪೆಷಲ್ ನ್ಯೂಸ್ | ಕನ್ನಡ | ಪಕ್ಷ | ಎಂ.ಎ. ಬಾವ ಪದರಂಗಿ | ೧೯೯೭ | ಮಂಗಳೂರು |
| ಆಲ್ ಇಸಾನ್ | ಕನ್ನಡ | ಪಕ್ಷ | ಮಹಮದ್ ಉಲ್ಲಾಲ್ | ೧೯೯೮ | ಪುತ್ತೂರು |
| ಕಲಾ ಸತ್ಯ | ಕನ್ನಡ | ಪಕ್ಷ | ಸುಪ್ರಶಿವ. ಎಂ | ೧೯೯೯ | ಮೂಡಬಿದಿರೆ |
| ಆಲ್ ಕಮಾರ್ | ಕನ್ನಡ | ಪಕ್ಷ | ಎಂ. ಶರೀಫ್ | ೧೯೯೯ | ಮೂಡಬಿದಿರೆ |
| ಸೇಲ್ಸ್ ಗೈಡ್ | ಇ/ಕ/ತ ಮ/ಹಿಂ | ಪಕ್ಷ | ಇಬ್ರಾಹಿಂ ಮುಸ್ಲಿಯಾರ್ | ೨೦೦೧ | ಮಂಗಳೂರು |
| ಕನ್ನಿಕ್ | ಕೊಂಕಣಿ | ಪಕ್ಷ | ಮಾದ್ರಿಸ್ ಡೆಸಾ | ೧೯೯೭ | ಮಂಗಳೂರು |
| ಇಶ್ಯೂಸ್ ಎಂಡ್ ಕನ್‌ಸರೆನ್ಸ್ | ಇಂಗ್ಲೀಷ್ | ಪಕ್ಷ | ಜಯರಾಂ ಶಿರಿಯನ್ | ೧೯೯೯ | ಮಂಗಳೂರು |
| ಆಲ್ ಇಕ್ಸಾ | ಕನ್ನಡ | ಪಕ್ಷ | ಟಿ.ಎಂ. ಹನೀಫ್ | ೨೦೦೧ | ಬಂಟ್ವಾಳ |
| ಯುವ ದರ್ಪಣ್ | ಕನ್ನಡ | ಪಕ್ಷ | ಜಿ.ಆರ್. ಕುರುಪ್ | ೨೦೦೨ | ಮಂಗಳೂರು |
| ಎನ್ ಕೌಂಟರ್ | ಕನ್ನಡ | ಪಕ್ಷ | ಇಕ್ಬಾಲ್ ಕುತ್ತಾರ್ | ೨೦೦೨ | ಮಂಗಳೂರು |
| ಟಾಪ್ಸ್ ಲುಕ್ ಔಟ್ | ಕನ್ನಡ | ಪಕ್ಷ | ಕು. ಅವಿನಾ ಡಿಸೋಜ | ೨೦೦೩ | ಮೂಡಬಿದರೆ |
| ಬಿಸ್ ಮ್ಯಾಗ್ | ಇಂಗ್ಲೀಷ್ | ಪಕ್ಷ | ಸತೀಶ್ ಅಮೀನ್ | ೨೦೦೩ | ಮಂಗಳೂರು |

...ಮುಂದುವರಿದಿದೆ

## ದಕ್ಷಿಣ ಕನ್ನಡ ಜಿಲ್ಲೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ಸ್ಪೆಷಲ್ ನ್ಯೂಸ್ | ಕನ್ನಡ | ಪಕ್ಷ | ಎಂ.ಎ. ಬಾವ ಪದರಂಗಿ | ೨೦೦೩ | ಮಂಗಳೂರು |
| ಹೊಸ ಚೇತನ | ಕನ್ನಡ | ಪಕ್ಷ | ವಿಲ್‌ಫ್ರೆಡ್ ಗಾಡ್‌ಫ್ರೈ ಲೋಬೊ | ೨೦೦೩ | ಮಂಗಳೂರು |
| ಲೋಕಾಯುಕ್ತ ದರ್ಶನ | ಕನ್ನಡ | ಪಕ್ಷ | ಎಂ.ಬಿ. ಶಶಿಕುಮಾರ್ | ೨೦೦೩ | ಮಂಗಳೂರು |
| ಬಂಟರ ಸಂಗಾತಿ | ಕನ್ನಡ | ಪಕ್ಷ | ನಲೀನ್ ಕುಮಾರ್ ರೈ | ೨೦೦೪ | ಮಂಗಳೂರು |
| ಮಕ್ಕಳ ಚಿತ್ರ-ಚಿತ್ರದ ಅಂಗಳ | ಕನ್ನಡ | ಪಕ್ಷ | ಟಿ.ಎಸ್. ಸುದರ್ಶನ್ | ೨೦೦೩ | ಮಂಗಳೂರು |
| ಅಡಿಕೆ ಭಾರತ | ಕನ್ನಡ | ಮಾಸ | ಪಿ.ಕೆ.ಎಸ್. ಭಟ್ | ೧೯೯೮ | ಪುತ್ತೂರು |
| ಯಕ್ಷ ಪ್ರಭಾ | ಕನ್ನಡ | ಮಾಸ | ಕುಬನೂರು ಶ್ರೀಧರ ರಾವ್ | ೧೯೯೪ | ಬೆಳ್ತಂಗಡಿ |
| ಅಂಗೆ | ಕೊಂಕಣಿ | ಮಾಸ | ಕೆ. ಫಾ ಪ್ರಾನ್ಸಿಸ್ ಗ್ಸೇವಿಯರ್ | ೧೯೮೫ | ಮಂಗಳೂರು |
| ಸುಜಾತ ಸಂಚಿಕೆ | ಕನ್ನಡ | ಮಾಸ | ಜಿ.ಕೆ. ಹೆಬ್ಬಾರ್ | ೧೯೯೩ | ಮಂಗಳೂರು |
| ಅಸೀಮ | ಕ/ಇಂ | ಮಾಸ | ನಾರಾಯಣ ಶಿವಿರೆ | ೨೦೦೦ | ಮಂಗಳೂರು |
| ದೈವಜ್ಞ ಸೌರಭ | ಕನ್ನಡ | ಮಾಸ | ಪ್ರಕಾಶ್ ಶೇಟ್ | – | ಮಂಗಳೂರು |
| ಮಿಲಿಗ್ರಾಸ್ ಬುಲಟೀನ್ | ಇಂ/ಕೊಂ | ಮಾಸ | ಫಾ. ಅರ್ಥಿನ್ ಸಿರ್ರಾಓ | ೧೯೯೩ | ಮಂಗಳೂರು |
| ನಾರಿಂಗಣ | ಕನ್ನಡ | ಮಾಸ | ಕೆ. ನಾರಾಯಣ ಶೆಟ್ಟಿ | ೧೯೯೮ | ಬಂಟ್ವಾಳ |
| ಕಲಾಸಭಾ | ಕನ್ನಡ | ಮಾಸ | ಜಿ.ಕೆ. ಪುರುಷೋತ್ತಮ | ೧೯೯೮ | ಮಂಗಳೂರು |
| ಹೃದಯವಾಹಿನಿ | ಕನ್ನಡ | ಮಾಸ | ಕೆ.ಪಿ. ಮಂಜುನಾಥ್ | ೧೯೯೬ | ಮಂಗಳೂರು |
| ಹಸಿರು ಭೂಮಿ | ಕನ್ನಡ | ಮಾಸ | ಇಬ್ರಾಹಿಂ ಮುಸ್ಲಿಯಾರ್ ಮದಾನೆ | ೧೯೯೮ | ಉಳ್ಳಾಲ |
| ಹವ್ಯಕ ವಾರ್ತೆ | ಕನ್ನಡ | ಮಾಸ | ಕೆ. ಕೇಶವ ಭಟ್ | ೧೯೯೫ | ಮಂಗಳೂರು |
| ಮೊಯ್ಲಿಂಜೆ | ಕನ್ನಡ | ಮಾಸ | ಎಸ್.ಪಿ. ಹಂಜಾ ಸಕ್ಫಿ | ೨೦೦೩-೦೫ | ಮಂಗಳೂರು |
| ವಿಶ್ವ ಸಾರಸ್ವತ | ಕೊಂ/ಇ | ಮಾಸ | ನಾಗರಾಜ ಜವಳಿ | ೧೯೯೯ | ಮಂಗಳೂರು |
| ಬೆರ್ರಿ | ಕನ್ನಡ | ಮಾಸ | ಅಕ್ಬರ್ ಉಲ್ಲಾಳ್ | ೧೯೯೫ | ಉಲ್ಲಾಳ |
| ಮಂಜುವಾಣಿ | ಕನ್ನಡ | ಮಾಸ | ಎಸ್. ಪ್ರಭಾಕರ್ | ೧೯೮೯ | ಉಜಿರೆ |
| ಜೆಸುಮಾಕ ಅಪೈತ | ಕೊಂ | ಮಾಸ | ಫಿಲಿಕ್ಸ್ ತೊರಸ್ | ೧೯೯೯ | ಮಂಗಳೂರು |
| ತುಳುಬೊಲ್ಲಿ | ತು | ಮಾಸ | ಪಿ.ಎಸ್. ರಾವ್ | ೨೦೦೩-೦೫ | ಮಂಗಳೂರು |
| ಅಮ್ಚ್ ಸಂದೇಶ್ | ಕೊಂ | ಮಾಸ | ಲಿಯೊ ಡಿಸೋಜ | ೨೦೦೩-೦೫ | ಮಂಗಳೂರು |
| ಭುವನ ವಾಹಿನಿ | ಕನ್ನಡ | ಮಾಸ | ಡಾ: ವಿಜಯ ಕುಮಾರ್ ಕತೋಡಿ | ೧೯೯೯ | ವೇಣೂರು |
| ಕಜುಲೊ | ಕೊಂಕಣಿ | ಮಾಸ | ರೆ.ಫಾ. ಎರಿಕ್ ಕ್ರಸ್ಟಾ | ೧೯೯೯ | ಮಂಗಳೂರು |

...ಮುಂದುವರಿದಿದೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ದತ್ತ ಪ್ರಕಾಶ್ | ಕನ್ನಡ | ಮಾಸ | ಎಂ. ಎಸ್. ಭಟ್ | ೨೦೦೦ | ಒಡಿಯೂರು |
| ಪುತ್ತೂರು ಸ್ಥಾನಿಕ ಸಮಾಚಾರ್ | ಕನ್ನಡ | ಮಾಸ | ಎನ್. ಶಿವಾನಂದರಾವ್ | ೧೯೯೩ | ಪುತ್ತೂರು |
| ಸನಾತನ ಸಾರಥಿ | ಕನ್ನಡ | ಮಾಸ | ಯು. ಗಂಗಾಧರಭಟ್ | – | ಅಲ್ವೆಕ್ |
| ಸಂಪರ್ಕ | ಕನ್ನಡ | ಮಾಸ | ಶ್ರೀನಾಥ ಹೆಗ್ಗಡೆ | ೧೯೯೮ | ಮಂಗಳೂರು |
| ಮಂಗಳೂರು ಟುಡೆ | ಇಂ | ಮಾಸ | ವಿ.ಯು. ಜಿಯೊರ್ಗಿ | ೧೯೯೪ | ಮಂಗಳೂರು |
| ಆಫೀಸರ್ಸ್ ವಾಯ್ಸ್ | ಇಂ | ಮಾಸ | ಟಿ. ರಾಮಚಂದ್ರ ಭಟ್ | ೨೦೦೪ | ಮಂಗಳೂರು |
| ಸಂಪ್ರಭಾ | ಕನ್ನಡ | ಮಾಸ | ಸುಮುಖಾನಂದ ಜಲವಳ್ಳಿ | ೧೯೯೬ | ಕಿನ್ನಿಗೋಳಿ |
| ಮೀನವಳಿ | ಕನ್ನಡ | ಮಾಸ | ಯಶವಂತ ಬೊಚೊಳಾರ | ೧೯೯೭ | ಮಂಗಳೂರು |
| ವೈಶ್ಯ ಗುರುಮುಖ | ಕನ್ನಡ | ಮಾಸ | ಬಿ. ವಿಠೋಬ ನಗವೇಕರ್ | ೧೯೯೪ | ಮಂಗಳೂರು |
| ನೈರಿಯಾ ನ್ಯೂಸ್ | ಕನ್ನಡ | ಮಾಸ | ರಾಧಾಕೃಷ್ಣ ಹೆಬ್ಬಾರ್ | ೧೯೯೫ | ಮಂಗಳೂರು |
| ಇಸ್ಲಾಂ ಅಂಡ್ ಸೈನ್ಸ್ | ಇಂ | ಮಾಸ | ಎಸ್. ಅಬ್ದುಲ್ ರಹಿಮಾನ್ | ೧೯೯೯ | ಮಂಗಳೂರು |
| ಜರ್ನಲ್ ಆಫ್ ಕೆನರಾ ಚೇಂಬರ್ ಆಫ್ ಕಾಮರ್ಸ್‌ಅಂಡ್ ಇಂಡಸ್ಟ್ರಿ | ಇಂ | ಮಾಸ | ಗಿರಿಧರ ಪ್ರಭು | – | ಮಂಗಳೂರು |
| ದಕ್ಷಿಣ ಕನ್ನಡ ಸಹಕಾರಿ | ಕನ್ನಡ | ಮಾಸ | ಪೆರಾಜೆ ಶ್ರೀನಿವಾಸರಾವ್ | ೨೦೦೪–೦೫ | ಪೆರಾಜೆ |
| ಮಂಗಳೂರು ವ್ಯೂ | ಮಲೆಯಾಳಂ | ಮಾಸ | ನಾನು ಮಯ್ಯಾನ್ನೂರ | ೧೯೮೬ | ಮಂಗಳೂರು |
| ಯುಗಪುರುಷ | ಕನ್ನಡ | ಮಾಸ | ಕೆ. ಭುವನಾಭಿರಾಮ | – | ಕಿನ್ನಿಗೋಳಿ |
| ಅನಂತ ಚೈತನ್ಯ | ಕನ್ನಡ | ಮಾಸ | ಕಿರಣ್ ಮಂಜನಬೈಲು | ೨೦೦೩–೦೫ | ಮೂಡಬಿದಿರೆ |
| ಜೆಸುರ್ಯೆ | ಕೊಂಕಣಿ | ಮಾಸ | ಫಾ. ಲೂಯಿಸ್ ಫರ್ನಾಂಡಿಸ್ | ೧೯೯೦ | ಮಂಗಳೂರು |
| ಅಮ್ಚಿಮೈ | ಕೊಂಕಣಿ | ಮಾಸ | ರೆ.ಫಾ. ಫ್ರಾಂಕಿಸ್ ಡಿಸೋಜ | ೧೯೮೨ | ಮಂಗಳೂರು |
| ಕುತಮಾಕೊ ಸೇವಕ್ | ಕೊಂಕಣಿ | ಮಾಸ | ಜಾನ್ ಹೆರ್ರಿ ಡಿಸೋಜ | ೨೦೦೧ | ಮಂಗಳೂರು |
| ಅಮರ್ ಜ್ಯೋತಿ | ಕನ್ನಡ | ಮಾಸ | ರೆ.ಫಾ. ಹೆನ್ಸಿ ಮದಥಾ | ೨೦೦೩ | ಮಂಗಳೂರು |
| ನಿರಂತರ ಪ್ರಗತಿ | ಕನ್ನಡ | ಮಾಸ | ಡಾ.ಎಲ್.ಹೆಚ್. ಮಂಜುನಾಥ್ | ೨೦೦೪ | ಬೆಳ್ತಂಗಡಿ |
| ಪಿನ್ನಾಲ್ | ಕನ್ನಡ | ಮಾಸ | ಯು.ಹೆಚ್. ಉದುರ್ | ೨೦೦೩ | ಮಂಗಳೂರು |
| ಗುರುವಾಣಿ | ಕನ್ನಡ | ಮಾಸ | ನವೀನ ಚಂದ್ರ ಡಿ ಸುವರ್ಣ | ೧೯೮೬ | ಕದ್ರೋಳಿ |
| ನಾಯಕ ಸಂವೇದನ | ಕನ್ನಡ | ಮಾಸ | ಕೆ.ಪಿ. ಮಂಜುನಾಥ್ | – | ಮಂಗಳೂರು |
| ಗೋಲ್ಡನ್ ಗೇಟ್ ಸಕ್ಸಸ್ ಲೈನ್ | ಇಂಗ್ಲೀಷ್ | ಮಾಸ | ವಿ. ವೆಂಕಟರಾಮನ್ | ೧೯೯೯ | ಮಂಗಳೂರು |

...ಮುಂದುವರಿದಿದೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ಅಜೇಯ ಸೋಲಿಲ್ಲದ ಸರದಾರ | ಕನ್ನಡ | ಮಾಸ | ಪರಮಾನಂದ ಸಲಿಯಾನ್ | ೨೦೦೧ | ಮಂಗಳೂರು |
| ನಮ್ಮ ಬಂಟ್ವಾಳ | ಕನ್ನಡ | ಮಾಸ | ಮಹಾಬಲೇಶ್ವರ ಹೆಬ್ಬಾರ್ | ೨೦೦೨ | ಮೋಡನ್‌ಕಾಪು |
| ಬಿಲ್ವ ವಿಶ್ವವಾಣಿ | ಕನ್ನಡ | ಮಾಸ | ಪರಮಾನಂದ ಸಲಿಯಾನ್ | ೨೦೦೨ | ಮಂಗಳೂರು |
| ಉದಯ ದೀಪ | ಕ/ಇಂ/ಮ | ಮಾಸ | ಫಾ. ಕುರಿಯ ಕೊಸೆ ವೆಟ್ಟು ವಿಟ್ಟು ವಾಜ್ಹಿ | ೨೦೦೨ | ಬೆಳ್ತಂಗಡಿ |
| ಒಕ್ಕೊರಳು | ಕನ್ನಡ | ಮಾಸ | ಚಿದಾನಂದ ಬೈಲಾಡಿ | ೨೦೦೨ | ಪುತ್ತೂರು |
| ಪ್ರಜಾರಂಗ | ಕನ್ನಡ | ಮಾಸ | ವಿಠ್ಠಲಗಟ್ಟಿ ಉಳಿಯಾ | ೨೦೦೨ | ವಾಮಂಜೂರ್ |
| ಸಿಂಚನ | ಕನ್ನಡ | ಮಾಸ | ರಮೇಶ ಜಿ ಅಮಿನ್ | – | ಕುಳಾಯಿ |
| ಜ್ಞಾನಗಂಗಾ | ಕನ್ನಡ | ಮಾಸ | ಪಿ.ವಿ. ಕೃಷ್ಣನ್ | ೨೦೦೨ | ಮಂಗಳೂರು |
| ಜೆಸುಚಿ ಸುವಾರ್ತಾ | ಕೊಂಕಣಿ | ಮಾಸ | ರೊನಾಲ್ಡ್ ಸೆರ್ರೊ | ೨೦೦೨ | ಮಂಗಳೂರು |
| ಸಂಚಯ | ಕನ್ನಡ | ಮಾಸ | ಅನ್ಡ್ರೊ ಪೊರ್ ಪುತ್ತೂರು | ೨೦೦೨ | ಮಂಗಳೂರು |
| ಅನುಪಮ | ಕನ್ನಡ | ಮಾಸ | ಶಹನಾಜ್. ಎಂ | ೧೯೯೯ | ಮಂಗಳೂರು |
| ಬಿಯರಿ ವಾರ್ತೆ | ಕನ್ನಡ | ಮಾಸ | ಎಸ್. ಎ. ಅಬ್ಬಾಸ್ | ೧೯೯೫ | ಉಪ್ಪಿನಂಗಡಿ |
| ಲಯನ್ಸ್ ಮಂಗಳ | ಇಂ | ಮಾಸ | ಅರವಿಂದ ಶೆಣೈ | ೨೦೦೪ | ಮಂಗಳೂರು |
| ರೂವಾರಿ | ಕನ್ನಡ | ಮಾಸ | ಭರತರಾಜ್ | ೨೦೦೩ | ಮಂಗಳೂರು |
| ಪಾಪರ್ಟಿ ಟೈಮ್ಸ್ | ಇಂ/ಕ | ಮಾಸ | ರೋಹನ್ ಮಾನ್‌ಟಿರೊ | ೨೦೦೪ | ಮಂಗಳೂರು |
| ಮರಾಠಿ ಸಂಪರ್ಕ ವಾಹಿನಿ | ಕನ್ನಡ | ಮಾಸ | ಕೆ. ಸುಂದರ್ ನಾಯಿಕ್ | ೨೦೦೦ | ಮಂಗಳೂರು |
| ಜನಶಕ್ತಿ | ಕನ್ನಡ | ಮಾಸ | ಎಂ.ಎಸ್. ರಘುನಾಥ್‌ರಾವ್ | ೨೦೦೪ | ಪುತ್ತೂರು |
| ಆತ್ಮ ಶಕ್ತಿ | ಕನ್ನಡ | ಮಾಸ | ಎಸ್. ರಮೇಶ್ | ೨೦೦೪ | ಮಂಗಳೂರು |
| ಕೊಲ್ಯ ದರ್ಶನ | ಕನ್ನಡ | ಮಾಸಿಕ | ಸಿ.ಹೆಚ್. ಲಕ್ಷ್ಮೀ ನಾರಾಯಣ | ೨೦೦೦ | ಮಂಗಳೂರು |
| ಶಿಕ್ಷಣ ಮಾತುಕತೆ | ಕನ್ನಡ | ಮಾಸಿಕ | ಗೋಪಾಲ ಪೆರಾಜೆ | ೨೦೦೦ | ಸುಳ್ಯ |
| ದತ್ತ ಪ್ರಕಾಶ | ಕನ್ನಡ | ಮಾಸಿಕ | ಎಂ. ಶಂಕರ್ ಭಟ್ | ೨೦೦೦ | ಒಡಿಯೂರ್ |
| ಅಮರ ಜ್ಯೋತಿ | ಕನ್ನಡ | ದ್ವೈಮಾಸಿಕ | ಚಾರ್ಲ್ಸ್.ಎಲ್.ರೋಡ್ರಿಗ್ಸ್ | ೨೦೦೩ | ಕಲ್ಲಡ್ಕ |
| ಕಷ್ಮಾ | ಕನ್ನಡ | ತ್ರೈಮಾಸಿಕ | ಬಿ. ಶ್ರೀನಿವಾಸ್ | ೨೦೦೩ | ಮಂಗಳೂರು |
| ರಿಟೈರ್‌ಮೆಂಟ್ ಅಂಡ್ ಹೆಲ್ತ್ | ಇಂಗ್ಲೀಷ್ | ಮಾಸಿಕ | ಕೆ. ಅಚ್ಯುತ ಶೆಣೈ | ೨೦೦೩ | ಮಂಗಳೂರು |
| ಕೊಂಕಣಿ ಸಿರಿ ಸಂಪದ | ಕೊಂ | ತ್ರೈಮಾಸಿಕ | ಅಲೆಗ್ಸಾಂಡರ್ ಎಫ್ ಡಿಸೋಜಾ | ೨೦೦೪ | ಮಂಗಳೂರು |

...ಮುಂದುವರಿದಿದೆ

| ೧ | ೨ | ೩ | ೪ | ೫ | ೬ |
|---|---|---|---|---|---|
| ಮಂಗಳೂರು ಯೂನಿವರ್ಸಿಟಿ ನ್ಯೂಸ್ ಲೆಟರ್ | ಇಂ | ತ್ರೈಮಾಸಿಕ | ಕೆ. ಜನಾರ್ಧನ | – | ಮಂಗಳ ಗಂಗೋತ್ರಿ |
| ಮದಿಪು | ತುಳು | ತ್ರೈಮಾಸಿಕ | ವಾಮನ ನಂದಾವರ | ೨೦೦೦ | ಮಂಗಳೂರು |
| ತುಳು ದರ್ಶನ | ಕನ್ನಡ | ತ್ರೈಮಾಸಿಕ | ಬಾಲಕೃಷ್ಣ ಶೆಟ್ಟಿ | ೨೦೦೦ | ಮಂಗಳೂರು |
| ಶಿಕ್ಷಣ ದರ್ಶನ | ಕ/ಇಂ | ತ್ರೈಮಾಸಿಕ | ಎಸ್. ಸುಕುಮಾರ | ೨೦೦೨ | ದರ್ಬೆ |
| ಚಾಸ್ ಕಿರಣ್ | ಇಂ | ಅರೆ/ವಾ | ಫಾ. ವಿಕ್ಟರ್ ಮಚಾಡೊ | ೨೦೦೩ | ಮಂಗಳೂರು |
| ಬಂಟ ಸಮಾಜ | ಕನ್ನಡ | ವಾರ್ಷಿಕ | ಬಿ.ಎನ್. ಅಶೋಕ ಶೆಟ್ಟಿ | ೨೦೦೩ | ಬಂಟ್ವಾಳ |

## ಚಿತ್ರಕಲೆ

ಇತಿಹಾಸ ಪೂರ್ವದ ಚಿತ್ರಕಲೆ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ಕಡೆ ಉತ್ಖನನಗಳು ನಡೆದು ಶಿಲಾಯುಧಗಳನ್ನು ಪತ್ತೆ ಹಚ್ಚಲಾಗಿದೆ. ಕುಂದಾಪುರ ಬಳಿಯ ಗಾವಳಿ ಹಾಗೂ ಬಸರೂರಿನಲ್ಲಿ ಬಂಡೆಯ ಮೇಲಿನ ಉಬ್ಬು ಶಿಲ್ಪಗಳು ದೊರೆತಿದ್ದು, ಕಬ್ಬಿಣ ಯುಗದ ಸಂಸ್ಕೃತಿಯ ಕಾಲದ್ದೆಂದು ತಿಳಿಯಲಾಗಿದೆ ಪುತ್ತೂರು ತಾಲೂಕಿನ ಸುಳ್ಯಪದವುವಿನಲ್ಲಿ ಸಮಾಧಿ ಕೋಣೆಗಳಲ್ಲಿ ಕುಂಭ, ಬೋಗುಣಿ, ಹಣತೆ, ಮೂರು ಕಾಲಿನ ಹೂಜಿಗಳು ದೊರೆತಿದ್ದು ಅವು ಕ್ರಿ. ಪೂ. ೧೫೦೦–೯೦೦ರ ಕಾಲದವೆಂದು ತಿಳಿಯಲಾಗಿದೆ. ಮಂಗಳೂರು ಬಳಿಯ ಬಡಗಕಜೆಕಾರು ಹಾಗೂ ಪುತ್ತೂರಿನ ಬಿರ್‌ಮಲೆಗಳಲ್ಲಿ ಕಲ್ಗೋರಿಗಳು ದೊರೆತಿವೆ. ಇತ್ತೀಚಿನ ಶೋಧನೆಯಲ್ಲಿ ಇನ್ನಷ್ಟು ಸ್ಥಳ ಪರಿಶೀಲನೆಯಾಗಿದ್ದು, ಅವು ಉಡುಪಿ ಜಿಲ್ಲೆಯಲ್ಲಿರುವಂತಹವು ಭಿತ್ತಿ ಚಿತ್ರ ಪರಂಪರೆ ಜಿಲ್ಲೆಯಲ್ಲಿ ಇತಿಹಾಸ ಆರಂಭ ಕಾಲದಲ್ಲಿ ಕಂಡುಬರುವುದಿಲ್ಲ. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಬಜಗೋಳಿ ಕಾರ್ಕಳದಲ್ಲಿ ರಚಿತವಾದ ಭಿತ್ತಿ ಚಿತ್ರಗಳಿವೆಯಾದರೂ ಅವೂ ಇಂದು ಉಡುಪಿ ಜಿಲ್ಲೆಯವಾಗಿದೆ. ಮೂಡಬಿದಿರೆಯಲ್ಲಿ ಭಿತ್ತಿ ಚಿತ್ರಗಳಿದ್ದು ಮುಂದೆ ವಿವರಿಸಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದೇವಾಲಯ ಹಾಗೂ ಮನೆಗಳಲ್ಲಿ ಕಾವಿಕಲೆ ಎಂಬ ವಿಶಿಷ್ಟ ಬಗೆಯ ಭಿತ್ತಿಚಿತ್ರಗಳ ರಚನೆ ಸಾಕಷ್ಟು ಹಿಂದಿನಿಂದಲೇ ಕಂಡು ಬರುತ್ತದೆಯಾದರೂ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಶಹರದ ಗೋಕರ್ಣ ಮಠದಲ್ಲಿ ದಶಾವತಾರದ ಚಿತ್ರಗಳಿದ್ದು, ಈಚೆಗೆ ಮತ್ತೆ ಹೊಸದಾಗಿ ಬಣ್ಣ ತೊಡಿಸಲಾಗಿದೆ. ಮಂಗಳೂರಿನ ಕಾರ್ತಿಕ (ಮುಖ್ಯಪ್ರಾಣ) ದೇವಾಲಯದಲ್ಲಿ ಭಿತ್ತಿಚಿತ್ರಗಳು ಇದ್ದವೆಂದು ಹಳೆಯ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖವಿದೆ.

ಜಿಲ್ಲೆಯ ಜನಪದ ಆಚರಣೆಗಳಲ್ಲಿ, ಭೂತಾರಾಧನೆಯಲ್ಲಿ ಹಾಗೂ ನಾಟಕಗಳಲ್ಲಿ ಚಿತ್ರ ಮತ್ತು ಬಣ್ಣಗಾರಿಕೆಗೆ ವಿಶೇಷ ಸ್ಥಾನ ನೀಡಲಾಗಿದೆ. ನಾಗಮಂಡಲದಲ್ಲಿ ೪, ೮ ಇಲ್ಲವೆ ೧೬ ಮೂಲೆಗಳು (ಗಂಟುಗಳು) ಇದ್ದು, ಅದಕ್ಕೆ ತಕ್ಕಂತೆ ಹೊರರೇಖೆಯನ್ನು ಹಳದಿ ಬಣ್ಣದಿಂದ ರೇಖಿಸಿ ಮಧ್ಯೆ ಒಂದರ ಮೇಲೆ ಒಂದು ಬರುವಂತೆ ವಿರುದ್ಧ ಮುಖವಾಗಿ ಡಬ್ಬು ಹಾಕಿದ, ತ್ರಿಕೋಣಾಕಾರವನ್ನು ಬರೆಯುತ್ತಾರೆ. ಈ ಆಕಾರ ಗಣಪತಿಯ ಸಂಕೇತ. ನಂತರ ಏಳು ಹೆಡೆಯ ಸರ್ಪ ಸುರಳಿ ಸುರಳಿಯಾಗಿ ಪವಿತ್ರ ಗಂಟುಗಳ ಮೂಲಕ ತಿರುವು ಪಡೆಯುತ್ತಾ ಒಂದು ಸುತ್ತು ಬರುತ್ತದೆ. ಮೊದಲಿಗೆ ಹೊರ ಆಕಾರದ ಆಧಾರ ರೇಖೆ ಅಥವಾ ಜೀವ ರೇಖೆಯನ್ನು ಎಳೆಯುತ್ತಾರೆ. ಆಧಾರದ ರೇಖೆಯನ್ನು ಒಬ್ಬರೇ ಮೊದಲಿನಿಂದ ಕೊನೆಯವರೆವಿಗೂ ಬರೆಯಬೇಕಾಗುತ್ತದೆ. ಜೀವರೇಖೆಯ ಇಕ್ಕೆಲದಲ್ಲಿ ಹಳದಿ ಬಣ್ಣದಲ್ಲಿ ಹಾವಿನ ನಕ್ಷೆ ಬಿಡಿಸುತ್ತಾರೆ. ಹಾವಿನ ಕಣ್ಣಿಗೆ ಕೆಂಪು ಬಣ್ಣವನ್ನು ಬಳಸುತ್ತಾರೆ. ಪವಿತ್ರ ಗಂಟಿನೊಳಗಿನ 'ಹೊಗ್ಗು ಹೊರಡುವಿಕೆ'ಯನ್ನು ಕಪ್ಪು ಬಣ್ಣದಲ್ಲಿ ರೇಖಿಸುತ್ತಾರೆ. ಬಿಳಿ ಹುಡಿಯನ್ನು ಬಳಸಿ ಚುಕ್ಕೆಯಾಕಾರದಲ್ಲಿ ನಾಗನಿಗೆ ಕಾಲು ಬಿಡಿಸುತ್ತಾರೆ. ಆಕೃತಿಯ ಮಧ್ಯೆ ಹಾವಿನ ಮೊಟ್ಟೆ (ಮರಿ ಮೊಟ್ಟೆ) ಗಳನ್ನು ಬಿಳಿ ಹುಡಿಯಿಂದ ರೂಪಿಸುತ್ತಾರೆ. ಮೊದಲು ಹಸಿರು ಬಣ್ಣದ ಹುಡಿ ನಂತರ ಬಿಳಿ, ಅರಿಸಿನ, ಕೆಂಪು, ಕಪ್ಪು ಹೀಗೆ ಪಂಚವರ್ಣದಲ್ಲಿ ಧಾರಾಳವಾಗಿ ಬಣ್ಣದ ಹುಡಿ ಬಳಸಿ ಅರೆ ಉಬ್ಬು ಶಿಲ್ಪದಂತೆ (ಎಂಬೋಸ್ಡ್) ನಾಗನ ಚಿತ್ರ ಬಿಡಿಸುತ್ತಾರೆ. ಹೆಡೆಯ ಕೆಳಭಾಗದಲ್ಲಿ ವಿಷ್ಣು ಪಾದವನ್ನು ಹೆಡೆಯ ಹೊರಗೆ ಪ್ರಭಾವಳಿಯನ್ನು ಬಿಡಿಸಿ ಅದರಲ್ಲಿ ಬ್ರಹ್ಮನ ಮುಖ, ದ್ರಾಕ್ಷಿ ಬಳ್ಳಿ, ಎಲೆಗಳನ್ನು ಕಪ್ಪು ವರ್ಣದಲ್ಲಿ ಬಿಡಿಸುತ್ತಾರೆ. ಜಂಗಮ ಸೊಪ್ಪಿನ ಹಸಿರು ಹುಡಿಯಿಂದ ದಂಡೆ ಕಟ್ಟಿ ಅದರ ಮೇಲೆ ಸ್ವಸ್ತಿಕ ಚಿಹ್ನೆ ರಚಿಸುತ್ತಾರೆ. ಹತ್ತರಿಂದ

ಹದಿನೈದು ಅಡಿಗಳಷ್ಟು ವ್ಯಾಸವುಳ್ಳ ರಚನೆಗೆ ಸುಮಾರು ಆರು ಮಂದಿ ಕಲಾವಿದರು (ವೈದ್ಯರು) ಆರು ಗಂಟೆಗಳಷ್ಟು ಕಾಲ ವ್ಯಯಿಸಿ, ಬಾಳೆಯ ದಿಂಡಿನ ಒಂದು ಅಳತೆಯ ಪಟ್ಟಿಯ ವಿನಾ ಯಾವುದೇ ಜ್ಯಾಮಿತಿಯ ಉಪಕರಣಗಳೂ ಇಲ್ಲದೆ ವ್ಯವಸ್ಥಿತವಾಗಿ ಪರಿಪೂರ್ಣವಾಗಿ ರಚಿಸುತ್ತಾರೆ. ಆಕಾರ, ಬಣ್ಣಗಾರಿಕೆ, ಅಳತೆಗಳಲ್ಲಿ ನಿಶ್ಚಿತ ಸಂಪ್ರದಾಯ ಅನುಸರಿಸಿದರೂ ಕಲಾತ್ಮಕತೆ ಕಂಡುಬರುತ್ತದೆ.

ಡಕ್ಕೆ ಬಲಿ ಇನ್ನೊಂದು ಪ್ರಮುಖ ಆಚರಣೆ. ಇದರಲ್ಲಿ ಹಲವಾರು ಆಕಾರಗಳು ರಚಿತವಾಗುತ್ತವೆ. ಸುಮಾರು ಆಯತಾಕಾರದ ಪಟ್ಟಿಕೆಯಲ್ಲಿ ಬ್ರಹ್ಮ, ಯಕ್ಷಿ, ತ್ರಿಶೂಲ, ನಾಗ, ಗಣಪತಿ, ನಾಗರ ಚಿತ್ರವನ್ನು ಪಂಚವರ್ಣದಲ್ಲಿ ರಚಿಸುತ್ತಾರೆ. ಇವುಗಳಿಗೆ ಸಾಂಕೇತಿಕ ಹಾಗೂ ಧಾರ್ಮಿಕ ಅರ್ಥ ವಿವರಣೆಯಿದೆ. ನಾಗಮಂಡಲದಂತೆ ವಿರುದ್ಧ ಮುಖದ ತ್ರಿಕೋನದ ರಚನೆ ಇಲ್ಲಿಯೂ ಗಣಪತಿ ಎಂಬ ಅರ್ಥದಲ್ಲಿ ಬರೆಯುತ್ತಾರೆ. ಬ್ರಹ್ಮನ ಮುಖವಿದ್ದು, ಇದು ಸಂತಾನದೇವತೆ ಅಥವಾ ವೈದಿಕ ಚತುರ್ಮುಖ ಬ್ರಹ್ಮನೆಂದು ತಿಳಿಯಲಾಗಿದೆ. ನಾಗನ ಹೆಡೆ ಹೋಲುವ ಚಿತ್ರ 'ನಾಗಯಕ್ಷಿ' ಎಂದೂ , ನಾಗರ ಹಾವಿನ ಚಿತ್ರ 'ನಾಗ ಯಕ್ಷ' ಎಂದೂ, ತ್ರಿಶೂಲದ ಚಿಹ್ನೆ ಶೈವ ಸೂಚಕವಿರಬೇಕೆಂದು ಎ. ವಿ. ನಾವಡರವರು ತಿಳಿಸುತ್ತಾರೆ ಪಂಚವರ್ಣಗಳನ್ನು ಸಾಮಾನ್ಯವಾಗಿ ಹಳದಿಗೆ–ಅರಿಶಿನ ಬೇರಿನ ಪುಡಿ, ಕೆಂಪಿಗೆ–ಅರಿಶಿನ ಹಾಗೂ ಸುಣ್ಣದ ಪುಡಿಯ ಮಿಶ್ರಣ, ಕಪ್ಪಿಗೆ ಬತ್ತದ ಹೊಟ್ಟು ಕರಿಕುಗೊಳಿಸಿದ ಹುಡಿ, ಹಸಿರಿಗೆ– ಜಂಗಮ ಎಲೆಯ ಹುಡಿ, ಬಿಳಿಗೆ– ಬೆಳ್ತಿಗೆ ಅಕ್ಕಿಯ ಹುಡಿಯನ್ನು ಬಳಸುತ್ತಾರಾದರೂ ಇನ್ನು ಹಲವು ಬಗೆಯಲ್ಲಿ ತಯಾರಿಸುವುದುಂಟು.

ಜಿಲ್ಲೆಯಲ್ಲಿ ಭೂತಾರಾಧನೆ ಇನ್ನೊಂದು ಪ್ರಮುಖ ಆಚರಣೆ. ಭೂತಗಳ ಆರಾಧನೆ ಮಾಡುವ ವ್ಯಕ್ತಿಗೆ ಹಲವಾರು ಅಲಂಕರಣದೊಂದಿಗೆ ಮುಖ ಹಾಗೂ ದೇಹದ ಕೆಲವು ಭಾಗಗಳಿಗೆ ವರ್ಣಗಳಿಂದ ಅಲಂಕರಣಗೊಳಿಸುವುದಿದೆ. ಭೂತಗಳಲ್ಲೂ ಪ್ರಾಣಿ ಸೂಚಕ, ರಾಜಸ ಸ್ವಭಾವದ ಅರಸರುಗಳು, ಹೆಣ್ಣುಭೂತ, ದಲಿತ ವರ್ಗದ ಭೂತ, ಐತಿಹಾಸಿಕ ಅಥವಾ ಸತ್ತು ಅತಿಮನುಷ ಆದ ಭೂತಗಳು ಎಂದು ವರ್ಗೀಕರಿಸಿ ಅವುಗಳ ವರ್ಗಕ್ಕೆ ತಕ್ಕಂತೆ ವಿವಿಧ ರೀತಿಯ ಮುಖವರ್ಣಿಕೆ ಹಾಗೂ ಅಲಂಕಾರಗಳನ್ನು ಪೂರೈಸುವುದಿದೆ. ಆಚರಣೆಯ ಅಭಿನಯದಲ್ಲಿ ಮುಖವೇ ಪ್ರಧಾನವಾದುದರಿಂದ ಅದನ್ನೇ ಚಿತ್ರಗಾರನ ಫಲಕ (ಕ್ಯಾನ್‌ವಾಸ್) ಎಂಬಂತೆ ಕರೆಯಲಾಗಿದೆ. ಬಣ್ಣದ ಹರಹುಗಳು, ರೇಖೆಯ ಕಡುಪು, ಚುಕ್ಕೆಗಳ ಸಾಲು ಹಾಗೂ ಗಾತ್ರ, ಮೂಡಿಸುವ ಆಕಾರಗಳ ವಿನ್ಯಾಸ ಇತ್ಯಾದಿಗಳಲ್ಲೇ ಕಲಾವಿದ ತನ್ನ ಕ್ರಿಯಾಶೀಲತೆ ತೋರ್ಪಡಿಸುತ್ತಾನೆ. ಇಲ್ಲಿಯೂ ಪ್ರತಿ ಭೂತಗಳಿಗೂ ನಿಶ್ಚಿತವಾದ ಮುಖವರ್ಣಿಕೆ, ಪಂಚವರ್ಣದ ಬಳಕೆ ಇತ್ಯಾದಿಗಳು ಸಾಂಪ್ರದಾಯಿಕವಾಗಿರುವಂತಹದು. ಸಾಮಾನ್ಯವಾಗಿ ವೇಷ ಕಟ್ಟುವ ಕಲಾವಿದರೇ ಸ್ವತಃ ಬಣ್ಣಗಾರಿಕೆಯನ್ನೂ ಮಾಡಿಕೊಳ್ಳುತ್ತಾರೆ. ಈವರೆಗೆ ಮುನ್ನೂರ ಎಂಭತ್ತಕ್ಕೂ ಹೆಚ್ಚು ಭೂತಗಳನ್ನು ಕೆ. ಚಿನ್ನಪ್ಪಗೌಡರು ಗುರುತಿಸಿದ್ದು, ಅವುಗಳ ಬಣ್ಣಗಾರಿಕೆಯಲ್ಲೂ ಹಲವಾರು ವ್ಯತ್ಯಾಸವಿರುತ್ತವೆ. ಶ್ರೀಯುತರು ವಿಸ್ತಾರವಾಗಿ ಅಧ್ಯಯನ ನೆಡೆಸಿದ್ದು, ಪಂಚುರ್ಲಿ ಭೂತದ ಮುಖವರ್ಣಿಕೆಯನ್ನು ಉದಾಹರಣೆಯಾಗಿ ನೀಡಬಹುದಾಗಿದೆ. ಮುಖ ವರ್ಣಿಕೆಯಲ್ಲಿ ಪಂಚುರ್ಲಿ (ವರಾಹ–ಹಂದಿ)ಯನ್ನು ಹೋಲುವಂತೆ ರಚಿಸುವಂತಿದ್ದು ಅದರ ಉಗ್ರಸ್ವರೂಪಕ್ಕೆ ತಕ್ಕಂತೆ ಕೆಂಪು ಬಣ್ಣವನ್ನು ಅಧಿಕವಾಗಿ ಬಳಸಲಾಗುತ್ತದೆ. ಕೆಂಪು ತಿಲಕ, ದಪ್ಪನಾದ ಕೆಂಪು–ಕಪ್ಪು ನಾಮಗಳು, ಚುಕ್ಕೆಗಳ ಸಾಲು, ಕಣ್ಣಿನ ಸುತ್ತಾ ಕೆಂಪು, ಹುಬ್ಬುಗಳ ನಡುವೆ ಕೆಂಪು–ಬಿಳಿ ಬಣ್ಣಗಳ ಸೂರ್ಯಚಂದ್ರ, ಹಣೆಯಲ್ಲಿ ಹೊರಮುಖವಾಗಿ ಚಾಚುವ ಕಪ್ಪು ಕೆಂಪು ದಪ್ಪರೇಖೆಗಳು ರೇಖೆಗಳ ಮಧ್ಯೆ ಬಿಳಿಯ ಚುಕ್ಕೆಗಳು ಮುಂದಲೆಯಲ್ಲಿ ಕೆಂಪು ಬಣ್ಣದ ತಿಲಕ ಅದರ ಸುತ್ತಾ ಚುಕ್ಕೆಗಳು ಮೂಗಿನ ತುದಿ ಹಾಗೂ ತುಟಿಗಳಿಗೆ ಕೆಂಪು, ಕೆನ್ನೆ, ಕೊರಳು ಇತ್ಯಾದಿ ಅಲಂಕಾರ ರಹಿತ ಭಾಗಗಳಿಗೆ ಸಪಾಟಾಗಿ ಬಣ್ಣ ಹಚ್ಚಿ ಒಟ್ಟಾರೆಯಾಗಿ ವರಾಹದ ಮುಖದ ಕಲ್ಪನೆ ನೀಡುವಂತಿರುತ್ತದೆ. ಪ್ರಾದೇಶಿಕವಾಗಿ ಅಲ್ಪಸ್ವಲ್ಪ ಬದಲಾವಣೆ ಇರಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ದೇವಾಲಯಗಳಲ್ಲಿ, ಮಠ ಮಾನ್ಯಗಳಲ್ಲಿ, ಧರ್ಮಸ್ಥಳದ 'ಮಂಜೂಷ' ವಸ್ತು ಸಂಗ್ರಹಾಲಯದಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯ ಅನೇಕ ಬಿಡಿ ಚಿತ್ರಗಳನ್ನು ಕಾಣಬಹುದು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲೇ ಜಿಲ್ಲೆಗೆ ಅಂದಿಗೆ, ಆಧುನಿಕವೆನಿಸುವಂತಹ ತೈಲಚಿತ್ರ ರಚನೆ ಕಾಲಿರಿಸಿತ್ತು. ಅದಕ್ಕೂ ಮೊದಲೇ ಬಾಸಲ್ ಮಿಷನ್ ಅವರು ಕಲ್ಲಚ್ಚಿನಲ್ಲಿ ಮುಂದೆ ಪಡಿಯಚ್ಚಿನಲ್ಲಿ (ಬ್ಲಾಕ್) ಚಿತ್ರಗಳನ್ನು ಪತ್ರಿಕೆ, ಪುಸ್ತಕಗಳಿಗಾಗಿ ರಚಿಸಿ ಮುದ್ರಿಸಿದ್ದರು. ಮಂಗಳೂರಿನ ಸೆಂಟ್ ಎಲೋಷಿಯಸ್ ಚರ್ಚ್ ೧೮೮೫ರಲ್ಲಿ ಫಾದರ್ ಜೋಸಫ್ ವಿಲ್ಲಿ ಎಂಬುವರಿಂದ ನಿರ್ಮಿತವಾಗಿದ್ದು ೧೮೯೯ರಲ್ಲಿ ಯೂರೋಪಿನಿಂದ ಮಂಗಳೂರಿಗೆ ಬಂದ ಪೂಜ್ಯ ಸಹೋದರ ಆ್ಯಂಟೋನಿ ಮೋಶ್ಚಿನಿ (Antony Moscheni) ಎಂಬಾತ ರಚಿಸಿದ ನೂರಾರು ಚಿತ್ರಗಳನ್ನು ಕಾಣಬಹುದು. ನಯವಾದ ಗಾರೆ ಹಾಕಿದ ಗೋಡೆಯ ಮೇಲೆ ಕಂಬಗಳ ಮೇಲಿನ ಪಕ್ಕದ ಗೋಡೆಗಳ ಮೇಲೆ ನೇರವಾಗಿ ಚಿತ್ರಿಸಿದ್ದರೆ, ಒಳ ಮೇಲ್ಛಾವಣಿಗೆ ಕ್ಯಾನ್‌ವಾಸ್ ಮೇಲೆ ರಚಿಸಿ ಮರದ ಚೌಕಟ್ಟಿನ ನೆರವಿನಿಂದ ಹದ್ದಿಸಿರುವುದನ್ನು ಕಾಣಬಹುದು. ಇವಲ್ಲದೆ ಚರ್ಚ್‌ನ ಒಳ ಆವರಣ ಹಾಗೂ ಕೆಳಮನೆಯಲ್ಲಿರುವ ಭೋಜನ ಶಾಲೆಗಳಲ್ಲೂ ಭಿತ್ತಿ ಹಾಗೂ ಬಿಡಿ ಚಿತ್ರಗಳನ್ನು ಕಾಣಬಹುದು. ಎಲ್ಲ ಚಿತ್ರಗಳೂ ಹಳೆ ಹಾಗೂ ಹೊಸ ಒಡಂಬಡಿಕೆಗಳಿಗೆ ಸಂಬಂಧಿಸಿದವು. ಮೇಲ್ಛಾವಣಿಯ ಮಧ್ಯದಲ್ಲಿ ಇರುವ ಚಿತ್ರಗಳಲ್ಲಿ ನಾಲ್ಕು ಸೆಂಟ್ ಎಲೋಷಿಯಸ್‌ಗೆ ಸಂಬಂಧಿಸಿದವು.

ನಂತರದ್ದು ಏಸುವು ಬಡವರಿಗೆ ದುಃಖಿತರಿಗೆ ಸಾಂತ್ವನ ನೀಡುತ್ತಿರುವುದು, ಇಕ್ಕೆಲಗಳಲ್ಲಿ ಪೀಟರ್, ಪಾಲ್ ಜೇಮ್ಸ್ ಜೋನ್ ಮುಂತಾದ ಹನ್ನೆರಡು ಮಂದಿ ಧರ್ಮ ಪ್ರಚಾರಕ (Apostles)ರ ಚಿತ್ರಣಗಳಿವೆ. ಸುಮಾರು ನಲವತ್ತು ಅಂಕಣಗಳಲ್ಲಿ ಇನ್ನಿತರ ಸಂತರ ಜೀವನ ಚಿತ್ರಿಸಿದೆ. ಕಂಬಗಳಿಂದ ಪ್ರತ್ಯೇಕಿಸಿರುವ ಭಾಗ ಉದ್ದನೆಯ ಹಜಾರದಂತಿದ್ದು, ಪಕ್ಕದ ಅಂಕಣಕ್ಕಿಂತ ಹೆಚ್ಚು ಎತ್ತರಿಸಿದೆ. ಅಲ್ಲಿಯ ಇಕ್ಕೆಲದ ಗೋಡೆಗಳಲ್ಲಿ ಏಸುವಿನ ಜನನ, ದೇವಾಲಯದಲ್ಲಿ ಇರುವುದು, ಪವಾಡಗಳನ್ನು ಮೆರೆದುದು, ಆರ್ತರಿಗೆ ದುಃಖ ಶಮನ ಮಾಡಿದ್ದು, ಉಪದೇಶ ನೀಡಿದ್ದು, ಕೊನೆಯ ಭೋಜನ, ಅಂತಿಮ ವಿಚಾರಣೆ, ಶಿಲುಬೆಗೆ ಹಾಕಿದ್ದು, ಕೆಲದಿನಗಳ ನಂತರ ಪುಣ್ಯ ಪುರುಷನಾಗಿ ಕಾಣಿಸಿಕೊಂಡಿದ್ದು, ಇತ್ಯಾದಿಗಳು ಚಿತ್ರಿತವಾಗಿವೆ. ಪ್ರಾರ್ಥನಾ ಮಂದಿರದ ಮಳಿಗೆಯ ಕೈಸಾಲೆಯಲ್ಲಿ ಏಸು–ಮೇರಿಯರಿಗೆ ಸಂಬಂಧಿಸಿದ ಹಲವಾರು ಬಿಡಿ ಚಿತ್ರಗಳು, ಏಸುವಿನ ಅಂತ್ಯದ ಹದಿನಾಲ್ಕು ಘಟ್ಟಗಳು ಕ್ಯಾನ್‌ವಾಸ್ ಮೇಲೆ ಬಿಡಿಯಾಗಿ ಚಿತ್ರಿಸಿ ಗೋಡೆಯಲ್ಲಿ ಪ್ರದರ್ಶಿಸಿದೆ. ಭೋಜನಗೃಹದಲ್ಲಿ ವಿಶಾಲವಾದ ಹರಹಿನಲ್ಲಿ 'ಅಂತಿಮ ಭೋಜನ'ದ ಚಿತ್ರ ರಚಿಸಿದ್ದು, ಇಡೀ ಸಂಯೋಜನೆ ಲಿಯಾನಾರ್ಡೋ–ಡ ವಿಂಚಿಯ 'ಅಂತಿಮ ಭೋಜನ' ಚಿತ್ರವನ್ನು ಹೋಲುತ್ತದೆ. ಇದಲ್ಲದೆ ಬೇರೆ ಬೇರೆ ದೇಶಗಳ, ಭೂಪ್ರದೇಶಗಳ ಚಿತ್ರಣವಿದೆ. ಇವುಗಳಲ್ಲಿ ಕೆಲವು ಯೂರೋಪು ದೇಶದ ಪಾದ್ರಿಗಳ ಸ್ಥಳಗಳಿಗೆ (ನೇಟಿವಿಟಿ) ಸಂಬಂಧಪಟ್ಟಿವೆ. ಸ್ವತಃ ಕಲಾವಿದನದೂ ಸೇರಿದಂತೆ ಆತನ ಸಮಕಾಲೀನರ ಬಿಡಿ ಚಿತ್ರಗಳನ್ನು ಚರ್ಚ್‌ನ ಪ್ರವೇಶದ್ವಾರದಲ್ಲಿ ಇರಿಸಲಾಗಿದೆ. ಕಲಾವಿದ ಮೋಶ್ಚಿನಿ ೧೯೦೨–೦೪ರ ಅವಧಿಯಲ್ಲಿ ಒಬ್ಬಾತನೇ ಏಕಾಂಗಿಯಾಗಿ ಹಲವಾರು ಅಂಕಣದಲ್ಲಿ ಸಾವಿರಾರು ವ್ಯಕ್ತಿಗಳನ್ನು ಅವರ ಸಂಕೇತಗಳು ಉಡುಗೆ–ತೊಡುಗೆ ವೈವಿಧ್ಯತೆ ಅನುಸರಿಸಿ ಇಡೀ ದೃಶ್ಯಕ್ಕೆ ಸೂಕ್ತ ಹಿನ್ನೆಲೆಯಿಂದ ರಚಿಸಿರುವುದು ಆತನ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಇವು ಯೂರೋಪಿನ ಆಧುನಿಕ ನೈಜ ಶೈಲಿಯಲ್ಲಿ ನೆರಳು ಬೆಳಕಿನಿಂದ ಕೂಡಿದ, ಅಷ್ಟು ಪ್ರಖರವಲ್ಲದ ಹಿತಮಿತ ಬಣ್ಣಗಳಿಂದ ರಚಿತವಾಗಿವೆ. ತೀರ ಹತ್ತಿರದಿಂದ ಕಂಡಾಗ ಕೆಲವೆಡೆ ರಚನೆಯಲ್ಲಿ ಒರಟುತನ ಕಂಡು ಬರುತ್ತದೆ. ಒಟ್ಟು ಸಂಯೋಜನೆಯಲ್ಲಿ ಮುಖ್ಯ ವ್ಯಕ್ತಿಯತ್ತ ಗಮನ ಸೆಳೆಯುವಂತೆ, ಒಂದು ದೃಶ್ಯದಿಂದ ಮುಂದಿನ ದೃಶ್ಯಕ್ಕೆ ಹೋಗುವಂತೆ ಪ್ರೇಕ್ಷಕರನ್ನು ಪ್ರೇರೇಪಿಸುವಂತೆ, ಕಥೆಯ ಯಾವುದೊ ಒಂದು ದೃಶ್ಯದಿಂದ ಇಡೀ ಘಟನೆಯ ಪ್ರಸಂಗ ನೆನಪಿಸುವಂತೆ ರಚಿಸಿದ್ದು ಕಲಾವಿದನ ಜಾಣ್ಮೆಯನ್ನು ಗುರುತಿಸಬಹುದು. ಈಚೆಗೆ ಚಿತ್ರಗಳ ಶಿಥಿಲಭಾಗಗಳನ್ನು ದುರಸ್ತಿ ಮಾಡಿಸಿ ರಕ್ಷಿಸಲಾಗಿದೆ. ಚರ್ಚ್‌ನಲ್ಲಿ ಕಿಟಕಿಗಳಿಗೆ ಅಳವಡಿಸಿರುವ ಎರಡು ಗಾಜಿನ ಫಲಕ (ಸ್ಟೈನ್ಡ್ ಗ್ಲಾಸ್)ಗಳ ಚಿತ್ರಗಳೂ ಇವೆ.

ಇದಲ್ಲದೆ ಮಂಗಳೂರು ಬಳಿಯ ಬಂಟ್ವಾಳ ತಾಲೂಕಿನ ಜಕ್ರಿಬೆಟ್ಟು ಎಂಬ ಗುಡ್ಡದ ಮೇಲಿರುವ ಸೆಂಟ್ ಹೋಲಿ ಸೋವಿನಿಯರ್ ಚರ್ಚ್‌ನಲ್ಲಿ ಕೆಲವು ಭಿತ್ತಿ ಚಿತ್ರಗಳಿವೆ. ಪ್ರಾರ್ಥನಾ ವೇದಿಕೆಯ ಒಳ ಹಾಗೂ ಹೊರಭಾಗದ ಭಿತ್ತಿಯಲ್ಲಿ ಬೈಬಲ್‌ನಲ್ಲಿಯ ವಿಷಯಗಳನ್ನು ಚಿತ್ರಿಸಿದೆ. ಶೈಲಿ, ಆಕಾರಗಳ ನಿಲುವು, ಬಣ್ಣಗಾರಿಕೆ, ಛಾಯಾಂಕನ, ಚಿತ್ರಿತ ವಿಷಯ ನಿರೂಪಣೆ ಇತ್ಯಾದಿಗಳೆಲ್ಲ ಸೆಂಟ್ ಎಲೋಷಿಯಸ್ ಚರ್ಚ್‌ನದನ್ನೇ ಹೋಲುತ್ತದೆಯಾದರೂ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಗಳಿಲ್ಲ. ಈ ಚರ್ಚ್ ೧೮೯೭ರಲ್ಲಿ ರಚಿಸಿದ್ದು, ಸಂತ ಮೋಶ್ಚಿನಿಯೇ ಮೊದಲಿಗೆ ಇಲ್ಲಿ ಚಿತ್ರ ರಚಿಸಿದ್ದು, ನಂತರ ಎಲೋಷಿಯಸ್‌ನಲ್ಲಿ ರಚಿಸಿರಬಹುದು. ಮಂಗಳೂರು ಶಹರದ ಒಂದು ಭಾಗವೇ ಆದ ಕುಲಶೇಖರ (ಕೊರ್ಡೆಲ್) ಪ್ರದೇಶದ ಹೋಲಿಕ್ರಾಸ್ ಚರ್ಚ್‌ನ ವಿಶಾಲವಾದ ಪ್ರಾರ್ಥನಾ ಮಂದಿರದ ಗೋಡೆಗಳ ಮೇಲ್ಭಾಗದಲ್ಲಿ ದೊಡ್ಡ ಅಳತೆಯ ಕಿಟಕಿಗಳಿಗೆ ಗಾಜಿನ ಚಿತ್ರ (ಸ್ಟೈನ್ಡ್‌ಗ್ಲಾಸ್)ಗಳನ್ನು ಅಳವಡಿಸಿದೆ. ಅಲ್ಲದೆ ಪ್ರಾರ್ಥನಾ ವೇದಿಕೆಯ ಹೊರ ಭಿತ್ತಿ ಹಾಗೂ ಹಜಾರದ ಅಕ್ಕಪಕ್ಕದ ಭಿತ್ತಿಗಳಲ್ಲಿ ಕ್ರೈಸ್ತ ಧರ್ಮೀಯ ಚಿತ್ರಗಳಿವೆ. ಕ್ರಿಸ್ತ, ಮೇರಿ ಹಾಗೂ ದೇವತೆಗಳ ನೈಜ ಪ್ರಮಾಣದ ಗಾರೆಯ ಶಿಲ್ಪಗಳು ಭಾವಪೂರ್ಣವಾಗಿವೆ. ಅಲೆಗ್ಸಾಂಡರ್ ದುಬ್ಯಾ ಸ್ವಾಮಿಗಳು ಫ್ರಾನ್ಸ್‌ನಲ್ಲಿ ಜನಿಸಿ (೧೮೦೯) ತಮ್ಮ ಐವತ್ತಾರನೆಯ ವರ್ಷದಲ್ಲಿ ಮಂಗಳೂರಿಗೆ ಬಂದು ಜನಸೇವೆ ಸಮಾಜ ಸುಧಾರಣೆ ಕೈಗೊಂಡು ೧೮೭೩ರಲ್ಲಿಯೇ ಕುಲಶೇಖರ ಚರ್ಚ್ ಆರಂಭಿಸಿದರಾದರೂ ನಾಲ್ಕು ವರ್ಷಗಳ ನಂತರ ತೀರಿಕೊಂಡಿದ್ದು, ಚರ್ಚ್ ೧೯೧೩ರಲ್ಲಿ ಮುಕ್ತಾಯಗೊಂಡಿತು. ಇಲ್ಲಿಯ ಗಾಜಿನ ಚಿತ್ರವನ್ನು ಆ ವೇಳೆಯಲ್ಲಿ ವಿದೇಶದಿಂದ ತರಿಸಿ ಅಳವಡಿಸಲಾಯಿತು. ಇದೇ ರೀತಿ ಕಂಕನಾಡಿಯ ಕಾರ್ಮೆಲ್ ಕಾನ್ವೆಂಟ್‌ನಲ್ಲಿಯೂ ಬೃಹತ್ ಪ್ರಮಾಣದ ಎರಡು ಗಾಜಿನ ಚಿತ್ರಗಳಿದೆ. ಜಪ್ಪುವಿನ ಸಂತ ಜೋಸೆಫ್ ಸೆಮಿನರಿ ಬಳಿಯ ಇನ್‌ಫೆಂಟ್ ಮೇರಿ ಕಾನ್ವೆಂಟ್, ಬಂಟ್ವಾಳದ ಮೊಡಂಕಾಪು ಪ್ರದೇಶದ ಇನ್ಫೆಂಟ್ ಜೀಸೀಸ್ ಚರ್ಚ್ ಮುಂತಾದ ಕಡೆಗಳಲ್ಲೂ ಕಳೆದ ಶತಮಾನದ ಆರಂಭದಲ್ಲಿ ಬರೆದ ಹಲವಾರು ಚಿತ್ರಗಳಿವೆ. ಜಪ್ಪುವಿನ ಚರ್ಚ್‌ನಲ್ಲಿ ಸಾಕಷ್ಟು ಚಿತ್ರಗಳಿದ್ದು ಎಲ್ಲವೂ ವೃತ್ತಾಕಾರದ ಕ್ಯಾನ್‌ವಾಸ್ ಮೇಲೆ ರಚಿಸಿ ಅದಕ್ಕೆಂದೇ ವಿಶೇಷವಾಗಿ ರೂಪಿಸಿರುವ (ಗುಂಡನೆಯ ಕಿಟಕಿಯಂತೆ) ಭಿತ್ತಿಯಲ್ಲಿ ಪ್ರದರ್ಶಿಸಿರುವುದು ಒಂದು ವಿಶೇಷವೆಂದು ಹೇಳಬಹುದು.

ಮೂಡಬಿದಿರೆಯ ದಾನಶಾಲಾ ಜೈನ ಮಠದಲ್ಲಿ ಕೆಲವು ಭಿತ್ತಿಚಿತ್ರಗಳು ಉಳಿದಿವೆ. ಇಲ್ಲಿಯೂ ಇಡೀ ಮಠವನ್ನು ಪುನರುದ್ಧಾರ ಮಾಡಿದ್ದರೂ, ಚಿತ್ರವಿರುವ ಭಾಗವನ್ನು ಹಾಗೆಯೇ ಉಳಿಸಿರುವುದು ಶ್ಲಾಘನೀಯ. ಒಳಗಿನ ಗರ್ಭಗುಡಿಯ ಮುಂದಿನ ಅಂಕಣದ

ಮೂರು ಗೋಡೆಗಳಲ್ಲಿ ಮೇಲ್ಗಡೆ ಉದ್ದಕ್ಕೂ ಕುಳಿತಿರುವ ಭಂಗಿಯಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರನ್ನು ಚಿತ್ರಿಸಿದೆ. ಇಲ್ಲಿಯೂ ವಿವಿಧ ವರ್ಣಗಳಿಂದ ಗುರುತಿಸುವಂತೆ ಬೇರ್ಪಡಿಸಿದೆ. ಗರ್ಭಗುಡಿಯ ದ್ವಾರದ ಎರಡೂ ಪಕ್ಕದಲ್ಲಿ ಎಂದರೆ ಮೇಲೆ ಹೇಳಿದ ಚಿತ್ರಗಳ ಕೆಳಗೆ ದ್ವಾರಪಾಲಕರಿದ್ದು ಅದು ಅದೇ ಕಾಲದ ರಚನೆಯಂತಿದೆ. ಮಠದ ದ್ವಾರದ ಎರಡು ಪಕ್ಕದಲ್ಲಿ ಎರಡು ಕೊಠಡಿಗಳು ಒಳಮುಖನಾಗಿದ್ದು, ಅವುಗಳಲ್ಲಿಯೂ ಕೆಲವು ದೊಡ್ಡ ಪ್ರಮಾಣದಲ್ಲಿ ಸಂಯೋಜಿಸಿದ ಚಿತ್ರಗಳಿವೆ. ಉಳಿದ ಗೋಡೆಗಳಲ್ಲೂ ಇದ್ದಿರಬಹುದಾದರೂ ಈಗ ನಾಶವಾಗಿವೆ. ಪ್ರವೇಶದ ಬಲ ಕೋಣೆಯಲ್ಲಿ ದೇಶೀಯ ಅರಸನೊಬ್ಬ ಇನ್ನೊಬ್ಬ ಅರಸನೊಂದಿಗೆ ಯುದ್ಧಕ್ಕೆ ಮುಖಾಮುಖಿಯಾಗಿರುವ ದೃಶ್ಯವಿದೆ. ಅಲಂಕೃತ ಆನೆ–ಕುದುರೆಗಳು, ಎರಡೂ ತಂಡದಲ್ಲಿರುವ ರಾಜರ, ಯೋಧರ ನಿಲವು, ಕಸೆಅಂಗಿಗಳು, ರುಮಾಲುಗಳಲ್ಲಿ ವೈವಿಧ್ಯ, ಬಣ್ಣಗಾರಿಕೆ, ಒಟ್ಟು ಸಂಯೋಜನೆ ಚಿಕಣಿ ಚಿತ್ರವನ್ನು ನೆನಪಿಗೆ ತರುತ್ತದೆ. ಇತ್ತಂಡದಲ್ಲಿಯೂ ಯೋಧರಿಬ್ಬರು ದುರ್ಬೀನು ಹಿಡಿದು ನೋಡುತ್ತಿದ್ದಾರೆ. ಇನ್ನೊಂದು ಚಿತ್ರದಲ್ಲಿ ಪ್ರಾಯಶ: ದ್ರೌಪದಿಯೊಂದಿಗೆ ಇರುವ ಪಂಚಪಾಂಡವರಿಗೆ, ರೆಕ್ಕೆಯುಳ್ಳ ಇಬ್ಬರು ಗಂಧರ್ವ ಸ್ತ್ರೀಯರು ಹೂಮಳೆಗರೆಯುತ್ತಿದ್ದಾರೆ. ಇನ್ನೊಂದು ಕೋಣೆಯಲ್ಲಿ ಪಟ್ಟಾಭಿಷಕ್ತರಾದ ರಾಮ–ಸೀತೆಯರು, ಅನುಜರು, ಹನುಮಂತನಿಂದೊಡಗೂಡಿರುವ ದೃಶ್ಯವಿದೆ. ಮೂಡಬಿದಿರೆಯ ಲೆಪ್ಪದ ಬಸ್ತಿಯಲ್ಲಿಯೂ ಭಿತ್ತಿ ಚಿತ್ರಗಳಿವೆ.

ಭಿತ್ತಿಚಿತ್ರಗಳ ಬಗ್ಗೆ ಹೇಳುವಾಗ ಬಿಡಿ ಚಿತ್ರಗಳ ಬಗ್ಗೆಯೂ ಕೆಲವು ಮಾತುಗಳನ್ನು ಹೇಳಬಹುದು. ಈಗ ಮೂಡಬಿದಿರೆಯ ಮಠದಲ್ಲಿರುವ ಧವಳ ಗ್ರಂಥಗಳ ಚಿತ್ರಗಳ ಬಗ್ಗೆ ಡಾ. ಶಿವರಾಮ ಕಾರಂತರು ಹಾಗೂ ಶಿವರಾಮಮೂರ್ತಿ ವಿವರವಾಗಿ ಬರೆದಿದ್ದಾರೆ. ಬನ್ನಿಕೆರೆಯ ಚೈತ್ಯಾಲಯದ ಆಚಾರ್ಯ ಶುಭಚಂದ್ರರಿಗೆ ಸು. ೧೧೨೦ರ ವೇಳೆಯಲ್ಲಿ ದಾನ ಮಾಡಿದ ಗ್ರಂಥವಿದೆಂದು ಹೇಳಲಾಗಿದೆ. ಲಿಪಿ ಹಾಗೂ ಚಿತ್ರಗಳ ವಿನ್ಯಾಸದಿಂದ ಹೊಯ್ಸಳ ವಿಷ್ಣುವರ್ಧನ ಕಾಲದಲ್ಲಿ (೧೧೧೩–೨೦) ರಚಿಸಿರಬೇಕೆಂದು ಡಾ. ಎಚ್. ಆರ್. ರಘುನಾಥ ಭಟ್ಟರು ತಿಳಿಸುತ್ತಾರೆ. ತಲೆಯ ಭಾಗ ಮುರಿದುಹೋಗಿರುವ ಗರಿಯೊಂದರಲ್ಲಿ ಕುಳಿತಿರುವ ರಾಜದಂಪತಿಗಳು ವಿಷ್ಣುವರ್ಧನ–ಶಾಂತಲೆಯರೆಂಬುದು ಶಿವರಾಮಮೂರ್ತಿ ಅವರ ಅಭಿಪ್ರಾಯ. ಚಾವುಂಡರಾಯನು ನೇಮಿಚಂದ್ರ ಸಿದ್ಧಾಂತಿಗಳಿಗಾಗಿ ಶ್ರವಣಬೆಳಗೊಳದಲ್ಲಿ ಸಿದ್ಧಾಂತ ಬಸ್ತಿ ಮಾಡಿಸಿ ಈ ಪುಸ್ತಕ (ಧವಳತ್ರಯ)ಗಳನ್ನು ಅಲ್ಲಿರಿಸಿದ್ದನೆಂದೂ ನಂತರ ಮೂಡಬಿದಿರೆಗೆ ಸಾಗಿಸಿದರೆಂದು ಡಾ. ಶಿರೂರರು ಬರೆಯುತ್ತಾರೆ. ಒಂಬತ್ತನೆಯ ಶತಮಾನದಲ್ಲಿ ಕರ್ಹಾಡಿನ ಇಂದ್ರನಂದಿಯ ಕಾಲದಲ್ಲಿ ಧವಲ ಗ್ರಂಥಗಳು ರಚಿತವಾಗಿ ಕೊಲ್ಲಾಪುರದಲ್ಲಿ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯರ ಸಂರಕ್ಷಣೆಯಲ್ಲಿ ಮಂಗಳವಾರ ಪೇಟೆಯ ಸಿದ್ಧಾಂತ ಬಸ್ತಿಯಲ್ಲಿದ್ದು, ನಂತರ ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ ದಾಳಿಯಿಂದ ರಕ್ಷಿಸಲು ಮೂಡಬಿದಿರೆಗೆ ತರಲಾಯಿತೆಂದು ಅಲ್ಲಿ (ಕೊಲ್ಲಾಪುರ) ಐತಿಹ್ಯವಿದೆಯೆಂದು, ಪಿ. ಕೆ. ಭಾಗೋಜಿ, ಅವರು ತಿಳಿಸುತ್ತಾರೆ. ಇವೆಲ್ಲಕ್ಕಿಂತ ಮೂಡಬಿದಿರೆಯ ಸ್ಥಳ ಪರಿಚಯ ಮಾಡಿಕೊಡುವ ಕೈಪಿಡಿಯಲ್ಲಿ "ಧಾರವಾಡ ಜಿಲ್ಲೆಯ ಬಂಕಾಪುರದಿಂದ ದೇವತೆಗಳು ವೈಭವದಿಂದ ಈ ಗ್ರಂಥಗಳನ್ನು ತಂದು ಪಾರ್ಶ್ವನಾಥ ಸ್ವಾಮಿಯ ಸನ್ನಿಧಿಯಲ್ಲಿ ನೆಲೆಗೊಳಿಸದರೆಂದು" ಅಲ್ಲಿಯ ಹಿರಿಯ ಶ್ರಾವಕರು ತಿಳಿಸುತ್ತಾರೆ ಎಂದು ಹೇಳಿದೆ. ನೃಪತುಂಗನಿಗೆ ಆತಿಶಯ ಧವಳ ಎಂಬ ಬಿರುದಿತ್ತು. ಪ್ರಾಯಶಃ ಆ ಕಾಲದಲ್ಲಿಯೇ ಧವಳ ಗ್ರಂಥಗಳು ಕನ್ನಡಕ್ಕೆ ಲಿಪ್ಯಂತರವಾಗಿ ಅದೇ ಪೀಳಿಗೆಗೆ ಸೇರಿದ ಪ್ರಸ್ತುತ ಗ್ರಂಥ ರಚಿತವಾಗಿದ್ದು, ಹೊರಗಡೆಯಿಂದ ಮುಖ್ಯವಾಗಿ ಉತ್ತರ ಕರ್ನಾಟಕದಿಂದ ಈ ಗ್ರಂಥಗಳು ಮೂಡಬಿದಿರೆಗೆ ಬಂದಿರಬೇಕು. ತಾಳೆಯೋಲೆ ಮೇಲೆ ಬಣ್ಣಗಳಿಂದ ಚಿತ್ರಿಸಿರುವುದಕ್ಕೆ ಏಕೈಕ ಉದಾಹರಣೆಯಾಗಿರುವ ಈ ಚಿತ್ರಗಳನ್ನು ಮುಂದಿನ 'ಜೈನಚಿಕಣಿ' ಯ ಚಿತ್ರಕಾರರೂ ಅನುಸರಿಸಿಲ್ಲ.

ದಕ್ಷಿಣ ಕರ್ನಾಟಕದ ಆಧುನಿಕ ಚಿತ್ರಕಲೆಯನ್ನು ಪಾವಂಜೆ ಗೋಪಾಲಕೃಷ್ಣಯ್ಯ (೧೮೬೬–೧೯೪೫) ಅವರಿಂದ ಆರಂಭಿಸಬಹುದು. ಜಿಲ್ಲೆಯ ಪಾವಂಜೆಯಲ್ಲಿ ಜನಿಸಿದ್ದು ಮಂಗಳೂರಿನ ಬಾಸೆಲ್ ಮಿಷನ್ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಚಿತ್ರಕಲೆಯಲ್ಲಿ ಆಸಕ್ತಿ ಹುಟ್ಟಿ ಮುಂಬಯಿಯ ಜೆ. ಜೆ. ಶಾಲೆಯಲ್ಲಿ ಅಭ್ಯಸಿಸಿ ಅಲ್ಲಿಯೇ ಪ್ರಾಧ್ಯಾಪಕರಾಗಿದ್ದು, ೧೯೦೧ರ ಪ್ಲೇಗ್ ದೆಸೆಯಿಂದ ನೌಕರಿ ತ್ಯಜಿಸಿ ಮರಳಿ ಮಂಗಳೂರಿಗೆ ಬಂದು ಸೈಂಟ್ ಆನ್ಸ್ ಕಾಲೇಜಿನಲ್ಲಿ ಕಲಾಶಿಕ್ಷಕರಾಗಿ ನೇಮಕಗೊಂಡರು. ಆವರೆಗೆ ಶಾಲಾ ಕಾಲೇಜುಗಳಲ್ಲಿ (ಜಿಲ್ಲೆಯಲ್ಲಿ) ಚಿತ್ರಕಲಾ ಶಿಕ್ಷಣ ಬೋಧಿಸುವ ಪದ್ಧತಿ ಇರಲಿಲ್ಲ. ಅದು ಆರಂಭವಾದುದೇ ಗೋಪಾಲಕೃಷ್ಣಯ್ಯ ಅವರಿಂದ. ಆಗ ಅವರಿಗೆ ದೊರೆಯುತ್ತಿದ್ದ ಸಂಬಳ ಮಾಹೆಯಾನ ಮೂರು ರೂಪಾಯಿಗಳು, ಒಂದು ವರ್ಷದಲ್ಲೇ ಆನ್ಸ್ ಕಾಲೇಜು ಬಿಟ್ಟು ಮಂಗಳೂರಿನ ಕೆನರಾ ಹೈಸ್ಕೂಲ್‌ನಲ್ಲಿ ಐದು ರೂ. ಸಂಬಳಕ್ಕೆ ನೇಮಕಗೊಂಡರು. ಜೊತೆಯಲ್ಲಿ 'ಪಾವಂಜೆ ಆರ್ಟ್ ಸ್ಟುಡಿಯೋ' ಆರಂಭಿಸಿ ಅನೇಕ ಕಲಾಕೃತಿಗಳನ್ನು ರಚಿಸಿದ್ದು, ಇಂದಿಗೂ ಅವರ ವಂಶಸ್ಥರು ಸ್ಟುಡಿಯೋ ನಡೆಸಿಕೊಂಡು ಬರುತ್ತಿದ್ದು, ಕೃತಿಗಳನ್ನು ವ್ಯವಸ್ಥಿತವಾಗಿ ರಕ್ಷಿಸಿದ್ದಾರೆ. ಪಾವಂಜೆ ಅವರ ಕೃತಿಗಳಲ್ಲಿ ದೇವರ ಹಾಗೂ ಪೌರಾಣಿಕ ಹಿನ್ನೆಲೆಯ ಕೃತಿಗಳು, ಸ್ಥಿರ ಚಿತ್ರಗಳು (ಸ್ಟಿಲ್ ಲೈಫ್), ಪ್ರಕೃತಿ ದೃಶ್ಯಗಳು, ಭಾವಚಿತ್ರಗಳು ಹಾಗೂ ಮಣ್ಣಿನಲ್ಲಿ ರಚಿಸಿದ ಕಲಾಕೃತಿಗಳು ಇಂದು ನೋಡಸಿಗುತ್ತವೆ. ಪಾವಂಜೆ ಸ್ಟುಡಿಯೋ ಅಲ್ಲದೆ ಕೆನರಾ ಹೈಸ್ಕೂಲ್, ಬಂಟರ

ವಿದ್ಯಾರ್ಥಿನಿಲಯ, ಬೆಂಗಳೂರಿನ ಕೆನರಾ ಬ್ಯಾಂಕ್ ಕೇಂದ್ರ ಕಛೇರಿ ಮುಂತಾದ ಕಡೆಗಳಲ್ಲಿಯೂ ಕಾಣಬಹುದು. ಅಲ್ಲದೆ ಮಧ್ಯ ಪ್ರದೇಶದ ರಾಜ ರಾಣಾ ಪನ್ನಾನ ನೈಜ ಅಳತೆಯ ಭಾವಚಿತ್ರ ರಚಿಸಿ ನೀಡಿದ್ದಾರೆ. ದೆಹಲಿ, ಆಗ್ರಾ ಮುಂತಾದ ಉತ್ತರ ದೇಶಗಳಲ್ಲಿ ಸಂಚರಿಸಿದಾಗ ಅಲ್ಲಿಯ ದೃಶ್ಯಗಳನ್ನು ರೇಖಾಚಿತ್ರದಲ್ಲಿ ಮೂಡಿಸಿದ್ದಾರೆ. ಅಂತೆಯೇ ದೈನಂದಿನ ಕ್ರಿಯೆಯಲ್ಲಿ, ಕಾರ್ಯಗಳಲ್ಲಿ ನಿರತವಾಗಿರುವವರ ಕ್ಷಿಪ್ರ ಸ್ಕೆಚ್‌ಗಳೂ ಇವೆ. ಬಾಸೆಲ್ ಮಿಷನ್‌ರವರಿಗೆ ರಚಿಸಿಕೊಟ್ಟ ಚಿತ್ರಗಳು, ಪಟಗಳು (ಚಾರ್ಟ್)ಗಳು ನೋಡಸಿಗುತ್ತವೆ. ಕೆಲವು ದೇವಾಲಯಗಳಿಗೆ ಲಾಂಛನ ರಚಿಸಿಕೊಟ್ಟಿದ್ದಾರೆ. ಪಾವಂಜೆಯವರ ಕಲಾಸೇವೆಗಾಗಿ ಧರ್ಮಸ್ಥಳದ ಧರ್ಮಾಧಿಕಾರಿಗಳಿಂದ, ಹುಬ್ಬಳ್ಳಿಯ ಸಿದ್ಧಾರೂಢಮಠದಿಂದ ಪ್ರಶಸ್ತಿ ಗೌರವಗಳು ಸಂದಾಯವಾಗಿದೆ. ಕೆನರಾ ಶಾಲೆಯ ವಿದ್ಯಾರ್ಥಿ, ಶಿಕ್ಷಕರು, ಜೆ. ಜೆ. ಕಲಾಶಾಲೆಯ ವಿದ್ಯಾರ್ಥಿಗಳು ಸನ್ಮಾನಿಸಿ ಬಹುಮಾನಿಸಿದ್ದಾರೆ. ಕೊಲ್ಕತ್ತಾದ ಎನ್. ಬಿ. ಎಸ್. ಸಂಘದವರು ಬಂಗಾರ ಪದಕದೊಂದಿಗೆ 'ಚಿತ್ರಕಲಾನಿಧಿ' ಎಂಬ ಬಿರುದು ನೀಡಿ ಗೌರವಿಸಿದ್ದಾರೆ. ಅಲ್ಲದೆ ಚಿತ್ರಕಲಾಚಾರ್ಯ, ಚಿತ್ರಕಲಾ ಕೋವಿದ ಎಂಬ ಬಿರುದುಗಳು ಇವರಿಗಿದ್ದವು. ಪಾವಂಜೆಯವರು 'ಆಚಾರ ದರ್ಪಣ' ಹಾಗೂ 'Our Past and Present from a religious point of view' ಎಂಬ ಪುಸ್ತಕ ರಚಿಸಿದ್ದಾರೆ. ಪಾವಂಜೆಯವರ ಮಕ್ಕಳಲ್ಲಿ ನರಹರಿ ಪಾವಂಜೆ, (೧೮೯೨–೧೯೬೫) ಮುಂಬಯಿಯ ಜೆ.ಜೆ. ಯಲ್ಲಿ ಕಲಿತು, ಜರ್ಮನಿಯಲ್ಲಿ ಗ್ರಾಫಿಕ್ ಕಲಾಮಾಧ್ಯಮದಲ್ಲಿ ಹೆಚ್ಚಿನ ತರಬೇತಿ ಹಾಗೂ ಡಾಕ್ಟರೇಟ್ ಪದವಿ ಪಡೆದು ನಂತರ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಪ್ರಾಚಾರ್ಯರಾಗಿ ಅಲ್ಲದೆ ಇನ್ನೂ ಹಲವಾರು ಹುದ್ದೆಗಳಲ್ಲಿದ್ದವರು. ಇನ್ನೊಬ್ಬ ಪುತ್ರ ಪಾವಂಜೆ ಭುಜಂಗರಾಯರು (೧೯೦೪–೮೫) ಮಂಗಳೂರಿನಲ್ಲಿ ಕಲಾಶಿಕ್ಷಕರಾಗಿದ್ದರು. ಇವರ ಕಲಾಕೃತಿಗೆ ಒಮ್ಮೆ ರಜತ ಪದಕ ಪ್ರಶಸ್ತಿ ಬಂದಿದ್ದಲ್ಲದೆ, ಮಂಗಳೂರಿನ ಲಯನ್ಸ್ ಕ್ಲಬ್‌ನಿಂದ ಸನ್ಮಾನಿತರಾಗಿದ್ದರು. ಪಾವಂಜೆ ಗೋಪಾಲಕೃಷ್ಣಯ್ಯ ಅವರಿಗೆ ಮುಂಬಯಿಯಲ್ಲಿ ರಾಜರವಿವರ್ಮನ (೧೮೪೮–೧೯೦೬) ಪರಿಚಯವಿತ್ತೆಂದು ತಿಳಿದುಬರುತ್ತದೆ. ಮಂಗಳೂರಿನಲ್ಲಿ ಇವರೊಂದಿಗೆ ಪುತ್ತೂರಿನ ತೋಳ್ಪಾಡಿತ್ತಾಯ ಅವರು ಸಹಕಲಾವಿದರಾಗಿದ್ದರು.

ಅಗ್ಗೊಂಡೆಯ ಪಾಚುಪ್ಪಶೆಟ್ಟಿ (ಬಣ್ಣದ ಪಾಚು) ಅವರು ಅನಂತಶಯನದಲ್ಲಿ ಚಿತ್ರಕಲಾಭ್ಯಾಸ ಮಾಡಿ, ಕೃಷ್ಣಾಪುರದ ಮಠದಲ್ಲಿ ಹಾಗೂ ಮೂಡಬಿದಿರೆಯ ಜೈನಮಠದ ಮತ್ತು ಬಸದಿಗಳಲ್ಲಿ ಚಿತ್ರಗಳಲ್ಲದೆ, ನಾಟಕ ಪರದೆಗಳನ್ನೂ ರಚಿಸಿದ್ದಾರೆ. (ನಿ ೧೯೧೭) ಇವರ ಶಿಷ್ಯ ಬಣ್ಣದ ರಾಮಣ್ಣರವರು ಕುಂಜಾರುಗಿರಿ ದುರ್ಗಬೆಟ್ಟದ ಮೇಲಿರುವ ದೇವಾಲಯ, ಪುತ್ತಿಗೆ, ಪಾಡಿಗಾರು, ಕೃಷ್ಣಾಪುರ ಮಠಗಳಲ್ಲಿ ರಚಿಸಿದ ಚಿತ್ರಗಳಿವೆ. 'ರಾಮಶರ್ಮ' ಎಂದು ಸಹಿ ಮಾಡುತ್ತಿದ್ದ ರಾಮಣ್ಣರವರು ಶಿಲ್ಪಕಲೆಗಾಗಿ ಮೇಣದಲ್ಲಿ ಮೂಲ ಮಾತೃಕೆ ರಚಿಸಿಕೊಟ್ಟಿದ್ದು ಅದರಿಂದಾದ ಶಿಲ್ಪಗಳು ಉಡುಪಿಯಲ್ಲಿವೆ. ಮಂಗಳೂರಿನ ಲಕ್ಷ್ಮಣ ಕಾಮತ್ ಸೇವಗೂರರು (೧೯೨೧–೬೭) ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಅಭ್ಯಸಿಸಿದ್ದು, ವಾಣಿಜ್ಯ ಕಲೆ ಕೈಗೊಂಡಿದ್ದವರು. ಆದರೂ ಬಂಗಾಳಿ ಶೈಲಿಯಲ್ಲಿ ಕೆಲವು ಚಿತ್ರರಚಿಸಿದ್ದಾರೆ. ಶಿವದರ್ಶನ, ಕೃಷ್ಣ ಗಾಂಧಿ, ಬುದ್ಧ ಇತ್ಯಾದಿ ಚಿತ್ರಗಳನ್ನು ಪ್ರಕೃತಿ ದೃಶ್ಯಗಳೊಂದಿಗೇ ಸಮ್ಮಿಳಿತವಾದಂತೆ ಚಮತ್ಕಾರಿಕವಾಗಿ ಚಿತ್ರಿಸಿದ್ದು ಜನಪ್ರಿಯವಾಗಿವೆ. ಹಳ್ಳಿಯ ವೈಭವ, ಭೂತದ ಕೋಲ ಸಹ ರಚಿಸಿದ್ದಾರೆ. ಭೂತದಕೋಲ ಸದ್ಯ ಮಂಗಳೂರಿನ ಶ್ರೀಮಂತಿ ಬಾಯಿ ಸ್ಮಾರಕ ಸಂಗ್ರಹಾಲಯದಲ್ಲಿದೆ. ವಿಟ್ಲ ಬಾಬುರಾಯರು (೧೮೯೭–೧೯೭೨) ಸ್ವಂತವಾಗಿ ಮಾಡ್ಲಿಂಗ್ ಹಾಗೂ ಚಿತ್ರಕಲೆ ಕಲಿತಿದ್ದು, ಶಾಲೆಗಳಿಗೆ ದೇಹದ ಅಂಗಾಂಗಗಳ ಮಾಡಲ್ ರಚಿಸಿದ್ದಲ್ಲದೆ, ನಾಟಕ ಪರದೆ ರಚನೆ, ನಾಟಕ ರಚನೆಗಳನ್ನು ಮಾಡುತ್ತಿದ್ದರು. ಬೆಳ್ತಂಗಡಿ ತಾಲೂಕಿನ 'ನಡ' ಎಂಬ ಊರಿನಲ್ಲಿ ಪರ್ಮಾಣ್ ಬಸ್ತಿಗೆ ಜೈನ ಪರ ಹಾಗೂ ಪುತ್ತೂರು ಮಹಾಲಿಂಗೇಶ್ವರ ಹಾಗೂ ಹೆರ್ಗೆಯ ದೇವಾಲಯಗಳಿಗೆ ಇನ್ನಿತರ ಚಿತ್ರಗಳನ್ನು ರಚಿಸಿ ನೀಡಿದ್ದಾರೆ.

ಸಾಹಿತಿ ಪೇಜಾವರ ಸದಾಶಿವರಾಯರು ಚಿತ್ರಕಲಾವಿದರಾಗಿದ್ದರೆಂದು ತಿಳಿದುಬರುತ್ತದೆ. ವಿದೇಶದಲ್ಲಿದ್ದಾಗ ತಾವೇ ಸ್ವತಃ ಬಿಡಿಸಿದ ಚಿತ್ರಗಳಿಂದ ಕೂಡಿದ ಅಂಚೆಕಾರ್ಡುಗಳನ್ನು ತಮ್ಮ ಗೆಳೆಯರಿಗೆ ಕಳುಹಿಸಿದ್ದುಂಟು. ಹಿರಿಯ ಕಲಾವಿದರ ಪೈಕಿ ಶ್ರೀ ಕೆ.ವಿ.ನೋಂಡ ಅವರು ಕಲಾಶಿಕ್ಷಕರಾಗಿದ್ದರು. ಕಾಸರಗೋಡಿನ ಗೋಪಾಲ ಆಚಾರ್ಯರು ೧೯೩೦ರಲ್ಲೇ ಮೈಸೂರಿನಲ್ಲಿ ಚಿತ್ರಕಲಾಭ್ಯಾಸ ಮಾಡಿ, ಕಾಸರಗೋಡಿನ ದೇವಾಲಯಗಳಲ್ಲಿ ಹಲವಾರು ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಮುಂಡಾಜೆಯ ಸಾಹಿತಿ ವಿಶ್ವೇಶ್ವರ ವಿ.ಪಡಕೆಯವರೂ ಸಹ ಚಿತ್ರಕಲಾವಿದರಾಗಿದ್ದರು.

ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ಜನಿಸಿದ ಮಂಗಳೂರಿನ ಇನ್ನೊಬ್ಬ ಕಲಾವಿದರೆಂದರೆ ವಿ. ಆರ್. ರಾವ್ ಅವರು. ನ್ಯಾಯಶಾಸ್ತ್ರ ಕಲಿಯಲು ಲಂಡನ್‌ಗೆ ಹೋಗಿದ್ದು, ಚಿತ್ರಕಲೆಯತ್ತ ಆಕರ್ಷಿತರಾಗಿ ಅಲ್ಲಿಯ ರಾಯಲ್ ಕಲಾಶಾಲೆಯಲ್ಲಿ ಚಿತ್ರಕಲಾಭ್ಯಾಸ ಮಾಡಿ ಎಫ್. ಆರ್. ಎಫ್. ಎ. ಕಲಾಪ್ರಶಸ್ತಿ ಪಡೆದರು. ಲಂಡನ್‌ನಲ್ಲಿ ಕೆಲವು ಕಲಾ ಪ್ರದರ್ಶನಗಳನ್ನು ಮಾಡಿದ್ದರು. ಮತ್ತೆ ಮುಂಬಯಿಯಲ್ಲಿ ದಂಡಾವತಿಮಠ

ಅವರು ಆರಂಭಿಸಿದ ನೂತನ ಕಲಾಮಂದಿರದಲ್ಲಿ ಒಂದೆರಡು ವರ್ಷ ಸೇವೆ ಸಲ್ಲಿಸಿ ಮರಳಿ ಲಂಡನ್‌ಗೆ ಹೋಗಿ ಹಲವಾರು ವರ್ಷಗಳು ಕಲಾಕೃತಿ ರಚನೆ ಪ್ರದರ್ಶನ ಇತ್ಯಾದಿ ನಡೆಸಿ ಅಂತಿಮವಾಗಿ ಬೆಂಗಳೂರಿನಲ್ಲಿ ನೆಲೆಸಿದ್ದರು. ರಾವ್ ಅವರು ಅನೇಕ ಚಿತ್ರಗಳನ್ನು ರಚಿಸಿದುಬಹುದಾದರೂ ಇಂದು ನಮಗೆ ನೋಡಸಿಗುವುದು ಚಿತ್ರಕಲಾ ಪರಿಷತ್ತಿನಲ್ಲಿರುವ ಒಂದೆರಡು ಹಾಗೂ ಸರ್ಕಾರಿ ಮ್ಯೂಸಿಯಂನಲ್ಲಿರುವ ನಾಲ್ಕಾರು ಚಿತ್ರಗಳು ಮಾತ್ರ ೧೯೬೩ರ ಜುಲೈನಲ್ಲಿ ರಾವ್ ಅವರ ಏಕವ್ಯಕ್ತಿ ಪ್ರದರ್ಶನ ಬೆಂಗಳೂರಲ್ಲಿ ನಡೆದಂತೆ ತಿಳಿದುಬರುತ್ತದೆ. ಈ ಪ್ರದರ್ಶನದಲ್ಲಿ ಪಿಟೀಲು ನುಡಿಸುತ್ತಿರುವವ, ವೃದ್ಧೆಗಳಲ್ಲದೆ, ಹಳ್ಳಿಕೇರಿ ಹಾಗೂ ನಿಜಲಿಂಗಪ್ಪ ಅವರುಗಳ ಭಾವಚಿತ್ರವೂ ಇದ್ದವು. ರಾವ್ ಅವರ ಕೃತಿಗಳ ಬಗ್ಗೆ ಪಿ. ಆರ್. ತಿಪ್ಪೇಸ್ವಾಮಿಯವರು "ಕೃತಿಗಳು ತೈಲವರ್ಣದವಾದರೂ ಜಲವರ್ಣದಂತೆ ತೋರುತ್ತವೆ. (ಭಾವಚಿತ್ರಗಳಲ್ಲಿ) ಮುಖದಲ್ಲಿ ಎದ್ದು ತೋರುವ ವರ್ಚಸ್ಸು, ಕಣ್ಣುಗಳಲ್ಲಿನ ಕಾಂತಿ, ತುಟಿಗಳಲ್ಲಿ ಸಜೀವತೆ, ಕೆನ್ನೆಗಳಲ್ಲಿ ಮಿರುಗುವ ವೈಖರಿ, ತೊಟ್ಟ ಉಡುಪಿನ ವಾಸ್ತವ ವರ್ಣಗಳು ಮುಂತಾದವುಗಳಲ್ಲಿ ಕಾಣಬರುವ ಕೌಶಲ್ಯ ಸೋಜಿಗ ಪಡುವಂತಹದು" ಎಂದು ಅಭಿಪ್ರಾಯ ಪಡುತ್ತಾರೆ.

ಶಿವರಾಮ ಕಾರಂತರು ೧೯೩೦ರ ವೇಳೆಯಲ್ಲಿ ಪುತ್ತೂರಿನಲ್ಲಿ ನೆಲೆಸಿದ್ದಾಗ, ತ್ರಿವೇಂಡ್ರಂನ ರವಿವರ್ಮ ಚಿತ್ರಶಾಲೆಯಲ್ಲಿ ಅಭ್ಯಸಿಸಿದ ಪುರುಷೋತ್ತಮ ತೋಳ್ಪಾಡಿತ್ತಾಯ (೧೯೦೧–೪೭) ಎಂಬ ಕಲಾವಿದರು ಅಲ್ಲಿ ಕಪ್ಪು ಬಿಳುಪು ಛಾಯಾಚಿತ್ರಗಳಿಗೆ ಬಣ್ಣ ತುಂಬುವ ಕಾರ್ಯನಿರ್ವಹಿಸುತ್ತಿದ್ದು, ಕಾರಂತರು ಅವರಿಂದ ಚಿತ್ರಕಲೆಯ ಅನೇಕ ಮೂಲ ತತ್ವಗಳನ್ನು ತಿಳಿದುಕೊಂಡುದಾಗಿ ಹೇಳಿಕೊಂಡಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದ ಮಂಜಯ್ಯ ಹೆಗ್ಗಡೆಯವರು, ಸ್ವಂತವಾಗಿ ಚಿತ್ರರಚನೆ ಕಲಿತು ಮಹಾವೀರನ ಜೀವನಕ್ಕೆ ಸಂಬಂಧಿಸಿದ ಚಿತ್ರಗಳು ಆತನ ಸಮವಸರಣ ಕಾಲದ ಚಿತ್ರ, ಕರ್ಣಾವಸಾನ, ಮಹಾಕವಿ ಪಂಪ, ಇತ್ಯಾದಿ ರಚಿಸಿದ್ದಾರೆ. ಹೆಗ್ಗಡೆಯವರು ರಚಿಸಿದ ದೃಷ್ಟಿಯುದ್ಧ, ಜಲಯುದ್ಧ, ಬಲಯುದ್ಧ, ಚಕ್ರಯುದ್ಧ ಇತ್ಯಾದಿ ತೈಲವರ್ಣದ ಚಿತ್ರಗಳು ಶ್ರವಣಬೆಳಗೊಳದ ಶ್ರೀಮಠದಲ್ಲಿವೆ.ಹೆಗ್ಗಡೆಯವರು ರಚಿಸಿದ ಕಡೆಗೋಲು ಕೃಷ್ಣ, ಮಹಾವೀರಸ್ವಾಮಿ, ರಾಮಕಲ್ಯಾಣಗಳು ಮುದ್ರಿತವಾಗಿ ಭಕ್ತರಲ್ಲಿ ಪೂಜೆಗೊಳ್ಳುತ್ತಿದೆ. ಅಲ್ಲದೆ ಮುಳಿಯ ತಿಮ್ಮಪ್ಪಯ್ಯರ ಪಂಪನ ಕುರಿತ ಪುಸ್ತಕಕ್ಕೆ ಮಹಾಕವಿ ಪಂಪನ ಚಿತ್ರ ರಚಿಸಿದ್ದಾರೆ. ಇವರ ಶಿಷ್ಯರಲ್ಲಿ ಕೃಷ್ಣಸ್ವಾಮಿನಾಯ್ಡು, ವಿಟ್ಲ ಬಾಲುರಾವ್, ತಿಮ್ಮಪ್ಪಶೆಟ್ಟಿ, ಮಂಜುನಾಥಯ್ಯ ಮುಂತಾದವರನ್ನು ಹೆಸರಿಸಬಹುದು.

ಮಂಗಳೂರಿನಲ್ಲಿ ೧೯೨೦ರಲ್ಲಿ ಜನಿಸಿದ ಬಿ.ಜಿ. ಮಹಮ್ಮದ್ ಅವರು ಇಂದಿಗೂ ಕ್ರಿಯಾಶೀಲವಾಗಿದ್ದಾರೆ. ಉಡುಪಿಯಲ್ಲಿ ಶಾಲಾ ವ್ಯಾಸಂಗ ಮಾಡುತ್ತಿದ್ದಾಗ ಕಲಾವಿದ ಮಂಗೇಶ ಶಿರಾಲಿ ಹಾಗೂ ನಾರಾಯಣ ಪದ್ಮಸಾಲಿ ಅವರಲ್ಲಿ ಅಭ್ಯಸಿಸಿ ಮುಂದೆ ಸ್ವಂತವಾಗಿ ಕಲೆ ಕಲಿತು ಅಲ್ಲಿಯೇ 'ಕರ್ನಾಟಕ ಆರ್ಟ್ ಹೌಸ್' ಕಲಾಶಾಲೆ ತೆರೆದರು. ಮುಂದೆ ೧೯೫೩ರಲ್ಲಿ ಶಾಲೆಯನ್ನು ಮಂಗಳೂರಿಗೆ (ಕದ್ರಿಯಲ್ಲಿ)'ಬಿ.ಜಿ.ಎಂ.ಫೈನ್ ಆರ್ಟ್ಸ್' ಎಂಬ ಹೆಸರಿನಲ್ಲಿ ಸ್ಥಳಾಂತರಿಸಿದರು. ಕೊಳಲು ವಾದನದಲ್ಲೂ ಪರಿಶ್ರಮವಿರುವ ಬೋಳಾರ ಗುಲಾಂ ಮಹಮ್ಮದ್ ಅವರು ರೇಖಾಚಿತ್ರ, ಜಲ, ತೈಲವರ್ಣಗಳಲ್ಲಿ ಕೃತಿಗಳನ್ನು ರಚಿಸಿದ್ದು, ಶ್ರೀಯುತರಿಗೆ ೧೯೮೦ರಲ್ಲಿ ರಾಷ್ಟ್ರ ಸನ್ಮಾನ ಹಾಗೂ ಅದೇ ವರ್ಷ ಲಲಿತ ಕಲಾ ಅಕಾಡೆಮಿ ಪ್ರಶಸ್ತಿಗಳಲ್ಲದೆ ಜಿ.ಎಸ್.ಶೆಣೈ ಪ್ರಶಸ್ತಿ ದೊರೆತಿವೆ.

ಲಿಂಗಪ್ಪ ಹೂವಪ್ಪ ಅಂಚನ್ (ಎಲ್. ಪಿ. ಅಂಚನ್– ೧೯೨೭–೯೭) ಅವರು ಮಂಗಳೂರಿನಲ್ಲಿ ಜನಿಸಿದ್ದು, ಮುಂಬಯಿಯ ಜೆ. ಜೆ. ಕಲಾಶಾಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು ಮರಳಿ ಬೆಂಗಳೂರಿಗೆ ಬಂದು ಕೆಲಕಾಲ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿಯೂ ನಂತರ ೧೯೬೪ ರಿಂದ ೮೫ರವರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ಪ್ರದರ್ಶನಾಲಯದಲ್ಲಿ ಕಲಾವಿದರಾಗಿಯೂ ಸೇವೆ ಸಲ್ಲಿಸಿದರು. ಬೆಂಗಳೂರಿನ ಅಲೆಯನ್ಸ್ ಫ್ರಾಂಕೆಯಲ್ಲಿ ೧೯೭೭ರಲ್ಲೂ, ಮುಂಬಯಿಯ ಜಹಾಂಗೀರ್ ಕಲಾ ಗ್ಯಾಲರಿಯಲ್ಲಿ ೧೯೮೭ರಲ್ಲಿಯೂ ಏಕವ್ಯಕ್ತಿ ಪ್ರದರ್ಶನ ನೀಡಿರುವ ಅಂಚನ್ ಅವರು ರಾಜ್ಯ ಲಲಿತ ಕಲಾ ಅಕಾಡೆಮಿ, ಮೈಸೂರು ದಸರಾ ಕಲಾಪ್ರದರ್ಶನ, ಚೆನ್ನೈನ ಭಿತ್ತಿಚಿತ್ರ ಕಲಾ ಶಿಬಿರ, ಗುಲ್ಬರ್ಗದ ಶಿಲ್ಪ ಕಲಾಶಿಬಿರ, 'ಸಾರ್ಕ' ಸಂದರ್ಭದ ಪ್ರದರ್ಶನ, ಜವಹರಲಾಲರ ಶತಾಬ್ದಿ ಸಂದರ್ಭದ ಶಿಬಿರ ಪ್ರದರ್ಶನ ಇತ್ಯಾದಿಗಳಲ್ಲಿ ಪಾಲುಗೊಂಡಿದ್ದರು. ಕಾಗದ ಹಾಗೂ ಕಾಗದದಂತಹ ತೆಳುವಾದ ಲೋಹದ ಹಾಳೆಗಳನ್ನು ವಿವಿಧ ರೀತಿ ಕತ್ತರಿಸಿ ಮುಖವಾಡ ಹಾಗೂ ಶಿಲ್ಪಗಳನ್ನು ರಚಿಸುವ ಕಲಾ ಪ್ರಕಾರವೊಂದನ್ನು ರೂಢಿಸಿಕೊಂಡಿದ್ದು, ಆ ಶೈಲಿಯಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಅಂತಹ ಒಂದು ಕೃತಿಗೆ ಅಂಚನ್ ಅವರಿಗೆ ೧೯೮೪ರಲ್ಲಿ ರಾಷ್ಟ್ರೀಯ ಮಟ್ಟದ ಪುರಸ್ಕಾರ ದೊರೆಯಿತು. ಅದಲ್ಲದೆ ರಾಜ್ಯ ಅಕಾಡೆಮಿಯಿಂದ (೧೯೭೬–೮೧) ಮೈಸೂರು ದಸರಾದಿಂದ (೧೯೮೧) ಹಾಗೂ ಬೆಂಗಳೂರಿನಲ್ಲಿ ನಡೆದ ೧೦ನೇ ಹಾಗೂ ೧೧ನೇ ಅಖಿಲ ಭಾರತ ಮಟ್ಟದ ಪ್ರದರ್ಶನಗಳಲ್ಲಿ ಬಹುಮಾನಿತರಾಗಿದ್ದಾರೆ. ಅಂಚನ್ ಅವರಿಗೆ ೧೯೮೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಹಾಗೂ ೧೯೯೩ ರಾಜ್ಯ ಅಕಾಡೆಮಿ ಗೌರವ ಪ್ರಶಸ್ತಿ ದೊರೆತಿತ್ತು. ದೆಹಲಿಯ ಮಾಡರನ್ ಆರ್ಟ್ ಗ್ಯಾಲರಿಯೂ ಸೇರಿದಂತೆ ದೇಶವಿದೇಶಗಳಲ್ಲಿ ಶ್ರೀಯುತರ ಕೃತಿಗಳು ಸಂಗ್ರಹಿತವಾಗಿವೆ.

ಜಿಲ್ಲೆಯ ಕಟಪಾಡಿಯಲ್ಲಿ ೧೯೩೦ರಲ್ಲಿ ಜನಿಸಿದ ಎಲ್. ಜಿ. ಕಾಮತ್ ಅವರು ಮುಂಬಯಿಯ ನೂತನ ಕಲಾಮಂದಿರದಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು ನಂತರ ಕಟಪಾಡಿಯ ಎಸ್. ಎಸ್. ವಿ. ಜ್ಯೂನಿಯರ್ ಕಾಲೇಜಿನಲ್ಲಿ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅಲ್ಲದೆ ಕಟಪಾಡಿಯ ಚಿತ್ರಕಲಾ ಶಾಲೆಯ ನಿರ್ವಾಹಕರೂ ಆಗಿದ್ದರು. ಲಲಿತ ಕಲಾ ಅಕಾಡೆಮಿಯ ಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಕೃಷ್ಣರಾವ್. ಟಿ. (ಟಿ. ಕೆ. ರಾವ್ ಜ. ೧೯೩೩) ಜಿಲ್ಲೆಯ 'ತಾಡಾ' ದವರಾಗಿದ್ದು, ಚೆನ್ನೈನ ಕಲಾಶಾಲೆಯಿಂದ ಕಮರ್ಶಿಯಲ್ ಆರ್ಟ್ಸ್‌ನಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದು, ಹಲವಾರು ಪತ್ರಿಕೆಗಳಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಪತ್ನಿ ಸೀತಾರಾವ್ ಸಹ ಕಲಾವಿದರಾಗಿದ್ದು, ಅವರೊಂದಿಗೆ ಹುಬ್ಬಳ್ಳಿಯಲ್ಲಿ ಹಾಗೂ ಏಕವ್ಯಕ್ತಿಯಾಗಿ ಮುಂಬಯಿಯ ಜಹಾಂಗೀರ್ ಆರ್ಟ್ ಗ್ಯಾಲರಿ, ಕೊಲ್ಕತಾದ ಅಕಾಡಮಿ ಆಫ್ ಫೈನ್ ಆರ್ಟ್‌ಗಳಲ್ಲಿ ಕಲಾ ಪ್ರದರ್ಶನ ನೀಡಿದ್ದಾರೆ. ಅದಕ್ಕಾಗಿ ಕೊಲ್ಕತಾದಿಂದ ೧೯೫೭ ಹಾಗೂ ೬೪ರಲ್ಲಿ ಸ್ವರ್ಣ ಪದಕಗಳು, ರಾಜ್ಯ ಲಲಿತಕಲಾ ಅಕಾಡೆಮಿಯಿಂದ ವಾರ್ಷಿಕ ಪ್ರದರ್ಶನ ಪ್ರಶಸ್ತಿ ಇತ್ಯಾದಿಗಳು ಲಭಿಸಿವೆ. ರಾಜ್ಯ ಲಲಿತಕಲಾ ಅಕಾಡೆಮಿಗೆ ೧೯೭೭ರವರೆಗೆ ಸದಸ್ಯರಾಗಿದ್ದರು. ರಾಜ್ಯ ಗ್ಯಾಸೆಟಿಯರ್ ಇಲಾಖೆಯ 'ಕರ್ನಾಟಕ ಕೈಪಿಡಿ'ಯೂ ಸೇರಿದಂತೆ ಅನೇಕ ಪುಸ್ತಕಗಳಿಗೆ ಮುಖಪುಟ ರಚಿಸಿದ್ದಾರೆ.

'ಶಿಂಗಣ್ಣ' ಎಂಬ ಹೆಸರಿನಿಂದಲೇ ಗುರುತಿಸಲಾಗುವ ಕನ್ನಪಾಡಿ ರಾಮಕೃಷ್ಣ (೧೯೨೫–೨೦೦೦) ಅವರು ಸ್ವಂತ ಪರಿಶ್ರಮದಿಂದ ಚಿತ್ರಕಲೆ ಕಲಿತು ವ್ಯಂಗ್ಯಚಿತ್ರ ರಚನೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿಸಿ ಮೊದಲಿಗೆ ಇಲಸ್ಟ್ರೇಟೆಡ್ ವೀಕ್ಲಿ, ಅಮೃತ ಬಜಾರ್ ಪತ್ರಿಕೆಗಳಿಗೆ ಬರೆಯುತ್ತಿದ್ದು ನಂತರ ಚೆನ್ನೈಯ 'ಕಲ್ಕಿ' ಪತ್ರಿಕೆಗೆ ಸೇರಿದರು. ವಾರಪತ್ರಿಕೆಯಾದ ಅದರಲ್ಲಿ ಹತ್ತು ವರ್ಷಗಳಲ್ಲಿ ಸಾವಿರಾರು ಚಿತ್ರ ರಚಿಸಿ ಮೆಚ್ಚುಗೆ ಪಡೆದಿದ್ದುದಲ್ಲದೆ, ಕೆಲವೊಂದು ಅಹಿತಕರ ಘಟನೆಗಳನ್ನು (ವ್ಯಂಗ್ಯ ಚಿತ್ರಕ್ಕಾಗಿ) ಅನುಭವಿಸಿದರು. ಮರಳಿ ಮಂಗಳೂರಿಗೆ ಬಂದು 'ನವಭಾರತ' ಪತ್ರಿಕೆಯಲ್ಲಿ 'ಸಿಂಗಣ್ಣ' ಎಂಬ ಶೀರ್ಷಿಕೆಯಲ್ಲಿ ವ್ಯಂಗ್ಯಚಿತ್ರ ರಚಿಸಿ ಮನೆಮಾತಾದರು. ಪ್ರಜಾವಾಣಿ ಬಳಗದ ಪತ್ರಿಕೆಗಳೂ ಸೇರಿದಂತೆ ಮಲೆಯಾಳಂ, ಹಿಂದಿ, ಇಂಗ್ಲೀಷ್ ಭಾಷಾ ಪತ್ರಿಕೆಗಳೂ ಇವರ ಕೃತಿಗಳನ್ನು ಪ್ರಕಟಿಸಿವೆ. ರಾಮಕೃಷ್ಣರನ್ನು ವ್ಯಂಗ್ಯಚಿತ್ರ ಕಲಾವಿದರ ಸಂಘ ಹಾಗೂ ಪತ್ರಿಕಾ (ಮಾಧ್ಯಮ) ಅಕಾಡಮಿಗಳು ಸನ್ಮಾನಿಸಿದ್ದುವು. ರಾಮಕೃಷ್ಣರು ಬರೆದ ತಮ್ಮ ಆತ್ಮಚರಿತ್ರೆಯೊಂದಿಗೆ ಅವರ ಆಯ್ದ ನೂರಾರು ವ್ಯಂಗ್ಯಚಿತ್ರಗಳೊಂದಿಗೆ ಅವರ ನಿಧನಾನಂತರ ಅವರ ಸೋದರಿ ಮನೋರಮ ಭಟ್ ಹಾಗೂ ಭಾವ ಮುಳಿಯ ಮಹಾಬಲ ಭಟ್ ಅವರು ಸಂಪಾದಿಸಿ ಪ್ರಕಟಿಸಿದರು.

ಕಾಸರಗೋಡಿನಲ್ಲಿ ಜನಿಸಿದ ಕಾ. ವಾ. ಆಚಾರ್ಯರವರು (ಜ.೧೯೩೭) ಚಿತ್ರಕಲಾ ಉಪಾಧ್ಯಾಯರಾಗಿದ್ದು, ನಿವೃತ್ತಿ ನಂತರ ವಿಶ್ವಸ್ಥ ಸಂಸ್ಥೆ ಆರಂಭಿಸಿ ಮಕ್ಕಳಿಗೆ ಚಿತ್ರ, ಶಿಲ್ಪ ಶಿಬಿರ, ಚಿತ್ರಕಲಾ ಶಿಕ್ಷಕರಿಗೆ 'ಕಲಾನಿಧಿ' ಪ್ರಶಸ್ತಿ ಹಾಗೂ ಕಲಾ ಪುಸ್ತಕಗಳ ಪ್ರಕಟಣೆ ಕಾರ್ಯ ಕೈಗೊಂಡಿದ್ದಾರೆ. ಮೂಡಬಿದಿರೆಯಲ್ಲಿದ್ದು, ಈಚೆಗೆ ಮಂಗಳೂರಿನಲ್ಲಿ ನೆಲೆಸಿರುವ ಕಾ.ವಾ.ಆಚಾರ್ ಅವರು ಚಿತ್ರ ಶಿಲ್ಪ ಕುರಿತು ಅನೇಕ ಲೇಖನ ಬರೆದಿದ್ದಾರೆ. ಶಿಲ್ಪಕಲಾ ಅಕಾಡೆಮಿಗೆ ಶಿಲ್ಪಿ 'ಕೆ. ಶಾಮಾರಾಯಚಾರ್ಯ' ರನ್ನು ಕುರಿತು ಕಿರು ಪುಸ್ತಕ ರಚಿಸಿ ನೀಡಿದ್ದಾರೆ. ಅಲ್ಲದೆ ನಾಟಕ, ಸಂಗೀತ, ಕ್ಷೇತ್ರಗಳಲ್ಲೂ ಪರಿಶ್ರಮ ಪಡೆದಿದ್ದಾರೆ. ಶಿಲ್ಪಿ, ವಾಸ್ತು ಶಿಲ್ಪಿಯಾಗಿದ್ದ ಅಪ್ಪಣ್ಣಾಚಾರ್ಯರು ಇವರ ತಂದೆಯವರು.

ಚಿತ್ರಕಲಾ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿದ್ದ ಡಿ.ಕೆ. ಚೌಟ ಅವರು ಬೆಂಗಳೂರಲ್ಲಿ 'ಚಿತ್ರ ಸಂತೆ' ಯಂತಹ ಅಪೂರ್ವ ಕಾರ್ಯಕ್ರಮ ಆರಂಭಿಸಿದ್ದಲ್ಲದೆ ಕಲಾ ಪರವಾದ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದಾರೆ. ಅವರಿಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸಿಗಳು ಬಂದಿವೆ.

ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದ ಕೆಲವೇ ಮಹಿಳೆಯರಲ್ಲಿ ಮಂಗಳೂರಿನ ಗಿರಿಜಾ ಯಾದವ್ (೧೯೩೪–೨೦೦೫)ಒಬ್ಬರು. ನಂತರ ಮಂಗಳೂರಿನಲ್ಲಿಯೇ ಚಿತ್ರಕಲಾ ಶಿಕ್ಷಕಿಯಾಗಿ ಮೂರು ದಶಕಗಳ ಸೇವೆ ಸಲ್ಲಿಸಿ ನಿವೃತ್ತರಾದ ಮೇಲೆ ಅಲ್ಲಿಯ ಕಾಮಧೇನು ಕಲಾಶಾಲೆಯ ನಿರ್ದೇಶಕಿಯಾಗಿ ಅನೇಕ ಕಲಾವಿದರನ್ನು ರೂಪಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ 'ಆರ್ಟಿಸ್ಟ್ ಕಂಬೈನ್ಸ್' ಸದಸ್ಯೆಯಾಗಿ ಕೃತಿಗಳನ್ನು ಪ್ರದರ್ಶಿಸಿದ್ದರು. ಮೈಸೂರಿನಲ್ಲಿ ನಡೆದ ವಿಶ್ವಕನ್ನಡ ಕಲಾಶಿಬಿರ, ಮಣಿಪಾಲದ ಹಸ್ತಶಿಲ್ಪ ಕಾರ್ಯಾಗಾರ ಸೇರಿದಂತೆ ಹಲವಾರು ಶಿಬಿರಗಳಲ್ಲಿ ಪಾಲುಗೊಂಡಿದ್ದರು. ಬೆಂಗಳೂರಿನ ಸರ್ಕಾರೀ ವಸ್ತುಸಂಗ್ರಹಾಲಯ ಹಾಗೂ ಇನ್ನಿತರ ಕಡೆ ಇವರ ಕೃತಿಗಳು ಸಂಗ್ರಹಿತವಾಗಿವೆ. ಗಿರಿಜಾ ಯಾದವ್ ಅವರಿಗೆ ೨೦೦೧ರಲ್ಲಿ ರಾಜ್ಯ ಅಕಾಡೆಮಿ ಗೌರವ ಪ್ರಶಸ್ತಿ ಲಭಿಸಿತ್ತು.

ಮಂಗಳೂರಲ್ಲಿ ೧೯೩೬ರಲ್ಲಿ ಜನಿಸಿದ ಕೆ. ಎಸ್. ರಾವ್ ಅವರು ಮುಂಬಯಿಯ ಜೆ. ಜೆ. ಕಲಾಶಾಲೆಯಲ್ಲಿ ಅಭ್ಯಸಿಸಿ, ವೀವರ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕಲಾವಿದರಾಗಿ ನೇಮಕವಾಗಿ ಬೆಂಗಳೂರು ಸೇರಿದಂತೆ ರಾಷ್ಟ್ರದ ಹಲವಾರು ಕಡೆ ಕಾರ್ಯನಿರ್ವಹಿಸಿ ಚೆನ್ನೈನಲ್ಲಿ

ನೆಲೆನಿಂತರು. ಚೆನ್ನೈ, ದೆಹಲಿ, ಮುಂಬಯಿ, ಬೆಂಗಳೂರುಗಳಲ್ಲಿ ಹಲವಾರು ಏಕವ್ಯಕ್ತಿ ಪ್ರದರ್ಶನ ನೀಡಿದರು. ಅಮೆರಿಕೆಯ ಟೆಕ್ಸಾಸ್ ಸೇರಿದಂತೆ ದೇಶ ವಿದೇಶಗಳ ಪ್ರಮುಖ ಪ್ರದರ್ಶನಗಳಲ್ಲಿ ಪಾಲುಗೊಂಡಿದ್ದರು. ಕೇಂದ್ರ ಲಲಿತಾ ಕಲಾ ಅಕಾಡೆಮಿ ಸೇರಿದಂತೆ, ಚೆನ್ನೈ ಹಾಗೂ ಕರ್ನಾಟಕ ಲಲಿತಾ ಕಲಾ ಅಕಾಡೆಮಿಗಳಿಂದ ಪ್ರಶಸ್ತಿ, ಮುಂಬಯಿ, ಹೈದರಾಬಾದ್, ಕೋಲ್ಕತ್ತಾಗಳಲ್ಲಿರುವ ಪ್ರತಿಷ್ಠಿತ ಫೈನ್ ಆರ್ಟ್ಸ್ ಸೊಸೈಟಿಗಳಿಂದ ಪ್ರಶಸ್ತಿಗಳು ಬಂದಿವೆ. ೧೯೭೫–೮೦ರ ಅವಧಿಯಲ್ಲಿ ಕೊಲಂಬೋದಲ್ಲಿ ಕಲಾ ವಿನ್ಯಾಸ ತಜ್ಞರಾಗಿ ಕೇಂದ್ರ ಸರ್ಕಾರದಿಂದ ನಿಯೋಜಿತರಾಗಿದ್ದರು. ಕೆ. ವಿಠಲ ಭಂಡಾರಿಯವರು ೧೯೩೮ರಲ್ಲಿ ಮಂಗಳೂರಲ್ಲಿ ಜನಿಸಿ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯಲ್ಲಿ ಡಿಪ್ಲೊಮಾ ಪಡೆದು ಪ್ರಾದೇಶಿಕ ವಿನ್ಯಾಸ ಕೇಂದ್ರದಲ್ಲಿ ಕಲಾವಿದರಾಗಿದ್ದವರು. ಮೈಸೂರು ದಸರಾ ಹಾಗೂ ಅಖಿಲ ಭಾರತ ಪ್ರದರ್ಶನಗಳಲ್ಲಿ ಕೃತಿಗಳನ್ನು ಪ್ರದರ್ಶಿಸಿ ಬಹುಮಾನ ಗಳಿಸಿದ್ದಾರೆ. ಸುಮಾರು ಹತ್ತು ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಚಿತ್ರಕಲಾ ಪರಿಷತ್ತಿನ ಸದಸ್ಯರಾಗಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದ್ದಾರೆ.

ಜಿಲ್ಲೆಯ ಇನ್ನೊಬ್ಬ ಗಣನೀಯ ಕಲಾವಿದರೆಂದರೆ ಪಿ. ಪುರುಷೋತ್ತಮ ಕಾರಂತರು ೧೯೪೦ರಲ್ಲಿ ಪಣಂಬೂರು ಪ್ರದೇಶದಲ್ಲಿ ಜನಿಸಿ, ಶಾಲೆಯ ಕಲಾ ಶಿಕ್ಷಕರಾಗಿದ್ದ ಬಿ. ನರಸಿಂಹರಾವ್ ಅವರಲ್ಲಿ ಚಿತ್ರಕಲೆಯ ಪ್ರಥಮ ಹಂತ ಕಲಿತು ಎಸ್. ಎಸ್. ಎಲ್. ಸಿ. ಯಲ್ಲಿ ಐಚ್ಛಿಕವಾಗಿ ಚಿತ್ರಕಲೆ ಅಭ್ಯಸಿಸಿ, ಬೆಳ್ತಂಗಡಿಯ ಬೋರ್ಡ್ ಹೈಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. ಕೆಲವೇ ವರ್ಷಗಳಲ್ಲಿ ಹುದ್ದೆ ತ್ಯಜಿಸಿ ಮುಂಬಯಿಯ ಜೆ. ಜೆ. ಶಾಲೆಯಲ್ಲಿ ಹೆಚ್ಚಿನ ಅಭ್ಯಾಸ ಮಾಡಿ ಮಂಗಳೂರಿಗೆ ಬಂದು ಕೆಲವರ್ಷ ಕೇಂದ್ರಿಯ ಶಾಲೆಯಲ್ಲಿ ಕಲಾವಿದರಾಗಿದ್ದು, ನಂತರ ಮಹಾಲಸ ಕಲಾಶಾಲೆಯ ಪ್ರಾಂಶುಪಾಲರಾಗಿ ಅನೇಕರನ್ನು ಕಲಾವಿದರಾಗಿ ರೂಪುಗೊಳಿಸಿದ್ದಲ್ಲದೆ ಕಲಾ ವಾತಾವರಣವೊಂದನ್ನು ನಿರ್ಮಿಸಿದರು. ತೀರಾ ಮೊದಲಿನಿಂದಲೂ ಅಧ್ಯಾತ್ಮ ಜೀವನದಲ್ಲಿ ತೊಡಗಿಸಿಕೊಂಡಿರುವ ಪುರುಷೋತ್ತಮ ಕಾರಂತರು, ಚೆನ್ನೈ, ಹೈದ್ರಾಬಾದ್, ಚಂಗಲ್ಪೇಟೆ ಹಾಗೂ ಮಂಗಳೂರಿನ ರಾಮಕೃಷ್ಣಾಶ್ರಮಗಳಿಗೆ ಹಾಗೂ ಹೈದ್ರಾಬಾದ್‌ನ ಗೀತಾ ದರ್ಶನಂ ಅವರಿಗೆ ಸೇರಿದಂತೆ ಒಟ್ಟಾರೆಯಾಗಿ ಮುನ್ನೂರಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿ ನೀಡಿದ್ದಾರೆ. ಅಲ್ಲದೆ ಆಧ್ಯಾತ್ಮ ಕುರಿತು ಕಿರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಧರ್ಮಸ್ಥಳದ ನವೀಕೃತ ಬಸದಿಗೆ ಕಲಾಕೆತ್ತನೆಯ ಮೂಲ ನಕ್ಷೆ ರಚಿಸಿದ್ದಾರೆ. ಶ್ರೀಯುತರ ಕಲಾಸೇವೆಗಾಗಿ ಮುಂಬಯಿಯ ಜೆ. ಜೆ. ಶಾಲೆಯಿಂದ ಸುವರ್ಣ ಪದಕ, ಮುಂಬಯಿ ಆರ್ಟ್ ಸೊಸೈಟಿಯವರ ಪ್ರಶಸ್ತಿ, ರಾಜ್ಯ ಲಲಿತಾ ಕಲಾ ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿ ದೊರೆತಿವೆ. ರಾಜ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರಲ್ಲದೆ ಹಲವಾರು ಕಲಾ ಶಿಬಿರ ನಿರ್ದೇಶಿಸಿದ್ದಾರೆ.

ನೆರೆಯ ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾಗಲೇ ೧೯೪೨ರಲ್ಲಿ ಜನಿಸಿದ ಪಿ. ಎಸ್. ಪುಣಿಂಚತ್ತಾಯ ಅವರು ಮೈಸೂರು ಹಾಗೂ ಮುಂಬಯಿಯ ನೂತನ ಕಲಾಮಂದಿರದ ಮೂಲಕ ಜೆ. ಜೆ. ಕಲಾಶಾಲೆಯಲ್ಲಿ ಅಭ್ಯಸಿಸಿದ್ದಲ್ಲದೆ ಆರ್ಟ್ ಸೊಸೈಟಿ ಆಫ್ ಇಂಡಿಯಾದ ವಿದ್ಯಾರ್ಥಿ ವೇತನ ಪಡೆದು ಹಲವಾರು ಕಡೆ ಪ್ರವಾಸ ಮಾಡಿ ಚಿತ್ರಕಲಾಭ್ಯಾಸ ಮಾಡಿದವರು. ಜಲವರ್ಣದಲ್ಲಿ ಸಿದ್ಧಹಸ್ತರಾಗಿರುವ ಶ್ರೀಯುತರು ಸಾವಿರಾರು ಪ್ರಕೃತಿ ದೃಶ್ಯಗಳನ್ನು ರಚಿಸಿರುವರಲ್ಲದೆ ಕರಾವಳಿಯಾದ್ಯಂತ ಜಲವರ್ಣ ಮಾಧ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ ಸುಮಾರು ಐವತ್ತು ಸ್ಥಳಗಳಲ್ಲಿ ಕಲಾ ಶಿಬಿರ, ಪ್ರಾತ್ಯಕ್ಷಿಕೆ ನೆಡೆಸಿ ಪ್ರಚುರಪಡಿಸಿದ್ದಾರೆ. ಅಲ್ಲದೆ ಪ್ರಕೃತಿಯ ಮಡಿಲಲ್ಲಿರುವ ತಮ್ಮ ತೋಟದ ಮನೆಯಲ್ಲಿ 'ಕಾಂಚನ ಗಂಗಾ ಆರ್ಟಿಸ್ಟ್ ಹೆವೆನ್' ಎಂಬ ಕಲಾ ಸಂಸ್ಥೆ ಸ್ಥಾಪಿಸಿ ಆಸಕ್ತರಿಗೆ ತರಬೇತಿ ನೀಡುವುದಲ್ಲದೆ ಕಲಾಶಿಬಿರ, ಸ್ಪರ್ಧೆ ಇತ್ಯಾದಿ ಏರ್ಪಡಿಸುತ್ತಿದ್ದಾರೆ. ಮೈಸೂರು ದಸರಾ, ಕೊಲ್ಲಾಪುರ, ಪೂನಾಗಳ ಪ್ರದರ್ಶನಗಳಲ್ಲಿ ಬಹುಮಾನಿತರಾಗಿದ್ದಾರೆ. ಮುಂಬಯಿಯ ಜಹಾಂಗೀರ್ ಆರ್ಟ್ ಗ್ಯಾಲರಿ ಸೇರಿದಂತೆ ಅನೇಕ ಕಡೆಗಳಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಲಲಿತ ಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದ ಪುಣಿಂಚತ್ತಾಯ ಅವರಿಗೆ ೧೯೯೦ರಲ್ಲಿ ಅಕಾಡೆಮಿಯ ರಾಜ್ಯ ಪ್ರಶಸ್ತಿ ದೊರೆತಿದೆ. ಬಂಟ್ವಾಳದಲ್ಲಿ ೧೯೪೨ರಲ್ಲಿ ಜನಿಸಿದ ಗಣೇಶ್ ಸೋಮಯಾಜಿ ಅವರು ಮಂಗಳೂರಿನ ಬಿ. ಜಿ. ಎಂ. ಕಲಾಶಾಲೆಯಲ್ಲಿ ಪ್ರಥಮ ರ‍್ಯಾಂಕ್‌ನಲ್ಲಿ ಕಲಾ ಡಿಪ್ಲೊಮಾ ಪದವಿ ಪಡೆದು ಅಲ್ಲಿಯ ರೋಜಾರಿಯಾ ಪ್ರೌಢಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯ ಹೊರರಾಜ್ಯಗಳಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನ ಮಾಡಿದ್ದು, ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ಸೇರಿದಂತೆ ಹಲವು ಕಲಾ ಶಿಬಿರಗಳಲ್ಲಿ ಪಾಲುಗೊಂಡಿದ್ದಲ್ಲದೆ ಸ್ಥಳೀಯವಾಗಿ ಹಲವಾರು ಶಿಬಿರಗಳನ್ನು ಆಯೋಜಿಸಿದ್ದಾರೆ. ಮೈಸೂರು ದಸರಾ ಪ್ರಶಸ್ತಿ, ಮಂಗಳ ಪೆಕ್ಸ್ ಬಹುಮಾನ ಹಾಗೂ 'ಉತ್ತಮ ಚಿತ್ರಕಲಾವಿದ', 'ಜನ ಮೆಚ್ಚಿದ ಶಿಕ್ಷಕ', 'ಕಲಾನಿಧಿ' ಇತ್ಯಾದಿ ಪ್ರಶಸ್ತಿ, ಬಿರುದುಗಳು ಬಂದಿವೆ. ಆರ್ಟಿಸ್ಟ್ ಕಂಬೈನ್‌ನ ಸ್ಥಾಪಕ ಕಾರ್ಯದರ್ಶಿ 'ಸ್ಯಾಕ್, ಕಲಾತಂಡದ ಸದಸ್ಯ, ವಿ. ಪಿ. ಚಿತ್ರಕಲಾ ಸೊಸೈಟಿಯ ಸದಸ್ಯ ಪ್ರಸಾದ್ ಗ್ಯಾಲರಿ, ಪ್ರಸಾದ್ ಕಲಾಶಾಲೆಗಳ ಸ್ಥಾಪಕ ಸದಸ್ಯರಾಗಿ ಸಕ್ರಿಯವಾಗಿ ಕೃತಿ ರಚಿಸಿ ಪ್ರದರ್ಶಿಸುತ್ತಿದ್ದಾರೆ. ಕಲೆ ಕುರಿತು ಲೇಖನಗಳು ಹಾಗೂ ಪುರುಷೋತ್ತಮ ಕಾರಂತರನ್ನು ಕುರಿತು ಪುಸ್ತಕ ರಚಿಸಿದ್ದಾರೆ.

ಮಂಗಳೂರು ಬಳಿಯ ಗ್ರಾಮವೊಂದರಲ್ಲಿ ೧೯೪೭ರಲ್ಲಿ ಜನಿಸಿದ ರಾಮದಾಸ ಅಡ್ಯಂತಾಯ ಅವರು ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಡಿಪ್ಲೊಮಾ ಹಾಗೂ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಲ್ಲಿ ಕಲೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿ ಪಡೆದು ಹಲವಾರು ವೃತ್ತಿಯಲ್ಲಿದ್ದು, ನಂತರ ಮೈಸೂರಿನ 'ಕಾವಾ'ದಲ್ಲಿ ಉಪನ್ಯಾಸಕರಾಗಿ ಹಾಗೂ ಡೀನ್ ಆಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಏಕವ್ಯಕ್ತಿ ಪ್ರದರ್ಶನ ಕೈಗೊಂಡಿದ್ದು, ಸಂಯೋಜಿತ ಕಲಾ ತಂಡದ ಪ್ರಾರಂಭಿಕ ಸದಸ್ಯರಾಗಿ ಅದರ ಎಲ್ಲ ಕಲಾಪ್ರದರ್ಶನಗಳೂ ಸೇರಿದಂತೆ, ರಾಜ್ಯ ಮತ್ತು ಕೇಂದ್ರ ಲಲಿತಾ ಕಲಾ ಅಕಾಡೆಮಿ, ಎರಡನೇ ಏಷ್ಯನ್ ಬೈನಾಲೆ, ದಸರಾ ಪ್ರದರ್ಶನ, ಅಖಿಲ ಭಾರತ ಗ್ರಾಫಿಕ್ ಪ್ರದರ್ಶನ, ಜಹಾಂಗೀರ್ ಕಲಾ ಗ್ಯಾಲರಿಯಲ್ಲಿ ಪ್ರದರ್ಶನ ಇತ್ಯಾದಿ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ಕಲಾ ಶಿಬಿರ, ಚೆನ್ನೈನ ಗ್ರಾಫಿಕ್ ಅಲ್ಲದೆ ಚಿತ್ರಕಲಾ ಶಿಬಿರ ಲಲಿತ ಕಲಾ ಅಕಾಡೆಮಿಯ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕಲಾಮೇಳ, ಕಲಾಯಾತ್ರೆ, ಚಿತ್ರಯಾತ್ರೆಗಳಲ್ಲಿ ಪಾಲುಗೊಂಡಿದ್ದಾರೆ. ರಾಮದಾಸ್‌ರವರ ಇತ್ತೀಚಿನ ಚಿತ್ರಗಳು ಯಾವುದೇ ವ್ಯಾಖ್ಯಾನಕ್ಕೆ ಒಳಗಾಗದಂತೆ ಖಾಸಗೀ ಅನುಭವದ ಅಭಿವ್ಯಕ್ತಿಯಂತಿದ್ದು, ದೃಶ್ಯ ಮಾಧ್ಯಮವಾಗಿಯೇ ಉಳಿಯುವಂತಹದು. ರಾಜ್ಯ ಲಲಿತಕಲಾ ಅಕಾಡೆಮಿಗೆ ಒಂದು ಅವಧಿಗೆ ಸದಸ್ಯರಾಗಿದ್ದು, ಅಕಾಡೆಮಿ ೨೦೦೦ದಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದ್ದು, ೨೦೦೧ರಲ್ಲಿ ಶ್ರೀಯುತರು ಕೇಂದ್ರ ಲಲಿತ ಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ಪಡೆದಿದ್ದಾರೆ. ಪುತ್ತೂರಿನಲ್ಲಿ ಜನಿಸಿದ ಚಂದ್ರನಾಥ ಆಚಾರ್ಯರು ಬೆಂಗಳೂರಿನ ಕೆನ್ ಕಲಾಶಾಲೆಯಿಂದ ಡಿಪ್ಲೊಮಾ ಹಾಗೂ ಶಾಂತಿನಿಕೇತನದ ವಿಶ್ವ ಭಾರತಿ ವಿಶ್ವವಿದ್ಯಾಲಯದಿಂದ ಗ್ರಾಫಿಕ್ ಕಲೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪದವಿ ಪಡೆದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಕಲಾವಿದರಾಗಿ (ಅದರ ಸೋದರ ಪತ್ರಿಕೆಗಳೂ ಸೇರಿದಂತೆ) ಸೇವೆ ಸಲ್ಲಿಸಿದ್ದಾರೆ. ದೆಹಲಿಯ ಆರ್ಟ್ ಹೆರಿಟೇಜ್, ಚೆನ್ನೈನ ಸರಳ ಆರ್ಟ್ ಸೆಂಟರ್, ಬೆಂಗಳೂರಿನ ಸಂಯೋಜಿತ, ಅಭಿವ್ಯಕ್ತಿ ಆರ್ಟಿಸ್ಟ್ ಗ್ರೂಪ್, ಕಲಾಮೇಳ, ಚಿತ್ರಯಾತ್ರೆಗಳಲ್ಲಿ ಹಾಗೂ ಸಹಕಲಾವಿದರೊಂದಿಗೆ ಮುಂಬಯಿಯ ಜಹಾಂಗೀರ್ ಕಲಾ ಗ್ಯಾಲರಿಯಲ್ಲಿ ಹಲವಾರು ಬಾರಿ ಗುಂಪು ಪ್ರದರ್ಶನ ನೀಡಿದ್ದಾರೆ. ಕೇಂದ್ರ ಲಲಿತಾ ಕಲಾ ಅಕಾಡಮಿ ದೆಹಲಿ, ಅಮೆರಿಕೆಯಲ್ಲಿ ಭಾರತೀಯ ಹಬ್ಬ ಪ್ರಯುಕ್ತ ಕಲಾ ಪ್ರದರ್ಶನ, ಬಂಗ್ಲಾದೇಶದ ಬೈನಾಲೆ, ಕಲೈಡೋಸ್ಕೋಪ್ ಪ್ರದರ್ಶನ ಮುಂತಾದ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಸಿಂಗಪುರದ ಇನ್‌ಫೋ ಗ್ರಾಫಿಕ್ ಶಿಬಿರ ಸೇರಿದಂತೆ ಸಾರ್ಕ್ ಕಲಾ ಶಿಬಿರ, ಹೆನ್ರಿಮೂರ್ ಕಲಾ ಶಿಬಿರ, ರಾಜ್ಯ ಲಲಿತಕಲಾ ಅಕಾಡೆಮಿಯ ಶ್ರೀರಂಗ ಪಟ್ಟಣ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ದೆಹಲಿಯ ಅಂತರ್‌ರಾಷ್ಟ್ರೀಯ ಪುಸ್ತಕಮೇಳ, ಚಂಡೀಘಡದ ರಾಷ್ಟ್ರೀಯ ಗ್ರಾಫಿಕ್ ಪ್ರದರ್ಶನ, ರಾಜ್ಯ ಲಲಿತ ಕಲಾ ಅಕಾಡೆಮಿಯ ಪ್ರದರ್ಶನಗಳಲ್ಲಿ ಬಹುಮಾನಿತರಾಗಿದ್ದಾರೆ. ಗ್ರಾಫಿಕ್ ಮುದ್ರಾ ಕಲೆಯೂ ಸೇರಿದಂತೆ ಎಲ್ಲ ಮಾಧ್ಯಮಗಳಲ್ಲಿ ಹಲವಾರು ಶೈಲಿಗಳಲ್ಲಿ ಅಭಿವ್ಯಕ್ತಿಸಬಲ್ಲ ಚಂದ್ರನಾಥರು ಘಟಶ್ರಾದ್ಧ, ಪಲ್ಲವಿ, ಗೀಜಗನ ಗೂಡು, ಆಕ್ರಮಣ ಇತ್ಯಾದಿ ಚಲನಚಿತ್ರಗಳಿಗೆ ಕಲಾ ನಿರ್ದೇಶಕರಾಗಿದ್ದರು. ಒಂದು ಅವಧಿಗೆ ರಾಜ್ಯ ಲಲಿತ ಕಲಾ ಅಕಾಡೆಮಿಯ ಸದಸ್ಯರಾಗಿದ್ದ ಶ್ರೀಯುತರಿಗೆ ೧೯೮ನೇ ಸಾಲಿನಲ್ಲಿ ರಾಜ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಆಚಾರ್ಯರ ಸೋದರ ಮನೋಹರ್ ಅವರೂ ಚಿತ್ರಕಲಾವಿದರಾಗಿದ್ದು ಪ್ರಸ್ತುತ ಪ್ರಜಾವಾಣಿ ಬಳಗದಲ್ಲಿ ಕಲಾವಿದರಾಗಿದ್ದಾರೆ. ಪುತ್ತೂರಿನ ಸುಧಾಕರ ದರ್ಬೆಯವರು ಗ್ರಾಫಿಕ್ ಡಿಸೈನ್ ಹಾಗೂ ಸಾಂದರ್ಭಿಕ ಚಿತ್ರ ರಚಿಸುತ್ತಿದ್ದು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಕಲಾವಿದರಾಗಿದ್ದಾರೆ.

ಗಣೇಶ್ ಸೋಮಯಾಜಿ ಅವರ ಕಾರ್ಯದರ್ಶಿತ್ವದಲ್ಲಿ ಮಂಗಳೂರಿನಲ್ಲಿ ೧೯೮೧ರಲ್ಲಿ 'ಆರ್ಟಿಸ್ಟ್ ಕಂಬೈನ್ (ನೊಂದಣಿ) ಎಂಬ ಚಿತ್ರಕಲಾ ಸಂಸ್ಥೆ ಆರಂಭವಾಗಿ, ಕಲಾಪ್ರದರ್ಶನ, ಶಿಬಿರ, ಪ್ರಾತ್ಯಕ್ಷಿಕೆ, ವಿಚಾರಸಂಕಿರಣ, ಚಿತ್ರಕಲಾ ಗುಣಗ್ರಹಣ ತರಗತಿ, ಮಕ್ಕಳ ಚಿತ್ರಕಲಾ ಸ್ಪರ್ಧೆ ಇತ್ಯಾದಿ ಹಮ್ಮಿಕೊಂಡು ಕ್ರಿಯಾಶೀಲವಾಗಿದೆ. ಸಂಸ್ಥೆಯಲ್ಲಿ ಹಲವಾರು ಕಲಾವಿದರಿದ್ದಾರೆ. ಮುಖ್ಯರಾದ ಕೆಲವರನ್ನು ಉದಾಹರಿಸಬಹುದು. ಕಾಸರಗೋಡಿನಲ್ಲಿ ಜನಿಸಿದ ಕೆ.ಪುಂಡಲೀಕ ಶೆಣೈ (ಜ.೧೯೩೮) ಸ್ವತವಾಗಿ ಚಿತ್ರಕಲೆ ಕಲಿತು ಚೆನ್ನೈ, ಮಂಗಳೂರು ಸೇರಿದಂತೆ ಕೇರಳಗಳಲ್ಲಿ ಹದಿನಾರು ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ತತ್ವಶಾಸ್ತ್ರ, ಕರಾವಳಿಯ ಸಾಂಪ್ರದಾಯಿಕ ಆಚರಣೆ, ಪಾರಮಾರ್ಥಿಕತೆಗಳಿಂದ ಪ್ರೇರಿತವಾಗಿ ಹಲವಾರು ಶೈಲಿಗಳಲ್ಲಿ ಚಿತ್ರಶಿಲ್ಪ ರಚಿಸಿದ್ದಾರೆ. ಕೇರಳದ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿ ಪಡೆದಿದ್ದಾರೆ. ಮಂಗಳೂರಿನ ಗೋಪಾಡ್ಕರ್ (೧೯೫೮) ಅವರು ಚಿತ್ರಕಲೆಯಲ್ಲಿ ಶಿಕ್ಷಣ ಪಡೆದು ನುಖ–ರೇಖಾಚಿತ್ರ, ತೈಲಚಿತ್ರ ಇತ್ಯಾದಿಗಳಲ್ಲಿ ಪರಿಣತಿ ಪಡೆದು ಸಾವಿರಾರು ಭಾವಚಿತ್ರ ರಚಿಸಿದ್ದಾರೆ. ತಮ್ಮ ಕೃತಿಗಳಿಗಾಗಿ ಜೆಸಿ.ಸಂಸ್ಥೆ, ಕಾ.ವಾ.ಆಚಾರ್ ವಿದ್ಯಾರ್ಥಿ ಟ್ರಸ್ಟ್ ಇತ್ಯಾದಿಗಳಿಂದ ಪ್ರಶಸ್ತಿ ಪಡೆದಿದ್ದಾರೆ. ಸ್ವರೂಪ ಅಧ್ಯಯನ ಸಂಸ್ಥೆ ಆರಂಭಿಸಿ ಮಕ್ಕಳ ಕ್ರಿಯಾಶಕ್ತಿ ಹೆಚ್ಚಿಸಲು ನೂರಾರು ಕಲಾಶಿಬಿರಗಳನ್ನು ಏರ್ಪಡಿಸಿದ್ದಾರೆ. ನಾಟಕ, ಯೋಗ, ಕಲಾತ್ಮಕ ವೇದಿಕೆ ಸಿದ್ಧಪಡಿಸುವುದು, ಗೊಂಬೆ ತಯಾರಿಕೆ ಇತ್ಯಾದಿ ಹಲವಾರು ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಬಿ.ಜಿ.ಮಹಮ್ಮದ್ ಅವರ ಮಗ ಶಬ್ಬಿರ್ ಅಲಿ (೧೯೫೫) ಕಲಾಭ್ಯಾಸ ಮಾಡಿ ಬಿ.ಜಿ.ಎಂ.ಕಲಾಶಾಲೆ ನಡೆಸುತ್ತಿದ್ದಾರೆ. ಅಲಿ ಅವರಿಗೆ

ಭೂದೃಶ್ಯಗಳಲ್ಲಿ ಆಸಕ್ತಿಯಿದ್ದು ಲಂಡನ್ ನಗರದಲ್ಲಿ ಕಲಾಪ್ರದರ್ಶನ ಮಾಡಿದ್ದು ಹೆಚ್ಚಿನ ಕೃತಿಗಳು ಅಲ್ಲಿ ಸಂಗ್ರಹಿತವಾಗಿವೆ. ಮಹಮ್ಮದ್ ಅವರ ಇನ್ನೊಬ್ಬ ಮಗ ಶಮೀರ್ ಅಲಿ ಸಹ ಕಲಾವಿದರಿದ್ದು, ಲಂಡನ್‌ನಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ನೀಡಿದ್ದಾರೆ.

ಪಾವಂಜೆ ಭುಜಂಗರಾಯರ ಮಗ ಎಂ.ಆರ್.ಪಾವಂಜೆ (ಜ ೧೯೪೨) ಅವರು ವಾಣೀಜ್ಯ ಕಲೆ ಕಲಿತು ಲಂಡನ್ನಿನ ಇನ್ಸಿಟ್ಯೂಟ್ ಆಫ್ ಆರ್ಟ್ಸ್ ಅವರಲ್ಲಿ ದೂರ ಶಿಕ್ಷಣ ಅಧ್ಯಯನ ಮಾಡಿ ಭಾವಚಿತ್ರ ರಚನೆಯಲ್ಲಿ ಪರಿಣತಿ ಪಡೆದಿದ್ದಾರೆ. ಸಾಕಷ್ಟು ಭಾವಚಿತ್ರ ರಚಿಸಿ ಅದಕ್ಕಾಗಿ ಪ್ರಶಸ್ತಿ, ಸನ್ಮಾನ ಪಡೆದಿದ್ದಾರೆ. ಹಲವು ಏಕವ್ಯಕ್ತಿ ಪ್ರದರ್ಶನ ನಡೆಸಿದ್ದಾರೆ. 'ಚಿತ್ರಕಲಾ ನಿಧಿ' ಎಂಬ ಬಿರುದು ಸಂದಾಯವಾಗಿದೆ. ಅಂಚೆ ಚೀಟಿ ಸಂಗ್ರಹಕಾರರಾಗಿದ್ದು ಜಿಲ್ಲೆಯ ಅಂಚೆ ಚೀಟಿ ಸಂಗ್ರಹಕಾರರ ಸಂಘದ ಅಧ್ಯಕ್ಷರಾಗಿ ೨೦ ವರ್ಷ ಸೇವೆ ಸಲ್ಲಿಸಿದ್ದಾರೆ. ಮಂಗಳೂರಿನ ಅನು ಪಾವಂಜೆಯವರು (೧೯೭೧) ಚಿಕ್ಕಪ್ಪ ಎಂ. ಅರ್. ಪಾವಂಜೆಯವರಲ್ಲಿ ಚಿತ್ರಕಲೆಯ ತರಬೇತಿ ಪಡೆದಿದ್ದು, ಸಾಂಪ್ರದಾಯಿಕ ಚಿತ್ರಕಲೆಯ ಮುಂದುವರಿದ ರೂಪಗಳಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ಆರ್ಟಿಸ್ಟ್ ಕಂಬೈನ್‌ನ ಹಲವಾರು ಪ್ರದರ್ಶನಗಳಲ್ಲಿ, ಬೆಂಗಳೂರಲ್ಲಿ ೧೯೮೫ರಲ್ಲಿ ನಡೆದ ರಾಷ್ಟ್ರೀಯ ಕಲಾಮೇಳದಲ್ಲಿ, ರಾಜ್ಯ ಅಕಾಡೆಮಿಯ ವಾರ್ಷಿಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮಹಿಳಾ ಕಲಾವಿದರ ಕಲಾ ಶಿಬಿರ, ಧಾರವಾಡ; ವರ್ಷ ವೈಭವ ಕಲಾ ಶಿಬಿರ, ಮಂಗಳೂರು ಇತ್ಯಾದಿ ಶಿಬಿರಗಳಲ್ಲಿ ಪಾಲುಗೊಂಡಿದ್ದಾರೆ. ೧೯೯೪ರಲ್ಲಿ ಹುಬ್ಬಳ್ಳಿಯಿಂದ ಜಲವರ್ಣ ಚಿತ್ರಕ್ಕೆ ಪ್ರಶಸ್ತಿ ಪಡೆದಿದ್ದು, ಪಾವಂಜೆಯಲ್ಲಿನ ಕಲಾಪ್ರದರ್ಶನದಲ್ಲಿ ಸನ್ಮಾನ ಹಾಗೂ ಮಂಗಳೂರಿನ ಜೆ. ಸಿ. ಅವರಿಂದ "ಪ್ರತಿಭಾ ಯುವ ಕಲಾವಿದೆ" ಪ್ರಶಸ್ತಿ ಪಡೆದಿದ್ದಾರೆ.

ಕಲಾವಿದ ಲಕ್ಷ್ಮಣ ಕಾಮತ್ ಶೇವಗೂರ ಅವರ ಮಗ ವಿಷ್ಣು ಶೇವಗೂರ ಅವರು ತಂದೆಯ ಶೇವಗೂರ್ ಫೈನ್ ಆರ್ಟ್ಸ್ ಸಂಸ್ಥೆ ಮುಂದುವರಿಸಿದ್ದು ವಾಣಿಜ್ಯ ಕಲೆಯಲ್ಲಿ ತರಬೇತಿ ನೀಡುತ್ತಿದ್ದು ಈಚೆಗೆ ಉಳಿದ ಚಿತ್ರಕಲಾ ಶಾಲೆಯಂತೆ ಶಿಕ್ಷಣ ನೀಡುತ್ತಿದ್ದಾರೆ. ಹಾಗೂ ಕಲಾವಿದರಾಗಿ ಕೃತಿ ರಚನೆ, ಪ್ರದರ್ಶನ ಇತ್ಯಾದಿ ನೆರವೇರಿಸುತ್ತಿದ್ದಾರೆ. ಡೇವಿಡ್ ಲಿಯೋ ರೊಡ್ರಿಗಸ್ (ಆಲಂಗಾರ್) (ಜ ೧೯೫೮) ಅವರು ಸ್ವಂತ ಪರಿಶ್ರಮದಿಂದ ಚಿತ್ರ, ಶಿಲ್ಪಕಲೆ ಕಲಿತು ಹಲವಾರು ಚರ್ಚ್‌ಗಳಲ್ಲಿ ಚಿತ್ರ, ಶಿಲ್ಪಗಳನ್ನು ರಚಿಸಿಕೊಟ್ಟಿದ್ದಾರೆ. ಭಾವಚಿತ್ರ ರಚನೆಯನ್ನು ರೂಢಿಸಿಕೊಂಡಿದ್ದಲ್ಲದೆ ಬೃಹದಾಕಾರದ ಬ್ಯಾನರ್ ರಚನೆ, ನಾಟಕ, ಸಿನಿಮಾಗಳ ಕಟೌಟ್ ಇತ್ಯಾದಿ ರಚಿಸುತ್ತಿದ್ದಾರೆ. ಸಾಹಿತ್ಯ ಸಮ್ಮೇಳನ ಇತ್ಯಾದಿ ಕಡೆ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ಮಂಗಳೂರಿನ ರತನ್ (ರೂಬಿ) (ಜ ೧೯೭೦) ಅವರು ಬಿ.ಜಿ. ಮಹಮ್ಮದ್‌ರವರಲ್ಲಿ ಕಲಾ ಅಭ್ಯಾಸ ನಡೆಸಿ ಹಲವಾರು ಮಾಧ್ಯಮಗಳಲ್ಲಿ ಶೈಲಿಗಳಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ತಮ್ಮ ಕೃತಿಗಳ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಮೂಲತಃ ಹೈದರಾಬಾದ್‌ನವರಾಗಿ ಮಂಗಳೂರಿನಲ್ಲಿ ನೆಲೆಸಿರುವ ಎಸ್.ಜಾನಕಿರಾಣಿ (ಜ ೧೯೬೧) ಅವರು ಮಹಮ್ಮದ್ ಅವರಲ್ಲಿ ಅಭ್ಯಸಿಸಿ, ಮಾನವಾಕಾರಗಳಲ್ಲದೆ ಪಶು, ಪಕ್ಷಿಗಳನ್ನು ನೈಜ ಶೈಲಿಯಲ್ಲಿ ರಚಿಸುತ್ತಿದ್ದಾರೆ. ಇನ್ನಿತರ ಕರಕುಶಲ ಕಲೆಯಲ್ಲೂ ಅಭಿರುಚಿವುಳ್ಳ ಜಾನಕಿರಾಣಿ ಅವರು ಒಳಾಂಗಣ ವಿನ್ಯಾಸ, ಸೌಂದರ್ಯ ಪ್ರಸಾಧನ ಕಲೆಯನ್ನು ಮುಂಬಯಿಯಲ್ಲಿ ಅಭ್ಯಸಿಸಿ ಬಂದಿದ್ದಾರೆ. 'ಬಿಂಬ' ಎಂಬ ಹೆಸರಿನಲ್ಲಿ ೨೦೦೦ದಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಪರ್ಮುದೆ ಮೋಹನ್ ಕುಮಾರ್ (ಜ೧೯೬೦) ಅವರು ಮಂಗಳೂರಿನ ಮಹಾಲಸ ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೊಮ ಪದವಿ ಪಡೆದು ಸುಮಾರು ಹತ್ತು ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಭಾರತಾದ್ಯಂತ ನಲವತ್ತಕ್ಕೂ ಹೆಚ್ಚು ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ತಮ್ಮ ಕೃತಿಗಳಿಗಾಗಿ ಮೈಸೂರು ದಸರಾ, ಲಲಿತಕಲಾ ಅಕಾಡೆಮಿ, ಕ್ಯಾಮ್ಲಿನ್ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಜಿಲ್ಲೆಯಲ್ಲಿ ಕಲಾ ಚಟುವಟಿಕೆ ಹೆಚ್ಚಿದ್ದು ಕೃತಿಗಳ ಪ್ರದರ್ಶನಕ್ಕೆ ಗ್ಯಾಲರಿಯೊಂದರ ಅವಶ್ಯಕತೆಯಿತ್ತು. ಮಹಮ್ಮದ್ ಅವರಲ್ಲಿ ಅಭ್ಯಸಿಸಿದ ಆರ್ಟಿಸ್ಟ್ ಕಂಬೈನ್‌ನ ಸದಸ್ಯ ಕೋಟಿ ಪ್ರಸಾದ್ ಆಳ್ವ ಅವರು ಮಂಗಳೂರಿನ ಬಲ್ಲಾಳ್‌ಬಾಗ್ ಪ್ರದೇಶದಲ್ಲಿ ೧೯೯೪ರಲ್ಲಿ 'ಪ್ರಸಾದ್ ಆರ್ಟ್ ಗ್ಯಾಲರಿ' ಸ್ಥಾಪಿಸಿದರು. ಸ್ಥಳೀಯರೂ ಸೇರಿದಂತೆ ಹೊರ ಜಿಲ್ಲೆಯವರೂ ಇಲ್ಲಿ ಏಕ ಹಾಗೂ ಗುಂಪು ಪ್ರದರ್ಶನಗಳನ್ನು ಮಾಡಿದ್ದಾರೆ. ಹವ್ಯಾಸಿ ಕಲಾಶಾಲೆ ಸಹ ಗ್ಯಾಲರಿಯೊಂದಿಗೆ ಇದ್ದು ಆಸಕ್ತರಿಗೆ ಕಲಿಸಿಕೊಡಲಾಗುತ್ತಿದೆ. ಗ್ಯಾಲರಿಯಲ್ಲಿ ಕಲಾಶಿಬಿರ, ಪ್ರಾತ್ಯಕ್ಷಿಕೆ, ವಿಚಾರಸಂಕಿರಣ ಇತ್ಯಾದಿಗಳೂ ನಡೆಯುತ್ತಿವೆ. ಟೆರ್ರಕೋಟ ಹಾಗೂ ಶುಭಾಶಯ ಪತ್ರಗಳ ರಚನೆಗೆ ಹೆಚ್ಚಿನ ಅವಕಾಶವಿದೆ.

ಇಡೀ ರಾಜ್ಯದಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಚಿತ್ರಕಲೆ ಅಭ್ಯಸಿಸಲು ಅವಕಾಶವಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಸೌಲಭ್ಯವಿರಲಿಲ್ಲ. ಈ ಹಿಂದೆ ಮಂಗಳೂರಿನಲ್ಲಿ 'ಅನುಪಮಾ ಚಿತ್ರ ಕಲಾಶಾಲೆ'ಯೊಂದು ಲಕ್ಷ್ಮಣಭಟ್ ಅವರಿಂದ ಆರಂಭವಾಗಿ ನಂತರ ಉಡುಪಿಯ ಕುಪಾಡಿಗೆ ವರ್ಗಾವಣೆಯಾಯಿತು. ನಂತರ ಮಂಗಳೂರಿನಲ್ಲಿ 'ಮಹಾಲಸ ಕಲಾಶಾಲೆ' ಆರಂಭವಾಗಿದ್ದು ಮೂಲಸೌಲಭ್ಯದ ಕೊರತೆಯಿತ್ತು. ತುಮಕೂರಿನ ರವೀಂದ್ರ ಕಲಾ ನಿಕೇತನದ ಪ್ರಾಂಶುಪಾಲರಾದ, ಬಾಬುರಾವ್ ಮತ್ತಿತರು, ಮಂಗಳೂರಿನ ಕಲಾಸಕ್ತರ ಸಮಿತಿ ರಚಿಸಿ

ಕಲಾಶಾಲೆಗೆ ಸ್ವಂತ ಸುಸಜ್ಜಿತ ಕಟ್ಟಡ ನಿರ್ಮಿಸಲು ನೆರವಾದರು. ಶಾಲೆಯಲ್ಲಿ ಸ್ಥಳೀಯರಲ್ಲದೆ ಹೊರಜಿಲ್ಲೆಯ ಶಿಕ್ಷಕರೂ ಇದ್ದು ಸೂಕ್ತವಾಗಿ ಬೆಳಕು ನೀಡುವಂತೆ ಶಾಲಾ ಕೊಠಡಿಗಳು, ಕಲಾ ಗ್ಯಾಲರಿ, ಪಠ್ಯವಿಷಯಕ್ಕೆ ಪೂರಕವಾದ ಯಂತ್ರೋಪಕರಣ ಇತ್ಯಾದಿ ಹೊಂದಿದ್ದು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಪ್ರಸ್ತುತ ಕೆ.ಪುರುಷೋತ್ತಮ ನಾಯಕ್ ಅವರು ಪ್ರಾಂಶುಪಾಲರಾಗಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೈಸೂರು ದಸರಾ, ಕಲಾಮೇಳ ಸೇರಿದಂತೆ ಹಲವಾರು ಪ್ರದರ್ಶನ, ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಉಳಿದ ಉಪನ್ಯಾಸಕರಲ್ಲಿ ಎನ್.ಎಸ್.ಪತ್ತಾರ್ ಅವರು ಗದಗ್ ಜಿಲ್ಲೆಯವರಾಗಿದ್ದು, ಗುಲ್ಬರ್ಗದ ಕಲಾಶಾಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಮಂಗಳೂರಿನಲ್ಲಿ ನೆಲೆಸಿದ್ದಾರೆ. ನವದೆಹಲಿ, ನಾಗಪುರ, ಹೈದ್ರಾಬಾದ್, ಪುಣೆ ಸೇರಿದಂತೆ ರಾಜ್ಯದ ಹಲವಾರು ಭಾಗಗಳ ಸುಮಾರು ಇಪ್ಪತ್ತು ಗುಂಪು ಕಲಾಪ್ರದರ್ಶನ, ಇಪ್ಪತ್ತೆರಡು ಸಾಮೂಹಿಕ ಕಲಾಪ್ರದರ್ಶನ, ಹದಿನಾರು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕಲಾ ಬರಹಗಾರರೂ ಆಗಿರುವ ಪತ್ತಾರ್ ಅವರು ಅನೇಕ ಕಡೆಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಪ್ರಾತ್ಯಕ್ಷಿಕೆ ಪ್ರದರ್ಶನ ನೀಡಿದ್ದಾರೆ. ತುಮಕೂರಿನ ಕಲಾಶಾಲೆಯಲ್ಲಿ ಡಿಪ್ಲೊಮ ಪದವಿ ಪಡೆದ ಸೈಯದ್ ಅಸಿಫ್ ಅಲಿ ಅವರು ಹರಿಯಾಣ, ಚೆನ್ನೈ, ಸೇರಿದಂತೆ ಹಲವಾರು ಪ್ರದರ್ಶನ, ಕಲಾಶಿಬಿರ, ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರು ದಸರಾ ಪ್ರದರ್ಶನಗಳಲ್ಲಿ ಹಲವು ಬಾರಿ ಪ್ರಶಸ್ತಿ ಹಾಗೂ ಹರಿಯಾಣದ ಅಖಿಲ ಭಾರತ ಪ್ರದರ್ಶನಗಳಲ್ಲಿ ಬಹುಮಾನಿತರಾಗಿದ್ದಾರೆ. ತುಮಕೂರಿನ ಕೆ.ಟಿ.ನಾಗರಾಜ್ ಅವರೂ ಅಲ್ಲಿ ಸ್ನಾತಕೋತ್ತರ ಪದವಿ ಪಡೆದು ಅಂಬಾಲ, ಮೈಸೂರು, ಬೀದರ್, ಬೆಂಗಳೂರುಗಳಲ್ಲಿ ಕಲಾಪ್ರದರ್ಶನ ನೀಡಿದ್ದಾರೆ. ಹತ್ತು ಕಲಾಶಿಬಿರಗಳಲ್ಲಿ ಮತ್ತು ದಸರಾ ಹಾಗೂ ಇನ್ನಿತರ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಹಾಸನದ ಬಿ.ಪಿ.ಮೋಹನ್ ಕುಮಾರ್ ಅವರು ಕಲಾ ಡಿಪ್ಲೊಮ ಪದವಿ ಪಡೆದು ಗ್ರಾಫಿಕ್ ಕಲೆಯಲ್ಲಿ ಹೆಚ್ಚಿನ ಪರಿಣಿತಿ ಹೊಂದಿದ್ದಾರೆ. ಅಂಬಾಲ, ಮೈಸೂರುದಸರಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ವಿಶಾಖಪಟ್ಟಣ ಪ್ರದರ್ಶನ, ಮೈಸೂರು ದಸರಾ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಬೇರೆ ಜಿಲ್ಲೆಗಳಿಂದ ಬಂದು ಮಂಗಳೂರಿನಲ್ಲಿ ನೆಲೆನಿಂತರೂ ಈ ಉಪನ್ಯಾಸಕ ಕಲಾವಿದರು ಸ್ಥಳೀಯವಾಗಿಯೂ ಹಲವಾರು ಪ್ರದರ್ಶನ, ಕಲಾಶಿಬಿರ ಆಯೋಜಿಸಿ ಕೃತಿಗಳನ್ನು ಪ್ರದರ್ಶಿಸಿದ್ದಾರೆ.

ಉಳಿದಂತೆ ಜಿಲ್ಲೆಯಲ್ಲಿ ಇನ್ನೂ ಕೆಲವು ಕಲಾವಿದರಿದ್ದು ಹೆಚ್ಚು ಬೆಳಕಿಗೆ ಬಂದಿರುವುದಿಲ್ಲ. ಪುತ್ತೂರಿನ ಎ.ಪಿ.ಚಂದ್ರಶೇಖರ ಅವರು ಮೈಸೂರಿನ ಕಾವ ಹಾಗೂ ಬರೋಡೆಯ ಸಯ್ಯಾಜಿರಾವ್ ವಿಶ್ವವಿದ್ಯಾನಿಲಯದಲ್ಲಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಮೈಸೂರಿನಲ್ಲಿ ಕಲಾ ಉಪನ್ಯಾಸಕರಾಗಿದ್ದಾರೆ. ಗ್ರಾಫಿಕ್ ಕಲೆಯಲ್ಲಿ ಹೆಚ್ಚಿನ ತರಬೇತಿ ಪಡೆದಿದ್ದು ತಂಜಾವೂರು, ನವದೆಹಲಿಗಳಲ್ಲದೆ ಮೈಸೂರು ದಸರ, ಬೆಂಗಳೂರು ಲಲಿತಕಲಾ ಅಕಾಡೆಮಿಯ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ ಹಾಗೂ ಇವುಗಳಿಂದ ಪ್ರಶಸ್ತಿಗಳಿಸಿದ್ದಾರೆ. ಬಂಟ್ವಾಳದ ಸುಧೀರ್ ಬಾಳೆಪುಣೆ ಅವರು ಮಹಾಲಸ ಕಲಾಶಾಲೆಯಿಂದ ಡಿಪ್ಲೊಮ ಪದವಿ ಪಡೆದು ಹಲವಾರು ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುತ್ತಿದ್ದು, ಮೈಸೂರು ಸಾಂಪ್ರದಾಯಿಕ ಕಲೆಯಲ್ಲಿ ಹೆಚ್ಚಿನ ತರಬೇತಿ ಪಡೆದಿದ್ದಾರೆ. ಬೆಂಗಳೂರು, ಮೈಸೂರು, ಚಿತ್ರದುರ್ಗ, ತುಮಕೂರು ಸೇರಿದಂತೆ ಸ್ಥಳೀಯವಾಗಿ ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕೇಂದ್ರ ಲಲಿತಕಲಾ ಅಕಾಡೆಮಿಯು ರಾಜ್ಯ ಅಕಾಡೆಮಿಯ ಮೂಲಕ ಕೊಡಮಾಡುತ್ತಿದ್ದ ಬಹುಮಾನಕ್ಕೆ ಪಾತ್ರರಾಗಿದ್ದಾರೆ. ಕರಕುಶಲಕಲೆಯನ್ನು ಹವ್ಯಾಸಕ್ಕಾಗಿ ಇರಿಸಿಕೊಂಡಿದ್ದಾರೆ. ಚಿತ್ರಕಲಾ ಶಿಕ್ಷಕರಾಗಿರುವ ಬಂಟ್ವಾಳದ ಕೆ.ಮುರುಳಿಕೃಷ್ಣರಾವ್, ವಿಟ್ಲದ ಕೆ.ವಿಶ್ವನಾಥ, ಬೆಳ್ತಂಗಡಿಯ ಡಿ.ಎಸ್.ಶ್ರೀಪತಿರಾವ್, ಸುಳ್ಯದ ಎಂ.ಜಿ.ಮಂಜುನಾಥ ಹಾಗೂ ಎಂ.ಎಸ್.ಪುರುಷೋತ್ತಮ ಅವರು ಚಿತ್ರಕಲಾಭ್ಯಾಸ ಮಾಡಿ ಸ್ಥಳೀಯವಾಗಿ ಹಾಗೂ ಮೈಸೂರು ದಸರಾ, ಬೆಂಗಳೂರು ಲಲಿತ ಕಲಾ ಅಕಾಡೆಮಿಗಳಲ್ಲಿ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ಒಂದಿಬ್ಬರು ದಸರಾ ಹಾಗೂ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಮಂಗಳೂರಿನಲ್ಲಿ ಕೆಲವು ಕಲಾವಿದರು ನೆಲೆಸಿದ್ದು ಅವರಲ್ಲಿ ಅಕ್ತರ್ ಬೇಗಮ್ ಅವರು ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಲ್ಲಿ ಶಿಕ್ಷಣ ಪಡೆದು ಬಿ.ಜಿ.ಎಂ.ಕಲಾಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಸ್ಥಳೀಯವಾಗಿ ಹಲವಾರು ಕಲಾಪ್ರದರ್ಶನ ನೀಡಿದ್ದಾರೆ. ಎಂ.ಜೆ.ಕಜೆ ಹಾಗೂ ನಳನಿ ಕಜೆ ಅವರು ಚಿತ್ರಕಲೆಯಲ್ಲಿ ಡಿಪ್ಲೊಮ ಹಾಗೂ ಕಲಾಶಿಕ್ಷಣ ತರಬೇತಿ ಪಡೆದಿದ್ದಾರೆ. ಸ್ಥಳೀಯ ಹಾಗೂ ರಾಜ್ಯಮಟ್ಟದ ಕಲಾಶಿಬಿರ, ಕಲಾಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಇವರಲ್ಲದೆ, ಬಂಟ್ವಾಳದ ಕೆ.ಮುರುಳೀಕೃಷ್ಣರಾವ್, ಸುಳ್ಯದ ಸುಗುಣಾಕುಮಾರಿ, ಶೈಲಿ ಪ್ರಭಾಕರ್, ದಿನೇಶ, ಎಂ.ವೆಂಕಟರಮಣ, ಮಂಗಳೂರಿನ ಶಾರದಾ ರೈ, ಆಶಾಶೆಟ್ಟಿ, ರೇಣುಕ ಮುಂತಾದವರೂ ಸಹ ಚಿತ್ರಕಲಾವಿದರಾಗಿದ್ದಾರೆ. ಇವರಲ್ಲಿ ಕೆಲವರು ಕಲಾಶಿಕ್ಷಕರಾಗಿದ್ದು, ಉಳಿದವರು ಹವ್ಯಾಸಿ ಕಲಾವಿದರಾಗಿದ್ದಾರೆ. ಲಲಿತಕಲಾ ಅಕಾಡೆಮಿಯಿಂದ ೨೦೦೪ರಲ್ಲಿ ಪ್ರಶಸ್ತಿ ಪಡೆದ ಬಂಟ್ವಾಳದ ಕೆ.ಕೃಷ್ಣಪ್ಪ ಅವರು ಸಂಪ್ರದಾಯ ಕಲೆ, ಕಿನ್ನಾಳದ ಕಲೆ ಹಾಗೂ ಗಾಜಿನ ಮೇಲಿನ ಚಿತ್ರಗಳಲ್ಲಿ ಪರಿಣಿತಿ ಪಡೆದಿದ್ದಾರೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ.ಇತ್ತೀಚೆಗೆ ತಮ್ಮ ೩೮ರ ಹರಯದಲ್ಲಿ ನಿಧನರಾದ 'ರಫೀಕ್ ಉಪ್ಪಿನಂಗಡಿ' ಚಿತ್ರಕಲಾವಿದ, ಸಾಹಿತಿ, ಪತ್ರಕರ್ತ, ನಾಟಕಕಾರರಾಗಿದ್ದು, ಛಾಯಾಚಿತ್ರಕಲೆಯ ಕುರಿತು ಪುಸ್ತಕವೊಂದನ್ನು ಬರೆದಿದ್ದರು.

ಚಿತ್ರಕಲೆಯಲ್ಲದೆ ನಾಟಕದ ರಂಗಸಜ್ಜಿಕೆಗಳ ವಿನ್ಯಾಸ ಮಾಡುವ ಇನ್ನಿತರ ಕರಕುಶಲಕಲೆಯಲ್ಲಿ ಕ್ರಿಯಾಶೀಲರಾಗಿರುವ ಅನೇಕರು ಜಿಲ್ಲೆಯಾದ್ಯಂತ ಕಂಡುಬರುತ್ತಾರೆ. ಮುಖ್ಯವಾಗಿ ಮೂಡಬಿದಿರೆಯ ಡಿ.ಕೃಷ್ಣಯ್ಯ ಆಚಾರ್ಯ, ಸುಳ್ಯದ ಹರಿಶ್ಚಂದ್ರ, ವಿಟ್ಲಬಾಬು, ಬಂಟ್ವಾಳದ ಎನ್ ಸದಾಶಿವ ಭಟ್, ಅವರುಗಳನ್ನು ಹೆಸರಿಸಬಹುದು. ೨೦೦೫ರಲ್ಲಿ ಲಲಿತಕಲೆ ವಿಭಾಗದಿಂದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಮುಲ್ಕಿ ಚಂದ್ರಶೇಖರ ಸುವರ್ಣಾ ಅವರು ರಂಗವಿನ್ಯಾಸ, ಯಕ್ಷಗಾನ ಮತ್ತು ನಾಟಕದ ಪ್ರಸಾಧನ ಕಲಾವಿದರಾಗಿ ರಾಜ್ಯ, ಹೊರರಾಜ್ಯಗಳಲ್ಲಿ ಖ್ಯಾತಿ ಹೊಂದಿದ್ದಾರೆ.

ಸುಳ್ಯದ ಬಳಿ ಕುಕ್ಕೆ ಸುಬ್ರಹ್ಮಣ್ಯ ರಸ್ತೆಯಲ್ಲಿರುವ ಸೋಣಂಗೇರಿಯವರಾದ ಮೋಹನ್ ಸೋನಾ ಮತ್ತಿತರ ಗೆಳೆಯರು ಕೂಡಿಕೊಂಡು ೯೦ರ ದಶಕದಲ್ಲಿ 'ನಿರತ ನಿರಂತ' ಕಲಾತಂಡ ಸ್ಥಾಪಿಸಿ ಬೀದಿನಾಟಕ, ಸಂಗೀತ, ಚಿತ್ರಕಲೆ ಕುರಿತ ಹಲವಾರು ಕಾರ್ಯಕ್ರಮಗಳನ್ನು ನೀಡತೊಡಗಿದ್ದು, ತಂಡದಲ್ಲಿ ಬಹುತೇಕ ಚಿತ್ರಕಲಾವಿದರಿದ್ದು, ಅವರ ಕಲಾಕೃತಿಗಳ ಪ್ರದರ್ಶನಕ್ಕೆ ಸೂಕ್ತವಾದ ಪ್ರದರ್ಶನಾಂಗಣಗಳು ಇರಲಿಲ್ಲ. ಆ ಕಾರಣ ಸುಮಾರು ಐದು ಕಿ.ಮೀ. ವ್ಯಾಪ್ತಿಯ ಸೋಣಂಗೇರಿ ಗ್ರಾಮವನ್ನೇ ಬಯಲು ಚಿತ್ರಾಲಯವನ್ನಾಗಿ ರೂಪಿಸುವ ಅಪೂರ್ವವಾದ ಯೋಜನೆಯನ್ನು ಹಮ್ಮಿಕೊಂಡರು. ೧೯೬೫ರ ಮೇ ತಿಂಗಳಲ್ಲಿ ಗ್ರಾಮಸ್ಥರ ಸಹಕಾರ ಹಾಗೂ ಲಲಿತಕಲಾ ಅಕಾಡೆಮಿ ಮತ್ತು ಇನ್ನಿತರ ಸಂಘಸಂಸ್ಥೆಗಳ ನೆರವಿನಿಂದ ಸ್ಥಳೀಯ ಕಲಾವಿದರೊಂದಿಗೆ ರಾಜ್ಯದ ಇತರ ಪ್ರದೇಶಗಳಿಂದ ೬೦ಕ್ಕೂ ಹೆಚ್ಚು ಕಲಾವಿದರು ಒಂದು ವಾರ ಗ್ರಾಮದಲ್ಲಿಯೇ ನೆಲೆಸಿ ಚಿತ್ರ, ಶಿಲ್ಪಗಳನ್ನು ರಚಿಸಿದರು. ಮನೆಯ ಒಳಹೊರಗೋಡೆಗಳಲ್ಲದೆ ತುಳಸೀಕಟ್ಟೆ, ಬಾವಿ, ಮಂಟಪ ಇತ್ಯಾದಿಗಳ ಮೇಲೂ ಚಿತ್ರಕೃತಿ ಹಾಗೂ ಉಬ್ಬುಶಿಲ್ಪಗಳನ್ನು ಮೂಡಿಸಿದರು. ಕೆಲವರು ಗೋಡೆಗಳ ಮೇಲೆಯೇ ಚಿತ್ರ, ಶಿಲ್ಪ ರಚಿಸಿದರೆ, ಉಳಿದವರು ಕ್ಯಾನ್‌ವಾಸ್‌ಗಳ ಮೇಲೆ ಬಿಡಿಯಾಗಿಯೂ ಚಿತ್ರಿಸಿ ಗ್ರಾಮಸ್ಥರಿಗೆ ನೀಡಿದರು. ಕೆಲವು ಗ್ರಾಮಸ್ಥರ ಆಸಕ್ತಿಗೆ ಅನುಗುಣವಾಗಿ ಚಿತ್ರ ರಚಿಸಿಕೊಟ್ಟರು. ಹಿರೇಗೌಡರ್, ಖಂಡೇರಾವ್, ವಿಜಯ ಹಾಗರಗುಂಡಗಿ ಅವರುಗಳಲ್ಲದೆ, ಬೆಂಗಳೂರಿನ ಹಲವಾರು ಕಲಾವಿದರೊಂದಿಗೆ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಕಲಾವಿದರುಗಳಾದ ಪುಣಿಂಚತ್ತಾಯ, ನೇಮಿರಾಜಶೆಟ್ಟಿ, ಶಿವಾನಂದಬೇಕಲ್ ,ಸುದೇಶ್ ಮಹಾನ್, ಪುರುಷೋತ್ತಮ ಕಾರಂತ, ಪಿ.ಎನ್.ಆಚಾರ್, ಕೆ.ಸಂಜೀವಶೆಟ್ಟಿ, ಮೋಹನ್ ಕುಮಾರ್, ಕೆ.ಎಲ್.ಭಟ್, ದ್ವಾರಕಾನಾಥ್, ರಾಮದಾಸ್ ಅಡ್ಯಂತಾಯ, ವೆಂಕಟ್ ಮೋಂಟಡ್ಕ, ಎಂ.ಜಿ.ಕಜೆ, ನಳಿನಿ ಕಜೆ, ಮೋಹನ ಸೋನ, ಗೋಪಾಡ್ಕರ್, ಸುರೇಶ್ ಹಂದಾಡಿ, ಐ.ಕೆ.ಬೋಳುವಾರು, ಶಂಕರಪ್ರಸಾದ್ ಕುಂಚಿನಡ್ಕ, ಫೋನ್ ಶೀನಪ್ಪ, ಎಸ್.ವಿ.ಶೋಭ, ಬಾಲವನ ಚಂದ್ರ, ಮೂರ್ತಿ ಜೈರಾಜಯ್ಯ ಮುಂತಾದ ಅನೇಕರು ಈ ಕಲಾಶಿಬಿರದಲ್ಲಿ ಪಾಲ್ಗೊಂಡಿದ್ದರು. ಇದರೊಂದಿಗೆ ನಾಟಕ, ಕಾವ್ಯವಾಚನ ನೃತ್ಯ, ಸಂಗೀತ, ಕಾರ್ಯಕ್ರಮಗಳೂ ಇದ್ದು, ಬಿ.ವಿ.ಕಾರಂತರು ಸೇರಿದಂತೆ ಆಯಾ ಕ್ಷೇತ್ರದ ಗಣ್ಯರು ಭಾಗವಹಿಸಿದ್ದರು.

'ನಿರತ–ನಿರಂತ' ತಂಡದವರು ಇದಲ್ಲದೆ ಶಿವರಾಮಕಾರಂತರಿಗೆ ೯೦ ವರ್ಷಗಳಾದಾಗ ಅವರ ೯೦ ವಿವಿಧ ಭಾವಚಿತ್ರಗಳನ್ನು ರಚಿಸಿ ಜಿಲ್ಲೆಯಾದ್ಯಂತ ಪ್ರದರ್ಶಿಸಿದ್ದರು. ಸೋಣಂಗೇರಿಯ ೧೯೯೫ರ ಶಿಬಿರದ ನಂತರವೂ ಹಲವಾರು ಆಸಕ್ತ ಕಲಾವಿದರು ಆಗಾಗ್ಗೆ ಸೋಣಂಗೇರಿಗೆ ಹೋಗಿ ಚಿತ್ರ ರಚಿಸಿ ಗ್ರಾಮಸ್ಥರಿಗೆ ನೀಡುವುದುಂಟು. ಸುದೇಶ್ ಮಹಾನ್, ಶಶಿಧರ ಅಡಪ, ಮಕ್ಕಳ ಕ್ರೀಡಾಂಗಣದಲ್ಲೂ ಶಿಲ್ಪರಚಿಸಿದ್ದಾರೆ. ಮೋಹನ್ ಸೋನಾರವರ ಮನೆಯಲ್ಲಿ ಕಲಾಗ್ಯಾಲರಿಯನ್ನು ಸ್ಥಾಪಿಸಿದ್ದಾರೆ. ಪ್ರಾಯಶಃ ರಾಷ್ಟ್ರದಲ್ಲಿಯೇ ಕಲಾ ವಾತಾವರಣದಿಂದ ತುಂಬಿರುವ ಏಕೈಕ ಗ್ರಾಮ ಸೋಣಂಗೇರಿ ಆಗಿರಬಹುದು.

ಮಂಗಳೂರಿನ ಸುದೇಶ್ ಮಹಾನ್ ಅವರು, ಅವರ ತಂದೆ ಕಲಾವಿದ ಜೆ.ಚಂದ್ರಶೇಖರ ಹಾಗೂ ಮೋಹನ ಸೋನಾ ಅವರಲ್ಲಿ ಚಿತ್ರಕಲೆಯನ್ನು ಕಲಿತು ಬೆಂಗಳೂರಿನ ಚಿತ್ರಕಲಾ ಪರಿಷತ್, ಮುಂಬಯಿಯ ಹೆರ್ಮಿಟೇಜ್ ಕಲಾಗ್ಯಾಲರಿ, ಚೆನ್ನೈನ ಲಕ್ಷಣ ಆರ್ಟ್‌ಗ್ಯಾಲರಿಗಳಲ್ಲಿ ಏಕವ್ಯಕ್ತಿ ಪ್ರದರ್ಶನ, ಕಲಾಮೇಳ ಹಾಗೂ ಚಿತ್ರಸಂತೆಗಳಲ್ಲಿ ಗುಂಪು ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಸೋಣಂಗೇರಿಯ ಬಯಲು ಚಿತ್ರಾಲಯದಲ್ಲಿ ಸಕ್ರಿಯವಾಗಿದ್ದ ಸುದೇಶ್ ಅವರು ಭಿತ್ತಿ ಹಾಗೂ ಬಿಡಿಚಿತ್ರಗಳನ್ನು ರಚಿಸಿದ್ದು, ಚಲನಚಿತ್ರ ನಿರ್ದೇಶಕ ಮಣಿರತ್ನಂ, ಮುಂಬಯಿನ ಕಲಾವಿದೆ ಉಷಾರಾಧಾಕೃಷ್ಣನ್ ಅವರುಗಳಲ್ಲಿ ಸೇರಿದಂತೆ, ರಾಷ್ಟ್ರದ ಅನೇಕ ಕಲಾಗ್ಯಾಲರಿಯಲ್ಲಿ ಹಾಗೂ ಫ್ರಾನ್ಸ್‌ನಲ್ಲಿ ಇವರ ಕಲಾಕೃತಿಗಳು ಸಂಗ್ರಹಿತವಾಗಿವೆ. ಅನೇಕ ಚಲನಚಿತ್ರಗಳಿಗೆ ಕಲಾನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಸೋಣಂಗೇರಿಯ ಮೋಹನ್ ಸೋನಾ ಅವರು ಉಡುಪಿಯ ಕಲಾಮಂದಿರ, ಬೆಂಗಳೂರಿನ ಕೆನ್ ಕಲಾಶಾಲೆ, ಮೈಸೂರಿನ ಜಯಚಾಮರಾಜೇಂದ್ರ ಕಲಾಶಾಲೆ ಹಾಗೂ ಜೆ.ಚಂದ್ರ ಶೇಖರ್ ಅವರಲ್ಲಿ ಕಲಾಭ್ಯಾಸ ಮಾಡಿದ್ದಾರೆ. ವರ್ಣಚಿತ್ರ, ಸಾಂದರ್ಭಿಕ ಚಿತ್ರ, ಕಾಷ್ಠ ಶಿಲ್ಪಗಳಲ್ಲಿ ಪರಿಣತಿಯಿರುವ ಸೋನಾರವರು ಭೂಪಾಲದ ಭಾರತಭವನ, ಸೋಣಂಗೇರಿಯ ಚಿತ್ರಾಲಯಗಳ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಸ್ಥಳೀಯವಾಗಿ ಪ್ರತಿವರ್ಷವೂ ಎಂಬಂತೆ ಏಕವ್ಯಕ್ತಿ ಪ್ರದರ್ಶನ ನಡೆಸುತ್ತಿದ್ದು ಗುಂಪು ಪ್ರದರ್ಶನಗಳಲ್ಲಿಯೂ ಭಾಗವಹಿಸುತ್ತಿದ್ದಾರೆ. ದೆಹಲಿ, ಮಧ್ಯಪ್ರದೇಶ, ಪಶ್ಚಿಮಬಂಗಾಳ, ಚೆನ್ನೈ, ಆಂಧ್ರ ಇತ್ಯಾದಿ ಕಡೆಗಳಲ್ಲಿನ ಪ್ರದರ್ಶನಗಳಲ್ಲಿ ಪಾಲ್ಗೊಂಡಿದ್ದಾರೆ. ಇವರು ರಚಿಸಿದ ಗಾಂಧೀ, ಗ್ರಾಮೀಣ ಬದುಕು, ಗೋಕುಲ ನಿರ್ಗಮನ ಚಿತ್ರಗಳಿಗೆ ಪ್ರಶಸ್ತಿಗಳು ಬಂದಿವೆ.

ಮಂಗಳೂರಿನ ಇನ್ನೊಬ್ಬ ವ್ಯಂಗ್ಯಚಿತ್ರಕಾರ ಪ್ರಕಾಶ್‌ಶೆಟ್ಟಿ ಕೇರಳದ 'ದವೀಕ್' ಪತ್ರಿಕೆಗೆ ಬರೆಯುತ್ತಿದ್ದು ತಮ್ಮ ಕೃತಿಗಳನ್ನು ಸಂಗ್ರಹಿಸಿ 'ವ್ಹಾರೆಕ್ವಾರೆ' 'ಕಿಟ್ಟು' ಹಾಗೂ 'ಸಾರಿ ಏ ಆ್ಯಮ್ ಎ ಬಾರ್ನ್ ಫೂಲ್' ಎಂಬ ಹೆಸರುಗಳಲ್ಲಿ ಪ್ರಕಟಿಸಿದ್ದಾರೆ.

ರಾಜ್ಯಲಲಿತ ಕಲಾ ಅಕಾಡಮಿಯ 'ತಿಂಗಳ ಚಿತ್ರ' ಕಾರ್ಯಕ್ರಮದಲ್ಲಿ ಭಾಗವಹಿಸಿದ ಹರ್ಷಿತ ಕೆ. ಮೈಸೂರು ಸಾಂಪ್ರದಾಯಿಕ ಕಲೆಯ ರಚನಕಾರ ಪಾಂಡವರ ಕಲ್ಲು ಕೆ. ಸುರೇಶ್, ಉಜ್ಜಯಿನಿಯಲ್ಲಿ ಪ್ರಶಸ್ತಿ ಪಡೆದು, ಪುತ್ತೂರಿನಲ್ಲಿ ಕಲಾಸಂಸ್ಥೆ ನಡೆಸುತ್ತಿರುವ ಆನಂದ ಬೆದ್ರಾಳ್, ಮೈಸೂರು ಕಾವಾದ ವಿದ್ಯಾರ್ಥಿಗಳಾದ ಪಿ.ಎನ್. ನಾಗರಾಜ್, ಗಣೇಶ ಆಚಾರ್ ಹಾಗೂ ರಾಷ್ಟ್ರಮಟ್ಟದಲ್ಲಿ ಅಭಿವ್ಯಕ್ತಿಸುತ್ತಿರುವ ಚೇತನ್‌ಕುಮಾರ್, ಮೋನಪ್ಪ ಗೌಡ, ಎಂ.ಪಿ. ದಿನೇಶ್, ರೊನಾಲ್ಡ್ ಪಿಂಟೋ, ಪ್ರಸಾದ್, ಶೋಭಾ ಪುರುಷೋತ್ತಮ, ಜಯಶ್ರೀ ಬಿ. ಮುಂತಾದವರನ್ನು ಹೆಸರಿಸಬಹುದು.

ಉಳಿದಂತೆ ಮಂಗಳೂರು ಬಳಿಯ ಕನಕವಾಡಿಯಲ್ಲಿ ಜನಿಸಿದ ಕೆ. ಸಂಜೀವಶೆಟ್ಟಿ (೧೯೪೫) ಅವರು ಬಿ. ಜಿ. ಮಹಮದ್ ಅವರಲ್ಲಿ ಕಲಿತು, ಬೆಂಗಳೂರು, ಮಂಗಳೂರು ಮತ್ತು ಕೊಯಮತ್ತೂರುಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ. ಮಂಗಳೂರಿನವರೇ ಆದ ಮರ್ಲಿನ್ ಆರ್. ಪ್ರಭು ಅವರು ಬಿ. ಜಿ. ಮಹಮದ್ ಹಾಗೂ ಮುಂಬಯಿಯ ಜೆ. ಜೆ. ಕಲಾ ಶಾಲೆಯಲ್ಲಿ ಅಭ್ಯಸಿಸಿ ಡಿಪ್ಲೊಮಾ ಪದವಿಪಡೆದು ಮುಂಬಯಿ ಹಾಗೂ ಮಂಗಳೂರುಗಳಲ್ಲಿ ಏಕವ್ಯಕ್ತಿ ಪ್ರದರ್ಶನ ಮಾಡಿದ್ದಾರೆ. ಉಪ್ಪಿನಂಗಡಿಯಲ್ಲಿ ೧೯೪೮ರಲ್ಲಿ ಜನಿಸಿದ ಕೆ. ವಿಶ್ವನಾಥ ರೈ ಅವರು ಆಚಾರ್ಯ ಚಿತ್ರಕಲಾ ಭವನದಿಂದ ತರಬೇತಿ ಪಡೆದು ಮುಂಬಯಿ, ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ಏಕವ್ಯಕ್ತಿ ಪ್ರದರ್ಶನ ನೀಡಿದ್ದಾರೆ. ಪುತ್ತೂರಿನಲ್ಲಿ ೧೯೫೦ರಲ್ಲಿ ಜನಿಸಿದ ಎ. ಎನ್. ಆಚಾರ್ಯರು ಕಲಾಭಾರತಿ ಕಲಾಶಾಲೆಯಿಂದ ಕಲಾ ಡಿಪ್ಲೊಮಾ ಪದವಿಪಡೆದು ಮಣಿಪಾಲದ ಕಸ್ತೂರಿಬಾ ವೈದ್ಯಕೀಯ ಕಾಲೇಜಿನಲ್ಲಿ ಕಲಾವಿದರಾಗಿರುವವರು. ಉಡುಪಿ, ಬೆಂಗಳೂರು ಸೇರಿದಂತೆ ಹಲವಾರು ಕಡೆ ಏಕವ್ಯಕ್ತಿ ಕಲಾಪ್ರದರ್ಶನ ನೀಡಿದ್ದಾರೆ. ಮಣಿಪಾಲದ ಅಖಿಲ ಭಾರತ ವೈದ್ಯಕೀಯ ಸಮ್ಮೇಳನ, ದೆಹಲಿಯ ಪೋಸ್ಟರ್ ಸ್ಪರ್ಧೆ, ಆರ್. ಕೆ. ಎಸ್. ಸಭಾದವರ ಸುವರ್ಣ ಪದಕ, ಯುವಜನ ಸಭೆಯ ಪ್ರಶಸ್ತಿ ಇತ್ಯಾದಿ ಪಡೆದಿದ್ದಾರೆ. ಸ್ಕ್ಯಾಕ್ ಕಲಾತಂಡದ ಸದಸ್ಯರಾಗಿದ್ದಾರೆ.

## ವಾಸ್ತುಶಿಲ್ಪ ಮತ್ತು ಶಿಲ್ಪಕಲೆ

ಜಿಲ್ಲೆಯ ವಾಸ್ತುಶಿಲ್ಪ ಶಿಲ್ಪಕಲೆಯ ಬಗ್ಗೆ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದಲೇ ಅಧ್ಯಯನಗಳು ನಡೆದಿವೆ. ಫರ್ಗುಸನ್ ಅವರು ಇಲ್ಲಿಯ ಜೈನ ವಾಸ್ತುಶಿಲ್ಪಗಳ ಬಗ್ಗೆ ಹೇಳುತ್ತಾ ಅದು ದ್ರಾವಿಡ ಶೈಲಿಗಿಂತ ಬೇರೆಯದೇ ಆಗಿದ್ದು, ಟಿಬೆಟ್, ನೇಪಾಳಗಳ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ ಎಂದು ಹೇಳಿದ್ದಾರೆ. ಮೇ ೧೮೭೫ರ ಫ್ರೆಶರ್ಸ್ ಮ್ಯಾಗಸೀನ್‌ನಲ್ಲಿ ವಾಲ್‌ಹೌಸ್ ಎಂಬುವವರು ಜಿಲ್ಲೆಯ ಜೈನ ವಾಸ್ತುಶಿಲ್ಪಗಳ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿಸಿದ್ದು, ಅದನ್ನು ೧೮೯೪ರಲ್ಲಿ ಹೊರಬಂದ ಜೆ. ಸ್ಟೊರ್ರೊಕ್ ಅವರ ಸೌತ್‌ಕೆನರಾ ಮ್ಯಾನ್ಯುಯಲ್‌ನಲ್ಲಿ ಉದಾಹರಿಸಿದ್ದಾರೆ. ಕಾರ್ಕಳ ಹಾಗೂ ವೇಣೂರಿನ ಗೊಮ್ಮಟ ಮೂರ್ತಿಗಳ ಬಗ್ಗೆ ಅಧಿಕವಾಗಿದ್ದರೂ ಮೂಡಬಿದಿರೆಯ ಅನೇಕ ಬಸದಿಗಳು, ಅವುಗಳ ಕೆತ್ತನೆ ಕಾರ್ಯಗಳ ಕುರಿತು ಹೇಳುತ್ತಾ ಅವುಗಳಲ್ಲಿ ಈಜಿಪ್ಟ್, ಚೈನಾಗಳ ವಾಸ್ತುಶೈಲಿಗಳು ಬಳಕೆಯಾಗಿರುವುದಾಗಿ ಕುತೂಹಲ ತಾಳುತ್ತಾರೆ. ಚಂದ್ರನಾಥ ಬಸದಿಯಲ್ಲಿರುವ ಉಬ್ಬುಶಿಲ್ಪ ಉದ್ದನೆಯ ಕತ್ತಿನ ಪ್ರಾಣಿಯನ್ನು 'ಜಿರಾಫೆ' ಎಂದು ಕರೆದಿದ್ದಾರೆ. ೧೮೯೫ರಲ್ಲಿ ಹೊರಬಂದ ಹೆರಾಲ್ಡ್ ಎ. ಸ್ಟೂಅರ್ಟ್ ಅವರ ದಕ್ಷಿಣ ಕನ್ನಡ ಮ್ಯಾನ್ಯುಯಲ್‌ನ ಎರಡನೇಭಾಗದಲ್ಲಿಯೂ ವಾಸ್ತುಶಿಲ್ಪಗಳ ಬಗ್ಗೆ ಇನ್ನಷ್ಟು ವಿವರಗಳಿದ್ದು ಆ ವೇಳೆಗಾಗಲೇ ಕೆಲವು ಶಾಸನಗಳು ಪ್ರಕಟವಾಗಿದ್ದು, ಅವುಗಳನ್ನು ಬಳಸಿಕೊಂಡಿದ್ದಾರೆ. ಮೂಡಬಿದಿರೆಯ ಚಂದ್ರನಾಥ ಬಸದಿಯಲ್ಲಿ ಶಿಲ್ಪಗಳಲ್ಲದೆ ಭಿತ್ತಿಚಿತ್ರಗಳೂ ಇದ್ದ ಬಗ್ಗೆ ತಿಳಿಸುವುದಲ್ಲದೆ, ಊರಿನಲ್ಲಿ ತೀರಾ ಹಳೆಯ ಸೇತುವೆಯೊಂದಿದ್ದು, ಅಂದಿನ ಕಟ್ಟೋಣ ಕಾರ್ಯದ ಬಗ್ಗೆ ಪ್ರಶಂಸಿಸಿದ್ದಾರೆ. ಉಲ್ಲಾಳದ ಸೋಮೇಶ್ವರ ದೇವಾಲಯದ ಬಗ್ಗೆ ಹೇಳುತ್ತಾ ಅದು ಇಟಾಲಿಯನ್ ಶಿಲ್ಪ ಶೈಲಿಯಲ್ಲಿದೆಯೆಂದೂ ಪ್ರಾಯಶಃ ಹದಿನೈದು ಹದಿನಾರನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ ಫ್ಲೋರಂಟೆಯನ್ ಕಲಾವಿದರಿಂದ ಈ ಬಗೆಯ ಶೈಲಿ ಪ್ರಚುರವಾಗಿರಬಹುದೆನ್ನುತ್ತಾರೆ. ವೇಣೂರಿನ ಗೊಮ್ಮಟ ಶಿಲ್ಪದ ಬಗ್ಗೆ ಹೇಳುತ್ತಾ

ಶಿಲ್ಪಕ್ಕೆ ಅರುವತ್ತು ವರ್ಷಗಳಿಗೊಮ್ಮೆ ಅಭಿಷೇಕ ಮಾಡುತ್ತಾರೆಂದೂ ೧೮೮೭ರಲ್ಲಿ ಅಂತಹ ಒಂದು ಕಾರ್ಯಕ್ರಮ ನಡೆಯಿತೆಂದೂ ತಿಳಿಸುತ್ತಾರೆ. ವಾಸ್ತವವಾಗಿ ಹನ್ನೆರಡು ವರ್ಷಗಳಿಗೊಮ್ಮೆ ಮಹಾಮಸ್ತಕಾಭಿಷೇಕ ನಡೆಯುವುದು ಸಂಪ್ರದಾಯ.

ಕಾಲಕಾಲಕ್ಕೆ ದಕ್ಷಿಣ ಕರಾವಳಿಗೆ ಬಂದಿದ್ದ ವಿದೇಶಿ ಪ್ರವಾಸಿಗರು ಜಿಲ್ಲೆಯ ದೇವಾಲಯಗಳ ಬಗ್ಗೆ ಹೇಳುತ್ತಾರೆ. ಸು ೧೮೯೭ರಲ್ಲಿ ಈಜಿಪ್ಟ್‌ನ Oxyrhynchus ಎಂಬಲ್ಲಿ ದೊರೆತ ಕ್ರಿ. ಶ. ೨ನೇ ಶತಮಾನದ ಕಾಗದದ ಹಸ್ತಪ್ರತಿಯಲ್ಲಿ (Papurus) ನಾಟಕವೊಂದು ರಚನೆಯಾಗಿದ್ದು ಅದರಲ್ಲಿರುವುದೆಂದು ಹೇಳಲಾದ ಕನ್ನಡ ಪದಗಳ ಬಗ್ಗೆ ಗೋವಿಂದಪೈ ಮುಂತಾದವರು ಸಂಶೋಧನಾ ಲೇಖನ ರಚಿಸಿದ್ದಾರೆ. ಅದರಲ್ಲಿ ಸೋಮೇಶ್ವರ ದೇವಾಲಯದ ಉಲ್ಲೇಖವಿದ್ದು ಅದು ಮಂಗಳೂರು ಬಳಿಯ ಸೋಮೇಶ್ವರವೆಂದು ತಿಳಿಯಲಾಗಿದೆ. ಹದಿನೈದನೆಯ ಶತಮಾನದಲ್ಲಿ ಬಂದಿದ್ದ ಅಬ್ದುಲ್ ರಜಾಕ್ ಮಂಗಳೂರಿನ ಬಳಿಯ ಪೊಳಲಿಯ ರಾಜರಾಜೇಶ್ವರಿ ದೇವಾಲಯ ಹಾಗೂ ದೇವಿಯ ಶಿಲ್ಪಗಳನ್ನು ವರ್ಣಿಸುತ್ತಾನೆ. ಇಡೀ ದೇವಾಲಯ ಕಂಚಿನಲ್ಲಿ ಎರಕ ಹೊಯ್ದಂತಿದ್ದರೆ ದೇವಿಯ ಶಿಲ್ಪ ಚಿನ್ನದಿಂದ ಮಾಡಿದ ಮನುಷ್ಯಾಕಾರದ ದೊಡ್ಡದಾದ ವಿಗ್ರಹವಾಗಿದ್ದು, ಕಣ್ಣುಗಳಿಗೆ ಮಾಣಿಕ್ಯ ಹೊದಿಸಿದ್ದಾರೆಂದು ಶಿಲ್ಪ ತೀರಾ ಕಲಾತ್ಮಕವಾಗಿದೆಯೆಂದೂ ಹೇಳುತ್ತಾನೆ ಆದರೆ, ಅದು ಚಿನ್ನದಿಂದ ಮಾಡಿದ್ದಾಗಿರದೆ ಮಣ್ಣಿನಿಂದ ಮಾಡಿದ ಮೂರ್ತಿಯಾಗಿದೆ. ಹದಿನಾರನೇ ಶತಮಾನದ ಅಂತ್ಯದಲ್ಲಿ ಬಂದಿದ್ದ ಪ್ರಿಯೆತ್ರೊ ದೆಲ್ಲಾವೆಲ್ಲೆ ಸಹ ಉಲ್ಲಾಳದ ಸೋಮೇಶ್ವರ ದೇವಾಲಯದ ಬಗ್ಗೆ ಹೇಳುತ್ತಾ ಅಂದವಾಗಿ ನಿರ್ಮಿಸಿದ್ದಾರೆಂದೂ ಬಹಳ ಭಕ್ತ ಜನರು ಬರುತ್ತಾರೆಂದೂ ಹೇಳುತ್ತಾನೆ. ಬೆಂಘೋರ್ (ಈಗಿನ ಬೋಳಾರು) ಪ್ರದೇಶದಲ್ಲಿ ಕಮ್ಮಾರರು, ಬೆಳ್ಳಿ ಗಿಲೀಟು ಮಾಡುವವರು ಹಾಗೂ ಗೊಂಬೆ ತಯಾರಕರು ಇದ್ದರೆಂದು ತಿಳಿಸುತ್ತಾನೆ.

ಜಿಲ್ಲೆಯ ವಾಸ್ತು, ಶಿಲ್ಪ, ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ ಪಿ. ಗುರುರಾಜಭಟ್ಟರು ಜಿಲ್ಲೆಯ ದೇವಾಲಯಗಳನ್ನು ಬಾದಾಮಿ ಚಾಳುಕ್ಯ (ಕ್ರಿಶ. ೫೫೦–೮೦೦), ಕಲ್ಯಾಣಿ ಚಾಳುಕ್ಯ (೯೫೦–೧೨೦೦), ಹೊಯ್ಸಳ (೧೧೦೦–೧೩೫೦), ವಿಜಯನಗರ (೧೩೫೦–೧೬೦೦) ಪಾಳೇಗಾರರು (೧೬೫೦–೧೮೦೦) ಎಂದೂ ಜೊತೆಗೆ ತಮಿಳುನಾಡಿನ ಪಲ್ಲವ–ಚೋಳ ಶೈಲಿಯ ದೇವಾಲಯಗಳೆಂದೂ ಪ್ರತ್ಯೇಕವಾಗಿ ಗುರುತಿಸಿದ್ದಾರೆ. ಅಲ್ಲದೆ ದೇವಾಲಯದ ವಾಸ್ತುಶೈಲಿ ಅನುಸರಿಸಿ ವಿಭಾಗಿಸಿಕೊಂಡಿದ್ದಾರೆ. ದೇವಾಲಯದ ಗರ್ಭಗೃಹಗಳ ಆಕಾರಗಳಲ್ಲಿ ಗಜ ಪೃಷ್ಠಾಕಾರ, ಚತುರಸ್ರ, ದೀರ್ಘಚತುರಸ್ರ, ಮಂಡಲಾಕಾರಗಳಿದ್ದು, ಗಜಪೃಷ್ಠಾಕಾರದ ದೇವಾಲಯಗಳು ಕರಾವಳಿಗೆ ವಿಶೇಷವೆಂಬಂತಿವೆ. ಈ ಬಗೆಯ ವಾಸ್ತುಗಳು ಸುರತ್ಕಲ್ಲು ಮಹದೇವ, ಕಂಜಾರಿನ ಶಿವಾಲಯ, ಪುತ್ತೂರಿನ ಮಹಾಲಿಂಗೇಶ್ವರ, ಕಾರಿಂಜೆಯ ಕಾರಿಂಜೇಶ್ವರ, ಪಂಜದ ಪಂಚಲಿಂಗೇಶ್ವರ, ಬಂಟ್ರದ ಶಿವಾಲಯ, ಅಜ್ಜಾವರದ ಮಹಿಷಮರ್ಧಿನಿ, ಮೂಡಬಿದಿರೆಯ ಗೌರಿ, ವಿಟ್ಲದ ಪಂಚಲಿಂಗೇಶ್ವರ, ಕಟೀಲಿನ ದುರ್ಗಾಪರಮೇಶ್ವರಿ, ಇನವಳಿ ಹಾಗೂ ಪುನರೂರಿನ ಶಿವಾಲಯಗಳು ಹಾಗೂ ಈಗ ಕಾಸರಗೋಡು, ಕೇರಳಗಳಲ್ಲಿರುವ ಅಡೂರು, ಮಧೂರು, ಅಂಬಾರುಗಳ ಶಿವಾಲಯಗಳನ್ನು ಈ ಶೈಲಿಗೆ ಉದಾಹರಿಸುತ್ತಾರೆ. ಈ ಬಗೆಯ ವಾಸ್ತುಗಳು ಏಳರಿಂದ ಹತ್ತನೆಯ ಶತಮಾನದ ಕಾಲದಲ್ಲಿ ರಚಿತವಾಗಿರುವಂತಹವು. ಇವು ಶಿವ ಮತ್ತು ಶಕ್ತಿ ದೇವತೆಗಳಿಗೆ ಮೀಸಲಿರುವಂತಹವು. ಇವುಗಳ ಮಾಡುಗಳು ಶಂಖುವಿನ ಆಕಾರದಲ್ಲಿದ್ದು ಬದಿಯಿಂದ ಕಂಡಾಗ ಸಮತ್ರಿಕೋಣಾಕಾರದಲ್ಲಿದ್ದು ಮಧ್ಯದಲ್ಲಿ ಕಲಶವಿರುವುದುಂಟು. ಹೊರಭಿತ್ತಿ ಸಪಾಟಾಗಿದ್ದರೂ ಕ್ವಚಿತ್ತಾಗಿ ಕೆಲವೇ ವಿಗ್ರಹಗಳಿರುವುದೂ ಉಂಟು.

ಜಿಲ್ಲೆಯ ವೈಶಿಷ್ಟ್ಯವೆಂದು ಹೇಳಬಹುದಾದುದು ಪುಷ್ಕರಣಿ ದೇವಾಲಯಗಳು. ಕೊಳವೊಂದರ ಭಾಗವಾಗಿರುವ ದೇವಾಲಯಗಳು ಸರಳ ರಚನೆಗಳಾಗಿದ್ದು, ಅನಂತಪುರದ ಅನಂತಪದ್ಮನಾಭ, ಬೆಳ್ತಂಗಡಿ ತಾಲೂಕಿನ ಕೊಕ್ಕಡದ ಶ್ರೀಕಾಂತಸ್ವಾಮಿ ದೇವಾಲಯ, ಮಂಗಳೂರು ಬಳಿಯ ಕನ್ನಿರೆಯ ಜನಾರ್ದನ ದೇವಾಲಯಗಳನ್ನು ಉದಾಹರಿಸಬಹುದು. ಜಿಲ್ಲೆಯಲ್ಲಿಯೂ ಗುಹಾಂತರ ದೇವಾಲಯಗಳಿದ್ದು ಗುಜ್ಜಾಡಿಯ ಗುಹೇಶ್ವರ, ನೆಲ್ಲಿ ತೀರ್ಥದ ಶಿವ ದೇವಾಲಯ, ಕಾಶಿಪಟ್ನದ ದುರ್ಗ ದೇವಾಲಯ, ಗುಡ್ಡೆತ್ತು ಹಾಗೂ ಸಿರಿಯಾರದ ಗಣಪತಿ ದೇವಾಲಯಗಳು ಉದಾಹರಿಸಬಹುದಾಗಿದೆ. ಬೇರೆಡೆ ಇರುವಂತೆ ಜಿಲ್ಲೆಯಲ್ಲಿಯೂ ಬೆಟ್ಟದ ಮೇಲೆ ದೇವಾಲಯಗಳ ರಚನೆ ಕಂಡುಬರುತ್ತದೆ. ನರಸಿಂಹ ಪರ್ವತದ ಶಿವ; ಕಾರಂಜೆಯ ಶಿವ, ಕೋಟೆಕಾರಿನ ಹತ್ತಿರದ ಕೋಟೆ ವಿಷ್ಣು ಮೂರ್ತಿ ಇತ್ಯಾದಿಗಳು ಪ್ರಸಿದ್ಧವಿದೆ. ಜಿಲ್ಲೆಯ ಪಶ್ಚಿಮದ ಬದಿಯಲ್ಲಿ ಸಮುದ್ರ ಕಿನಾರೆಯಿದ್ದು, ಕೆಲವೆಡೆ ಕಡಲ ತೀರದ ದೇವಾಲಯಗಳು ರಚನೆಗೊಂಡಿವೆ. ಸುರತ್ಕಲ್ಲಿನ ಸದಾಶಿವ, ಉಳ್ಳಾಲದ ಸೋಮನಾಥೇಶ್ವರಗಳನ್ನು ಹೆಸರಿಸಬಹುದಾಗಿದೆ. ನದಿ ತೀರಗಳಲ್ಲಿ ತೀರ್ಥ ಕ್ಷೇತ್ರಗಳೆಂದು ಹೆಸರಿಸುವ ಜಾಗಗಳಲ್ಲಿ ದೇವಾಲಯಗಳಿದ್ದು ನೀಲಾವರದ ದುರ್ಗ ಭಗವತಿ, ಜಾಪಟೆಯ ಜಂಬುಕೇಶ್ವರ, ಅರಚೋಲಿಯ ದುರ್ಗ, ಆರೂರಿನ ವಿಷ್ಣುಮೂರ್ತಿ, ಶಿವಪುರದ ಸದಾಶಿವ, ನಾರಾವಿಯ ಸೂರ್ಯನಾರಾಯಣ, ಕಡೇಶ್ವಾಲ್ಯದ ನರಸಿಂಹ, ಸುಬ್ರಹ್ಮಣ್ಯದ ಸುಬ್ರಹ್ಮಣ್ಯ, ಹರಿಹರ ಕ್ಷೇತ್ರದ ಹರಿಹರೇಶ್ವರ, ಉಪ್ಪಿನಂಗಡಿಯ

ಸಹಸ್ರಲಿಂಗ, ನಂದಾವರದ ಶಂಕರನಾರಾಯಣ, ಮಾದೂರಿನ ಅನಂತೇಶ್ವರ, ಬಂಟ್ವಾಳದ ವೆಂಕಟರಮಣ, ಮಂಗಳೂರಿನ ನೀರ ದೇವಾಲಯಗಳನ್ನು ಉಲ್ಲೇಖಿಸಬಹುದಾಗಿದೆ. ಜಿಲ್ಲೆಯಲ್ಲಿ ಕೆಲವು ದ್ವಿಕೂಟಾಚಲ ದೇವಾಲಯಗಳಿದ್ದು, ಅವುಗಳಲ್ಲಿ ಮಂಗಳೂರಿನ ಕಾಳಿಕಾಂಬ–ಗಣೇಶ; ಉದ್ಯಾವರದ ಬೊಮ್ಮೇಶ್ವರ; ಇರೋಡೆಯ ನರಸಿಂಹ–ಭಗವತಿ; ಸರಲೆಬೆಟ್ಟುವಿನ ಉಮಾಮಹೇಶ್ವರ ದೇವಾಲಯಗಳನ್ನು ಉದಾಹರಿಸಲಾಗಿದೆ.

ಸಾಮಾನ್ಯವಾಗಿ ದೇವಾಲಯಗಳನ್ನು ಜಂಬಿಟ್ಟಿಗೆ, ಗಾರೆಗಳಿಂದ ನಿರ್ಮಿಸಿದ್ದರೂ ಮರದ ರಚನೆಗಳು ದೇವಾಲಯಗಳ ಒಳ–ಹೊರ ಭಾಗಗಳಲ್ಲಿ ಕಂಡು ಬರುವುದುಂಟು, ಅಲಂಕಾರಯುತವಾಗಿ ಕೆತ್ತಿದ ಮರದ ಕಿಟಕಿ ಬಾಗಿಲುಗಳೂ, ತೆರೆಗಳು, ವಿಗ್ರಹಗಳು ಹಲವಾರು ವರ್ಷಗಳಿಂದ ಪ್ರಕೃತಿ ವಿಕೋಪವನ್ನು ತಾಳಿ ಉಳಿದಿವೆ. ಜನಪದ ದೈವಗಳಿಗೆ ಗರಡಿ, ಬ್ರಹ್ಮಸ್ಥಾನ, ಗುಡಿಗಳಿದ್ದು, ಅನೇಕವು ಮೂರ್ತಿಯೂ ಸೇರಿದಂತೆ ಮರದ ರಚನೆಗಳು.

ಜಿಲ್ಲೆಯಲ್ಲಿ ಹಲವಾರು ಬಗೆಯ ಶಿಲ್ಪಗಳು ಬಿಡಿಯಾಗಿ ಹಾಗೂ ದೇವಾಲಯಗಳಲ್ಲಿ ದೊರೆಯುತ್ತಿದ್ದು, ಅವುಗಳನ್ನು ಕಂಚು, ಶಿಲೆ, ಮರ ಹಾಗೂ ಗಾರೆಯ ಶಿಲ್ಪಗಳೆಂದು ವರ್ಗೀಕರಿಸಿ ನೋಡಿದೆ. ಕದ್ರಿಯ ಮಂಜುನಾಥ ದೇವಾಲಯದಲ್ಲಿ ಬೃಹತ್ ಪ್ರಮಾಣದ ನಾಲ್ಕು ಕಂಚಿನ ಮೂರ್ತಿಗಳಿದ್ದು ಅವುಗಳನ್ನು ಅವಲೋಕಿತೇಶ್ವರ, ಲೋಕೇಶ್ವರ (ಎರಡು)ಹಾಗೂ ಧ್ಯಾನಿ ಬುದ್ಧಗಳೆಂದು ಗುರುತಿಸಲಾಗಿದೆ. ಶಿಲ್ಪವೊಂದರ ಪೀಠದಲ್ಲಿ ೯೬೮ ಕ್ರಿ.ಶ. ದ ಶಾಸನವಿದೆ. ಎರಡು ವಿಗ್ರಹಗಳು ಕುಳಿತ ಭಂಗಿಯಲ್ಲಿದ್ದು, ಐದು ಅಡಿ ಎತ್ತರವಿದೆ. ಹಿತಮಿತ ಆಭರಣಗಳು, ಸುಂದರ ಮುಖಭಾವ ಇತ್ಯಾದಿಗಳಿಂದ ಉತ್ಕೃಷ್ಟ ಮಾದರಿಯ ಶಿಲ್ಪಗಳಾಗಿವೆ. ಮೂಡಬಿದರಿಯ ತ್ರಿಭುವನ ಚೂಡಾಮಣಿಯ ಬಸ್ತಿಯ ೧೪೨೯ರ ಚಂದ್ರಪ್ರಭಾ ತೀರ್ಥಂಕರನ ಮೂರ್ತಿ ೨೨೫ ಸೆಂ. ಮಿ. ಎತ್ತರವಿದ್ದು, ಅತ್ಯಂತ ಎತ್ತರದ ಲೋಹದ ಶಿಲ್ಪವೆಂದು ಪರಿಗಣಿಸಿದೆ. ಬಂಗಾಡಿಯ ನೇಮಿನಾಥನ ಲೋಹದ ಶಿಲ್ಪ ಹೊಯ್ಸಳರ ಕಾಲದ್ದಾಗಿದ್ದು, ಸುಂದರವಾದ ಮಕರ ತೋರಣದ ಪ್ರಭಾವಳಿಯನ್ನು ಹೊಂದಿದೆ. ಮಂಗಳೂರಿನ ಕಾರ್ಣಿಕ ಮುಖ್ಯ ಪ್ರಾಣ ದೇವಾಲಯದಲ್ಲಿಯೂ ಕೆಲವು ಲೋಹದ ಶಿಲ್ಪಗಳಿವೆ. ಸಾಮಾನ್ಯವಾಗಿ ದೇವಾಲಯದ ಉತ್ಸವ ಮೂರ್ತಿಗಳು ಲೋಹದಿಂದ ರೂಪಿಸಿದ್ದು, ಅನೇಕ ದೇವಾಲಯಗಳಲ್ಲಿ ಕಾಣಬಹುದು. ಮಂಗಳೂರಿನ ಸರ್ಕಾರಿ ಪುರಾತತ್ವ ಇಲಾಖೆಯ ಮ್ಯೂಸಿಯಂನಲ್ಲಿ ದುರ್ಗಾ ಪರಮೇಶ್ವರಿ, ಮಹಿಷಮರ್ದಿನಿಯರ ಶಿಲ್ಪಗಳಿವೆ. ಕೆಲ್ಲ–ಪುತ್ತಿಗೆ, ನಾರಾವಿ ಹಾಗೂ ಕುಂಜುಬೆಟ್ಟುಗಳಲ್ಲಿಯ ಸೂರ್ಯನ ವಿಗ್ರಹಗಳು ಅಶ್ವದಸಮೇತ ನಿಂತಿರುವ ಭಂಗಿಯಲ್ಲಿದ್ದು, ಈ ಬಗೆಯ ಲೋಹದ ವಿಗ್ರಹಗಳು ಅಪರೂಪವೆನಿಸಿವೆ.

ಶಿಲಾ ಶಿಲ್ಪಗಳಲ್ಲಿ ವೇಣೂರಿನ ೩೫ ಅಡಿ ಎತ್ತರದ, ೧೬೦೪ರಲ್ಲಿ ರಚಿಸಿದ ಗೊಮ್ಮಟ ಹಾಗೂ ಈಚೆಗೆ ಧರ್ಮಸ್ಥಳದಲ್ಲಿ ೧೯೮೨ರಲ್ಲಿ ರಂಜಾಳ ಗೋಪಾಲ ಶೆಣೈ ನಿರ್ಮಿಸಿದ ೩೮ ಅಡಿ ಎತ್ತರದ ಗೊಮ್ಮಟ ಶಿಲ್ಪಗಳು ಜಿಲ್ಲೆಯಲ್ಲಿ ಈ ಬಗೆಯ ಬೃಹತ್ ಶಿಲ್ಪ ಪರಂಪರೆಗೆ ಸಾಕ್ಷಿಯಾಗಿವೆ. ಪುತ್ತೂರು ತಾಲೂಕಿನ ಬೆಳ್ಮಣ್ಣು ಹಾಗೂ ಕುಂಜೂರುಗಳಲ್ಲಿಯ ಮಹಿಷಮರ್ಧಿನಿಯ ಶಿಲಾ ಶಿಲ್ಪಗಳು ಎಂಟನೆಯ ಶತಮಾನದೆಂದು ಊಹಿಸಲಾಗಿದೆ. ಬೋಳಾರಿನ ಮಂಗಳಾದೇವಿ, ಕದ್ರಿಯ ಮಂಜುನಾಥ ದೇವಾಲಯದ ಅಮ್ಮನವರುಗಳ ಶಿಲಾ ವಿಗ್ರಹಗಳೂ ಪ್ರಾಚೀನವಾಗಿದ್ದು, ಏಳನೆಯ ಶತಮಾನದ್ದೆಂದು ತಿಳಿಯಲಾಗಿದೆ. ಬೆಳ್ತಂಗಡಿ ತಾಲೂಕಿನ ಕೆಮ್ಮಣ್ಣುವಿನ ದುರ್ಗೆ, ಚಂದಕೂರಿನ ದುರ್ಗಾ ಪರಮೇಶ್ವರಿ, ಕಟೀಲಿನ ಸಿಂಹವಾಹಿನಿ ದುರ್ಗೆ, ಬಸರೂರಿನ ತಿರುಮಲೆ ದೇವಾಲಯದ ಗಜಲಕ್ಷ್ಮಿ ಇತ್ಯಾದಿ ದೇವಿ ಶಿಲ್ಪಗಳು ಕಂಡುಬರುತ್ತವೆ. ವಿಷ್ಣುವಿನ ಶಿಲಾಮೂರ್ತಿ ಶಿಲ್ಪಗಳು, ಪುತ್ತೂರು ತಾಲೂಕಿನ ಕೋಡಿಪಡಿ, ಕುಂಭಕಾಶಿಯ ಕೇಶವ, ಸಿರೂರಿನ ಶ್ರೀಧರರ ಶಿಲ್ಪಗಳು ಒಂಬತ್ತನೆಯ ಶತಮಾನದವೆಂದು ಗ್ರಹಿಸಿದೆ.  ಮಂಗಳೂರು ತಾಲೂಕಿನ ಮುನ್ನೂರು, ಅತ್ತಾವರ; ಬಂಟ್ವಾಳ ತಾಲೂಕಿನ ಮಂಚಿ; ಪುತ್ತೂರು ತಾಲೂಕಿನ ಬಿಲಿನೇಲಿ, ಕುಂಬ್ಳೆಯ ಅನಂತಪದ್ಮನಾಭ, ಮುಜುಂಗವಿಯ ಕೃಷ್ಣನ ವಿಗ್ರಹಗಳು ಉಲ್ಲೇಖನೀಯ. ದ್ವಿಬಾಹು ಗಣಪತಿ ಅತ್ತಾವರದಲ್ಲಿದ್ದು, ಕೋಟೇಶ್ವರ, ಮಣ್ಣೂರು, ಸುಬ್ರಹ್ಮಣ್ಯ, ಕಿರಿಮಂಜೇಶ್ವರಗಳಲ್ಲಿ ಗಣಪತಿಯು ನಿಂತ ಇಲ್ಲವೆ ನೃತ್ಯ ಭಂಗಿಯಲ್ಲಿವೆ.

ಗಾರೆ ಶಿಲ್ಪಗಳಲ್ಲಿ ಪೊಳಲಿಯ ರಾಜರಾಜೇಶ್ವರಿ ಶಿಲ್ಪ ಎಂಟು ಅಡಿ ಎತ್ತರವಿದ್ದು ಭದ್ರಕಾಳಿ, ಸ್ಕಂಧರಿಂದ ಕೂಡಿದ್ದು, ಈ ಬಗೆಯ ಶಿಲ್ಪಗಳಲ್ಲಿ ಅತ್ಯುತ್ತಮವೆನಿಸಿದೆ. ಮೂಡಬಿದರಿಯ ಲೆಪ್ಪದ ಬಸ್ತಿಯ ಚಂದ್ರನಾಥ ತೀರ್ಥಂಕರ ಜ್ವಾಲಾಮಾಲಿನಿ ಶ್ಯಾಮಯಕ್ಷರು ಹಾಗೂ ಮಂಗಳೂರಿನ ಮ್ಯೂಸಿಯಂನಲ್ಲಿನ ಪದ್ಮಾವತಿಯರ ಗಾರೆಯ ಶಿಲ್ಪ ಚಿಕ್ಕದಿದ್ದರೂ ಸುಂದರವಾಗಿದೆ. ಕಾಷ್ಠ ಶಿಲ್ಪಗಳಲ್ಲಿ ಮೂಡಬಿದಿರೆಯ ಚೌಟರ ಅರಮನೆ ಕುಕ್ಕೆ ಸುಬ್ರಹ್ಮಣ್ಯದ ಮಾಧ್ವ ಮಠ ಹಾಗೂ ಚಂದ್ರನಾಥ ಬಸದಿಯ ಶಿಲ್ಪಗಳು ರಚನೆಯಲ್ಲಿ ಉತ್ತಮವಾಗಿವೆ.

ಜಿಲ್ಲೆಯಲ್ಲಿ ಕೆಲವು ಶಿಲ್ಪಕಲಾವಿದರಿದ್ದು ಲಭ್ಯ ಮಾಹಿತಿಯನ್ನು ಇಲ್ಲಿ ನೀಡಿದೆ. ಬಂಟ್ವಾಳದ ಬಿ.ಶಂಕರನಾರಾಯಣ ಹೊಳ್ಳ ಅವರು ಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದು, ಮಣ್ಣು, ಸಿಮೆಂಟ್, ಫೈಬರ್ ಮಾಧ್ಯಮಗಳಲ್ಲಿ ಮೂರ್ತಿ ರಚನೆ ಮಾಡುತ್ತಿದ್ದಾರೆ. 'ಹೊಳ್ಳ ಆರ್ಟ್' ಎಂಬ ಸಂಸ್ಥೆ ಪ್ರಾರಂಭಿಸಿ ವಾಣಿಜ್ಯ ಹಾಗೂ ಕರಕುಶಲಕಲೆಗಳನ್ನು ರಚಿಸಿದ್ದಾರೆ. ಸುಳ್ಯದ ಲವ ಆಚಾರ್ಯ ಕೇರಳದ ಪೈಯನೂರಿನಲ್ಲಿ ಶಿಲ್ಪಕಲೆ ಕಲಿತು ಮರದಲ್ಲಿ ಸಾಂಪ್ರದಾಯಿಕ ಶಿಲ್ಪಗಳನ್ನು ಮಾಡುತ್ತಿದ್ದಾರೆ. ಸುಳ್ಯದ ಕೆ.ನಾರಾಯಣ ಅವರು ಸಾಂಪ್ರದಾಯಿಕ ಶಿಲ್ಪ ರಚನೆಗಳಲ್ಲಿ ಪರಿಣತರಿದ್ದಾರೆ. ಸುಳುಹು ಹೊಳಹುಗಳಿಂದ ಕೂಡಿದ ಮರದ ಬಾಗಿಲು, ತೇರು, ಮಂಟಪಗಳನ್ನು ರಚಿಸುತ್ತಾರೆ. ಆಧುನಿಕ ಕಲಾಪ್ರಕಾರದಲ್ಲೂ ಅಭಿವ್ಯಕ್ತಿಸುವುದುಂಟು. ಮೂಡಬಿದಿರೆಯ ಬಾಬುರಾಯ ಆಚಾರ್ಯರು ಸಾಂಪ್ರದಾಯಿಕವಾಗಿ ಶಿಲ್ಪಕಲೆ ಕಲಿತಿದ್ದು ಶಿಲೆ ಹಾಗೂ ಮರದಲ್ಲಿ ಅನೇಕ ಶಿಲ್ಪಗಳನ್ನು ಕೆತ್ತಿದ್ದಾರೆ. ತಮಿಳುನಾಡು ಸೇರಿದಂತೆ ಜಿಲ್ಲೆಯ ಅನೇಕ ಕಡೆಗಳಲ್ಲಿ ಶ್ರೀಯುತರು ರಚಿಸಿದ ರಥ, ಪುಷ್ಪಕ ವಿಮಾನ ಮುಂತಾದವುಗಳನ್ನು ಕಾಣಬಹುದು. ಶ್ರೀಯುತರ ಸೇವೆಯನ್ನು ಗುರುತಿಸಿ ಹಲವಾರು ಸನ್ಮಾನಗಳು ಸಂದಿವೆ. ಮಂಗಳೂರಿನ ಕೃಷ್ಣಪ್ಪ ಕೋಟೆಕಾರ್ ಅವರು ವಿವಿಧ ಮಾಧ್ಯಮಗಳಲ್ಲಿ ಯಕ್ಷಗಾನ ಹಾಗೂ ಜನಪದ ಕಲೆಗಳಿಗೆ ಪೂರಕವಾಗುವಂತೆ ವೇಷ ಭೂಷಣಗಳನ್ನು ರಚಿಸುತ್ತಾರೆ. ಅಲ್ಲದೆ ಕಿರುಪ್ರಮಾಣದಲ್ಲಿ ಯಕ್ಷಗಾನದ ಮುಖವನ್ನು ಹೋಲುವಂತೆ ಶಿಲ್ಪಗಳನ್ನು ರಚಿಸುತ್ತಾರೆ. ದೆಹಲಿಯ ಗಣರಾಜ್ಯೋತ್ಸವ, ಮೈಸೂರು ದಸರಾ, ಹಂಪಿ ಉತ್ಸವಗಳಲ್ಲಿ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ವಿಠಲ. ಎಂ. ಅವರು ಪುತ್ತೂರಿನಲ್ಲಿ ೧೯೪೩ರಲ್ಲಿ ಜನಿಸಿ ತಂದೆಯಿಂದ ವಂಶಪರಾಂಪರ್ಯ ಶಿಲ್ಪಕಲೆ ಕಲಿತು ಅಭಿವ್ಯಕ್ತಿಸುತ್ತಿದ್ದಾರೆ. ದೆಹಲಿ, ಮುಂಬಯಿ ಕೋಲ್ಕತಾ ಸೇರಿದಂತೆ ಹಲವಾರು ಕಡೆ ಕೃತಿ ಸಂಗ್ರಹಿತವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಪುತ್ತೂರು ತಾಲೂಕು ಪ್ರತಿನಿಧಿಯಾಗಿದ್ದು, ಕೆಲವು ಪುಸ್ತಕ ರಚಿಸಿದ್ದಾರೆ.

ಅತ್ತಾವರ ಅನಂತಚಾರ್ಯರು ಮೂಲತ: ಶಿಲ್ಪಿಗಳಾಗಿದ್ದು, ಕನ್ನಡ ಲಿಪಿಗೆ ಸುಂದರವಾದ ವಿನ್ಯಾಸವನ್ನು ತಯಾರಿಸಿದ್ದು "ಅನಂತಾ ಶೇಡ್ಸ್" ಎಂದೇ ಪ್ರಸಿದ್ಧವಾಗಿದೆ. ಇವರು ಹಿಂದಿ ಹಾಗೂ ತೆಲುಗು ಲಿಪಿಗಳಿಗೂ ಸುಂದರವಾದ ಆಕಾರ ನೀಡಿದಂತೆ ತಿಳಿದುಬರುತ್ತದೆ. ಇವರ ಶಿಷ್ಯ ನಾರಾಯಣಚಾರ್ಯರು ದೊಡ್ಡ ಅಳತೆಯ ಮುದ್ರಣಕ್ಕೆ ಬೇಕಾಗುವ ಮರದ ಬ್ಲಾಕ್ ತಯಾರಿಸುತ್ತಾರೆ. ವೇಣೂರಿನ ನಡತಿ ಕಲ್ಲು ಸತೀಶ್ ಆಚಾರ್ ದೇವಸ್ಥಾನದ ರಥಶಿಲ್ಪಿಗಳಾಗಿದ್ದಾರೆ. ಮಂಗಳೂರಿನ "ಕಮಲಾ ಆರ್ಟ್ಸ್"ನ ಸುಮಿತ್ರಾಚಾರ್ಯರವರು ಮಣ್ಣಿನ ಮೂರ್ತಿಗಳನ್ನೂ, ಸಾರ್ವಜನಿಕ ಗಣೇಶ ತಯಾರಿಸುವುದರಲ್ಲಿ ಜನಪ್ರಿಯರಾಗಿದ್ದಾರೆ. ವೈ.ಎನ್.ಅನಂತಾಚಾರ್ಯರು ಶಾರದೆ ಹಾಗೂ ಸಾರ್ವಜನಿಕ ಗಣೇಶ ಶಿಲ್ಪಕ್ಕೆ ಪ್ರಸಿದ್ಧರಿದ್ದಾರೆ. ಕಾಸರಗೋಡಿನ ಅಪ್ಪಣ್ಣಾಚಾರ್ಯರು ಕಾಷ್ಠಶಿಲ್ಪ, ವಾಸ್ತುಶಿಲ್ಪ, ಆಭರಣಪೆಟ್ಟಿಗೆ ಇತ್ಯಾದಿಗಳನ್ನು ಕಲಾತ್ಮಕವಾಗಿ ರೂಪಿಸುವುದರಲ್ಲಿ ಸಿದ್ಧಹಸ್ತರಿದ್ದಾರೆ. ಉಪೇಂದ್ರ ಆಚಾರ್ಯ ಅವರು ಬೆಳ್ಳಿಲೋಹದ ತಗಡಿನ ಉಬ್ಬುಶಿಲ್ಪಗಳು, ಪ್ರಭಾವಳಿಗಳ ರಚನೆಯಲ್ಲಿ ಖ್ಯಾತರಾಗಿದ್ದಾರೆ. ಪುರೋಹಿತ ಗಣಪತಿ ಆಚಾರ್ಯರು ಬೆಳ್ಳಿಯ ಮಂಟಪ ಪ್ರಭಾವಳಿಗಳನ್ನು ರಚಿಸುತ್ತಾರೆ. ಇವರಲ್ಲದೆ ಸಿಮೆಂಟ್ ಫೈಬರ್ ಗ್ಲಾಸ್‌ಗಳಲ್ಲಿ ನೂರಾರು ಶಿಲ್ಪ ರಚಿಸಿರುವ ಪುತ್ತೂರಿನ ರಾಜಶೇಖರ ಬಿ. ಜಿ, ರಥಶಿಲ್ಪಿ ವಾಸುದೇವ ಆಚಾರ್ಯ, ಮೂರು ವರ್ಷ ಬಹರಿನ್‌ನಲ್ಲಿ ಅಭ್ಯಸಿಸಿದ ಲೋಹಶಿಲ್ಪಿ ಎಂ.ಎನ್. ದಿವಾಕರ ಆಚಾರ್ಯ, ಬಂಟ್ವಾಳದ ಸದಾಶಿವಶೆಟ್ಟಿ ಮುಂತಾದವರನ್ನು ಉದಾಹರಿಸಬಹುದು.

## ಸಂಗ್ರಹಾಲಯಗಳು

ಡೊಂಗರಕೇರಿಯ ಕೆನರಾ ಹೈಸ್ಕೂಲ್‌ನಲ್ಲಿ ಎಪ್ಪತ್ತು ವರ್ಷಗಳ ಹಿಂದೆ ಗಾಂಧೀಜಿ ಬಂದ ನೆನಪಿಗಾಗಿ 'ಗಾಂಧಿ ಮ್ಯೂಸಿಯಂ' ಆರಂಭವಾಗಿ ಶೈಕ್ಷಣಿಕ ವಿಷಯಗಳಿಗೆ ಹಾಗೂ ಐತಿಹಾಸಿಕವಾಗಿ ಆಯುಧಗಳು, ನಾಣ್ಯಗಳು, ಸಾಹಿತ್ಯಕವಾಗಿ ತಾಳೆಯೋಲೆ ಮತ್ತು ಶಿಲ್ಪ ಚಿತ್ರಕಲಾಕೃತಿಗಳಿಂದ ಒಳಗೊಂಡ ಅನೇಕ ವಸ್ತುಗಳ ಸಂಗ್ರಹವಿದೆ ಅಲ್ಲದೆ, ಮಿರಾಜ್‌ಕಲ್ ಬಂಗಲೆಯ ಮ್ಯೂಸಿಯಂ, ಕಲಾವಿದ ಪಾವಂಜೆಯವರ ಕೃತಿಗಳ ಸಂಗ್ರಹಾಲಯ ಹಾಗೂ ಇನ್ನಿತರ ವಸ್ತುಗಳ ಪ್ರದರ್ಶನಾಲಯ ಹೆಸರಿಸಬಹುದು. ಧರ್ಮಸ್ಥಳದಲ್ಲಿ 'ಮಂಜೂಷ' ಹೆಸರಿನಲ್ಲಿರುವ ಪ್ರದರ್ಶನಾಲಯದಲ್ಲಿ ತುಳುಲಿಪಿಯ ತಾಳೆಯೋಲೆಯಲ್ಲದೆ, ಪುರಾತನ ಕಾಲದ ಕ್ಯಾಮರ, ಟೈಪ್‌ರೈಟರ್, ಚಿತ್ರ ಶಿಲ್ಪಗಳು ಸೇರಿದಂತೆ ಸಾವಿರಾರು ಕುತೂಹಲಕರವಾದ ವಸ್ತುಗಳನ್ನು ಸಂಗ್ರಹಿಸಿ ಇಡಲಾಗಿದೆ. ಹೊರಗಿನ ಬಯಲಲ್ಲಿ ಮರದ ತೇರುಗಳು, ಕಾರುಗಳನ್ನು ಸಂಗ್ರಹಿಸಿ ಪ್ರದರ್ಶಿಸಿದೆ.

ಜಿಲ್ಲೆಯಾದ್ಯಂತ ಖಾಸಗಿಯಾಗಿ ಅನೇಕರು ಹಳೆಯ ಪತ್ರಿಕೆಗಳು, ನಾಣ್ಯಗಳು, ಪುರಾತತ್ವ ವಸ್ತುಗಳು, ಪುಸ್ತಕ, ಅಂಚೆ ಚೀಟಿಗಳು ಇತ್ಯಾದಿ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ ಉಳ್ಳವರಾಗಿದ್ದಾರೆ. ಆಯಾ ವಿಷಯಗಳನ್ನು ಕುರಿತು ಸಂಶೋಧನೆ ನಡೆಸುವವರಿಗೆ ಮೂಲ ಆಕರ ನೀಡಬಲ್ಲವರಾಗಿದ್ದಾರೆ. ಇಂತಹ ಖಾಸಗಿ ಸಂಗ್ರಹಾಲಯಗಳು ಹೊರ ಪ್ರಪಂಚಕ್ಕೆ ತಿಳಿದು ಬರುವುದು ಕಡಿಮೆಯೇ.

ಕುಂಬ್ಳೆ ರಾಧಾಕೃಷ್ಣ ಕಂಚಿನಡ್ಕ ಶಂಕರ ಪ್ರಸಾದ್, ಉದಯವಿಟ್ಲರಂತಹ ಅನೇಕರನ್ನು ಈ ದಿಸೆಯಲ್ಲಿ ಹೆಸರಿಸಬಹುದು. ಮಂಗಳೂರಿನ ರಾಜ್ಯ ಸರ್ಕಾರಿ ಪುರಾತತ್ವ ಇಲಾಖೆಯ ಪ್ರದರ್ಶನಾಲಯದಲ್ಲೂ ಅನೇಕ ಬಿಡಿ ಶಿಲ್ಪಗಳನ್ನು ಕಾಣಬಹುದು.

**ಅಂಚೆಚೀಟಿ–ನಾಣ್ಯ ಸಂಗ್ರಹ**

ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಅಂಚೆಚೀಟಿ ಹಾಗೂ ನಾಣ್ಯ ಸಂಗ್ರಾಹಕರ ಸಂಘವಿದ್ದು, ರಾಷ್ಟ್ರೀಯ ಅಂಚೆ ಚೀಟಿ ಹಾಗೂ ನಾಣ್ಯ ಸಂಗ್ರಾಹಕರ ಕಾಂಗ್ರೆಸ್ ವ್ಯಾಪ್ತಿಗೆ ಒಳಪಟ್ಟಿದೆ. ೧೯೭೫ರಲ್ಲಿ ಎನ್.ವಿ.ಶೆಣೈ, ನಿವೃತ್ತ ಅಂಚೆ ಇಲಾಖೆಯ ಅಧಿಕಾರಿ ಅವರ ಪ್ರಯತ್ನದಿಂದಾಗಿ ಸಂಸ್ಥೆ ಆರಂಭವಾಯಿತು. ಅಂಚೆ ಚೀಟಿ ಹಾಗೂ ನಾಣ್ಯಗಳ ಮೂಲಕ ಯುವ ಜನತೆಗೆ ತಿಳುವಳಿಕೆ ಮತ್ತು ಆಸಕ್ತಿ ಮೂಡಿಸುವ ಸಲುವಾಗಿ ಸಂಸ್ಥೆ ಜಿಲ್ಲೆಯಾದ್ಯಂತ ಕಾರ್ಯಚಟುವಟಿಕೆಯನ್ನು ವಿಸ್ತರಿಸಬೇಕೆಂಬ ಹಂಬಲಉಳ್ಳವರಾಗಿದ್ದಾರೆ. ೧೯೦೨ರವರೆಗೆ ಅಂಚೆಚೀಟಿಗೆ ಮಾತ್ರ ಗಮನವಿತ್ತಿದ್ದು ಆನಂತರ ನಾಣ್ಯ ಕುರಿತ ಸಂಗ್ರಹಣೆಗೂ ವ್ಯಾಪ್ತಿ ವಿಸ್ತರಿಸಿದ್ದು ಸಂಸ್ಥೆಯ ಹೆಸರನ್ನು ಸೂಕ್ತವಾಗಿ ಬದಲಿಸಿಕೊಂಡಿತು. ಸಂಸ್ಥೆಯಲ್ಲಿ ೧೫೦೦ಕ್ಕೂ ಹೆಚ್ಚು ಪುರಾತನ ನಾಣ್ಯ ಸಂಗ್ರಹಗಳಿದ್ದು ಎಲ್ಲಾ ವಿವರಗಳನ್ನು ತನ್ನದೇ ಆದ ವೆಬ್‌ಸೈಟ್‌ನಲ್ಲಿ ಅಳವಡಿಸಿಕೊಂಡಿದೆ.

**ರಾಷ್ಟ್ರ ಹಾಗೂ ರಾಜ್ಯ ಪ್ರಾಚ್ಯವಸ್ತು ಇಲಾಖೆಯವರಿಂದ ಸಂರಕ್ಷಿತವಾಗಿರುವ ಸ್ಮಾರಕಗಳು.**

**ರಾಷ್ಟ್ರ ಸ್ಮಾರಕಗಳು:** ಮಂಗಳೂರು ತಾಲೂಕು–ಬಪ್ಪನಾಡು–ಕೋಟಕೇರಿಜೈನ ಬಸ್ತಿಯ ಮುಂದಿರುವ ಸ್ಥಂಭ, ಬೋಳೂರು–ಸುಲ್ತಾನ ಬತೇರಿ, ಮಂಗಳೂರು–ಮಂಗಳಾದೇವಿ ದೇವಾಲಯ, ಬೆಳ್ತಂಗಡಿ ತಾಲೂಕು–ನಾಡ ಮತ್ತು ಲೇಲ–ಜಮಾಲಬಾದ್ ಕೋಟೆ

**ರಾಜ್ಯ ಸ್ಮಾರಕಗಳು:** ಸುಳ್ಯ ತಾಲೂಕು–ಕಣಜಿ–ದುರ್ಗಾಪರಮೇಶ್ವರಿ(ತ್ರಿಶೂಲಿನಿ)ದೇವಾಲಯ.

(ಆಧಾರ: ರಾಜ್ಯ ಪ್ರಾಚ್ಯವಸ್ತು ಹಾಗೂ ಪ್ರದರ್ಶನಾಲಯಗಳ ನಿರ್ದೇಶಿಕೆ ೨೦೦೩)

# ರಂಗಭೂಮಿ *

ಜಿಲ್ಲೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಿಂದ ರಂಗಭೂಮಿಯ ಚಟುವಟಿಕೆ ಕಂಡುಬರುತ್ತದೆ. ಲಭ್ಯ ದಾಖಲೆಯಂತೆ ೧೮೯೨ರಲ್ಲಿ ಮಂಗಳೂರಿನ ದತ್ತಾತ್ರೇಯ ದೇವಾಲಯದ ಎದುರು ಶ್ರೀ ನಾರಾಯಣ ಭಟ್ಟರೆಂಬುವವರು ಗೆಳೆಯರೊಂದಿಗೆ ಕೂಡಿ 'ದತ್ತಜನ್ಮ' ಹಾಗೂ 'ಸಂತ ತುಕಾರಾಮ' ಎಂಬ ಎರಡು ಮರಾಠಿ ನಾಟಕ ಆಡಿದಂತೆ ತಿಳಿದುಬರುತ್ತದೆ. ನಂತರ ೧೯೦೨ರಲ್ಲಿ ಅಪು ಇಂದ್ರ ಎಂಬುವವರು ನಾಟಕ ಸಂಸ್ಥೆ ಸ್ಥಾಪಿಸಿದ್ದು, ಅದು ಅವರ ಹೆಸರಿನಿಂದಲೇ ಗುರುತಿಸಲಾಗುತ್ತಿತ್ತು. ಕಂಪನಿಯಲ್ಲಿ ನಾರಾಯಣ ಹೆಗ್ಡೆ ವ್ಯವಸ್ಥಾಪಕರಾಗಿದ್ದು, ಅವರೂ ಸೇರಿದಂತೆ ಮಂಜುನಾಥಯ್ಯ (ಬಿಡಾರಂ ಕೃಷ್ಣಪ್ಪನವರ ಶಿಷ್ಯ) ಶ್ರೀನಿವಾಸರಾಯರು, ರಂಗರಾಯರು (ಪಂಡರಿಬಾಯಿ ಅವರ ತಂದೆ) ಹಾಗೂ ರಂಗನಾಥ ಭಟ್ಟರುವರುಗಳು ನಟರಾಗಿದ್ದರು. ೧೯೧೦ರಲ್ಲಿ ಶಾಬೂ ಸಾಹೇಬರೆಂದು ಪ್ರಸಿದ್ಧರಾಗಿದ್ದ ಜನಾಬ್ ಅಬ್ದುಲ್ ರಹಮಾನ್ ಅಫಾನಿ ಬಹದೂರ್ ಅವರು 'ಅಲೆಗ್ಸಾಂಡ್ರಾ ಥಿಯೇಟ್ರಿಕಲ್ ಕಂಪನಿ' ಸ್ಥಾಪಿಸಿ ಮಂಗಳೂರು ಮಹಾಮಾಯಿ ದೇವಾಲಯದ ಬಳಿ ಆಗಿನ ಮುನ್ಸಿಪಲ್ ಶಾಲೆಯ ಆವರಣದಲ್ಲಿ ನಾಟಕ ಆಡುತ್ತಿದ್ದರು. ಔಂದ್‌ನ ಕವಿ ಅಮನತ್ ಎಂಬಾತ ರಚಿಸಿದ 'ಇಂದರ ಸಭಾ' ಉರ್ದು ನಾಟಕದ ಅನುವಾದ 'ದರಿಯಾ ಇಂದ್ರ ಸಭಾ' ಎಂಬ ನಾಟಕವನ್ನು ಅಂದಿನ ಆಧುನಿಕ ಸೌಲಭ್ಯಗಳಾದ ಗ್ಯಾಸ್‌ಲೈಟ್ ಇತ್ಯಾದಿ ಬಳಸಿ ಆಕರ್ಷಕ ರಂಗ ಸಜ್ಜಿಕೆಯಿಂದ ಪ್ರದರ್ಶನ ಮಾಡಲಾಗುತ್ತಿತ್ತು. ೧೯೨೦–೨೩ರ ಅವಧಿಯಲ್ಲಿ ಮಂಗಳೂರಿನ ನಚ್ಚಿಪಾಲ (ಪ್ರಾಯಶಃ ನರಸಿಂಹಪಾಳ) ಎಂಬುವವರು 'ಮನಮೋಹನ್ ನಾಟಕ ಕಂಪನಿ' ನಡೆಸುತ್ತಿದ್ದು ಬಂಟ್ವಾಳದ ನಾರಾಯಣ ಕಾಮತ್‌ರಲ್ಲದೆ ಉತ್ತರ ಕನ್ನಡದ ಜಿಲ್ಲೆಯ ನಟನಟಿಯರೂ ಇದ್ದರು. 'ಮಹಾನಂದೆ' ಎಂಬುದು ಇವರು ಆಡುತ್ತಿದ್ದ ಜನಪ್ರಿಯ ನಾಟಕವಾಗಿತ್ತು.

ಜಿಲ್ಲೆಯಲ್ಲಿ ನಾಟಕ ಚಟುವಟಿಕೆಗಳಲ್ಲಿ ದೀರ್ಘಕಾಲ ತೊಡಗಿಸಿಕೊಂಡವರೆಂದರೆ ರಮಾನಂದ ಚೂರ್ಯ ಅವರು 'ಚೂರ್ಯ ಮತ್ತು ಪಾರ್ಟಿ' ಎಂಬ ಹೆಸರಿನಲ್ಲಿ ೧೯೨೯ರಲ್ಲಿ ಹವ್ಯಾಸಿ ನಾಟಕ ಸಂಸ್ಥೆ ಸ್ಥಾಪಿಸಿ ೧೯೪೩ರವರೆಗೂ ಅನಿಯಮಿತವಾಗಿ ನಾಟಕ ಆಡುತ್ತಿದ್ದರು. ನಂತರ ೪೩ ರಿಂದ ೫೯ರ ವರೆಗೆ ರಮಾನಂದರೆ 'ಹಂಸರಾಜ' ಎಂಬ ಹೆಸರಿನಲ್ಲಿ ನಾಟಕಗಳಾಡುತ್ತಿದ್ದು, ಬೆಂಗಳೂರಿನಲ್ಲಿ 'ಕರ್ನಾಟಕ ಲಲಿತ ಕಲಾ ಮಧುವನ' ಎಂಬ ಸಂಸ್ಥೆ ಸ್ಥಾಪಿಸಿ ಕೇರಳ ಮುಂಬಯಿಗಳಲ್ಲಿ ನಾಟಕಗಳನ್ನು ಪ್ರಯೋಗಿಸಿದರು. ೧೯೭೦ರ

*ಈ ಭಾಗ ಬಿ.ಆರ್. ನಾಗೇಶ್ ಅವರ 'ನಾಟಕ ಚಟುವಟಿಕೆ', ಲೇಖನ, ಪೊಳಿ, ೨೦೦೦ ಆಧರಿಸಿದೆ.

ವರೆಗೂ ಈ ಸಂಸ್ಥೆ ನಡೆಯುತ್ತಿದ್ದು ನಂತರ 'ಅಕಾಡಮಿ ಆಫ್ ಇಂಡಿಯನ್ ಡ್ರೆಮೆಟಿಕ್ಸ್' ಸಂಸ್ಥೆ ಆರಂಭಿಸಿ ರಂಗ ತರಬೇತಿ ನೀಡಿ ಜಿಲ್ಲೆಯಾದ್ಯಂತ ಹಲವಾರು ರಂಗ ಪ್ರಯೋಗಗಳನ್ನು ಕೈಗೊಂಡಿದ್ದರು. ಬಂಟ್ವಾಳದ ನಾರಾಯಣ ಕಮ್ತಿ ಅವರು ಶ್ರೀ ವೆಂಕಟರಮಣ ಕೃಪಾ ಪೋಷಿತ ನಾಟಕ ಮಂಡಳಿ, ಶ್ರೀ ವೆಂಕಟರಮಣ ಸ್ವಾಮಿ ಥಿಯೇಟ್ರಿಕಲ್ಸ್, ಶ್ರೀ ವೆಂಕಟರಮಣ ಪ್ರಸಾದಿತ ನಾಟಕ ಸಭಾ ಇತ್ಯಾದಿ ಬೇರೆ ಬೇರೆ ಹೆಸರುಗಳಿಂದ ೧೯೨೮–೩೬ರ ಅವಧಿಯಲ್ಲಿ ಸ್ಥಗಿತಗೊಂಡಿದ್ದ ನಾಟಕ ಕಂಪನಿಗಳಿಗೆ ಜೀವ ನೀಡುತ್ತಾ ದಕ್ಷಿಣಕನ್ನಡ ಸೇರಿದಂತೆ ಉಡುಪಿ ಜಿಲ್ಲೆಗಳಾದ್ಯಂತ ನಾಟಕಗಳನ್ನು ಪ್ರದರ್ಶಿಸಿದರು. ೧೯೩೦ರ ಅವಧಿಯಲ್ಲಿ ಕೆಲವು ಹವ್ಯಾಸಿ ನಾಟಕ ಸಂಸ್ಥೆಗಳು ಮಂಗಳೂರಲ್ಲಿ ಸಂಘಟನೆಗೊಂಡು ನಾಟಕಗಳನ್ನು ಆಡುತ್ತಿದ್ದರು. ಅನಂತರ ಪದ್ಮನಾಭರಾವ್, ಶಿವರಾಮ ಕಾರಂತರು, ರಂಗ ಚಟುವಟಿಕೆ ನಡೆಸುತ್ತಿದ್ದರು. ಅದೇ ವರ್ಷ ಮಂಗಳೂರಲ್ಲಿ ಮಂಜುನಾಥ ಶಾಲಿವಾಹನ ಎಂಬುವವರು 'ಶಿವಕಲಾ ನಾಟಕ ಸಭಾ' ಎಂಬ ವಿಲಾಸಿ ನಾಟಕ ಸಂಸ್ಥೆ ಆರಂಭಿಸಿ ಅನೇಕ ಯುವಕರನ್ನು ರಂಗಭೂಮಿಗೆ ತರಬೇತಿಗೊಳಿಸಿದ್ದರು. ಮಂಜುನಾಥರು ಗುಬ್ಬಿ ಹಾಗೂ ಇನ್ನಿತರ ಕಂಪನಿಗಳಲ್ಲಿ ಅನುಭವ ಪಡೆದಿದ್ದರು. ಇದೇ ಅವಧಿಯಲ್ಲಿ ಮಂಗಳೂರಿನ ಅಲೋಸಿಯಸ್ ಕಾಲೇಜಿನವರು ಭಾಗಶಃ ಅಥವಾ ಇಡಿಯಾಗಿ ಶೇಕ್ಸ್‌ಪಿಯರ್‌ನ ನಾಟಕಗಳನ್ನು ಅಭಿನಯಿಸುತ್ತಿದ್ದರು. ೧೯೩೨ರಲ್ಲಿ ಕಿರು ಪ್ರಮಾಣದಲ್ಲಿ ಆರಂಭವಾಗಿ ೩೪ರಲ್ಲಿ ಸ್ಪಷ್ಟ ರೂಪ ತಳೆದ ಮಂಗಳೂರಿನ 'ಶ್ರೀ ಮಂಜುನಾಥ ಕೃಪಾ ಪೋಷಿತ ನಾಟಕ ಸಭಾ' ವಿಲಾಸಿ ಸಂಸ್ಥೆಯಾಗಿ ಇಂದಿಗೂ ಕ್ರಿಯಾಶೀಲವಾಗಿದ್ದು, ಅಭಿನಯದೊಂದಿಗೆ ಹೊರಗಿನಿಂದ ಬರುವ ನಾಟಕ ಕಂಪನಿಗಳ ನಟರನ್ನು ಕರೆಸಿ ಗೌರವಿಸುತ್ತದೆ. ಸ್ವತಃ ಪಿಟೀಲು ವಾದಕರು, ನಾಟಕಕಾರರು ಆಗಿದ್ದ ಬೋಳೂರು ಚಂದ್ರಯ್ಯಚಾರ್ ಅವರು ೧೯೩೫ರಲ್ಲಿ 'ಶ್ರೀ ಜಗದಾಂಬ ನಾಟಕ ಮಂಡಳಿ' ಎಂಬ ವಿಲಾಸಿ ನಾಟಕ ಸಂಸ್ಥೆ ಮಂಗಳೂರಲ್ಲಿ ಆರಂಭಿಸಿದ್ದು, ರಂಗಭೂಮಿಯ ಮೇಲೆ ನೈಜವಾಗಿರುವಂತೆ ರಂಗ ಸಜ್ಜಿಕೆ ರೂಪಿಸುತ್ತಿದ್ದು, ವಿಶೇಷವೆನಿಸಿತ್ತು. ಅಂತೆಯೇ ಅವರ ನೀಡುತ್ತಿದ್ದ ಪ್ರಚಾರ ಸಾಮಗ್ರಿಯ ಫಲಕಗಳಲ್ಲಿ ನಟ–ನಟಿಯರ ನೈಜ ರೀತಿಯ ಚಿತ್ರಗಳಿರುತ್ತಿದ್ದುದು ಅಂದಿಗೆ ಅಪರೂಪವೆನಿಸಿತ್ತು. ೧೯೩೬ರಲ್ಲಿ ಮಂಗಳೂರಿನ ಬೋಳೂರಿನಲ್ಲಿ ತಲಪಾಡಿ ಬಂಧುಗಳ (ಟಿ. ಸುಬ್ಬರಾವ್, ಟಿ. ವೆಂಕಟರಾವ್, ಟಿ. ರಾಮರಾವ್) ರುಕ್ಮಿಣಿ ಸ್ವಯಂವರ ಇತ್ಯಾದಿ ನಾಟಕ ಪ್ರದರ್ಶಿತಗೊಂಡಿದ್ದವು. ಮುಂದಿನ ದಶಕಗಳಲ್ಲಿ ವಿಲಾಸಿ ನಾಟಕ ಸಂಸ್ಥೆಗಳು ಇಂದಿನ ಉಡುಪಿ ಜಿಲ್ಲೆಯ ಪ್ರದೇಶದಲ್ಲಿ ಹೆಚ್ಚಾಗಿದ್ದು, ಮಂಗಳೂರಿನಲ್ಲಿಯೂ ಗೆಳೆಯರ ವೃಂದ (೧೯೪೫), ಜೈಹಿಂದ್ ನಾಟಕ ಸಭಾ, ಪೊಳಲಿ ರಾಜರಾಜೇಶ್ವರಿ ನಾಟಕ ಮಂಡಳಿ, ಐಕ್ಯ ಕರ್ನಾಟಕ ನಾಟಕ ಸಭಾ, ಭಾರತ್ ಕಲಾನಿಕೇತನ, ಪ್ರಕಾಶ ಅಸೋಸಿಯೇಶನ್, ಸರಸ್ವತಿ ವಿಲಾಸಿ ನಾಟ್ಯ ಸಂಘ, ಜನತಾ ಕಲಾ ವೃಂದ, ನವೋದಯ ಕಲಾ ವೃಂದ, ಮಲ್ಲಿಕಾ ಕಲಾ ವೃಂದ ಇವೇ ಮುಂತಾದ ವಿಲಾಸಿ ನಾಟಕ ಸಂಸ್ಥೆಗಳು ೧೯೪೦–೫೦ರ ದಶಕದಲ್ಲಿ ಆರಂಭಗೊಂಡು ಚಟುವಟಿಕೆಯಿಂದ ಕೂಡಿತ್ತು.

ಅಂದಿನ ಹಳೆಯ ಮೈಸೂರು ಹಾಗೂ ಉತ್ತರ ಕರ್ನಾಟಕದ ಹೆಸರಾಂತ ಅನೇಕ ನಾಟಕ ಕಂಪನಿಗಳು ಮತ್ತು ಮಹಾರಾಷ್ಟ್ರದ ಮರಾಠಿ ನಾಟಕ ಕಂಪನಿಗಳು ಕಳೆದ ಶತಮಾನದ ಮೊದಲರ್ಧ ಭಾಗದಲ್ಲಿ ಜಿಲ್ಲೆಯಾದ್ಯಂತ ರಂಗಪ್ರಯೋಗ ಮಾಡಿದ್ದು, ಇಡೀ ಜಿಲ್ಲೆಯಲ್ಲಿ ನಾಟಕ ಸಂಸ್ಕೃತಿ ಜೀವಂತವಾಗಿರಿಸಿತ್ತು.

ಬೆಳ್ತಂಗಡಿ ತಾಲೂಕಿನ ಎಂ.ರಂಗನಾಥ ಭಟ್ಟರು ಅಭಿನಯ ವಿಭೂಷಣ ಇತ್ಯಾದಿ ಬಿರುದು ಪಡೆದಿದ್ದು, ತಮ್ಮ 'ಅಂಬಾಪ್ರಸಾದಿತ ನಾಟಕ ಮಂಡಳಿ' ಯ ಮೂಲಕ ರಾಜ್ಯಾದ್ಯಂತ ಸುಮಾರು ಇಪ್ಪತ್ತು ವರ್ಷಗಳ ಕಾಲ ಪ್ರದರ್ಶನಗಳನ್ನು ನೀಡಿದ್ದರು. ಧರ್ಮಸ್ಥಳದಲ್ಲಿ ಸೋಮಸುಂದರರಾವ್, ಎಸ್.ಎಂ.ಬಾಬುರಾವ್ ಅವರುಗಳು ಹೆಗಡೆಯವರ ಪ್ರೋತ್ಸಾಹದಿಂದ ನಾಟ್ಯ ಸಂಸ್ಥೆ ಸ್ಥಾಪಿಸಿ ಹಲವಾರು ನಾಟಕಗಳನ್ನು ಆಡಿದರು. ತಂಡದಲ್ಲಿ ಸ್ತ್ರೀ ಪಾತ್ರಧಾರಿ ಬಾಲಕೃಷ್ಣ ಅಂಬುರ್ಡತ್ತಾಯ, ನಾರಾಯಣ ಕೆದ್ಲಾಯ, ಸುಬ್ರಾಯ ನೂರಿತ್ತಾಯ, ನಾರಾಯಣ ಕುದ್ರೆಂತಾಯ, ಬಾಲಕೃಷ್ಣ ರೈ, ಗೊಟುಬಾಪಣ್ಣ ಮುಂತಾದವರಿದ್ದರು. ಉಜಿರೆಯ ಕೆ.ಜೆ.ಕೊಕ್ರಾಡಿಯವರು ತುಳು ಹಾಗೂ ಕನ್ನಡದಲ್ಲಿ ಅನೇಕ ನಾಟಕಗಳನ್ನು ಬರೆದು ರಂಗಪ್ರಯೋಗ ಮಾಡಿದ್ದಾರೆ.

ಯಕ್ಷಗಾನದಲ್ಲಿ 'ಧರ್ಮಸ್ಥಳ ಮಂಜುನಾಥೇಶ್ವರ' ಯಕ್ಷಗಾನ ಮಂಡಳಿ ಸಾಕಷ್ಟು ಪುರಾತನವಾದುದು ಇಂದಿಗೂ ಯಕ್ಷಕಲೆಗೆ ಅಪಾರ ಪ್ರೋತ್ಸಾಹ ನೀಡುತ್ತಿದೆ. ೧೮೯೨ರಲ್ಲಿ ಅಂದಿನ ಧರ್ಮಾಧಿಕಾರಿ ಕುಮಾರಯ್ಯ ಹೆಗಡೆಯವರ ಆದೇಶದಂತೆ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಆಹ್ವಾನದಂತೆ ಅರಮನೆಯಲ್ಲಿ ನಾಟಕ ಪ್ರದರ್ಶನಗಳನ್ನು ತಂಡದವರು ನೀಡಿದ್ದರು. ಬಲಿಪನಾರಾಯಣ ಭಾಗವತರು, ಶೇಣಿಗೋಪಾಲಕೃಷ್ಣಭಟ್ ಮುಂತಾದ ಅನೇಕ ಪ್ರಸಿದ್ಧರು ಧರ್ಮಸ್ಥಳದ ಮಂಡಳಿಯಲ್ಲಿ ಸೇವೆಸಲ್ಲಿಸಿದ್ದಾರೆ. ತಾಲೂಕಿನ ಕೊಕ್ಕಡ ಸುಬ್ರಾಯ ಆಚಾರ್ಯ, ಲೀಲಾ ಬೈಪಾಡಿತ್ತಾಯ, ರಾಘವೇಂದ್ರ ತೋಳ್ಪಾಡಿತ್ತಾಯ ಮುಂತಾದ ಅನೇಕರು ಕಳೆದ ಶತಮಾನದ

ಅಂತ್ಯದಲ್ಲಿ ಪ್ರಸಿದ್ಧರಿದ್ದರು. ಹಲವಾರು ಮೇಳಗಳೂ ಬೆಳ್ತಂಗಡಿ ತಾಲೂಕಿನಲ್ಲಿ ಕ್ರಿಯಾಶೀಲರಾಗಿದ್ದು ದೇಲಂಪುರಿಯ ಮೇಳದ ಕೃಷ್ಣಭಟ್ ಮಹಮ್ಮಾಯಿ ಮಹಾಗಣಪತಿ ಮೇಳದ ಮಂಡಪ್ಪ ಶೆಟ್ಟಿ, ಅಳದಂಗಡಿಯ ಶ್ರೀ ಸೋಮನಾಥೇಶ್ವರ ಮೇಳದ ಅರುವ ನಾರಾಯಣರುಗಳನ್ನು ಉದಾಹರಿಸಬಹುದು. ೧೯೩೬ರಲ್ಲಿ ಸ್ಥಾಪಿತವಾದ ಬಿ.ಸುಬ್ರಾಯರ ಲಲಿತಕಲಾಸಂಘ ಹಲವಾರು ವರ್ಷ ಯಕ್ಷಗಾನಕೂಟಗಳನ್ನು ಏರ್ಪಡಿಸಿತ್ತು. ಮೂಡಪ್ಪಶೆಟ್ಟರೇ ಸ್ಥಾಪಿಸಿದ ಮಹಮ್ಮಾಯಿ ಕೃಪಾಪೋಷಿತ ಶ್ರೀ ಮಂಜುನಾಥೇಶ್ವರ ಬೊಂಬೆಯಾಟ ಮಂಡಳಿ ಹಾಗೂ ದಿವಾಕರ ಪಟವರ್ಧನ್‌ರವರ ಶ್ರೀ ವಿನಾಯಕ ಯಕ್ಷಗಾನ ಮಂಡಳಿಗಳು ಯಕ್ಷಗಾನ ಬೊಂಬೆಯಾಟವನ್ನು ಜನಪ್ರಿಯಗೊಳಿಸಿದ ತಂಡಗಳು.

ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದ 'ಲಲಿತ ಕಲಾಕೇಂದ್ರ' ವನ್ನು ೧೯೭೦ರಲ್ಲಿ ಸ್ಥಾಪಿಸಿ ಯಕ್ಷಗಾನವು ಸೇರಿದಂತೆ ಲಲಿತಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಯಕ್ಷಗಾನ ತಿರುಗಾಟದ ಮೂಲಕ ಮಂಡಳಿ ರಾಷ್ಟ್ರಾದ್ಯಂತ ಹೆಸರು ಮಾಡಿದೆ. ಹದಿನೈದು ವರ್ಷಗಳ ಹಿಂದೆ ಮಂಬಾಡಿ ನಾರಾಯಣ ಭಾಗವತರು, ಪಡ್ರೆ ಚಂದು ನಾಟ್ಯಾಚಾರ್ಯರು ಅನೇಕ ಕಲಾವಿದರನ್ನು ರೂಪಿಸಿದ್ದರು. ಜಿಲ್ಲೆಯಲ್ಲಿ ಪ್ರಸಿದ್ಧರಾಗಿದ್ದ ಪದ್ಯಾಣ ಗಣಪತಿಭಟ್, ಪುತ್ತಿಗೆ ರಘುರಾಮಹೊಳ್ಳ ಮುಂತಾದವರು ಇಲ್ಲಿ ತರಬೇತಿ ಪಡೆದವರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಧರ್ಮಸ್ಥಳದಲ್ಲಿ ಸ್ಥಾಪಿತವಾದ ಸರ್ವಧರ್ಮ ಹಾಗೂ ಸಾಹಿತ್ಯ ಸಮ್ಮೇಳನಗಳು ಇಂದಿಗೂ ಮುಂದುವರಿದಿದ್ದು, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಗಳಿಗೆ ಉತ್ತೇಜನ ನೀಡುತ್ತಿದೆ. ಹೊರಗಿನ ಹೆಸರಾಂತ ಕಲಾವಿದರು ಇಲ್ಲಿ ತಮ್ಮ ಕಲಾ ಪ್ರತಿಭೆ ಮೆರೆದಿರುವುದಲ್ಲದೆ ಸ್ಥಳೀಯ ಕಲಾವಿದರಿಗೂ ಪ್ರೋತ್ಸಾಹ ಕೊಡುತ್ತಿದೆ.

## ಹವ್ಯಾಸಿ ರಂಗಭೂಮಿ *

ಕಳೆದ ಶತಮಾನದ ಎಪ್ಪತ್ತರ ದಶಕದ ಆರಂಭದಲ್ಲಿ ಜಿಲ್ಲೆಯಲ್ಲಿ ಹವ್ಯಾಸಿ ರಂಗಭೂಮಿ ಕಾಣಿಸಿಕೊಂಡಿತು. ಕೆ.ಎನ್.ಮಿತ್ರ ಮಂಡಳಿ ಮುಂತಾದ ನಾಟಕ ತಂಡಗಳು ಕ್ರಿಯಾಶೀಲವಾದವು. ವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನಷ್ಟೇ ಗಮನಿಸಿದಲ್ಲಿ ಪ್ರಸನ್ನರು ೧೯೭೬–೭೭ರಲ್ಲಿ ಮಂಗಳೂರಿನಲ್ಲಿ ಸಮುದಾಯದ ತಂಡ ಕಟ್ಟಿ, 'ಮಾರೀಚನ ಬಂಧುಗಳು' ನಾಟಕವನ್ನು ಪ್ರದರ್ಶಿಸಿದ್ದು, ಅದರಲ್ಲಿಯ ದೃಶ್ಯವೊಂದರಿಂದಾಗಿ ನಟರು ಹಾಗೂ ಪ್ರೇಕ್ಷಕ ವೃಂದದ ಪ್ರತಿಭಟನೆಗೆ ಗುರಿಯಾಗಬೇಕಾಯಿತು. ಆದರೆ ಮುಂದೆ 'ಸಮುದಾಯ' ಸುಳ್ಯ, ಪುತ್ತೂರುಗಳಲ್ಲಿ ತಂಡಕಟ್ಟಿ ಪ್ರದರ್ಶನಗಳನ್ನು ನೀಡಿತು. ೧೯೭೪ರಲ್ಲಿ ಪೂರ್ಣ ಪ್ರಮಾಣದ ಹವ್ಯಾಸಿ ನಾಟಕ ತಂಡ 'ಭೂಮಿಕಾ' ಆರಂಭವಾಗಿ ನಿಯಮಿತವಾಗಿ ನಾಟಕ, ರಂಗ ತರಬೇತಿ ಶಿಬಿರ ನಡೆಸಿಕೊಂಡು ಬಂದಿತು. ಸಾಯೋ ಆಟ, ಬೆಳ್ಳಿ ಬೈಲು, ಉತ್ತಮ ಪ್ರಭುತ್ವ ಲೊಳಲೊಟ್ಟೆ ಇತ್ಯಾದಿ ಕನ್ನಡ ನಾಟಕಗಳಲ್ಲದೆ, 'ಚಕ್ರವ್ಯೂಹ' ತುಳು ನಾಟಕ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟವು. ಅಕಾಡೆಮಿಯ ನೆರವಿನಿಂದ ಅಂದಿಗೆ ಆಧುನಿಕವಾದ ಬೆಳಕಿನ ವ್ಯವಸ್ಥೆ ಮಾಡಿಕೊಂಡು, ಬೇರೆಯವರಿಗೂ ಅತ್ಯಲ್ಪ ಬಾಡಿಗೆಗೆ ನೀಡಿ ಹವ್ಯಾಸಿ ರಂಗಭೂಮಿ ನೆಲೆ ಕಾಣಲು ಅವಕಾಶ ಮಾಡಿತು. ಬಿ. ಎನ್. ಶ್ರೀನಿವಾಸ ಭಟ್, ಜಿ. ಕೆ. ರಾವ್, ಲಕ್ಷ್ಮಣಕುಮಾರ್, ರಾಧಾಕೃಷ್ಣ ನರಸಿಂಹಮೂರ್ತಿ, ಶ್ರೀಕಲಾ ಉಡುಪ ಮುಂತಾದವರು ದಶಕಗಳ ಕಾಲ ಸಂಸ್ಥೆ ನಡೆಸಿದರು. ಏರ್ಯಲಕ್ಷ್ಮೀನಾರಾಯಣ ಆಳ್ವ ಭೂಮಿಕಾದ ಸ್ಥಾಪಕ ಅಧ್ಯಕ್ಷರಾಗಿಯೂ, ನಾ.ದಾಮೋದರ ಶೆಟ್ಟಿ ಸ್ಥಾಪಕ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು.

ಸಾಂಸ್ಕೃತಿಕ ಕ್ರಿಯಾ ವೇದಿಕೆ 'ಸೆಸ್ಕಾ'ದ ಅಂಗ ಸಂಸ್ಥೆಯಾಗಿ ೧೯೮೧ರಲ್ಲಿ ಆರಂಭಗೊಂಡು, 'ಅಭಿವ್ಯಕ್ತ' ನಾಟಕ ತಂಡ ಹೊರಗಿನ ವೈವಿಧ್ಯಮಯ ನಾಟಕಗಳಿಗೆ ನೆಲೆ ನೀಡಿ ಸ್ಥಳೀಯ ಪ್ರೇಕ್ಷಕರಿಗೆ ನಾಟಕಗಳನ್ನು ನೋಡುವ ಅವಕಾಶ ಕಲ್ಪಿಸಿತು. ಅಲ್ಲದೆ ಸ್ವಂತವಾಗಿ ರಣಹದ್ದುಗಳು, ಕೊಂಬಿನವರು, ಬೇಲಿ ಮತ್ತು ಹೊಲ ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿದೆ. ಪ್ರೇಕ್ಷಕ ಸದಸ್ಯರನ್ನು ಹೊಂದಿದ್ದ 'ಅಭಿವ್ಯಕ್ತ' ಕಲಾ ತಂಡ ವರ್ಷಕ್ಕೆ ನಾಲ್ಕಾರು ನಾಟಕಗಳನ್ನು ನೀಡುತ್ತಿದೆ. ಈಚೆಗೆ ತುಳುವಿನಲ್ಲಿ 'ಬೇಲಿ ಬೈಲ್' ನಾಟಕವನ್ನು ಪ್ರಯೋಗಿಸಿದೆ. ತಂಡದ ಮೂಲವ್ಯಕ್ತಿ ಕೆ. ಶ್ರೀಧರ್ ೧೯೯೫ರಲ್ಲಿ ನಿಧನರಾಗಿದ್ದು, ಪ್ರಸ್ತುತ ರಾಜಶೇಖರ್, ಲೂಸಿ ಪಿರೇರಾ, ಮಹಾಬಲೇಶ್ವರ ರಾವ್ ಅವರುಗಳು ತಂಡವನ್ನು ನಿರ್ವಹಿಸುತ್ತಿದ್ದಾರೆ. ಇದೇ ವೇಳೆಯಲ್ಲಿ ಮಂಗಳೂರಿನಲ್ಲಿ ಆರಂಭವಾದ 'ಆಯನ' ಕಲಾವಿದರ ತಂಡ ಜೂಲಿಯಸ್ ಸೀಸರ್, ಹಳ್ಳಿ ಹುಡುಗಿ ಇತ್ಯಾದಿ ನಾಟಕಗಳನ್ನು ಪ್ರದರ್ಶಿಸಿತು. ತಂಡದಲ್ಲಿ ಎಂ.ಸಿ. ರಾಮು, ಮೋಹನ್‌ಚಂದ್ರ ಮುಂತಾದವರಿದ್ದರು. ಜಗನ್ ಪವಾರ್ ಬೇಕಲ್ ನಾಯಕತ್ವದ 'ಸಂಕೇತ್ ಕಲಾವಿದರ' ತಂಡ ನಾಗಮಂಡಲ, ಒಂದು ಲೋಕ ಕತೆ ಪ್ರದರ್ಶಿಸಿದ್ದು ಸದಾನಂದ

*ಈ ಭಾಗ ನಾ.ದಾಮೋದರ ಶೆಟ್ಟಿ ಅವರು ಜಿಲ್ಲೆಯ ನಾಟಕ ಚಟುವಟಿಕೆಗಳ ಬಗ್ಗೆ ಬರೆದ ಹಲವಾರು ಲೇಖನಗಳನ್ನು ಆಧರಿಸಿದೆ.

ಸುವರ್ಣರ ನಿರ್ದೇಶನದಲ್ಲಿ 'ಉರುಳು' ಎಂಬ ನಾಟಕ ಪ್ರಯೋಗಿಸಿತು. ಚಂದ್ರಹಾಸ್ ಉಲ್ಲಾಳ್, ಲಕ್ಷ್ಮಣ ಕುಮಾರ ಮಲ್ಲೂರ್ ಮುಂತಾದ ಉತ್ತಮ ನಟರು ತಂಡದಲ್ಲಿದ್ದವರು. ಇದರೊಂದಿಗೆ ಬಂಟ್ವಾಳದ 'ಅಭಿರುಚಿ', ಪುತ್ತೂರಿನ 'ದೃಶ್ಯ', ಸುಳ್ಯದ 'ಅಭಿನಯ' ನಾಟಕ ತಂಡಗಳು ಸಂಘಟನೆಗೊಂಡವು. ಇದೇ ಕಾಲಘಟ್ಟದಲ್ಲಿ ಕೆಲವು ತಂಡಗಳು ದಶಕಗಳಿಗೂ ಹೆಚ್ಚು ಕಾಲ ಕ್ರಿಯಾಶೀಲವಾಗಿದ್ದವು.

ಸುಳ್ಯದಲ್ಲಿ ೧೯೮೦ರಲ್ಲಿ ಆರಂಭವಾದ ಸುಬ್ರಾಯ ಚೊಕ್ಕಾಡಿ ಅವರ ಸಂಚಾಲಕತ್ವದ 'ಅಭಿನಯ' ತಂಡ ಚೋಮ, ತೆರೆಗಳು, ನಾಳೆ ಯಾರಿಗೂ ಇಲ್ಲ, ಬಂಕಾಪುರದ ಬಯಲಾಟ, ಮಧುಮಕ್ಕಿ, ಮಣ್ಣಿನಗೋಡೆ ಇತ್ಯಾದಿ ಸ್ಮರಣೀಯ ನಾಟಕಗಳನ್ನು ಪ್ರಯೋಗಿಸಿತು. ಮಾಲತಿರಾವ್ ನಿರ್ದೇಶಿಸಿದ ಲಂಕೇಶರ 'ತೆರೆಗಳು' ನಾಟಕಕ್ಕೆ ಯಕ್ಷಗಾನ ಶೈಲಿ ಬಳಸಿದ್ದು ವಿಶೇಷವಾಗಿತ್ತು. ಅಮೃತ ಸೋಮೇಶ್ವರ, ಪುರಂದರ ಭಟ್ ಮುಂತಾದವರಿಂದ ಪುತ್ತೂರಿನಲ್ಲಿ ಆರಂಭವಾದ 'ದೃಶ್ಯ' ಕಲಾತಂಡ ಕೆಲವು ನಾಟಕಗಳನ್ನಾಡಿದ್ದು, ಭೂಪಾಲದ ರಂಗಮಂಡಲದಲ್ಲಿ ಬಿ.ವಿ. ಕಾರಂತರಿದ್ದಾಗ ಅಲ್ಲಿಗೆ ಹೋಗಿ ಬೀದಿನಾಟಕ ಪ್ರದರ್ಶಿಸಿ ಬಂದಿದ್ದರು. ಮಹಾಬಲೇಶ್ವರ ರಾವ್, ಕೇಶವ ಉಚ್ಚಿಲ ಮೊದಲಾದವರಿಂದ ಆರಂಭವಾದ ಬಂಟ್ವಾಳದ 'ಅಭಿರುಚಿ' ತಂಡ ಅಂತಿಗೊನೆ, ನನ್ನ ತಂಗಿಗೊಂದು ಗಂಡು ಕೊಡಿ, ಉತ್ತಮ ಪ್ರಭುತ್ವ ಲೊಳಲೊಟ್ಟೆ ಇತ್ಯಾದಿ ನಾಟಕಗಳ ಅಭಿನಯದೊಂದಿಗೆ, ಕಲೆ, ಸಾಹಿತ್ಯದ ಸಂಬಂಧದ ಗೋಷ್ಠಿಗಳು, ಪ್ರದರ್ಶನ ಏರ್ಪಡಿಸುತ್ತಿದ್ದು, ಗ್ರಾಮೀಣ ಪ್ರದೇಶದಲ್ಲಿಯೂ ತನ್ನ ಕಾರ್ಯ ಚಟುವಟಿಕೆ ವಿಸ್ತರಿಸಿಕೊಂಡಿತ್ತು. ಸುರತ್ಕಲ್‌ನ 'ಕಾಳಜಿ' ನಾಟಕ ಸಂಸ್ಥೆ ೧೯೮೩ರಲ್ಲಿ ಆರಂಭವಾಗಿ ಸಾಂಸ್ಕೃತಿಕ ಚಟುವಟಿಕೆಯೊಂದಿಗೆ ಯಯಾತಿ, ಗ್ರಹಣ ಇತ್ಯಾದಿ ನಾಟಕ ಪ್ರದರ್ಶನ ನೀಡಿದೆ. ಬಾಲಕೃಷ್ಣ ಹೊಸಬೆಟ್ಟು ಸೀತಾರಾಮ ಆಚಾರ್, ಗಿರಿಧರ ಹತ್ವಾರ್, ಲೀಲಾವತಿ ಎಸ್. ರಾವ್ ಮುಂತಾದವರು ತಂಡದಲ್ಲಿದ್ದರು.

ಸಂಪಾಜೆಯ 'ನಿಸರ್ಗ ರಂಗಮಂಟಪ'ದಲ್ಲಿ ದೇವೀಪ್ರಸಾದರ 'ಶಿರಾಡಿಭೂತ' ನಾಟಕವನ್ನು ಇಕ್ಬಾಲ್ ಅಹಮದ್ ಅವರು ೧೯೯೪ರಲ್ಲಿ ನಿರ್ದೇಶಿಸಿ ಪ್ರಯೋಗಿಸಿದ್ದು, ಮುಂದೆಯೂ ಹಲವಾರು ನಾಟಕಗಳು ಅಲ್ಲಿ ಸಿದ್ಧಗೊಂಡಿವೆ. ಸಂಪಾಜೆಯ ಕಡೆಯದೇ ಆದ 'ನಿರತನಿರಂತ' ತಂಡ ನಾಟಕ, ಚಿತ್ರಕಲೆ ಪ್ರಸಾರ ಮಾಡುವ ಕಾರ್ಯ ತೊಂಭತ್ತರ ದಶಕದ ಅಂತ್ಯದಲ್ಲಿ ಕೈಗೊಂಡಿದ್ದು, ಮೋಹನಸೋನಾ, ಗೋಪಾಡ್ಕರ್, ಐ.ಕೆ.ಬೊಳುವಾರು, ಸುರೇಶ್ ಹಂದಾಡಿ ಮುಂತಾದವರು ಹಲವಾರು ನಾಟಕಗಳನ್ನು ಪ್ರಯೋಗಿಸಿದರು. ನಾಟಕತಂಡ ಈಗ ಪುತ್ತೂರನ್ನು ಕೇಂದ್ರವಾಗಿಸಿ ರಂಗ ಚಟುವಟಿಕೆ ನಡೆಸುತ್ತಿದೆ. ತೆಂಕಬಿರ್ತಿಯ 'ಅಂಕದ ಮನೆ' ಸಹ ಈ ಬಗೆಯ ಒಂದು ರಂಗ ತಂಡ.

ಪುತ್ತೂರಿನವರಾದ ಬಾಬುಕೋಡಿ ವೆಂಕಟರಮಣ ಕಾರಂತರ (ಬಿ.ವಿ.ಕಾರಂತ) ಹೆಸರು ರಾಷ್ಟ್ರೀಯ ನಾಟಕರಂಗದಲ್ಲಿ ಪ್ರತ್ಯೇಕವಾಗಿ ನಿಲ್ಲುವಂತಹುದು. ಕಾರಂತರು ೧೯೨೮ರಲ್ಲಿ ಜನಿಸಿದ್ದು (೧೯೨೯ ಎಂದು ದಾಖಲೆಗಳಲ್ಲಿವೆ). ಎಳವೆಯ ಶಾಲಾದಿನಗಳಲ್ಲಿ ನಾಟಕಗಳಲ್ಲಿ ಅಭಿನಯಿಸಿದ್ದರು. ಸ್ಥಳೀಯ ಮಹಾಬಲಭಟ್ಟರ 'ತ್ಯಾಗರಾಜ ಸಂಗೀತಶಾಲೆ'ಯಲ್ಲಿ ಸಂಗೀತಾಭ್ಯಾಸ ಮಾಡಿದ್ದು, ಶಿವರಾಮ ಕಾರಂತರ ಬಾಲವನಕ್ಕೆ ಭೇಟಿ ನೀಡುತ್ತಿದ್ದು ಕಾರಣಾಂತರದಿಂದ ೧೯೪೪ರಲ್ಲಿ ಊರು ತ್ಯಜಿಸಿ ಮೈಸೂರಿಗೆ ಬಂದರು. ಅಲ್ಲಿ ಗುಬ್ಬಿ ಕಂಪನಿ ಮೊಕ್ಕಾಂ ಮಾಡಿದ್ದು ಬಾಲನಟರಾಗಿ ರಂಗಭೂಮಿಗೆ ಪಾದಾರ್ಪಣ ಮಾಡಿದರು. ಅದಕ್ಕೂ ಮೊದಲು ಮಂಗಳೂರಿನಲ್ಲಿ ಗುಬ್ಬಿಕಂಪನಿಯ ನಾಟಕಗಳನ್ನು ನೋಡಿದ್ದರು. ಪುಸ್ತಕ ವ್ಯಾಸಂಗ, ಸಂಸ್ಕೃತಾಭ್ಯಾಸ, ಸಂಗೀತ, ಚಿತ್ರಕಲೆ, ಯಕ್ಷಗಾನ, ಭಾಗವತಗಳ ಪ್ರಭಾವ, (ಪುತ್ತೂರಿನಲ್ಲಿ ನಾರಾಯಣಮಯ್ಯ ಎಂಬ ಚಿತ್ರಕಲಾ ಶಿಕ್ಷಕರಿದ್ದು, ಅವರಲ್ಲೂ ಕಾರಂತರರಿಗೆ ಒಡನಾಟ ಇತ್ತು). ಇತ್ಯಾದಿಗಳಿಂದ ಚಿಕ್ಕ ವಯಸ್ಸಿನಲ್ಲಿಯೇ ಕಾರಂತರು ಕಲಾವಿದರಾಗಿ ರೂಪುಗೊಂಡಿದ್ದರು. ಮುಂದೆ ಕಾಶಿಯಲ್ಲಿ ಹಿಂದಿ ಸ್ನಾತಕೋತ್ತರ ಪದವಿ ಪಡೆದು, ರಂಗಭೂಮಿ ಕುರಿತು ಪಿಎಚ್.ಡಿ ಅಧ್ಯಯನಕ್ಕೆ ಕೊಲ್ಕತಾದಲ್ಲಿ ಕೆಲತಿಂಗಳಿದ್ದು ನಂತರ ದೆಹಲಿಯ ರಾಷ್ಟ್ರೀಯ ನಾಟಕಶಾಲೆಗೆ ಸೇರಿ ವಿದ್ಯಾರ್ಥಿದೆಸೆಯಲ್ಲಿ ಹಲವಾರು ನಾಟಕಗಳನ್ನು ನಿರ್ದೇಶಿಸಿದರು. ನಂತರ ದೆಹಲಿಯ ಪಟೇಲ್ ಸ್ಕೂಲ್‌ನಲ್ಲಿ 'ಡ್ರಾಮಾ ಮಾಸ್ಟರ್' ಆಗಿದ್ದು ೧೯೭೦ರ ಸುಮಾರಿನಲ್ಲಿ ಬೆಂಗಳೂರಿಗೆ ಬಂದರು. ಬಾದಲ್ ಸರ್ಕಾರ್ ಅವರ 'ಏವಂ ಇಂದ್ರಜಿತ್', ಗಿರೀಶ್ ಕಾರ್ನಾಡರ 'ಹಯವದನ', ಲಂಕೇಶರ 'ಸಂಕ್ರಾಂತಿ', 'ಈಡಿಪಸ್' ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದರು. ೧೯೭೭ ರಿಂದ ೮೧ರ ಅವಧಿಯಲ್ಲಿ ದೆಹಲಿಯ ರಾಷ್ಟ್ರೀಯ ನಾಟಕಶಾಲೆ, ೮೧ ರಿಂದ ೮೬ರವರೆಗೆ ಭೂಪಾಲಿನ 'ರಂಗಮಂಡಲ', ೮೯ ರಿಂದ ೯೫ರವರೆಗೆ ಮೈಸೂರಿನ 'ರಂಗಾಯಣ'ಗಳಲ್ಲಿ ನಿರ್ದೇಶಕರಾಗಿ ಅನೇಕ ಹೊಸ ಪ್ರಯೋಗಗಳನ್ನು ಕೈಗೊಂಡರು. ಕನ್ನಡವಲ್ಲದೆ, ಇಂಗ್ಲಿಷ್, ಗ್ರೀಕ್, ಇಟಾಲಿಯನ್, ಜಪಾನಿ ಮೂಲದ ಕನ್ನಡ, ಹಿಂದಿ ಅನುವಾದಿತ ನಾಟಕಗಳು. ಸಂಸ್ಕೃತ, ಹಿಂದಿ ಹಾಗೂ ಭಾರತೀಯ ಭಾಷೆಗಳ ಕೆಲವು ಮೂಲ ಹಾಗೂ ಕೆಲವು ಅನುವಾದಗಳು ಹಾಗೂ ಮಕ್ಕಳ ನಾಟಕಗಳು ಇತ್ಯಾದಿ ನೂರಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದು, ಅನೇಕವು ಹಲವಾರು ಬಾರಿ ಪ್ರದರ್ಶನಗೊಂಡಿವೆ. 'ಸತ್ತವರ ನೆರಳು' ನಾಟಕ ಇನ್ನೂರಕ್ಕೂ ಹೆಚ್ಚು ಪ್ರಯೋಗ ಕಂಡಿದ್ದು ಇದೂ ಸೇರಿದಂತೆ ಉಳಿದ ನಾಟಕಗಳು ಕಾರಂತರ ನಿಧನಾನಂತರವೂ

ರಂಗಪ್ರಯೋಗ ಕಾಣುತ್ತಿವೆ. ಕಾರಂತರು ಕೆಲವು ಸಂಸ್ಕೃತ ಹಾಗೂ ಕನ್ನಡ ನಾಟಕಗಳನ್ನು ಹಿಂದಿಗೆ ಭಾಷಾಂತರಿಸಿದ್ದಾರಲ್ಲದೆ, ರಂಗಭೂಮಿಯ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ದೇಶಾದ್ಯಂತ ನಾಟಕ ಕಮ್ಮಟಗಳನ್ನು ನಿರ್ದೇಶಿಸಿದ್ದಾರೆ. ಕಾರಂತರಿಗೆ ಪದ್ಮಶ್ರೀ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಮಧ್ಯಪ್ರದೇಶದ ಕಾಳಿದಾಸ ಸಮ್ಮಾನ್, ರಾಜ್ಯ ಸರ್ಕಾರದ ಗುಬ್ಬಿವೀರಣ್ಣ ಪ್ರಶಸ್ತಿಗಳು ಬಂದಿದ್ದವು. ಕಾರಂತರು ೨೦೦೨ರಲ್ಲಿ ನಿಧನ ಹೊಂದಿದರು. ಅವರ ನೆನಪಿಗಾಗಿ ಇತ್ತೀಚೆಗೆ ಬೆಂಗಳೂರಿನಲ್ಲಿ ನಾಟಕ ಸಂಬಂಧವಾಗಿ ಅವರು ಸಂಗ್ರಹಿಸಿದ್ದ ಪುಸ್ತಕಗಳು. ಧ್ವನಿಸುರುಳಿ, ಪೋಸ್ಟರ್, ಚಿತ್ರಸುರುಳಿ, ಸಿ.ಡಿ. ಡಿ.ವಿ.ಡಿ. ಇತ್ಯಾದಿಗಳನ್ನು 'ಕಾರಂತರ ರಂಗಮನೆ' ಎಂಬ ಹೆಸರಿನಲ್ಲಿ ಸಂಗ್ರಹಾಲಯವಾಗಿ ಇರಿಸಿದ್ದು ಆಸಕ್ತರು ಸದಸ್ಯತ್ವ ಹೊಂದಿ ಬಳಸಿಕೊಳ್ಳಬಹುದಾಗಿದೆ.

ಬಂಟ್ವಾಳ ಸಮೀಪದ ಕಾರಂಜೇಶ್ವರದಲ್ಲಿ ಜನಿಸಿ ಮಂಗಳೂರಲ್ಲಿ ನೆಲೆಸಿರುವ ಶಾರದಾಶಾಸ್ತ್ರಿ (ಜ ೧೯೨೫) ಅವರು ತಡವಾಗಿ ನಾಟಕ ಕ್ಷೇತ್ರಕ್ಕೆ ಕಾಲಿರಿಸಿದವರು. ತಂದೆ ಕೃಷ್ಣ ಎಳಚಿತ್ತಾಯರು ಖ್ಯಾತ ಕಂಪನಿ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದು ಶಾರದಾ ಅವರಲ್ಲೂ ಆಸಕ್ತಿ ಮೂಡಿ ರುಕ್ಮಿಣಿ ಸ್ವಯಂವರ, ಬೇಡರಕಣ್ಣಪ್ಪ ಇತ್ಯಾದಿ ಹದಿನೆಂಟು ಪೌರಾಣಿಕ ಹಾಗೂ 'ವಿಕ್ಷಿಪ್ತೆ' ಎಂಬ ಸಾಮಾಜಿಕ ನಾಟಕ ರಚಿಸಿದ್ದಾರೆ. ಎಲ್ಲಾ ನಾಟಕಗಳನ್ನು ಸ್ವತಃ ಶಾರದಾ ಅವರೇ ನಿರ್ದೇಶಿಸಿದ್ದು ಸ್ತ್ರೀ ಪಾತ್ರವನ್ನು ಸ್ತ್ರೀಯರೇ ಅಭಿನಯಸಿದ್ದಾರೆ. ನಾಟಕಗಳನ್ನು ರಂಗಭೂಮಿಯ ಪ್ರದರ್ಶನಕ್ಕೆಂದೇ ಬರೆದಿದ್ದು ರಂಗಸಜ್ಜಿಕೆ, ವೇಷಭೂಷಣ, ಹಿನ್ನೆಲೆಗಾಯನ, ಇತ್ಯಾದಿಗಳ ಬಗ್ಗೆ, ನಾಟಕಾಭ್ಯಾಸದ ಬಗ್ಗೆ ಸ್ಪಷ್ಟ ಕಲ್ಪನೆ ಅವರಿಗಿದೆ. ಇತ್ತೀಚೆಗೆ ಅವರ 'ನಾಟ್ಯರಾಣಿ ಶಾಂತಲ' ನಾಟಕ ಅಚ್ಚಾಗಿದ್ದು ಉಳಿದವು ಅಪ್ರಕಟಿತವಾಗಿಯೇ ಇವೆ. ಮಕ್ಕಳಿಗಾಗಿ 'ಬಾಲಕಲಾ ಕಲ್ಪ' ಎನ್ನುವ ಸಂಸ್ಥೆ ಆರಂಭಿಸಿ ಅನೇಕ ನಾಟಕ ಆಡಿಸಿದ್ದು 'ವರ್ಣಶ್ರೀ ಕಲಾರಂಗ' ಎಂಬ ನಾಟಕ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿ ಹಲವಾರು ನಾಟಕಗಳ ನಿರ್ದೇಶನ ಮಾಡಿದ್ದಾರೆ.

ಉಳಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಬೀದಿ ನಾಟಕಗಳು ಜನ ಜಾಗ್ರತಿ ಮಾಡುವ ಕಾರ್ಯ ಕೈಗೊಂಡಿವೆ. ೧೯೭೬ರಲ್ಲಿಯೇ ಸಮುದಾಯ ತಂಡ (ಅವಿಭಜಿತ) ಜಿಲ್ಲೆಯಾದ್ಯಂತ ಯಶಸ್ವಿ ಪ್ರಯೋಗ ನಡೆಸಿತ್ತು. 'ಆಯನ' ತಂಡ 'ಮಂಡಲ ಪಂಚಾಯತ್ ಕಲಾಜಾಥಾ' ಎಂಬ ಹೆಸರಿನಲ್ಲಿ ಬೀದಿ ನಾಟಕಗಳನ್ನು ಅನೇಕ ಕಡೆ ನಡೆಸಿಕೊಟ್ಟಿದೆ. ಕಡುಪುವಿನ ಆದಿಸೋನದಲ್ಲಿ 'ಪರ್ಯಟನ'ವೆಂಬ ಬೀದಿನಾಟಕ ತಂಡ ೧೯೯೬ರಲ್ಲಿ ಆರಂಭಗೊಂಡಿದ್ದು, ಹೆಸರಿಗೆ ತಕ್ಕಂತೆ 'ತಿರುಗಾಟ' ನಡೆಸಿ ನಾಟಕಗಳನ್ನು ಪ್ರದರ್ಶಿಸಿದೆ. ಮೋಹನಚಂದ್ರ, ಎಂ.ಸಿ. ರಾಮು ಅವರುಗಳು ತಂಡದ ಕಾರ್ಯಕರ್ತರಾಗಿದ್ದಾರೆ. ಇವರುಗಳ ನೇತೃತ್ವದಲ್ಲಿ ಮಂಗಳೂರಿನಲ್ಲಿ ಬೀದಿನಾಟಕಗಳ ಕುರಿತು ರಾಜ್ಯಮಟ್ಟದ ಸಮಾವೇಶವೊಂದು ನಡೆದಿದ್ದು ನಾಟಕ ಪ್ರದರ್ಶನಕ್ಕೆ ಸಂಬಂಧಿಸಿದ ಚರ್ಚೆಗಳಾದವು.

ಜಿಲ್ಲೆಯ ಕೆಲವು ಕಾಲೇಜುಗಳು ರಂಗ ಪ್ರಯೋಗಗಳಿಗೆ ಉತ್ತೇಜನ ನೀಡಿದ್ದು, ನಾಟಕ, ಪ್ರದರ್ಶನ, ಸ್ಪರ್ಧೆಗಳು ಏರ್ಪಡುತ್ತಿದ್ದವು. ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜಿನ 'ರಂಗತಂಡ', ಸುರತ್ಕಲ್ ಇಂಜನಿಯರಿಂಗ್ ಕಾಲೇಜಿನ 'ಇನ್ಸಿಡೆಂಟ್', ಮಂಗಳೂರಿನ ರೋಟ್ರ್ಯಾಕ್ಸ್ ಸಂಸ್ಥೆಗಳು ಎಂಬತ್ತರ ದಶಕದಲ್ಲಿ ಕಾಲೇಜು ರಂಗಭೂಮಿ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದವು. 'ಅಭಿವ್ಯಕ್ತ ನಾಟಕ ತಂಡ'ವು ನಾಟಕ ಅಕಾಡೆಮಿಯ ಸಹಕಾರದೊಂದಿಗೆ ೧೯೮೮ ರಿಂದ ಅಂತರ ಕಾಲೇಜು ನಾಟಕ ಸ್ಪರ್ಧೆ ನಡೆಸುತ್ತಿದ್ದು, ಹತ್ತು ವರ್ಷಗಳ ನಂತರ ಅಕಾಡೆಮಿಯ ನೆರವು ನಿಂತು ಹೋದುದು, ಸ್ಪರ್ಧೆ ನಡೆಸುವುದು ಕಷ್ಟಕರವಾಗಿದೆ. ಆದರೂ 'ಅಭಿವ್ಯಕ್ತ' ತಂಡ ನಾಟಕ ಸ್ಪರ್ಧೆ, ರಂಗ ತರಬೇತಿ ಶಿಬಿರಗಳನ್ನು ಆಗಾಗ್ಗೆ ನಡೆಸುತ್ತಿದೆ. ಸುಬ್ರಹ್ಮಣ್ಯ ಕಾಲೇಜಿನ 'ಕುಸುಮ ಸಾರಂಗ ತಂಡ' ಕಾಲೇಜು ವಿದ್ಯಾರ್ಥಿಗಳಿಂದ ಉತ್ತಮ ಗುಣಮಟ್ಟದ ನಾಟಕಗಳನ್ನು ಪ್ರಯೋಗಿಸುತ್ತಿದೆ.

ವಿಶಾಲ ಕರ್ನಾಟಕವಾದಾಗ ಕಾಸರಗೋಡು ನೆರೆಯ ಕೇರಳಕ್ಕೆ ಸೇರಿತಾದರೂ ಅಲ್ಲಿರುವ ಹಲವಾರು ನಾಟಕ ಸಂಸ್ಥೆಗಳು ಕನ್ನಡ, ತುಳು ನಾಟಕಗಳನ್ನು ಬಹುತೇಕ ದಕ್ಷಿಣ ಕನ್ನಡ ಜಿಲ್ಲೆಯ ಪರಿಧಿಯಲ್ಲಿಯೇ ಪ್ರಯೋಗಿಸುತ್ತಿವೆ. ೧೯೭೯ರಲ್ಲಿ ಅಲ್ಲಿ 'ಯವನಿಕಾ', ಎಂಭತ್ತರ ದಶಕದಲ್ಲಿ 'ಗಡಿನಾಡ ಕಲಾವಿದರು', ಹಾಗೂ 'ನಟನಾ' ರಂಗ ತಂಡಗಳು ಆರಂಭವಾಗಿ ಅನೇಕ ರಂಗಪ್ರಯೋಗಗಳನ್ನು ನೀಡಿದವು. ವೇಣುಗೋಪಾಲ ಕಾಸರಗೋಡು, ಕಾಸರಗೋಡು ಚಿನ್ನಾ ರಿಂದಾಗಿ ನಾಟಕಗಳು ರಾಜ್ಯಮಟ್ಟದಲ್ಲಿಯೂ ಪ್ರಯೋಗಗೊಂಡವು. 'ಗಡಿನಾಡ ಕಲಾವಿದರು', ತಂಡ ಸುಕುಮಾರ ಕೆ. ಕಣ್ಣನ್ ಅವರ ನೇತೃತ್ವದಲ್ಲಿ 'ಅಗ್ನಿ ಮತ್ತು ಮಳೆ', 'ಅಂಧಯುಗ' ಪ್ರಯೋಗಿಸಿದ್ದು, 'ದೃಷ್ಟಿ' ನಾಟಕಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿತ್ತು. 'ನಟನಾ' ತಂಡದ ಪ್ರದೀಪ ಕಾಸರಗೋಡು ಹಾಗೂ ಮುರಹರಿ ಅವರು 'ನೀನಾಸಂ'ನಲ್ಲಿ ತರಬೇತಿ ಪಡೆದಿದ್ದು, ಸ್ಥಳೀಯ ರಂಗ ವಿದ್ಯಾರ್ಥಿಗಳೊಂದಿಗೆ ಸೇರಿ 'ಕರ್ಮಚಕ್ರ', 'ಒಬ್ಬ ದೇಶ ಪ್ರೇಮಿಯ ಹಸಿವು' ಇತ್ಯಾದಿ ನಾಟಕ ಪ್ರಯೋಗ ಮಾಡಿದ್ದರು. ಕಾಸರಗೋಡು ಚಿನ್ನಾ ಹಾಗೂ ಗೆಳೆಯರು ನಾಟಕ ಸಂವಹನ ಕ್ರಿಯೆಯಲ್ಲಿಯೇ ಹಲವಾರು ಪ್ರಯೋಗ

ಮಾಡಿದವರು. ಪ್ರಯೋಗಗಳೊಂದಿಗೆ 'ವಠಾರ ನಾಟಕ'ಗಳನ್ನು 'ಯವನಿಕಾ' ತಂಡದ ಮೂಲಕ ಪ್ರದರ್ಶಿಸುವ ವಿಶಿಷ್ಟ ಕಾರ್ಯಕ್ರಮ ಎಂಭತ್ತರ ದಶಕದಲ್ಲಿ ಆರಂಭಿಸಿದರು. ಅದರಂತೆ ಗ್ರಾಮೀಣ ಪ್ರದೇಶಗಳ ಸೂಕ್ತ ಮನೆ ಅಂಗಳ ಅಥವಾ ಶಾಲಾ ವಠಾರಗಳನ್ನೇ ತತ್ಕಾಲಿಕ ರಂಗಭೂಮಿಯಾಗಿಸಿ ನಾಟಕ ಪ್ರಯೋಗಿಸುವುದು ಜನಪ್ರಿಯಗೊಂಡಿತು. 'ಗಣರಾಜ್ಯ', 'ಪ್ರಜೆ' ನಾಟಕಗಳು ಅನೇಕ ಬಾರಿ ಈ ರೀತಿ ಅಭಿನಯಿಸಲ್ಪಟ್ಟಿತ್ತು. ತೊಂಭತ್ತರ ದಶಕದಲ್ಲಿ ವೇಣುಗೋಪಾಲರೊಂದಿಗೆ ಚೆನ್ನಾ ಅವರು ಸೇರಿ 'ಲಾರಿ ನಾಟಕ' ವೆಂಬ ಇನ್ನೊಂದು ಪ್ರಯೋಗ ಕೈಗೊಂಡರು. 'ಅಪೂರ್ವ ಕಲಾವಿದರು' ತಂಡದವರೊಂದಿಗೆ ಲಾರಿಯೊಂದರಲ್ಲಿ ನಾಟಕದ ಸೆಟ್ ಇರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಬಯಲಿನಲ್ಲಿ ನಿಲ್ಲಿಸಿದ ಲಾರಿಯೇ ವೇದಿಕೆಯಂತೆ ತೆರೆದುಕೊಂಡು, ನಾಟಕದ ಪಾತ್ರಧಾರಿಗಳೂ ಪ್ರೇಕ್ಷಕರ ಮಧ್ಯದಿಂದಲೇ ಬರುವಂತೆ ರೂಪಿಸಿದ ಮಾಧ್ಯಮದಲ್ಲಿ ವೇಣುಗೋಪಾಲರ 'ನಾಯಿಬಾಲ' ನಾಟಕ ದಿನಕ್ಕೆ ಮೂರು ಬಾರಿಯಂತೆ ಭಾನುವಾರಗಳಲ್ಲಿ ಊರೂರುಗಳನ್ನು ಸುತ್ತುತ್ತಾ ಪ್ರಯೋಗಿಸುತ್ತಿದ್ದುದೂ ಹೆಚ್ಚಿನ ಪರಿಣಾಮಕಾರಿಯಾಗಿರುವಂತಹದು.

ಜಿಲ್ಲೆಯಲ್ಲಿ ನಾಟಕದ ಬೆಳವಣಿಗೆಗಾಗಿ ಕೆಲವು ಸಂಘಟನೆಗಳು ರೂಪುಗೊಂಡವು. ೧೯೮೮ರಲ್ಲಿ ರಿಚರ್ಡ್ ಕ್ಯಾಸ್ಟಲಿನೋ ಅವರ 'ದಕ್ಷಿಣ ಭಾರತ ಕಲಾವಿದರ ಸಂಘ' ಹಾಗೂ ದಾಮೋದರ ಆರ್. ಸುವರ್ಣರವರ 'ದಕ್ಷಿಣ ಕನ್ನಡ ನಾಟಕ ಕಲಾವಿದರ ಸಂಘ' ಆರಂಭವಾಯಿತು. ಕ್ಯಾಸ್ಟಲಿನೋ ಅವರು ದಕ್ಷಿಣ ಭಾರತ ಕಲಾ ಮಹೋತ್ಸವ ಅದ್ದೂರಿಯಾಗಿ ನಡೆಸಿದ್ದು, ಸುವರ್ಣರವರು ಜಿಲ್ಲೆಯ ಕಲಾವಿದರನ್ನು ಒಟ್ಟು ಸೇರಿಸಿ ಅವರ ಅಭ್ಯುದಯಕ್ಕೆ ಹಲವಾರು ಯೋಜನೆಗಳು ಹಾಕಿಕೊಂಡಿದ್ದರು. ಜಿಲ್ಲೆಯ ಹವ್ಯಾಸಿ ರಂಗಭೂಮಿಯ ಹಿತರಕ್ಷಣೆಯ ದೃಷ್ಟಿಯಿಂದ 'ಕರಾವಳಿ ಹವ್ಯಾಸಿ ನಾಟಕ ಸಂಸ್ಥೆಗಳ ಒಕ್ಕೂಟ'ವೊಂದು ಏರ್ಯಲಕ್ಷ್ಮೀನಾರಾಯಣ ಆಳ್ವರ ನೇತೃತ್ವದಲ್ಲಿ ಆರಂಭವಾಗಿ ವರ್ಷಕೊಮ್ಮೆ ಸದಸ್ಯ ತಂಡಗಳೆಲ್ಲಾ ಒಟ್ಟಾರೆಯಾಗಿ ಸೇರಿ ನಾಟಕವಾಡುವ, ಸಮಸ್ಯೆಗಳ ಬಗ್ಗೆ ಚರ್ಚಿಸುವ ಕಾರ್ಯಕ್ರಮಗಳು ಕೆಲವು ವರ್ಷಗಳು ನಡೆದವು. ಎಂಭತ್ತರ ದಶಕದ ಕೊನೆಯಲ್ಲಿ 'ಅಭಿವ್ಯಕ್ತಿ'ದ ಶ್ರೀಧರ್ ಅವರು ಒಕ್ಕೂಟದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಆದರೆ ೯೦ರ ದಶಕದಲ್ಲಿ ಒಕ್ಕೂಟ ಸ್ಥಗಿತಗೊಂಡಿತು. ಅಂತೆಯೆ ಜಿಲ್ಲೆಯ ಹೆಚ್ಚಿನ ತಂಡಗಳು ನಿಷ್ಕ್ರಿಯವಾದವು. ಇತ್ತೀಚೆಗೆ 'ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ' ಜಿಲ್ಲೆಯಲ್ಲಿ ಕಾರ್ಯ ಪ್ರವೃತ್ತವಾಗಿದ್ದು, ತಂಡ ಪ್ರದರ್ಶಿಸಿದ 'ಕೋರ್ಟ್ ಮಾರ್ಷಲ್' ನಾಟಕ ३೦ಕ್ಕೂ ಹೆಚ್ಚು ಪ್ರದರ್ಶನ ಕಂಡು ಮುಂದುವರಿಯುತ್ತಿದೆ. ನಾಟಕ ಅಕಾಡಮಿ ಗೌರವ ಪ್ರಶಸ್ತಿ ಪಡೆದ ಜೀವನರಾಮ್ ಅವರು ನಾಟಕ, ಯಕ್ಷಗಾನ, ರಂಗಗೀತೆ ಇತ್ಯಾದಿ ಕುರಿತ ಕಾರ್ಯಕ್ರಮ ಹಾಗೂ ತರಬೇತಿ ನೀಡುತ್ತಿದ್ದಾರೆ. ಮೂಡಬಿದಿರೆಯ ಶೋಭಾವನದಲ್ಲಿ ಡಾ॥ ಎಂ. ಮೋಹನ್ ಆಳ್ವಾ ಅವರು ಪ್ರತಿವರ್ಷ ಏರ್ಪಡಿಸುತ್ತಿರುವ ಆಳ್ವಾಸ್ ವಿರಾಸತ್ ಜಿಲ್ಲೆಯ ರಂಗ ವೈಭವಕ್ಕೊಂದು ಕಿರೀಟವಾಗಿದೆ. ರಂಗಭೂಮಿಗೆ ಸಂಬಂಧಿಸಿದಂತೆ ಒಂದೆರಡು ಪತ್ರಿಕೆಗಳು ಬರುತ್ತಿದ್ದು, ಮೂಡಬಿದಿರೆಯ 'ಚದುರಂಗ' ತಂಡದ ಆಶ್ರಯದಲ್ಲಿ ಐ.ಕೆ.ಬೊಳುವಾರು ಅವರು 'ರಂಗಪತ್ರ', 'ಸಂಕೇತ್ ಕಲಾವಿದರ 'ಸಂಕೇತ' ಪತ್ರಿಕೆಗಳು ಕೆಲಕಾಲ ಪ್ರಕಟವಾದುವು.

## ಸಂಗೀತ, ನೃತ್ಯ

ಆಧುನಿಕ ಕಾಲದ ಸಂಗೀತದ ಇತಿಹಾಸ ಕಳೆದ ಶತಮಾನದ ಮೊದಲಲ್ಲಿ ಮಂಗಳೂರು ಬಳಿಯ 'ಕಾಂಚನ' ಎಂಬ ಸ್ಥಳದಿಂದ ಆರಂಭವಾಗಿದ್ದು, ಇಂದಿಗೂ ಅಲ್ಲಿ ಸಂಗೀತ ವಂಶ ಪರಂಪರೆಯೊಂದು ಬೆಳೆದು ಉಳಿದಿದೆ. ಅಲ್ಲಿಯ ವೆಂಕಟರಮಣಯ್ಯ ಅವರ ದ್ವಿತೀಯ ಪತ್ನಿ ಕೇರಳದ ಪಾಲ್ಘಾಟ್‌ನ ಆನಂದ ಲಕ್ಷ್ಮಿ ಅಮ್ಮಾಳ್ ಅವರು ಪಾಲ್ಘಾಟ್ ಮಣಿ ಅಯ್ಯರ್ ಅವರ ಸಹಪಾಠಿಯಾಗಿದ್ದು, ಕರ್ನಾಟಕ ಸಂಗೀತದಲ್ಲಿ ವಿದುಷಿಯಾಗಿದ್ದರು. ಕಾಂಚನದಲ್ಲಿಯೇ ವೀಣೆ, ಹಾಡುಗಾರಿಕೆ, ಲೆಗ್ ಹಾರ್ಮೋನಿಯಮ್ ನುಡಿಸುತ್ತ ಸಂಗೀತ ಪಾಠ ಸಹ ಪ್ರಾರಂಭಿಸಿದ್ದರು. ಲಕ್ಷ್ಮಿ ಅಮ್ಮಾಳ ಅವರ ಸಹೋದರ ಕೃಷ್ಣ ಅಯ್ಯರ್ ಮೃದಂಗ ವಾದಕರಾಗಿದ್ದು, ಇವರೊಂದಿಗೆ ಇದ್ದಂತೆ ತಿಳಿದುಬರುತ್ತದೆ. ವೆಂಕಟರಮಣಯ್ಯ ಹಾಗೂ ಲಕ್ಷ್ಮಿ ಅಮ್ಮಾಳ ಅವರ ಪುತ್ರರೇ ವೆಂಕಟಸುಬ್ರಹ್ಮಣ್ಯ ಅಯ್ಯರ್ (೧೯೨೧–೮೨) ಅವರು. ಅಂದಿನ ಹೆಸರಾಂತ ಸಂಗೀತಗಾರರಾಗಿದ್ದ ಚಂಬೈ ವೈದ್ಯನಾಥ ಭಾಗವತರ್, ಅರಿಯಾಕ್ಕುಡಿ ರಾಮಾನುಜ ಅಯ್ಯಂಗಾರ್, ಜಿ.ಎನ್. ಬಾಲಸುಬ್ರಹ್ಮಣ್ಯಂ, ಚೌಡಯ್ಯ, ಪಾಲ್ಘಾಟ್ ಮಣಿ ಅಯ್ಯರ್ ಮುಂತಾದವರನ್ನು ಮಂಗಳೂರಿಗೆ ಕರೆಯಿಸಿ ಸಂಗೀತ ಕಾರ್ಯಕ್ರಮ ಇರಿಸುತ್ತಿದ್ದರು. ಕಾಂಚನವಲ್ಲದೆ ಮಂಗಳೂರಿನಲ್ಲೂ ಶಾಲೆಯೊಂದನ್ನು ಆರಂಭಿಸಿದ್ದರು. ಕಾಂಚನ ಗ್ರಾಮಕ್ಕೆ ನೂತನ ತಿರುವಯ್ಯಾರು ಎಂದೇ ಕರೆಯಲಾಗುತ್ತಿದೆ. ಮುಂದೆ ವೆಂಕಟಸುಬ್ರಹ್ಮಣ್ಯ ಅಯ್ಯರ್ ಅವರು ಜಿ.ಎನ್. ಬಾಲಸುಬ್ರಹ್ಮಣ್ಯಂ ಅವರಲ್ಲಿ ಅಭ್ಯಸಿಸಿ ಸಂಗೀತ ಸೇವೆ ಮುಂದುವರಿಸಿದ್ದರು. ಅಯ್ಯರ್ ಅವರು ಗುರುಕುಲ ಪದ್ಧತಿಯಲ್ಲಿ ಉಚಿತವಾಗಿ ಸಂಗೀತ ಶಿಕ್ಷಣ ನೀಡುತ್ತಿದ್ದರು. ಇವರ ಶಿಷ್ಯ ವರ್ಗದಲ್ಲಿ ಶ್ರೀನಾಥ ಮರಾಠೆ, ಕಾಂಚನ ನಾರಾಯಣ ಭಟ್, ಉಡುಪಿ ಗೋಪಾಲಕೃಷ್ಣ ವಿಷ್ಣುಮೂರ್ತಿ ಭಟ್, ಲಲಿತಾಂಬ, ಹೇಮಾವತಿ ಮಧೂರು, ಪಿ. ಬಾಲಸುಬ್ರಹ್ಮಣ್ಯಂ, ಮೂಡ್ನೂರು ಎ. ರಘುರಾಮ್, ಕಾಂಚನ ವಿ. ಮೂರ್ತಿ, ಅನಂತರಾಂ ಹಾಗೂ ಅಯ್ಯರ್ ಅವರ

ಪುತ್ರ ಸುಬ್ಬರತ್ನಂ ಮುಖ್ಯರು. ಸುಬ್ಬರತ್ನಂ (೧೯೪೮) ಕಾಂಚನದಲ್ಲಿ ಶ್ರೀ ಲಕ್ಷ್ಮೀನಾರಾಯಣ ಸಂಗೀತ ಶಾಲೆಯನ್ನು ನಡೆಸುತ್ತಿದ್ದು, ಇವರ ಸೋದರಿಯಾದ ವಸಂತಪ್ರಭಾ ಹಾಗೂ ವಿಜಯ ಲಕ್ಷ್ಮಿ ಅವರು ಮತ್ತು ಪತ್ನಿ ರೋಹಿಣಿ ಸುಬ್ಬರತ್ನಂ (ಖ್ಯಾತ ವಿದ್ವಾಂಸ ಆರ್. ಸತ್ಯನಾರಾಯಣ ಅವರ ಪುತ್ರಿ) ಯವರಲ್ಲದೆ ಇವರ ಮಕ್ಕಳೂ ಸಹ ಸಂಗೀತ ಕಲಾವಿದರಾಗಿದ್ದಾರೆ.

ಕಳೆದ ಶತಮಾನದ ಆರಂಭದಲ್ಲಿ ಮಂಗಳೂರಿನಲ್ಲಿದ್ದ ಆದಪ್ಪನವರು ತಮಿಳು ನಾಡಿನಲ್ಲಿ ಸಂಗೀತ ಕಲಿತಿದ್ದು, ಮಂಗಳೂರಿನಲ್ಲಿ ಸಂಗೀತ ಶಾಲೆ ನಡೆಸುತ್ತಿದ್ದರು. ಇವರ ಶಿಷ್ಯರೊಬ್ಬರು 'ಹಾರ್ಮೋನಿಯಂ ಬೋಧನಕ್ರಮ' ಎಂಬ ಪುಸ್ತಕ ರಚಿಸಿದ್ದರು. ಎಚ್. ಕೃಷ್ಣ ಉಡುಪರವರು ೧೯೧೮ರಲ್ಲಿ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿಯೂ ಹಾಗೂ ಕೆನರ ಗರ್ಲ್ಸ್ ಸ್ಕೂಲಿನಲ್ಲಿಯೂ ಸಂಗೀತ ಪಾಠ ಬೋಧಿಸುತ್ತಿದ್ದರು. ೧೯೩೦ರಲ್ಲಿ ಕೃಷ್ಣರವರು 'ಸಂಗೀತ ಬಾಲ ಪಾಠಾವಲಿ' ಎಂಬ ಸಂಗೀತ ಪ್ರಾಥಮಿಕ ಪಾಠಗಳ ಬಗ್ಗೆ ಪುಸ್ತಕ ರಚಿಸಿದ್ದಾರೆ. ಸೋಮನಾಥಯ್ಯ ಎಂಬ ವೈಣಿಕರೊಬ್ಬರು ಇದೇ ವೇಳೆಯಲ್ಲಿ ಮಂಗಳೂರಲ್ಲಿ ವೀಣೆ ಶಿಕ್ಷಣ ನೀಡುತ್ತಿದ್ದರು. ಮೂಲತಃ ಉಡುಪಿಯವರಾದ ಫಿಡ್ಲು ಕೃಷ್ಣರಾಯರು (೧೮೮೬–೧೯೪೩) ತಿರುವನಂತಪುರ, ತಂಜಾವೂರುಗಳಲ್ಲಿ ಪಿಟೀಲು ವಾದ್ಯ ಕಲಿತು ಮಂಗಳೂರಿನಲ್ಲಿ ನೆಲೆಸಿ, ಗುರುಕುಲ ಮಾದರಿಯಲ್ಲಿ ವಿದ್ಯಾರ್ಥಿಗಳನ್ನು ಮನೆಯಲ್ಲಿಯೇ ಇರಿಸಿಕೊಂಡು ಸಂಗೀತ ವಿದ್ಯಾಭ್ಯಾಸ ನೀಡುತ್ತಿದ್ದವರು. ಇವರು ಕೆಲವು ಕೀರ್ತನೆಗಳನ್ನು ರಚಿಸಿದ್ದು, ಅದರ ಹಸ್ತಪ್ರತಿ ಇಂದು ಕೃಷ್ಣರಾಯರ ಮಗ ಫಿಡ್ಲು ವಾಸುದೇವರಾಯರಲ್ಲಿ ಲಭ್ಯವಿದೆ. ವಾಸುದೇವ ರಾಯರೂ ವಾದ್ಯ ಸಂಗೀತಗಾರರಾಗಿ ಹೆಸರು ಮಾಡಿದ್ದು, ಅವರ ಸೋದರ–ಸೋದರಿಯರೂ ರಾಜ್ಯ ಹೊರರಾಜ್ಯಗಳಲ್ಲಿ ಸಂಗೀತ ಸೇವೆ ಸಲ್ಲಿಸುತ್ತಿದ್ದಾರೆ. ಫಿಡ್ಲು ಕೃಷ್ಣರಾಯರು ಸಿಲೋನಿನಲ್ಲೂ ಕಾರ್ಯಕ್ರಮ ನೀಡಿದ್ದು, ಇಂದಿನ ಅನೇಕ ಖ್ಯಾತನಾಮರಿಗೆ ಸಂಗೀತ ಶಿಕ್ಷಣ ನೀಡಿದ್ದಲ್ಲದೆ, ಅಂದಿನ ಪ್ರಸಿದ್ಧ ಸಂಗೀತ ಕಲಾವಿದರನ್ನು ಮಂಗಳೂರಿಗೆ ಬರಮಾಡಿಕೊಂಡು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಕೃಷ್ಣ ಉಡುಪರ ಮಗ ಶ್ರೀನಿವಾಸ ಉಡುಪರು (ಜ೧೯೨೩) ಸಂಗೀತ ಉಪಾಧ್ಯಾಯರಾಗಿ, ಸಂಗೀತಗಾರರಾಗಿ, ಶಾಸ್ತ್ರಜ್ಞರಾಗಿ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. 'ಕಲಾನಿಕೇತನ' ಎಂಬ ಶಾಲೆ ಆರಂಭಿಸಿ ಸಂಗೀತ ಶಿಕ್ಷಣ ನೀಡುತ್ತಿದ್ದು, ೧೯೪೮ರಲ್ಲಿ ಮುಂಬಯಿಯಿಂದ ಬಂದ ಗೋಪಾಲಕೃಷ್ಣ ಅಯ್ಯರ್ ಅವರು ತಮ್ಮ ಸೋದರ ರಾಜ ಅಯ್ಯರ್ ಅವರೊಂದಿಗೆ ಕಲಾ ನಿಕೇತನದಲ್ಲಿ ಸೇವೆ ಸಲ್ಲಿಸಿದ್ದು, ಇವರ ಶಿಷ್ಯ ಪರಂಪರೆ ಅಪಾರವಾಗಿದೆ. ಎನ್. ಕೆ. ಸುಂದರಾಚಾರ್ಯರೂ ಸಂಗೀತಕ್ಕಾಗಿ ಸರ್ವಸ್ವವನ್ನು ಮುಡುಪಿಟ್ಟು ಸೇವೆ ಸಲ್ಲಿಸಿದವರು.

ಸಂಗೀತ ವಿದ್ವಾನ್ ಸರೋಜ ಮೋಹನ್‌ದಾಸ್ (ಜ ೧೯೩೭) ಅವರು ಸಂಗೀತಗಾರರಿಗೆ ಆಶ್ರಯದಾತರಾಗಿದ್ದು, ಬೆಂಗಳೂರಲ್ಲಿ ಶಿಕ್ಷಣ ಪಡೆದು ಮಂಗಳೂರಲ್ಲಿ ಸಂಗೀತ ಶಿಕ್ಷಕಿಯಾಗಿದ್ದಲ್ಲದೆ, ಆಕಾಶವಾಣಿ ನಿಲಯ ಕಲಾವಿದರೂ ಆಗಿದ್ದರು. ಇವರ ಮಕ್ಕಳ ಪೈಕಿ ಮಗ ದಿನಕರರಾವ್ ಮೃದಂಗ ವಾದಕರಾದರೆ, ಮಗಳು ಪ್ರತಿಭಾ ಸಾಮಗರು ನೃತ್ಯಕಲಾವಿದೆ. ಇನ್ನೊಬ್ಬ ಮಗ ಹರ್ಷ ಸಾಮಗ ಅವರು ವಾಸುದೇವರಾವ್ ಹಾಗೂ ಹರಿಶ್ಚಂದ್ರನ್ ಬಳಿ ಅಭ್ಯಸಿಸಿ ಮೃದಂಗ ಪಟುವಾಗಿದ್ದಾರೆ.

ಕಾಂಚನದ ಅಯ್ಯರ್ ಅವರ ಶಿಷ್ಯರಾದ ಶ್ರೀನಾಥ ಮರಾಠೆಯವರು ವಾರಣಾಸಿಯಲ್ಲಿ ಹೆಚ್ಚಿನ ಅಭ್ಯಾಸ ನೆಡೆಸಿ, ಮಂಗಳೂರು ಆಕಾಶವಾಣಿ ನಿಲಯ ಕಲಾವಿದರಾಗಿದ್ದರು. ಕುಂಜೂರಿನ ಇದೇ ನಿಲಯದ ಕಲಾವಿದರಾಗಿದ್ದ ಹರಿಶ್ಚಂದ್ರ (ಜ ೧೯೩೭) ಅವರು ಪಾಲ್ಘಾಟ್ ಮಣಿ ಅಯ್ಯರ್ ಮುಂತಾದವರಲ್ಲಿ ಕಲಿತು ಮೈಸೂರು ಆಸ್ಥಾನ ವಿದ್ವಾಂಸರೂ ಆಗಿದ್ದವರು. ಅಲ್ಲಿಯ ಇನ್ನೊಬ್ಬ ಮೃದಂಗ ಕಲಾವಿದ ಮೈಸೂರು ಆರ್. ಸಾಯಿನಾಥ್ ಅವರು. ಸುರತ್ಕಲ್ಲಿನ ಎಂ ನಾರಾಯಣ ಅವರು ಪ್ರಾರ್ಥನಾರಾವ್ ಸೇರಿದಂತೆ ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ. ಕೆ. ಆರ್. ಇ. ಸಿ. ಯ ಪ್ರಾಧ್ಯಾಪಕರಾದ ಪ್ರಭು ಹಾಗೂ ಮಯ್ಯ ಅವರು ದೆಹಲಿಯ ಸಿಕ್‌ಮೆಕ್ ಆಶ್ರಯದಲ್ಲಿ ಕಲಾತಂಡ ಕರೆಸಿ ಶಾಲಾಕಾಲೇಜುಗಳ ಮಕ್ಕಳುಗಳಲ್ಲಿ ನೃತ್ಯ ಹಾಗೂ ಸಂಗೀತಗಳಲ್ಲಿ ಆಸಕ್ತಿ ಮೂಡಿಸಲು ಶ್ರಮಿಸುತ್ತಿದ್ದಾರೆ.

ಮೈಸೂರಿನ ಖ್ಯಾತ ಆಸ್ಥಾನ ವಿದ್ವಾನ್ ಬಿಡಾರಂ ಕೃಷ್ಣಪ್ಪ (೧೮೮೬–೧೯೩೧) ಅವರ ಹಿರಿಯರು ಇಂದಿನ ಉಡುಪಿ ಜಿಲ್ಲೆಯ ನಂದಳಿಕೆಯಿಂದ ಮುಮ್ಮಡಿಯವರ ಕಾಲದಲ್ಲಿ ಮೈಸೂರಿಗೆ ಬಂದು ನೆಲೆಸಿದರೆಂದು ಈವರೆಗೆ ತಿಳಿಯಲಾಗಿದ್ದು, ಹಾಗೆ ಬಂದಿದ್ದು ಬಂಟ್ವಾಳದಿಂದ ಎಂದು ಈಚಿನ ಶೋಧನೆಗಳು ತಿಳಿಸುತ್ತದೆಯಲ್ಲದೆ, ಕೃಷ್ಣಪ್ಪನವರು ಅವರ ಶಿಷ್ಯ ಚೌಡಯ್ಯನವರೊಂದಿಗೆ ಮಂಗಳೂರಿನಲ್ಲಿ ಕಾರ್ಯಕ್ರಮಗಳನ್ನು ನೀಡಿದಂತೆ ತಿಳಿದುಬರುತ್ತದೆ.

ಪುತ್ತೂರಿನ ಕುದ್ಮಾರಿನ ಕುಂಞಂಣಾಯರ ಮನೆತನದವರು ಸಂಗೀತ ವಿದ್ವಾಂಸರಾಗಿದ್ದು, ಕುದ್ಮಾರು ವೆಂಕಟರಾಮನ್ (ಜ ೧೯೪೫) ಹಾಗೂ ಅವರ ಸೋದರಿಯರಾದ ಸುರತ್ನ, ಕ್ಷಮಾ ಅವರುಗಳು ಕಾಂಚನ ವೆಂಕಟಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿ ಅಭ್ಯಸಿಸಿದವರು.

ಇವರಲ್ಲದೆ ನರ್ಮದ, ಲಲಿತಾಂಬ (ಲತಾತಂತ್ರಿ) ಪ್ರಭಾವತಿ, ವಲ್ಲಿ, ವಿಶ್ವೇಶ್ವರ, ಶ್ರೀಕಾಂತ ಮುಂತಾದವರು ಕುದ್ಮಾರಿನವರಾಗಿದ್ದು ಹೆಚ್ಚಿನವರು ಆಕಾಶವಾಣಿ ಕಲಾವಿದರಾಗಿದ್ದಾರೆ.

ಪುತ್ತೂರಿನ ವೆಂಕಟಪ್ಪ ಡೊಗ್ರ (ಜ ೧೯೧೮) ಅವರು ಮೈಸೂರಿನಲ್ಲಿ ಎಂ.ವಿ. ಲಕ್ಷ್ಮೀನರಸಿಂಹಯ್ಯ ಎಂಬುವವರಲ್ಲಿ ಸ್ಯಾಕ್ಸೊಫೋನ್ ವಾದ್ಯ ಅಭ್ಯಸಿಸಿ, ಕರ್ನಾಟಕ ಸಂಗೀತಕ್ಕೆ ಪ್ರಥಮವಾಗಿ ಅಳವಡಿಸಿದರು. ಮಂಗಳೂರಿನ ಕೆ. ಅನಂತರಾಮ್, ಪುತ್ತೂರು ಪಿ.ಕೆ. ಗಣೇಶ್, ಮಚ್ಚೇಂದ್ರನಾಥ, ಹರಿದಾಸ, ಓಬು ಸೇರಿಗಾರ ಮುಂತಾದವರು ಡೋಗ್ರರಲ್ಲಿ ಸ್ಯಾಕ್ಸೊಫೋನ್ ವಾದ್ಯ ಕಲಿತು ನಾಗಸ್ವರ ವಾದ್ಯಕ್ಕೆ ಬದಲಾಗಿ ನುಡಿಸುತ್ತಿದ್ದು, ಹೊಸ ವಾದ್ಯ ಹೆಚ್ಚು ಜನಪ್ರಿಯವಾಗುವಂತಾಗಿದೆ. ಪುತ್ತೂರಿನ ಹರಿಶ್ಚಂದ್ರ ಅವರು ಎ.ಕೆ.ಸಿ. ನಟರಾಜನ್ ಅವರಲ್ಲಿ ಕ್ಲಾರಿಯೋನೆಟ್ ವಾದನ ಕಲಿತು ಅದೂ ಸೇರಿದಂತೆ ಸುಪಾರ್ನೋ ಎಂಬ ಪಾಶ್ಚಾತ್ಯ 'ಕೀ' ವಾದ್ಯದಲ್ಲಿ ಪರಿಣಿತರಿದ್ದಾರೆ.

ಬಂಟ್ವಾಳದ ಚಕ್ರಕೋಡಿ ನಾರಾಯಣ ಶಾಸ್ತ್ರಿಗಳು (೧೯೧೩–೯೩) ಅವರು ತಂದೆ ಶ್ಯಾಮಶಾಸ್ತ್ರಿ ಹಾಗೂ ಫಾಲ್ಘಾಟ್, ಉಡುಪಿಗಳಲ್ಲಿ ಸಂಗೀತ ಶಿಕ್ಷಣ ಪಡೆದು, ನಿಯಲದ ಕಲಾವಿದರಾಗಿ ಇಪ್ಪತ್ತು ವರ್ಷ ದುಡಿದವರು. ಶಿವಶರಣರ ಅನೇಕ ವಚನಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿದ್ದಲ್ಲದೆ, ಸ್ವಂತ ರಚನೆಗಳನ್ನು ಮಾಡಿದ್ದಾರೆ, ಗಾನ ಸುಧಾಕರ, ಹರಿದಾಸ ಸಂಗೀತ ಸುಧಾಕರ, ಗಾನಾಲಂಕಾರ, ಕರ್ನಾಟಕ ಕಲಾತಿಲಕ ಇತ್ಯಾದಿ ಬಿರುದುಗಳು ಸಂದಾಯವಾಗಿದೆ. 'ಕರ್ನಾಟಕ ಸಂಗೀತ ವೈಭವ' ಎಂಬ ಪುಸ್ತಕ ರಚಿಸಿದ್ದಾರೆ. ವಿಟ್ಲದ ಶ್ರೀನಿವಾಸರಾವ್ ಸಧ್ಯ ಬೆಂಗಳೂರಲ್ಲಿ ಪಿಟೀಲು ವಾದಕರಾಗಿದ್ದಾರೆ. ಕುಕ್ಕಿಲ ಕೃಷ್ಣ ಭಟ್ಟರು (೧೯೧೧–೧೯೮೮) ಛಂದಶಾಸ್ತ್ರ, ಯಕ್ಷಗಾನ, ಸಂಗೀತ, ನಾಟ್ಯ ಶಾಸ್ತ್ರಗಳಲ್ಲಿ ಪಂಡಿತರಾಗಿದ್ದು, 'ಭಾರತೀಯ ಸಂಗೀತ ಶಾಸ್ತ್ರ' ಎಂಬ ಕೃತಿ ರಚಿಸಿದ್ದಾರೆ. ಸೇಡಿಯಾಪು ಕೃಷ್ಣ ಭಟ್ಟರ 'ಛಂದೋಗತಿ' ಯಲ್ಲಿಯೂ ಸಂಗೀತ ಕುರಿತು ಕೆಲವು ಅಧ್ಯಾಯಗಳಿವೆ.

ವಿದ್ಯಾಭೂಷಣ ತೀರ್ಥರು (ಜ ೧೯೫೨) ಸುಬ್ರಹ್ಮಣ್ಯದಲ್ಲಿ ಜನಿಸಿ, ಮಠವೊಂದರಲ್ಲಿ ಸ್ವಾಮಿಯಾಗಿದ್ದು ನಂತರ ಪೀಠತ್ಯಾಗ ಮಾಡಿದ್ದು, ಆ ಮೊದಲು ಮತ್ತು ನಂತರವೂ ಸಂಗೀತ ಕಾರ್ಯಕ್ರಮಗಳನ್ನು ನಿರಂತರವಾಗಿ ನೀಡುತ್ತಿದ್ದಾರೆ.  ಮೊದಲಿಗೆ ಬಿ.ವಿ.ನಾರಾಯಣ ಐತಾಳರಲ್ಲಿ ನಂತರ ಆರ್.ಕೆ.ಶ್ರೀಕಂಠನ್, ಟಿ.ವಿ.ಗೋಪಾಲಕೃಷ್ಣ ಅವರಲ್ಲಿ ಸಂಗೀತಾಭ್ಯಾಸ ಮಾಡಿದರು.  ಚೆನ್ನೈ, ಮುಂಬಯಿ, ಕೋಲ್ಕತ್ತಾ ಸೇರಿದಂತೆ ರಾಷ್ಟ್ರಾದ್ಯಂತ ಕಾರ್ಯಕ್ರಮ ನೀಡಿದ್ದಾರೆ.  ದಾಸಸಾಹಿತ್ಯವನ್ನು ಜನಪ್ರಿಯಗೊಳಿಸುತ್ತಿರುವ ವಿದ್ಯಾಭೂಷಣರು ಹಾಡಿದ ಹಾಡುಗಳ ಅನೇಕ ಧ್ವನಿಸುರುಳಿಗಳು ಬಿಡುಗಡೆಯಾಗಿವೆ. ವಿದ್ಯಾಭೂಷಣರು ಸ್ಥಾಪಿಸಿದ 'ಗೋವಿಂದ ಗಾನ ಸಭಾ' (೧೯೯೧)ಸಂಗೀತ ಚಟುವಟಿಕೆಗಳ ಕೇಂದ್ರ ಬಿಂದುವಿನಂತಿದೆ.  ಶ್ರೀಯುತರಿಗೆ 'ಸಂಗೀತ ವಿದ್ಯಾನಿಧಿ' ಬಿರುದು ಹಾಗೂ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಇಂದು ರಾಜ್ಯದಲ್ಲಿ ಸ್ಯಾಕ್ಸೋಫೋನ್ ವಾದನದಲ್ಲಿ ಬಹು ದೊಡ್ಡ ಹೆಸರು ಪಡೆದಿರುವವರು ಕದ್ರಿ ಗೋಪಾಲನಾಥ್ (೧೯೫೦) ಅವರು.  ನಾಗಸ್ವರ ವಿದ್ವಾಂಸರ ವಂಶಜರಾದ ಶ್ರೀಯುತರು ತಂದೆ ತನಿಯಪ್ಪರಲ್ಲಿ ಆರಂಭಿಕ ಶಿಕ್ಷಣವನ್ನು ಎನ್.ಗೋಪಾಲಕೃಷ್ಣ ಅಯ್ಯರ್ ಹಾಗೂ ಟಿ.ವಿ.ಗೋಪಾಲಕೃಷ್ಣ ಅವರುಗಳಿಂದ ಹೆಚ್ಚಿನ ಶಿಕ್ಷಣ ಪಡೆದು ಚೆನ್ನೈ, ಕೇರಳಗಳಲ್ಲದೆ ದೆಹಲಿ, ಲಕ್ನೊ, ರಿಷಿಕೇಶ ಮುಂತಾದ ಉತ್ತರ ಭಾರತದ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿದ್ದು, ಮುಂಬಯಿ ಹಾಗೂ ಫ್ರಾನ್ಸ್ ಗಳಲ್ಲಿ ನಡೆದ ಅಂತರರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಹಲವಾರು ಬಾರಿ ವಿದೇಶದ ವಿವಿಧ ಸ್ಥಳಗಳಲ್ಲಿ ಆಹ್ವಾನಿತರಾಗಿದ್ದಾರೆ. ಇವರ ಹಾಡಿನ ಅನೇಕ ಧ್ವನಿಸುರುಳಿ, ಸಿ.ಡಿ.ಗಳು ಪ್ರಕಟವಾಗಿವೆ. ಸುನಾದಪ್ರಕಾಶಿಕ, ಸ್ಯಾಕ್ಸೊಫೋನ್ ಚಕ್ರವರ್ತಿ ಇತ್ಯಾದಿ ಬಿರುದು ಲಭಿಸಿವೆ.  ಒಂದು ಅವಧಿಗೆ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರು.

ಕಾಸರಗೋಡಿನಲ್ಲಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಜನಿಸಿ ತಂಜಾವೂರಿನಲ್ಲಿ ತರಬೇತಿ ಪಡೆದ ವಳಕುಂಜೆ ಸುಬ್ಬಯ್ಯ ಭಟ್ಟರೆಂಬುವರು ಪ್ರಸಿದ್ಧ ಸಂಗೀತಗಾರರಾಗಿದ್ದರು. ಇವರ ಶಿಷ್ಯ ಮಧೂರು ಪದ್ಮನಾಭ ಶರಳಾಯ ಮೈಸೂರು ತಂಜಾವೂರುಗಳಲ್ಲಿ ಅಭ್ಯಸಿಸಿ ಬಂದಿದ್ದರು. ಇವರ ಶಿಷ್ಯರ ಪೈಕಿ ಮಹೇಶ್ವರ ಶರಳಾಯ, ಪ್ರಭಾಕರ ಶರಳಾಯ, ಕಮಲಮ್ಮ ಕೇಶವಮೂರ್ತಿ, ಕೋಳಿಕಜ್ಜೆ ವಿಷ್ಣುಭಟ್, ಕೆ. ಬಾಬು ರೈ, ಅಂಬಲಪಾಡಿ ವೆಂಕಟೇಶ ಶಾನುಭೋಗರು, ಎ.ಎಲ್. ಅನಂತ ಪದ್ಮನಾಭ, ಮೃಣಾಲಿನಿ ಮುಂತಾದವರು ಮುಖ್ಯರಾಗಿದ್ದು, ಹಾಡುಗಾರಿಕೆಯಲ್ಲದೆ ವಿವಿಧ ವಾದ್ಯಗಳಲ್ಲಿ ಪರಿಣತಿಯುಳ್ಳವರು. ಕುಂಜಗುತ್ತು ಗೋವಿಂದ ಭಟ್ಟರು ಹಾಗೂ ಬೈಲಂಗಡಿಯ ಪೆರ್ಲಾಯ ರಾಮಚಂದ್ರ ಅಡಿಗಳವರು ಕಾಸರಗೋಡಿನ ಸಂಗೀತ ಕ್ಷೇತ್ರದಲ್ಲಿ ಗಣ್ಯರು. ಪುಂಡೂರು ಮನೆತನದ ಪುರುಷೋತ್ತಮರು ಮೃದಂಗವಾದಕರಾಗಿದ್ದಾರೆ. ೧೯೪೪ರಲ್ಲಿಯೇ 'ಕರ್ನಾಟಕ ಸಂಗೀತಾಭಿವರ್ಧಕ ಸಂಘ' ಸಂಗೀತ ಶಿಕ್ಷಣ ನೀಡುತ್ತಿತ್ತು. ೧೯೫೬ರಲ್ಲಿ ಕುಂಬಳೆ ಸೂರಂಬೈಲಿನಲ್ಲಿ 'ವಾಣಿ ಸಂಗೀತ ನಿಲಯ'ವನ್ನು ಎಸ್. ಕೆ ಪದ್ಮನಾಭ ಆಚಾರ್ಯರು ಆರಂಭಿಸಿದವರು. ಇದೇ ವೇಳೆಯಲ್ಲಿ

ಯು.ಪಿ. ಕುಣಿಕುಳ್ಳಾಯ, ಬಾಬುರೈ ಮುಂತಾದವರ 'ಕಲಾನಿಲಯ' ಚಟುವಟಿಕೆಯಿಂದ ಕೂಡಿತ್ತು. ೧೯೦೪ರ ಸುಮಾರಿಗೆ ಜನಿಸಿದ್ದ ಕೂಡ್ಲು ಸುಬ್ರಾಯ ಶಾನುಭಾಗರೆಂಬುವವರು ಯಕ್ಷಗಾನವಲ್ಲದೆ ದಕ್ಷಿಣಾದಿ–ಉತ್ತರಾದಿ ಸಂಗೀತ, ವಿವಿಧ ಬಗೆಯ ವಾದ್ಯಗಳ ವಾದನ ಹಾಗೂ ಚಿತ್ರಕಲೆ, ಕುಶಲಕಲೆ ಮೊದಲಾದ ವೃತ್ತಿಗಳಲ್ಲಿ ನಿಷ್ಣಾತರಾಗಿದ್ದರು.

ಜಿಲ್ಲೆಯ ಸಂಗೀತ ಶಾಲೆ, ಸಂಗೀತ ಸಭಾಗಳೂ ಜಿಲ್ಲೆಯಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿವೆ. ಮೊದಲಿಗೆ ಮಂಗಳೂರಿನ ಲಲಿತಕಲಾ ಸಂಘ, ಲಲಿತಕಲಾ ಪ್ರಸಾರಕ ಸಂಘ, ಸುಂದರಾಚಾರ್ಯರ ಸನಾತನ ಸಂಗೀತ ಸಭಾ, ತಮಿಳು ಸಮಾಜ, ತರಂಗಿಣಿ, ಸ್ವಾಮಿ ಹರಿದಾಸ ಸಂಗೀತ ಸಭಾ ಮುಂತಾದವು ಕಾರ್ಯನಿರ್ವಹಿಸುತ್ತಿದ್ದವು. ಈಚೆಗೆ ಪೇಜಾವರ ನಿತ್ಯಾನಂದರಾವ್ ಅವರ 'ಸಂಗೀತ ಪರಿಷತ್' (೧೯೯೩) ಸಂಗೀತ ಪ್ರಚಾರ ಕಾರ್ಯದಲ್ಲಿ ತೊಡಗಿದೆ. ಪೆರೋಡಿ ರಾಧಾಕೃಷ್ಣರಾಯರ 'ಸಂಗೀತ ಭಾರತಿ' ಹಿಂದೂಸ್ಥಾನಿ ಸಂಗೀತಕ್ಕೆ ಪ್ರೋತ್ಸಾಹ ನೀಡುತ್ತಿದೆ. 'ರಾಗತರಂಗ' ವೆಂಬ ಸಂಸ್ಥೆ ಮಕ್ಕಳಲ್ಲಿ ಸಂಗೀತಾಸಕ್ತಿ ಮೂಡಿಸುತ್ತಿದೆ. ಮಂಗಳೂರಿನಲ್ಲಿ ೧೯೯೯ರಲ್ಲಿ ಆರಂಭವಾದ ನಿತ್ಯಾನಂದ ರಾಯರ 'ನಿರಂಜನಿ ಮ್ಯೂಸಿಕಲ್ಸ್' ಕ್ರಿಯಾಶೀಲವಾಗಿದೆ. ಶ್ರೀನಿವಾಸ ಉಡುಪರವರು ಸಂಗೀತ ಶಾಸ್ತ್ರಕಾರರಾಗಿ ಅನೇಕ ಲೇಖನ ರಚಿಸಿದ್ದಾರೆ. ಕೆಲಕಾಲ ಮಂಗಳೂರಲ್ಲಿದ್ದ ಜಿ.ಟಿ. ನಾರಾಯಣ ರಾಯರು ಸಂಗೀತ ಹಾಗೂ ಸಂಗೀತಗಾರರ ಬಗ್ಗೆ ಇಂದಿಗೂ ಬರೆಯುತ್ತಿದ್ದಾರೆ. ಮಂಗಳೂರಿನ ರಥಬೀದಿಯಲ್ಲಿ ಸಂಗೀತೋಪಕರಣಗಳ ಮಾರಾಟ ಮಳಿಗೆಗಳೂ ಇವೆ.

ಪುತ್ತೂರಿನಲ್ಲಿ ನೇಮಿರಾಜರು ಹಿಂದೆ ನಡೆಸುತ್ತಿದ್ದ 'ಕಲಾರಂಗ'ವನ್ನು ಮೃದಂಗವಾದಕರಾಗಿರುವ ಸುಬ್ರಹ್ಮಣ್ಯ ಕೊಳೆತ್ತಾಯರು ಈಗ ಮುಂದುವರಿಸುತ್ತಿದ್ದಾರೆ. ಅಲ್ಲಿಯ 'ರಾಗಸುಧಾ' ಸಂಸ್ಥೆ ಕುದ್ಮಾರು ವಿಶ್ವೇಶ್ವರ ಅವರು ನಡೆಸುತ್ತಿದ್ದಾರೆ. ಸೂರ್ಯನಾರಾಯಣ ಅವರು ೧೯೯೯ರಲ್ಲಿ 'ನಾದೋಪಾಸನ' ಎಂಬ ಸಂಗೀತ ಸಂಸ್ಥೆ ನಡೆಸುತ್ತಿದ್ದು, ಈಗ ಅದರ ಕಾರ್ಯ ಚಟುವಟಿಕೆ ಹೆಚ್ಚಾಗಿದೆ. ಪುತ್ತೂರಿನ ಎನ್. ವಿ. ಮೂರ್ತಿ ಅವರು ಮೃದಂಗ ವಾದಕರಾಗಿದ್ದು, ತರಗತಿಗಳನ್ನು ನಡೆಸುತ್ತಿದ್ದವರು, ಪ್ರಸ್ತುತ ಚೆನ್ನೈನಲ್ಲಿ ನೆಲೆಸಿದ್ದಾರೆ. ವೀಣಾ ರಾಘವೇಂದ್ರರಾಯರು 'ಗಾನ ಸಂಸ್ಕೃತಿ ಸಂಗೀತ ಕಲಾಶಾಲೆ' ನಡೆಸುತ್ತಿದ್ದಾರೆ. 'ಉಮಾ ಮಹೇಶ್ವರ ಸಂಗೀತಶಾಲೆ' ಯಲ್ಲಿ ಕಾಂಚನ ನಾರಾಯಣ ಭಟ್, ಯು.ಎಸ್. ರಾಮಕೃಷ್ಣ ಭಟ್, ಶಕುಂತಲ ಭಟ್ ಅವರುಗಳು ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ಬಿ. ವೆಂಕಪ್ಪಯ್ಯ (ಕೊಳಲು) ಪ್ರಸನ್ನ ಭಟ್ (ಮೃದಂಗ) ಶ್ರೀರಾಮಭಟ್ (ಹಾಡುಗಾರಿಕೆ) ಶೈಲಜ ಶ್ರೀರಾಮಭಟ್ ಮುಂತಾದವರು ಪುತ್ತೂರಿನ ಇನ್ನಿತರ ಪ್ರಮುಖ ಸಂಗೀತಗಾರರಾಗಿದ್ದಾರೆ.

ಸುಳ್ಯದ 'ನಾದನೃತ್ಯ' ಸಂಸ್ಥೆ ಹಾಡುಗಾರಿಕೆ ಹಾಗೂ ವಾದ್ಯಗಾರಿಕೆಗಳಲ್ಲಿ ಶಿಕ್ಷಣ ನೀಡುತ್ತಿದೆ. ಬೆಳ್ಳಾರೆಯ 'ಲಲಿತ ಕಲಾ ಸಂಘ' ಬಾಳಿಲದ 'ಶ್ರುತಿ ವೇದಿಕೆಗಳು' ಸಂಗೀತಕ್ಕೆ ಶ್ರಮಿಸುತ್ತಿರುವ ಇನ್ನಿತರ ಸಂಸ್ಥೆಗಳು. ಬಾಳಿಲದ ಜೇನುಮೂಲೆ ಕೃಷ್ಣಭಟ್ಟರು ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದು, ಅವರ ಪುತ್ರಿ ಶಂಕರಿಮೂರ್ತಿ ಸಂಗೀತ ವಿದುಷಿಯಾಗಿದ್ದು ಶಾಲೆಯೊಂದನ್ನು ನಡೆಸುತ್ತಿದ್ದಾರೆ.

## ಹಿಂದೂಸ್ಥಾನಿ ಸಂಗೀತ

ಜಿಲ್ಲೆಯಲ್ಲಿ ಕರ್ನಾಟಕ ಸಂಗೀತಕ್ಕೆ ಪ್ರೋತ್ಸಾಹ ಪರಂಪರೆ ಇರುವುದು ಸಹಜವೇ ಆದರೂ ಈಚೆಗೆ ಹಿಂದೂಸ್ಥಾನಿ ಸಂಗೀತಕ್ಕೂ ಸ್ಥಾನ ದೊರೆಯುತ್ತಿದೆ. ಮೊದಲಿಗೆ ಉಡುಪಿಯಲ್ಲಿ ಆರಂಭವಾದರೂ ಬಂಟ್ವಾಳದಲ್ಲಿ ೧೯೫೦ರಲ್ಲಿ ಮಾಧವ ಭಟ್ಟರಿಂದ ಆರಂಭವಾದ 'ಸರಸ್ವತಿ ಸಂಗೀತ ಶಾಲೆ', ಯೋಗೀಶ್ ಬಾಳಿಗ ರವರಿಂದ 'ಸಂಗೀತ ಕಲಾಪ್ರಸಾರಕ ಸಂಗೀತ ಶಾಲೆ', ಎಂಬ ಹೆಸರಿನಲ್ಲಿ ಮುಂದುವರೆಯುತ್ತಿದೆ. ಗುಲ್ವಾಡಿ ರತ್ನಾಕರ ಭಟ್, ಎಸ್. ಆರ್. ಬಂಟ್ವಾಳ್‌ಕರ್ ಅವರು ಮಾಧವ ಭಟ್ಟರ ಶಿಷ್ಯರಾಗಿದ್ದು ಬಂಟ್ವಾಳ್‌ಕರ್ ಪುತ್ತೂರಿನಲ್ಲಿಯೂ ತಬಲ ತರಗತಿ ನಡೆಸುತ್ತಿದ್ದರು. ಕೆ. ಜಿ. ತುಳ್ಪುಳೆ ಹಾಗೂ ಹಾನಗಲ್ ಬಿ. ಜೋಷಿ ಅವರು ಒಂದು ಸಂಗೀತ ಸಭಾ ನಡೆಸುತ್ತಿದ್ದಾರೆ.

ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ೧೯೨೦ರಲ್ಲಿಯೇ ಲಕಡೀ ಬುವಾ ಎಂಬ ಗಾಯಕರು ಹಿಂದೂಸ್ಥಾನಿ ಸಂಗೀತ ಶಾಲೆ ಆರಂಭಿಸಿದ್ದರೆಂದು ತಿಳಿದುಬರುತ್ತದೆ. ಹೊಯ್ಗೆ ನಾರಾಯಣರಾಯರು, ರತ್ನಾಕರ ರಾಯರು, ಚಿದಾನಂದ ನಗರ್‌ಕರ್‌ರು, ಐತಪ್ಪ ದೇವಾಡಿಗಾರ ಅವರುಗಳಲ್ಲದೆ 'ಆನಂದ ಸಂಗೀತ ವಿದ್ಯಾಲಯ' ನಡೆಸುತ್ತಿದ್ದ ಆನಂದ ರಾಯರು ಮುಂತಾದವರು ೧೯೩೦–೫೦ರ ಅವಧಿಯಲ್ಲಿ ಹಿಂದೂಸ್ಥಾನಿ ಸಂಗೀತ ಬೆಳೆಯಲು ಶ್ರಮಿಸಿದವರು. ಬಾನ್ಸುರಿ ವಾದಕರಾದ ವಿ. ಜಿ. ಕಾರ್ನಾಡ್ ನರಹರಿಯವರು (ಜ ೧೯೨೫) ಮುಂಬಯಿ, ರಷ್ಯಾಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಜಿಲ್ಲೆಯವರೇ ಆದ ಓಂಕಾರನಾಥ ಗುಲ್ವಾಡಿಯವರು ತಬಲ ಸಾಥಿ ನುಡಿಸುತ್ತಿದ್ದರು. ಪಿಟೀಲುವಾದಕರಾಗಿದ್ದ ನಾರಾಯಣ ಪೈ ಹಾಗೂ ರಮಾನಂದ ಪೈಗಳು ೧೯೫೦ರ ಸುಮಾರಿನಲ್ಲಿ

ಕ್ರಿಯಾಶೀಲರಾಗಿದ್ದರು. ನಿತ್ಯಾನಂದ ಬೋಳಾರ ಎಂಬುವವರು ಸಂಗೀತ ಹರಿಕಥೆಗಳಲ್ಲದೆ ವಾದ್ಯಗಳ ನಿರ್ಮಾಣದಲ್ಲೂ ಕುಶಲಿಗಳಾಗಿದ್ದು ತ್ರಿಮುಖ ವೀಣೆ ಸೂರ್, ಸಾರಂಗಿ ಸೂರ್, ಹನ್ನೆರಡು ತಂತಿಗಳ ಪಿಟೀಲು ಇತ್ಯಾದಿ ರೂಪಿಸಿದ್ದಾರೆ. ಹರೇಕಳ ರಾಮಚಂದ್ರ ಪೈ (ಜ ೧೯೦೮) ಲಕಡೀ ಬುವಾ ಆದಿಯಾಗಿ ಅನೇಕರಿಂದ ಹಿಂದೂಸ್ಥಾನಿ ಸಂಗೀತ ಕಲಿತು ಅಂದಿಗೆ ಪ್ರಸಿದ್ಧರಾಗಿದ್ದವರು. ವಿದ್ವಾಂಸರೂ ವಿಮರ್ಶಕರೂ ಆಗಿದ್ದ ಪೈಗಳವರಿಗೆ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಗೌರವ ಪ್ರಶಸ್ತಿ ದೊರೆತಿತ್ತು (೧೯೮೫). ಅಂದಿನ ಮದ್ರಾಸ್ ಸರ್ಕಾರಿ ಸೇವೆಯಲ್ಲಿದ್ದ ಎಂ. ಎನ್. ಅಡ್ಯಂತಾಯ ಅವರು ಅಬ್ದುಲ್ ಕರೀಂಖಾನ್ ಆದಿಯಾಗಿ ಅನೇಕ ಶ್ರೇಷ್ಠ ಹಿಂದೂಸ್ಥಾನಿ ಕಲಾವಿದರಲ್ಲಿ ಸಂಗೀತ ಕಲಿತು 'ಸ್ವಾಮಿ ಹರಿದಾಸ ಸಂಗೀತ ಸಭಾ' ಎಂಬ ಸಂಸ್ಥೆ ರಚಿಸಿ ಉಚಿತವಾಗಿ ಸಂಗೀತಾಭ್ಯಾಸ ನೀಡುತ್ತಿದ್ದರು. ರಾವ್ ಬಹದೂರ್ ಬಿರುದಂಕಿತರಾಗಿದ್ದ ಅಡ್ಯಂತಾಯರು 'ಮೆಲೋಡಿ ಮ್ಯೂಸಿಕ್ ಇನ್ ಇಂಡಿಯಾ' ಎಂಬ ಪುಸ್ತಕ ರಚಿಸಿದ್ದಾರೆ. ಶ್ರೀಯುತರ ಸಂಗೀತ ಸಭಾದಲ್ಲಿ ನಾರಾಯಣ ಪೈ, ಅರ್ಕುಳ ಶ್ರೀನಿವಾಸ ಪೈ ಅವರುಗಳು ಶಿಕ್ಷಕರಾಗಿ ಅನೇಕ ವಿದ್ಯಾರ್ಥಿಗಳನ್ನು ರೂಪಿಸಿದ್ದರು. ರಾಮಕೃಷ್ಣರಾವ್ ಪೆರೋಡಿ ಅವರು 'ಸಂಗೀತ ಭಾರತಿ' ಎಂಬ ಸಂಸ್ಥೆ ನಡೆಸುತ್ತಿದ್ದಾರೆ. ಸಿ. ಆರ್. ಕಾಮತ್ ಅವರು 'ಕಲಾ ಪ್ರಸಾರಕ ಸಂಘ' ದಿಂದ ಹಿಂದೂಸ್ಥಾನಿ ಸಂಗೀತಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದರು.

ಮಂಗಳೂರಿನ ಭಾರತೀಯ ವಿದ್ಯಾಭವನದ ಕಲಾಶಾಲೆಯಲ್ಲಿ ಕಮಲಾಕರ ಶೇಟ್ ಸಂಗೀತದ ಅಧ್ಯಾಪಕರಾಗಿದ್ದರು. ವತ್ಸಲಾ ತಾಳಿತ್ತಾಯ್ ಅವರು ಮಂಗಳೂರಲ್ಲಿ ಹೆಸರಾಂತ ಹಿಂದೂಸ್ಥಾನಿ ಕಲಾವಿದರು. ಪುತ್ತೂರಿನ ದೇವದಾಸ್ ಜೋಷಿ (೧೯೭೩–೮೬) ಅವರು ಮುಂಬಯಿಯಲ್ಲಿ ಪ್ರಸಿದ್ಧರಾಗಿದ್ದರು. ಪುತ್ತೂರು ಸೀತಾರಾಂ ನಾಯಕ್, ಎಂ.ಎಸ್. ಕಾಮತ್, ಶ್ರುತಿಕಾಮತ್ (ಸಿತಾರ್), ಮೋಹನ್ ರಾವ್, ಯೋಗೀಶ್ ಪೈ (ವಯೋಲಿನ್) ರಮಣಿ, ಶೈಲಾ ಭಂಡಾರ್‌ಕರ್, ಪೂನಾಕ್ಕೆ ವಲಸೆ ಹೋದ ಉಪೇಂದ್ರಭಟ್ ಮುಂತಾದವರು ಜಿಲ್ಲೆಯ ಭರವಸೆಯ ಕಲಾವಿದರಾಗಿದ್ದಾರೆ. ಪುತ್ತೂರಿನ ಬೋಳವಾರು ಮಾಧವ ನಾಯಕ್ ಹಿಂದೂಸ್ಥಾನಿ ಸಂಗೀತಗಾರರ ಆಶ್ರಯವೆನಿಸಿದ್ದಾರೆ.

ಕಾಸರಗೋಡು ಪರಿಸರದಲ್ಲಿ ರಾಮರಾವ್, ಭಾಸ್ಕರರಾವ್, ದೇವರಾವ್, ಎ.ಕೆ.ಕುಮಾರ್, ಸುಲೈಮನ್, ರಾಮದಾಸ್ ರಾವ್, ರಾಮದಾಸ ಕಾಮತ್, ಕುಡ್ಲು ಸುಬ್ರಾಯ ಶ್ಯಾನುಭಾಗ ಮುಂತಾದ ಹಿಂದೂಸ್ಥಾನಿ ಸಂಗೀತಗಾರರನ್ನು ಹೆಸರಿಸಬಹುದು.

## ನೃತ್ಯ

ಜಿಲ್ಲೆಯಲ್ಲಿ ಯಕ್ಷಗಾನ, ಜನಪದ, ಭೂತಾರಾಧನೆ ಇತ್ಯಾದಿಗಳಲ್ಲಿ ನೃತ್ಯದ ಅಂಶಗಳಿದ್ದರೂ ಸಾಂಪ್ರದಾಯಿಕ ಶಿಷ್ಟ ಪದ ನೃತ್ಯ, ಇಪ್ಪತ್ತನೆಯ ಶತಮಾನದ ಆರಂಭದಿಂದ ಪ್ರಚುರಗೊಂಡಂತೆ ಕಂಡುಬರುತ್ತದೆ. ಕೆ. ಕೆ. ಶೆಟ್ಟಿರೆಂಬುವವರು ೧೯೦೦ ಸುಮಾರಿನಲ್ಲಿ ನೃತ್ಯಕಲೆ ಬಳಕೆಗೆ ತಂದರೆಂದು ತಿಳಿದುಬರುತ್ತದೆ. ಇವರು ಮುಂದೆ ಮುಂಬಯಿಗೆ ಹೋಗಿ ಹಲವಾರು ಹಿಂದಿ ಚಿತ್ರಗಳ ನೃತ್ಯ ನಿರ್ದೇಶಕರಾಗಿ ಪ್ರಸಿದ್ಧರಾದರು. ನಲವತ್ತರ ದಶಕದಲ್ಲಿ ಶಿವರಾಮ ಕಾರಂತರು ಅನೇಕ ಪ್ರಯೋಗಗಳನ್ನು ಮಾಡಿದ್ದು, ಬೆಸೆಂಟ್ ಶಾಲೆಯಲ್ಲಿ ನೃತ್ಯ ಹೇಳಿಕೊಡುತ್ತಿದ್ದರು. ಕೇರಳದ ರಾಜನ್ ಅಯ್ಯರ್‌ರವರು ೧೯೪೮ರಲ್ಲಿ ಮಂಗಳೂರಿಗೆ ಬಂದು ನೆಲೆಸಿದ್ದು, ಸ್ವತಃ ಭರತನಾಟ್ಯ, ಕಥಕ್, ಮಣಿಪುರಿ ಇತ್ಯಾದಿ ನೃತ್ಯ ಪ್ರಕಾರಗಳಲ್ಲಿ ಪರಿಣಿತರಿದ್ದು, ಜಿಲ್ಲೆಯ ಆಸಕ್ತರಿಗೆ ಕಲಿಸಲಾರಂಭಿಸಿದರು. ಇವರ ಸೋದರ ಗೋಪಾಲಕೃಷ್ಣ ಅಯ್ಯರ್‌ರವರು ಸಂಗೀತಗಾರರಾಗಿದ್ದು ಎರಡೂ ಕ್ಷೇತ್ರದಲ್ಲಿ ಕೃಷಿ ಮಾಡತೊಡಗಿದರು. ಇಂದಿಗೂ ಕ್ರಿಯಾಶೀಲರಾಗಿರುವ ಯು. ಎಸ್. ಕೃಷ್ಣರಾವ್ (೧೯೧೪ಜ) (ಚಂದ್ರಭಾಗಾದೇವಿ ಅವರ ಪತಿ ಇವರಲ್ಲ) ಅವರು ಕೆ. ಕೆ. ಶೆಟ್ಟರ್, ರಾಜನ್ ಅಯ್ಯರ್‌ರವರೂ ಸೇರಿದಂತೆ ಅನೇಕರಲ್ಲಿ ಅಭ್ಯಸಿಸಿ, ಕದ್ರಿಯಲ್ಲಿ 'ನೃತ್ಯ ವಿದ್ಯಾಲಯ' ಸ್ಥಾಪಿಸಿ ಐವತ್ತಕ್ಕೂ ಹೆಚ್ಚು ವರ್ಷಗಳು ಯಶಸ್ವಿಯಾಗಿ ನಡೆಸಿ ನೂರಾರು ನೃತ್ಯ ಕಲಾವಿದರನ್ನು ರೂಪಿಸಿದವರು. ಇವರ ಮಕ್ಕಳಾದ ಯು.ಕೆ. ಅರುಣ್, ನಿರ್ಮಲ ಮಂಜುನಾಥ್, ಶೈಲಜಾ ಮಧುಸೂಧನ್, ಸಂಧ್ಯಾ ಕೇಶವರಾವ್, ಯು. ಕೆ. ಪ್ರವೀಣ್‌ರವರುಗಳೂ ನೃತ್ಯಗಾರರಾಗಿದ್ದು, ವಿವಿಧ ಕಡೆಗಳಲ್ಲಿ ಶಿಕ್ಷಣ ನೀಡುತ್ತಿದ್ದಾರೆ. ಕೃಷ್ಣರಾಯರಿಗೆ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ೧೯೮೧ರಲ್ಲಿ 'ಕರ್ನಾಟಕ ಕಲಾ ತಿಲಕ' ಪ್ರಶಸ್ತಿ ೧೯೭ರಲ್ಲಿ ರಾಜ್ಯ ಪ್ರಶಸ್ತಿ, ೧೯೮ರಲ್ಲಿ ನಾಟ್ಯರಾಣಿ ಶಾಂತಲ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕಾಸರಗೋಡಿನ ಮುರಳೀಧರ ರಾಯರು (೧೯೭೪) ರಾಜನ್ ಅಯ್ಯರ್‌ರವರಲ್ಲಿ ಹಾಗೂ ಇನ್ನಿತರರಲ್ಲಿ ಕಲಿತು, ಅಭಿವ್ಯಕ್ತಿಸುತ್ತಿದ್ದು, ಮುಂದೆ ಮೈಸೂರಿನಲ್ಲಿ ನೆಲೆಸಿದರು.

ಪುತ್ತೂರಿನ ಕುದ್ಕಾಡಿ ವಿಶ್ವನಾಥ ರೈ (೧೯೩೭) ಅವರು ಸ್ಥಳೀಯವಾಗಿ ಹಾಗೂ ಮೈಸೂರು ಮತ್ತು ಸಿಲೋನ್ (ಶ್ರೀಲಂಕಾ)ಗಳಲ್ಲಿ ಕಲಿತು ನಾಟ್ಯ ಶಾಸ್ತ್ರ ಹಾಗೂ ಪ್ರಯೋಗಗಳಲ್ಲಿ ಪರಿಣಿತರಿದ್ದಾರೆ. ಕುದ್ಕಾಡಿಯಲ್ಲಿಯೇ ೧೯೫೨ರಲ್ಲಿ 'ವಿಶ್ವ ಕಲಾ ನಿಕೇತನ' ಆರಂಭಿಸಿದ್ದು,

ಪತ್ನಿ ನಯನ, ಮಕ್ಕಳಾದ ಆರ್. ಸ್ವಸ್ತಿಕ್, ಆಸ್ತಿಕ್ ವಿ. ಅವರುಗಳು ನೃತ್ಯಕಲೆ ಮುಂದುವರಿಸುತ್ತಿದ್ದಾರೆ. ವಿಶ್ವನಾಥ ರೈ ಅವರು ೧೯೮೦ರಲ್ಲಿ ನರ್ತನ ಜಗತ್ತು ಎಂಬ ಪುಸ್ತಕ ರಚಿಸಿದ್ದಲ್ಲದೆ ತುಳು ಭಾಷೆಯಲ್ಲಿ ಸಾಹಿತ್ಯ ರಚನೆಗಳನ್ನು ಮಾಡಿದ್ದಾರೆ. ಆಕಾಶವಾಣಿ ಹಾಗೂ ಹಲವಾರು ತುಳು ಭಾಷಾ ಸಮ್ಮೇಳನಗಳಲ್ಲಿ ಪಾಲ್ಗೊಂಡಿದ್ದಾರೆ. ನೃತ್ಯಕಲಾವಿದ, ರಂಗಭೂಮಿ ನಟ, ಭಾಷಾಶಾಸ್ತ್ರಜ್ಞ, ಸಂಶೋಧಕರಾದ ಶ್ರೀಯುತರು ತುಳು ನಿಘಂಟು ಸಮಿತಿ ಸದಸ್ಯರಾಗಿದ್ದಾರೆ.

ಸೋಮೇಶ್ವರದ ಉಳ್ಳಾಲ ಮೋಹನ್ ಕುಮಾರರು (೧೯೩೩) ಜಿಲ್ಲೆಯ ಗೌರವಾನ್ವಿತ, ಜನಪ್ರಿಯ ನಾಟ್ಯಾಚಾರ್ಯರು. ರಾಜನ್ ಅಯ್ಯರ್, ಮಾಸ್ಟರ್ ವಿಠಲ್, ರಾಜರತ್ನಂ ಪಿಳ್ಳೆ ಅವರಲ್ಲಿ ಅಭ್ಯಸಿಸಿ ೧೯೫೩ರಲ್ಲಿಯೇ ಕೋಟೆಕಾರಿನ ಬಳಿ ಅಡ್ಕದಲ್ಲಿ 'ನಾಟ್ಯ ನಿಕೇತನ' ಎಂಬ ಸಂಸ್ಥೆ ಸ್ಥಾಪಿಸಿ ನಾಟ್ಯ ಶಿಕ್ಷಣ ನೀಡುತ್ತಿದ್ದಾರೆ. ಕರ್ನಾಟಕ ಕಲಾತಿಲಕ, ನಾಟ್ಯ ಮೋಹನ ಇತ್ಯಾದಿ ಬಿರುದುಗಳು ಶ್ರೀಯುತರಿಗೆ ದೊರೆತಿವೆ. ಸರ್ಕಾರದ ಕೆಲವು ಡ್ಯಾಕುಮೆಂಟರಿ ಚಿತ್ರಗಳಿಗೆ ಇವರ ನರ್ತನ ಬಳಸಿದೆ. ಮೋಹನ ಕುಮಾರರ ಶಿಷ್ಯ ವರ್ಗ ಅಪಾರ ಹಾಗೂ ಬಹುತೇಕ ಶಿಷ್ಯರು ದೇಶವಿದೇಶಗಳಲ್ಲಿ ನೆಲಸಿದ್ದು, ಅಲ್ಲಲ್ಲಿ ನೃತ್ಯ ಶಾಲೆ ಆರಂಭಿಸಿ ಗುರು ಪರಂಪರೆ ಮುಂದುವರಿಸುತ್ತಿದ್ದಾರೆ. ಮುಖ್ಯವಾಗಿ ಪುತ್ರಿ ರಾಜಶ್ರೀ ಶ್ರೀನಾಥ ಶೆಣೈ (ನಾಟ್ಯ ನಿಕೇತನ, ಬೆಂಗಳೂರು), ಚಂದ್ರಶೇಖರ ನಾವಡ (ನಾಟ್ಯಾಂಜಲಿ, ಸುರತ್ಕಲ್), ಶಿವರಾಮ ಭಟ್, ಗೀತಾ ಸರಳಾಯ, ಕಮಲಾಭಟ್ (ನಾಟ್ಯಶ್ರೀ, ಮಂಗಳೂರು), (ನಾಟ್ಯಾಲಯ, ವಿಟ್ಲ), ಶ್ಯಾಮಸುಂದರ್ ಹಾಗೂ ಸುಜಾತ (ಗಲ್ಫ್ ದೇಶದಲ್ಲಿ), ಬಾಲಕೃಷ್ಣ ಮಂಜೇಶ್ವರ (ನಾಟ್ಯ ನಿಲಯ) ರೇಖಾ ಹೆಗ್ಡೆ (ಶಾಂತಲ ನಾಟ್ಯಾಲಯ, ಗೋವಾ), ಸುಧಾ ಕೃಷ್ಣಮೂರ್ತಿ (ನೃತ್ಯ ನಿಕೇತನ, ಚಳ್ಳಕೆರೆ) ಮೃದುಲಾ ರೈ (ಕೊಯಮತ್ತೂರು), ಜ್ಯೋತಿರಾವ್ (ಪುನಾ) ಮುಂತಾದವರನ್ನು ಉದಾಹರಿಸಬಹುದು. ಶ್ರೀಯುತರು ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ೮೪–೮೫ರಲ್ಲಿ ಪುರಸ್ಕೃತರಾಗಿದ್ದು ಮತ್ತೆ ಅಕಾಡೆಮಿ ೯೪ರಲ್ಲಿ 'ಕರ್ನಾಟಕ ಕಲಾತಿಲಕ' ಪ್ರಶಸ್ತಿ ನೀಡಿ ಗೌರವಿಸಿತು. 'ನೃತ್ಯ ಸಿದ್ಧಯೋಗಿ', 'ನಾಟ್ಯಕಲಾರತ್ನ' ಮುಂತಾದ ಬಿರುದುಗಳು ದೊರೆತಿವೆ. ಶ್ರೀಯುತರಿಗೆ 'ನಾಟ್ಯಮೋಹನ' ಎಂಬ ಹೆಸರಿನಲ್ಲಿ ಗೌರವಗ್ರಂಥ ಅರ್ಪಿಸಲಾಗಿದೆ.

ಪುತ್ತೂರು ರಾಧಾಕೃಷ್ಣ ಅವರು ಭರತನಾಟ್ಯ, ಕೂಚಿಪುಡಿ, ಕಥಕಳಿ ಮುಂತಾದ ನಾಟ್ಯ ಪ್ರಕಾರಗಳಲ್ಲಿ ಹೆಸರು ಮಾಡಿದ್ದಾರೆ. ಸಾಧನಾ ತೋಳ್ಪಾಡಿ ಅವರು ರಾಧಾಕೃಷ್ಣರ ಶಿಷ್ಯೆ. ಮುಂಬಯಿಯಲ್ಲಿ ನೃತ್ಯ ಕೇಂದ್ರವೊಂದನ್ನು ಆರಂಭಿಸಿದ ರಾಮಕೃಷ್ಣ ಆಳ್ವ ಹಾಗೂ ಅವರ ಪತ್ನಿ ಜಯಲಕ್ಷ್ಮಿ ಆಳ್ವರವರು ಅಂದಿನ ಪ್ರಸಿದ್ಧ ಹಿಂದಿ ಸಿನಿಮಾ ನಟನಟಿಯರಲ್ಲದೆ ಅನೇಕ ಪ್ರಸಿದ್ಧರಿಗೆ ನಾಟ್ಯ ಶಿಕ್ಷಣ ನೀಡಿದ್ದು, ನರ್ತನ ಶಾಲೆಯನ್ನು ೧೯೭೪ರಲ್ಲಿ ಮಂಗಳೂರಿಗೆ 'ಶ್ರೀದೇವಿ ನೃತ್ಯ ಕೇಂದ್ರ' ಎಂಬ ಹೆಸರಿನಲ್ಲಿ ವರ್ಗಾಯಿಸಿದರು. ೧೯೭೩ರಲ್ಲಿ ಸ್ಥಳೀಯ ನೃತ್ಯಕೇಂದ್ರಗಳ ಸಹಕಾರದೊಂದಿಗೆ ಮಂಗಳೂರಲ್ಲಿ ನೃತ್ಯೋತ್ಸವ ಕಾರ್ಯಕ್ರಮ ನೀಡಿದ್ದರು. ಅನಂತರವೂ ಹೊರರಾಜ್ಯಗಳಿಗೆ ಹೋಗಿ ನೃತ್ಯ ಕಲೆಯಲ್ಲಿ ಹೆಚ್ಚಿನ ತರಬೇತಿ ಪಡೆದು ಮಂಗಳೂರಿಗೆ ಮರಳಿ ಬಂದು 'ಲಲಿತ ಕಲಾ ಸದನ' ಎಂಬ ನೃತ್ಯ ಶಿಕ್ಷಣ ಶಾಲೆ ತೆರೆದು ನಾಟ್ಯಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರ ಶಿಷ್ಯ ವರ್ಗದವರಲ್ಲಿ ನಿರ್ಮಲಾ 'ಸ್ವರೂಪರಾಣಿ' ಶೇನವ, ಶುಭರೇಖ ಶೆಟ್ಟಿ, ರಾಬರ್ಟ್ ವಿ. ಚೋಸ್ ಇತ್ಯಾದಿ ಹೆಸರಿಸಬಹುದು. ಜಯಲಕ್ಷ್ಮಿ ಆಳ್ವ ಅವರಿಗೆ ೧೯೮೫ರಲ್ಲಿ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯು 'ಕರ್ನಾಟಕ ಕಲಾತಿಲಕ' ಎಂಬ ಬಿರುದು ನೀಡಿ ಸನ್ಮಾನಿಸಿತು.

ಮಂಗಳೂರಿನ ಮಿಜಾರುವಿನಲ್ಲಿ ೧೯೩೮ರಲ್ಲಿ ಜನಿಸಿದ ಎಂ. ಜನಾರ್ದನ ಅವರು ಭರತನಾಟ್ಯ, ಕಥಕಳಿ ಹಾಗೂ ಮೋಹಿನಿ ಆಟ್ಟಂ ಪ್ರಕಾರಗಳಲ್ಲಿ ಅಭಿವ್ಯಕ್ತಿಸಿದ್ದು, ನೃತ್ಯಪಟುವಾಗಿ, ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ರಂಗಭೂಮಿಯಲ್ಲಿ ಗೀತ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಮಡಕೇರಿಯಲ್ಲಿ 'ಸುರೇಖ ನೃತ್ಯಾಲಯ' ಹಾಗೂ ಮಂಗಳೂರಲ್ಲಿ 'ಕಲಾ ನಿಕೇತನ' ಶಾಲೆ ಸ್ಥಾಪಿಸಿರುವುದಲ್ಲದೆ ಇನ್ನಿತರ ಜಿಲ್ಲೆಗಳಲ್ಲೂ ಶಿಕ್ಷಣ ನೀಡಿದ್ದಾರೆ. ಪುತ್ರಿ ಸುಜಾತಾ ಜನಾರ್ದನ್, ಸಂಗೀತ ವಿದುಷಿಯಾಗಿದ್ದು, ನೃತ್ಯ ಶಿಕ್ಷಣವನ್ನು ನೀಡುತ್ತಿದ್ದಾರೆ. ಅನೇಕ ಶಿಷ್ಯರು ದೇಶ ವಿದೇಶಗಳಲ್ಲಿದ್ದಾರೆ.

ರಾಜ್ಯದ ನೃತ್ಯ ಕಲಾ ಕ್ಷೇತ್ರಕ್ಕೆ ದಕ್ಷಿಣ ಕನ್ನಡ ಜಿಲ್ಲೆ ನೀಡಿದ ಮೇರು ಕೊಡುಗೆಯೆಂದರೆ ಯು. ಕೆ. ಚಂದ್ರಭಾಗಾದೇವಿ (೧೯೨೧–೧೯೯೭) ಪುತ್ತೂರಿನವರಾದ ಚಂದ್ರಭಾಗಾದೇವಿಯವರು ಉತ್ತರ ಕನ್ನಡ ಜಿಲ್ಲೆಯ ಮಲ್ಲಾಪುರದವರಾದ ಯು. ಎಸ್. ಕೃಷ್ಣರಾವ್ (೧೯೧೨–೨೦೦೫) ಅವರನ್ನು ವಿವಾಹವಾದ ಮೇಲೆ ದಂಪತಿಗಳು ವಿಶ್ವಾದ್ಯಂತ ಸಾವಿರಾರು ನೃತ್ಯ ಪ್ರದರ್ಶನ ನೀಡಿದರು. ಸಾಂಪ್ರದಾಯಿಕ ನೃತ್ಯಗಳೊಂದಿಗೆ ಬ್ಯಾಲೆ, ಗೀತ ನಾಟಕಗಳನ್ನು ಸಂಯೋಜಿಸಿದ್ದರು. ನೃತ್ಯ ಶಾಲೆ ನಡೆಸುತ್ತಿದ್ದುದಲ್ಲದೆ ನೃತ್ಯ ಕಲೆ ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ರಾಷ್ಟ್ರಮಟ್ಟದ ಅನೇಕ ಪ್ರಶಸ್ತಿಗಳು ದಂಪತಿಗಳಿಗೆ ದೊರೆತಿದ್ದವು.

ಮಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿರುವ 'ಸಂದೇಶ ಲಲಿತ ಕಲಾ ಮಹಾವಿದ್ಯಾಲಯ'ದಲ್ಲಿ ಭರತನಾಟ್ಯವನ್ನು ಪದವಿಯ ಪಠ್ಯವಾಗಿ ಕಲಿಸಲಾಗುತ್ತಿದೆ. ಶಾಸ್ತ್ರೀಯ ಸಂಗೀತ, ನೃತ್ಯ ತರಗತಿಗಳೂ ಅಲ್ಲಿ ನಡೆಯುತ್ತಿವೆ.

ಕೋಣೆಗ್ರಾಮದ ಮಧ್ಯಸ್ಥ ಕೆ.ಎಸ್.(ಜ ೧೯೨೬) ಅವರು ಕೇರಳದಲ್ಲಿ ನೃತ್ಯ ಅಭ್ಯಸಿಸಿ, ಬೆಂಗಳೂರಲ್ಲಿ 'ಕಲಾನಿಕೇತನ' ಎಂಬ ಕಲಾಶಾಲೆ ನಡೆಸುತ್ತಿದ್ದಾರೆ. ನೃತ್ಯಕಲೆಯ ಬಗ್ಗೆ ಲೇಖನಗಳನ್ನು ಬರೆದಿರುವುದಲ್ಲದೆ ಚಿತ್ರಕಲಾವಿದರೂ ಆಗಿದ್ದಾರೆ. ರಾಜ್ಯ ಸಂಗೀತ, ನೃತ್ಯ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಪಡೆದಿದ್ದಾರೆ. ಇವರ ಸೋದರ ಗಣಪಯ್ಯ ಮಧ್ಯಸ್ಥರೂ ನೃತ್ಯ ಶಿಕ್ಷಕರು. ಬೈಂದೂರಿನ ಉಮೇಶ ಹೆರಂಜಾಲ (ಜ ೧೯೨೬) ಅವರು ಶ್ರೀನಿವಾಸ ಕುಲಕರ್ಣಿ ಅವರಲ್ಲಿ ನೃತ್ಯಕಲೆ ಕಲಿತು ಬೆಳಗಾವಿ ಹಾಗೂ ಧಾರವಾಡಗಳಲ್ಲಿ 'ನೃತ್ಯನಿಕೇತನ' ಕಲಾಶಾಲೆ ನಡೆಸುತ್ತಿದ್ದಾರೆ. ಜಪಾನ್, ಮಲೇಶಿಯಾಗಳಲ್ಲೂ ಪ್ರದರ್ಶನ ನೀಡಿರುವ ಶ್ರೀಯುತರು ಚಿತ್ರಕಲೆಯಲ್ಲಿಯೂ ಡಿಪ್ಲೊಮ ಪದವಿ ಪಡೆದಿದ್ದಾರೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಿರುವ, ಕಂಕನಾಡಿಯಲ್ಲಿ 'ನೃತ್ಯ ಕೌಸ್ತುಭ' ಕಲಾಶಾಲೆ ನಡೆಸುತ್ತಿರುವ ಮಾಸ್ಟರ್ ವಿಠಲ ಶೆಟ್ಟಿ ಅವರನ್ನು ವಿಶೇಷವಾಗಿ ಹೆಸರಿಸಬಹುದು. ಸಾಕಷ್ಟು ಹಿಂದೆಯೇ ನಟಿ ಕಲ್ಪನಾರವರೊಂದಿಗೆ 'ಶಿಲ್ಪಿಯ ಸ್ವಪ್ನ' ರೂಪಕ ಅಭಿನಯಿಸಿ ಅನೇಕ ಗಣ್ಯರಿಂದ ಪ್ರಶಂಸೆ ಗಳಿಸಿದ್ದರು. ೧೯೬೪ರಲ್ಲಿ ಮುಂಬಯಿಯಲ್ಲಿ ಪೋಪ್ ಪಾಲ್ ಅವರ ಸಮ್ಮುಖದಲ್ಲಿ ನೃತ್ಯ ಪ್ರದರ್ಶನ ನೀಡಿದ್ದರು. ೧೯೮೦ರಲ್ಲಿ ಸ್ವೀಡನ್‌ನ ಸಂಸ್ಥೆಯೊಂದರ ಆಹ್ವಾನದಂತೆ ಮೂರು ತಿಂಗಳು ಆ ದೇಶಾದ್ಯಂತ ಅನೇಕರಿಗೆ ತರಬೇತಿ ನೀಡಿದ್ದಲ್ಲದೆ ಪ್ರದರ್ಶನ ನಡೆಸಿಕೊಟ್ಟರು. ಕರ್ನಾಟಕ ರಾಜ್ಯದಲ್ಲಿಯೂ ಸಾಹಿತ್ಯ ಸಮ್ಮೇಳನ, ಕಾಂಗ್ರೆಸ್ ವಸ್ತು ಪ್ರದರ್ಶನ ಸೇರಿದಂತೆ ಅನೇಕ ಕಾರ್ಯಕ್ರಮ ನೀಡಿದ್ದಾರೆ. ೧೯೫೦ ರಿಂದ ಈವರೆಗೆ ಪೃಥ್ವೀರಾಜ ಸಂಯುಕ್ತ, ಮಧುರಮಿಲನ, ಕಿತ್ತೂರು ರಾಣಿ ಚೆನ್ನಮ್ಮ, ಮಾಯಾಮೃಗ ಸೇರಿದಂತೆ ಸುಮಾರು ಇಪ್ಪತ್ತು ನೃತ್ಯ ರೂಪಕಗಳನ್ನು ಸಂಯೋಜಿಸಿದ್ದಾರೆ. ಸ್ಥಳೀಯವಾಗಿ ಹಾಗೂ ವಿದೇಶಿ ವಿದ್ಯಾರ್ಥಿಗಳಿಗೆ ಕಲಾಬೋಧನೆ ಮಾಡಿದ್ದಾರೆ. ನಾಟ್ಯಚಕ್ರವರ್ತಿ, ನಾಟ್ಯ ಕೌಸ್ತುಭ, ನಾಟ್ಯಕಲಾನಿಧಿ, ನೃತ್ಯಕಲಾಸಿಂಧು ಇತ್ಯಾದಿ ಬಿರುದುಗಳಿಸಿದ್ದಾರೆ. ನೃತ್ಯ ಕಲೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುವರ್ಣ ಪದಕ ಗಳಿಸಿದ್ದಾರೆ. ಕಾಸರಗೋಡಿನ ಎಂ.ವಿಷ್ಣುದಾಸ್ (ಜ ೧೯೨೭) ಭರತನಾಟ್ಯ, ಸಂಗೀತಗಳನ್ನು ಅಭ್ಯಸಿಸಿ, ಮೈಸೂರಿನಲ್ಲಿ 'ಶ್ರೀ ಸರಸ್ವತಿ ಕಲಾಮಂದಿರ' ಸ್ಥಾಪಿಸಿ ಆಸಕ್ತರಿಗೆ ವಿದ್ಯೆ ಕಲಿಸುತ್ತಿದ್ದಾರೆ. ಅಲ್ಲದೆ 'ನೃತ್ಯ ಕಲಾ ಪರಿಷತ್' ಎಂಬ ಸಂಸ್ಥೆ ಸ್ಥಾಪಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ನಾಟ್ಯಶಾಸ್ತ್ರ ಗೌತಮ' ಬಿರುದು ಪಡೆದಿದ್ದು ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಪುರಸ್ಕೃತರಾಗಿದ್ದಾರೆ. ಮಂಗಳೂರಿನಲ್ಲಿ ಜನಿಸಿದ ಶಾಂತರಾವ್, ಭರತನಾಟ್ಯ, ಮೋಹಿನಿ ಆಟಂ, ಕಥಕ್ಕಳಿ ಇವೇ ಮುಂತಾದ ನೃತ್ಯದ ಹಲವು ಪ್ರಕಾರಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ, ದೇಶ–ವಿದೇಶಗಳಲ್ಲಿ ಪ್ರದರ್ಶನ ನೀಡಿ ಜನ ಹಾಗೂ ವಿದ್ವಾಂಸರುಗಳ ಮೆಚ್ಚುಗೆ ಪಡೆದಿದ್ದಾರೆ. ರಾಜ್ಯ ಹಾಗೂ ಕೇಂದ್ರ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ದೊರೆತಿವೆ. ಭರತನಾಟ್ಯ ಹಾಗೂ ಕಥಕ್ಕಳಿಗಳಲ್ಲಿ ನುರಿತ ಪ್ರೇಮನಾಥ್.ಬಿ (ಜ ೧೯೫೬) ಅವರು ಸ್ಥಳೀಯವಾಗಿ ಹಾಗೂ ಮುಂಬಯಿ, ಚೆನ್ನೈಗಳಲ್ಲಿ ಹಲವಾರು ಪ್ರದರ್ಶನ ನೀಡಿರುವರು. ಸೆಂಟ್ ಎಲೋಷಿಯಸ್ ಹೈಸ್ಕೂಲ್‌ನಲ್ಲಿ ನೃತ್ಯ ಶಿಕ್ಷಕರಾಗಿದ್ದು ನಿವೃತ್ತಿಯ ನಂತರ 'ಲಲಿತಕಲಾ ಸಧನ' ಎಂಬ ನೃತ್ಯಶಾಲೆ ಆರಂಭಿಸಿ ಶಿಕ್ಷಣ ನೀಡುತ್ತಿದ್ದಾರೆ. ಪಣಂಬೂರಿನ ಸುಬ್ರಹ್ಮಣ್ಯರವರು ಭರತನಾಟ್ಯ ಹಾಗೂ ಕೂಚಿಪುಡಿ ಅಭ್ಯಸಿಸಿ ಸ್ವತ: ವೆಂಕಟೇಶ್ವರ ವೈಭವ 'ಗಂಗೇಗೌರಿ' ಮುಂತಾದ ನೃತ್ಯರೂಪಕ ಸಂಯೋಜಿಸಿ ಪ್ರಯೋಗಿಸಿದ್ದಾರೆ. ಪುಟ್ಟಣ್ಣ ಕಣಗಾಲರ ಕೆಲವು ಚಲನಚಿತ್ರಗಳಿಗೆ ನೃತ್ಯನಿರ್ದೇಶಕರಾಗಿದ್ದಾರೆ. ರಾಜ್ಯ ಜನಪದ ಯಕ್ಷಗಾನ ಅಕಾಡೆಮಿಗೆ ಒಂದು ಅವಧಿಗೆ ಸದಸ್ಯರಾಗಿದ್ದು ಪತ್ರಿಕೆಗಳಲ್ಲಿ ನೃತ್ಯ ಕುರಿತು ವಿಮರ್ಶೆಗಳನ್ನು ಬರೆದಿದ್ದಾರೆ.

ಬೆಳ್ತಂಗಡಿಯ ಪಿ.ಕಮಲಾಕ್ಷರವರು ಕದ್ರಿಯ ಯು.ಎಸ್.ಕೃಷ್ಣರಾವ್ ಸೇರಿದಂತೆ ಹಲವರಲ್ಲಿ ಭರತನಾಟ್ಯ ಅಭ್ಯಸಿಸಿ, 'ನೃತ್ಯನಿಕೇತನ' ಕಲಾ ಶಾಲೆ ಆರಂಭಿಸಿ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು ರೂಪಿಸಿದ್ದಾರೆ. ಸ್ವತ: ಸ್ಥಳೀಯವಾಗಿ ನಾಡಿನ ವಿವಿಧ ಭಾಗಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಸೂರತ್ಕಲ್‌ನ ವೆಂಕಟರಾವ್ ಎಚ್.ಎಸ್. ಅವರು 'ಗಣೇಶ ನೃತ್ಯಕಲಾಕೇಂದ್ರ' ಸಂಸ್ಥೆ ಆರಂಭಿಸಿ ಕಲಾ ಶಿಕ್ಷಣ ನೀಡುತ್ತಿದ್ದಾರಲ್ಲದೆ, ಕೆಲವು ನೃತ್ಯರೂಪಕಗಳನ್ನು ಸೃಜಿಸಿದ್ದಾರೆ. ಮಂಗಳೂರಿನಲ್ಲಿ ಜನಿಸಿದ ವಸುಂಧರ ದೊರೆಸ್ವಾಮಿ ಅವರು ಆರನೇ ವಯಸ್ಸಿಗೇ ರಂಗಪ್ರವೇಶ ಮಾಡಿ, ಪ್ರಸ್ತುತ ಮೈಸೂರಿನಲ್ಲಿ ಕಲಾಶಾಲೆ ನಡೆಸುತ್ತಿದ್ದಾರೆ. ದೆಹಲಿ, ಮುಂಬಯಿಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದು ಕೇರಳದಿಂದ 'ದರ್ಶನ ಪ್ರಶಸ್ತಿ' ಮುಂಬಯಿಯ ಸುರಸಿಂಗಾರದಿಂದ 'ಸಿಂಗಾರಮಣಿ' ಬಿರುದು ಪಡೆದಿದ್ದಾರೆ. ರಾಜ್ಯ ಸಂಗೀತ, ನೃತ್ಯ ಅಕಾಡೆಮಿಯಲ್ಲಿ ಎರಡು ಅವಧಿಗೆ ಸದಸ್ಯರಾಗಿದ್ದರು. ಇವರ 'ಶಿವ ನವರಸ' ನೃತ್ಯರೂಪಕ ರಸಿಕರನ್ನು ರಂಜಿಸಿದೆ.'ಕಲ್ಮಂಜದ ಮಹದೇವ' ಚಿಪಳೂಣಕರ್ ನೃತ್ಯಾಗಾರರಾಗಿದ್ದರಲ್ಲದೆ ಆಸಕ್ತರಿಗೆ ಕಲೆಯನ್ನು ಕಲಿಸಿದ್ದಾರೆ.

ಮಂಗಳೂರಿನ ಉಮಾಕಲ್ಲೂರಾಯ ಅವರು ಚಿತ್ರಾಕಾಸರಗೋಡು ಹಾಗೂ ಮತ್ತಿತರರಿಂದ ನೃತ್ಯಕಲೆ ಕಲಿತು ರಾಜ್ಯ ಹಾಗೂ ನೆರೆರಾಜ್ಯಗಳಲ್ಲಿ ೧೪೦ ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಾರೆ. ಭಕ್ತ ಕನಕದಾಸ, ಗಂಗಾವತರಣ ಇತ್ಯಾದಿ ಅನೇಕ ನೃತ್ಯರೂಪಕಗಳನ್ನು ರೂಪಿಸಿದ್ದಾರೆ. ಮಂಗಳೂರಿನಲ್ಲಿ ನಾಟ್ಯಶ್ರೀ ನೃತ್ಯಾಲಯ ಸ್ಥಾಪಿಸಿ ಅನೇಕರಿಗೆ ನೃತ್ಯ ಕಲಿಸಿದ್ದಾರೆ. ಇನ್‌ಫೆಂಟ್ ಜೀಸಿಸ್ ಎಂಬ ಅನಾಥಾಶ್ರಯದಲ್ಲಿಯೂ ಆಸಕ್ತರಿಗೆ ನೃತ್ಯ ಕಲಿಸುವ ಮೂಲಕ ಸಮಾಜ ಸೇವೆ ಮಾಡುತ್ತಿದ್ದಾರೆ. ನೃತ್ಯ ಪದವೀಧರೆ, ಯುವಲಾವಿದೆಯಾದ ಬೆಳ್ತಂಗಡಿಯ ಕೃಪಾ ಅವರು ಅನೇಕ ಕಾರ್ಯಕ್ರಮ ನೀಡಿದ್ದಾರೆ. ಕದ್ರಿ ಯು.ಎಸ್.ಕೃಷ್ಣರಾವ್ ಅವರ ಪುತ್ರಿ ನಿರ್ಮಲಾ ಮಂಜುನಾಥ್ ಅವರು ಕಥಕ್ಕಳಿ ಅಭ್ಯಸಿಸಿ ಮುಂಬಯಿ, ಚೆನ್ನೈ, ಉದಕಮಂಡಲ ಸೇರಿದಂತೆ ಅನೇಕ ಕಡೆ ಪ್ರದರ್ಶನ ನೀಡಿದ್ದಾರೆ. ರುಕ್ಮಿಣೀ ಸ್ವಯಂವರ, ಭಗವದ್ಗೀತೆ ಸೇರಿದಂತೆ ಹತ್ತಾರು ನೃತ್ಯರೂಪಕವನ್ನು ಸಂಯೋಜಿಸಿದ್ದಾರೆ. ಬೆಂಗಳೂರಿನಲ್ಲಿ 'ನಿರ್ಮಲಾ ಕಲಾಶಾಲೆ' ಸ್ಥಾಪಿಸಿ ಶಿಕ್ಷಣ ನೀಡುತ್ತಿದ್ದಾರೆ. ಕದ್ರಿಯ ಎಸ್.ಪೂಜಾರಾವ್ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ ಶಿಷ್ಯವೇತನ ಪಡೆದು ಭರತನಾಟ್ಯದಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಬೆಂಗಳೂರು ದೂರದರ್ಶನದಲ್ಲಿ 'ಬಿ' ದರ್ಜೆಯ ಕಲಾವಿದೆಯಾಗಿದ್ದಾರೆ. ಪುತ್ತೂರಿನ ಮಾಸ್ಟರ್ ದೀಪಕ್ ಕುಮಾರ್ ಅವರು ಭರತನಾಟ್ಯದಲ್ಲಿ ವಿದ್ವತ್ ಹಾಗೂ ಚಿತ್ರಕಲೆ ಅಭ್ಯಸಿಸಿ ಪುತ್ತೂರಿನಲ್ಲಿ ಮೂಕಾಂಬಿಕಾ ನೃತ್ಯ ಕಲಾಶಾಲೆ ಸ್ಥಾಪಿಸಿ ನೃತ್ಯ ಶಿಕ್ಷಣ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಶಿಷ್ಯವೇತನ ಪಡೆದಿದ್ದಾರೆ. ನೃತ್ಯ ಕಲೆಯ ೧೦೮ ಕರಣಗಳನ್ನು ಲಾಲಿತ್ಯಪೂರ್ಣವಾಗಿ ಅಭಿನಯಿಸಬಲ್ಲ ದೀಪಕ್ ಅವರು ಯೋಗಾಸನದ ವಿವಿಧ ಭಾವಭಂಗಿಗಳನ್ನು ನೃತ್ಯಕಲೆಯಲ್ಲಿ ಅಳವಡಿಸಿದ್ದಾರೆ. ದೇಶಾದ್ಯಂತ ನೂರಾರು ಪ್ರದರ್ಶನ ನೀಡಿ ಜನಮೆಚ್ಚುಗೆ, ಪ್ರಶಸ್ತಿ, ಪಾರಿತೋಷಕಗಳನ್ನು ಗಳಿಸಿದ್ದಾರೆ. ಮಂಗಳೂರಿನ ರಾಜಶ್ರೀ ಕಾಮತ್ ಅವರು ಬೆಂಗಳೂರಿನ ಲಲಿತಾ ಶ್ರೀನಿವಾಸ್‌ರವರ ನೂಪುರ ಸಂಸ್ಥೆಯಲ್ಲಿ ಅಭ್ಯಸಿಸಿ ಮುಂಬಯಿ, ದೆಹಲಿ, ನಾಗಪುರ, ಮಧ್ಯಪ್ರದೇಶ, ಆಂಧ್ರಪ್ರದೇಶಗಳಲ್ಲದೆ ಇಂಗ್ಲೆಂಡ್, ಜರ್ಮನಿ, ಪೋಲೆಂಡ್, ಪೋರ್ಚ್‌ಗಲ್, ಕೆನಡಾಗಳಲ್ಲೂ ನಾಟ್ಯಸಂಸ್ಥೆಯ ತಂಡದೊಂದಿಗೆ ಪ್ರದರ್ಶನ ನೀಡಿದ್ದಾರೆ. ಉದಯೋನ್ಮುಖ ಕಲಾವಿದೆ ರಾಜಶ್ರೀ ಇಂಗ್ಲೆಂಡ್‌ನಲ್ಲಿ ವರ್ಷಗಳ ಕಾಲ ನೆಲೆಸಿ ಸಮಕಾಲೀನ ನೃತ್ಯ, ಸಾಹಸ ನೃತ್ಯಗಳನ್ನು ಅಭ್ಯಸಿಸಿದರು. ಕಾಸರಗೋಡಿನ ಶಶಿಕಲಾ ಅವರು (ಜ ೧೯೫೨) ಭರತನಾಟ್ಯ, ಕಥಕ್, ಮೋಹಿನಿ ಅಟ್ಟಂ. ಕೂಚುಪುಡಿ ಮತ್ತು ಯಕ್ಷಗಾನಗಳಲ್ಲೂ ಪರಿಣತರಿದ್ದು ದಕ್ಷಿಣ ಭಾರತಾದ್ಯಂತ ಹಾಗೂ ದೂರದರ್ಶನಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. 'ನೃತ್ಯ ನಿಕೇತನ' ಎಂಬ ಕಲಾಸಂಸ್ಥೆ ಸ್ಥಾಪಿಸಿ ಶಿಕ್ಷಣ ನೀಡುತ್ತಿದ್ದಾರೆ. ಕರ್ನಾಟಕ ರಾಜ್ಯ ಹಾಗೂ ಕೇರಳ ರಾಜ್ಯಗಳ ಸಂಗೀತ ನೃತ್ಯ ಅಕಾಡೆಮಿಗಳಿಂದ ಪುರಸ್ಕೃತರಾಗಿದ್ದಾರೆ.

ಮಂಗಳೂರಿನ ಶಾರದಾಮಣಿ ಶೇಖರ್ ಅವರು (ಜ೧೯೭೪) ಅನೇಕ ವಿದ್ವಾಂಸರುಗಳ ಬಳಿ ಭರತನಾಟ್ಯ, ಕೂಚುಪುಡಿ ಇತ್ಯಾದಿ ಅಭ್ಯಸಿಸಿ, ಮಂಗಳೂರಿನಲ್ಲಿ ಶ್ರೀ ಸನಾತನ ನಾಟ್ಯಾಲಯ ನಡೆಸುತ್ತಿದ್ದಾರೆ. ತುಳು ಭಾಷೆಯ ಜಾನಪದ ನೃತ್ಯಗಳಲ್ಲದೆ ಖ್ಯಾತ ಸಾಹಿತಿಗಳ ಕವನಗಳನ್ನು ನೃತ್ಯರೂಪಕ್ಕೆ ಅಳವಡಿಸಿದ್ದಾರೆ. ಜಿಲ್ಲೆಯ ನೃತ್ಯ ಕಲಾವಿದರನ್ನು ಒಂದುಗೂಡಿಸಿ 'ಕರಾವಳಿ ನೃತ್ಯ ಕಲಾ ಪರಿಷತ್' ಸ್ಥಾಪಿಸಿ (೧೯೯೯) ಹಲವಾರು ಕಾರ್ಯಕ್ರಮ ಆಯೋಜಿಸಿದ್ದಾರೆ. ಇವರ ಶಿಷ್ಯರಲ್ಲಿ ಶುಭಾರಾವ್, ಶೋಭಿತಾ ಮುರಳೀಧರ್, ಎಚ್.ಎನ್.ಭಾರತಿ, ಶ್ರೀಲತಾ ಶೆಟ್ಟಿ ಮುಂತಾದವರು ಹೆಸರು ಮಾಡಿದ್ದಾರೆ. ಅನಾಥ ಗ್ರಾಮೀಣ ಪ್ರದೇಶದ ಮತ್ತು ಅಂಗವಿಕಲ ಮಕ್ಕಳಲ್ಲೂ ಸಹ ಸೃಜನಶೀಲತೆಯನ್ನು ಗುರುತಿಸಿ ನೃತ್ಯ ಶಿಕ್ಷಣ ನೀಡಿ ಆತ್ಮ ವಿಶ್ವಾಸ ಮೂಡಿಸಿದ್ದಾರೆ. ಮಂಗಳೂರಿನ ಯು.ಶುಭಾರಾವ್ (ಜ೧೯೭೮) ೧೦೦ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದು, ಅನೇಕ ಪ್ರಶಸ್ತಿಯನ್ನು ಗಳಿಸಿದ್ದಾರೆ. ಮಂಗಳೂರಿನ ಸಹನಾ ಪ್ರದೀಪಭಟ್ಟ ಅವರು ಭರತನಾಟ್ಯ ಅಭ್ಯಸಿಸಿ ಬೆಂಗಳೂರಿನಲ್ಲಿ 'ನಾಟ್ಯಾಂಜಲಿ ನೃತ್ಯ ಕಲಾಕೇಂದ್ರ' ಸ್ಥಾಪಿಸಿ ಶಿಕ್ಷಣ ನೀಡುತ್ತಿದ್ದಾರೆ. ಸ್ವತಂತ್ರವಾಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ಸವಗಳಲ್ಲಿ ನೃತ್ಯ ಕಾರ್ಯಕ್ರಮ ನೀಡಿದ್ದಾರೆ. ಇವರ ಕಲಾಸೇವೆಗಾಗಿ ಅನೇಕ ಪ್ರಶಸ್ತಿ ಹಾಗೂ ಅಭಿನಂದನಾ ಪತ್ರಗಳು ದೊರೆತಿವೆ. ಕೆಲವು ಕಲಾಶಿಬಿರಗಳನ್ನು ಆಯೋಜಿಸಿ ಪುರಸ್ಕೃತರಾಗಿದ್ದಾರೆ. ಕಾಸರಗೋಡಿನ ಸುಧಾಮೂರ್ತಿ (ಜ೧೯೫೭) ಅವರು ಭರತನಾಟ್ಯ, ಯಕ್ಷಗಾನ ಅಭ್ಯಸಿಸಿ ಚಿತ್ರದುರ್ಗದ ಚಳ್ಳಕೆರೆಯಲ್ಲಿ ನೃತ್ಯನಿಕೇತನ ಎಂಬ ಸಂಗೀತ ನೃತ್ಯ ಕಲಾಶಾಲೆ ನಡೆಸುತ್ತಿದ್ದಾರೆ. ದೆಹಲಿ, ಮುಂಬಯಿ, ಭೂಪಾಲ್, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಕಲಾಪ್ರದರ್ಶನ ನೀಡಿದ್ದಾರೆ. ಬೆಂಗಳೂರು ದೂರದರ್ಶನದಲ್ಲಿ 'ಎ' ದರ್ಜೆಯ ಕಲಾವಿದರಾಗಿದ್ದಾರೆ. ಕಳೆದ ಸುಮಾರು ೨೫ ವರ್ಷಗಳಿಂದ ಇಂಗ್ಲೆಂಡಿನಲ್ಲಿ ನೆಲೆಸಿರುವ ಚಿತ್ರಲೇಖಾ ಬೋಳಾರ್ ಅವರು ಕಾಸರಗೋಡಿನವರು. ರಾಜರತ್ನಂ ಪಿಳ್ಳೆ ಅವರಲ್ಲಿ ನೃತ್ಯ ಕಲಾಭ್ಯಾಸ ಮಾಡಿ ದೇಶವಿದೇಶಗಳಲ್ಲಿ ಅನೇಕ ಪ್ರದರ್ಶನಗಳನ್ನು ನೀಡಿ, ಬರ್ಮಿಂಗ್ ಹ್ಯಾಂನ ಕಲಾಕೇಂದ್ರಗಳೊಡನೆ ಸಂಪರ್ಕವಿರಿಸಿಕೊಂಡು, ಅಲ್ಲಿಯೇ ನೆಲೆಸಿ ನೃತ್ಯಕಲಾ ಶಿಕ್ಷಣ ನೀಡುತ್ತಿದ್ದಾರೆ. ಅಲ್ಲಿಯ ದೂರದರ್ಶನ ಕೇಂದ್ರಗಳಲ್ಲಿ ಇವರ ನೃತ್ಯ ಪ್ರದರ್ಶಿತವಾಗಿರುವುದಲ್ಲದೆ, ನೃತ್ಯಕಲೆಯ ಹಲವಾರು ಪ್ರಕಾರಗಳಲ್ಲಿ ಪ್ರಯೋಗಗಳನ್ನು ಮಾಡಿದ್ದಾರೆ.

**ಕೀರ್ತನೆ**

ಗಮಕದಿಂದ ಹೊರತಾಗಿ ಕಥಾಕೀರ್ತನೆ ಕಲಾವಿದರು ಕೆಲವರನ್ನು ಜಿಲ್ಲೆಯಲ್ಲಿ ಗುರುತಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ವಾಸವಿದ್ದ ತುಪಾಕಿ ವೆಂಕಟರಮಣಾಚಾರ್ಯರು ತಿರುಪತಿಯ ದೇವರ ಅಂಕಿತದಲ್ಲಿ ರಚಿಸಿದ ದೇವರ ನಾಮಗಳು ೧೮೭೪ರಲ್ಲಿ ಪ್ರಕಟಿಸಿದ್ದು ಇದರಲ್ಲಿ ೩೭೮ ಕೀರ್ತನೆಗಳಿವೆ. ವಿವಿಧ ವೃತ್ತಗಳಿಂದ ಕೂಡಿದ ಛಂದೋಬದ್ಧ ರಚನೆಗಳಲ್ಲದೆ ಜನಪದ ಗೀತೆಗಳನ್ನು ಹೋಲುವಂತಹ ಕೀರ್ತನೆಗಳೂ ಇದ್ದು ಹಾಡಲು ಅನುಕೂಲಕರವಾಗಿದೆ. ಪಾವಂಜೆ ಲಕ್ಷ್ಮೀ ನಾರಾಯಣಪ್ಪಯ್ಯ (೧೮೬೪-೧೯೨೪) ಅವರು ಕೃತಿಗಳು ಹಲವಾರು ಸಂಕಲನಗಳಲ್ಲಿ ಪ್ರಕಟವಾಗಿವೆ. ಇವರು ಆಶುಕವಿಯೂ ಆಗಿದ್ದು ಕೀರ್ತನೆಗಳನ್ನು ಹಾಡುತ್ತಿದ್ದರು. ಕಳೆದ ಶತಮಾನದ ಆದಿಯಲ್ಲಿದ್ದ ಪಣಂಬೂರಿನ ಶ್ರೀನಿವಾಸಯ್ಯ ಅವರು 'ಸದಾನಂದ' ಮುದ್ರಿಕೆಯಲ್ಲಿ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ರಚಿಸಿದ ನೂರು ಕೀರ್ತನೆಗಳು ಹಾಗೂ 'ಮುಕ್ತನಾದ' ಎಂಬ ಖಂಡ ಕಾವ್ಯಗಳು ಪ್ರಕಟವಾಗಿವೆ. ಇವರು ಯಕ್ಷಗಾನ ಬಯಲಾಟಗಳಲ್ಲೂ ಪಾತ್ರಧಾರಿಗಳಾಗಿದ್ದರು. ಇವರುಗಳಲ್ಲದೆ, ಬೆಳ್ಳಿದಾಸಪ್ಪಯ್ಯ, ಮುಲ್ಕಿ ವೆಂಕಣ್ಣವಾಸುದೇವಯ್ಯ, ರಾಮಕೃಷ್ಣ ಹಾಗೂ ವಾಸುದೇವ ಶ್ಯಾನುಭಾಗರು ಸಹ ಕಳೆದ ಶತಮಾನದ ಆರಂಭ ಕಾಲದ ಕೀರ್ತನಕಾರರಾಗಿದ್ದರು. ಗುರುವಾಯನ ಕೆರೆಯಲ್ಲಿ ವ್ಯಾಸಾಶ್ರಮ ಸ್ಥಾಪಿಸಿ ಕೀರ್ತನಕಲೆ ಪ್ರಚಾರಮಾಡುತ್ತಿರುವ ವಿನಾಯಕಶೆಣೈ (ಜ.೧೯೨೩) ಅವರು ಪುಣೆ, ಗೋವೆಗಳಲ್ಲಿ ಶಿಕ್ಷಣ ಪಡೆದಿದ್ದು ಕನ್ನಡವಲ್ಲದೆ ಮರಾಠಿ, ಹಿಂದಿ, ಕೊಂಕಣಿಗಳಲ್ಲೂ ಪ್ರವಚನ ನೀಡುತ್ತಾರೆ. ಹಲವಾರು ಪುಸ್ತಕಗಳನ್ನು ರಚಿಸಿದ್ದು ಕೀರ್ತನ ಕೇಸರಿ, ಕೀರ್ತನ ವಿಶಾರದ ಇತ್ಯಾದಿ ಬಿರುದು ಪಡೆದಿದ್ದಾರೆ. ಅತ್ತಾವರದ ಕೆ.ನಿತ್ಯಾನಂದ ಬೋಳಾರ್ (ಜ.೧೯೨೪) ಅವರು ಕೀರ್ತನ ಕಲೆಯಲ್ಲದೆ ಸಂಗೀತಾಭ್ಯಾಸ ಮಾಡಿದ್ದು ಹಲವಾರು ವಾದ್ಯಗಳಲ್ಲಿ ಪರಿಣತಿ ಪಡೆದಿದ್ದಾರೆ. ಗ್ರಂಥಿ ವೀಣೆ ೧೨ ತಂತಿಯ ಚರ್ಮದ ಪಿಟೀಲು, ಬಿದರು ಯಕ್ಷವೀಣೆ ಇತ್ಯಾದಿ ಸ್ವತಃ ರಚಿಸಿದ್ದಾರೆ. ಜಿಲ್ಲೆಯಾದ್ಯಂತ ಬಿಡಿಯಾಗಿ ಹಾಗೂ ಆಕಾಶವಾಣಿಯಿಂದಲೂ ಕಾರ್ಯಕ್ರಮ ನೀಡಿದ್ದಾರೆ. ಮೂಲತಃ ಬೆಳ್ತಂಗಡಿಯ ಹತ್ಯಡ್ಕ ಗ್ರಾಮದವರಾದ ಲಕ್ಷ್ಮಣದಾಸ್ ವೇಲಣಕರ್ (ಜ.೧೯೩೯) ಅವರು ಭದ್ರಗಿರಿ ಕೇಶವದಾಸ ಮುಂತಾದವರಲ್ಲಿ ಅಭ್ಯಸಿಸಿ ರಾಜ್ಯಾದ್ಯಂತ ಹಾಗೂ ನೆರೆ ರಾಜ್ಯಗಳಲ್ಲಿ ವ್ಯಾಪಕವಾಗಿ ಕಾರ್ಯಕ್ರಮ ನೀಡಿದ್ದಾರೆ. ಕರ್ನಾಟಕ ಕೀರ್ತನ ಪರಿಷತ್ತಿನ ಕಾರ್ಯದರ್ಶಿ, 'ದಾಸವಾಣಿ' ಪತ್ರಿಕೆಯ ಸಂಪಾದಕ, ಇತ್ಯಾದಿ ಸ್ಥಾನಗಳಲ್ಲಿರುವುದಲ್ಲದೆ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕೀರ್ತನಕಾರರ ಸಮ್ಮೇಳನದಲ್ಲಿ 'ಕೀರ್ತನ ಚತುರ' ಬಿರುದಲ್ಲದೆ, ರಾಜ್ಯ ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ದೊರೆತಿದೆ.

ಪುತ್ತೂರು ಬಳಿಯ ಉಪ್ಪಿನಂಗಡಿಯವರಾದ ಬಿ.ಎಸ್.ಅನಂತಪದ್ಮನಾಭರಾವ್ (ಜ.೧೯೩೯) ಕಾಶಿಯಲ್ಲಿ 'ಹರಿಕಥಾ ರತ್ನ' ಪದವಿ ಪಡೆದು ರಾಜ್ಯ ನೆರೆರಾಜ್ಯಗಳಲ್ಲಿ ಕೀರ್ತನ ಕಾರ್ಯಕ್ರಮ ನೀಡಿದ್ದಾರೆ. 'ಪುರಂದರ ಕೀರ್ತನ ಕಲಾ ಪ್ರಚಾರ ಕೇಂದ್ರ' ಸ್ಥಾಪಿಸಿ ಕಲೆಯ ಪ್ರಚಾರ ಕೈಗೊಂಡಿದ್ದಾರೆ. ಬಂಟ್ವಾಳ ಬಳಿಯ ಕನ್ಯಾನದ ಸೂರ್ಯನಾರಾಯಣ ಭಟ್ (ಜ.೧೯೬೭) ಯಕ್ಷಗಾನದಲ್ಲೂ ತರಬೇತಿ ಪಡೆದಿದ್ದು ಕೀರ್ತನೆ, ಹರಿಕಥೆ ಕಾರ್ಯಕ್ರಮ ನೀಡುತ್ತಿದ್ದಾರೆ. ಧರ್ಮಸ್ಥಳದ ದಾಸಾಶ್ರಮ ವತಿಯಿಂದ ಪುರಸ್ಕೃತರಾಗಿದ್ದಾರೆ. ಉಚ್ಚಿಲದ ಪಿ.ಮೋಹನರಾವ್, ಭದ್ರಗಿರಿ ಕೇಶವದಾಸರಲ್ಲಿ ಅಭ್ಯಸಿಸಿ ದಕ್ಷಿಣ ಕನ್ನಡ, ಮೈಸೂರು, ಮಂಡ್ಯಗಳಲ್ಲಿ ಅನೇಕ ಸ್ಥಳಗಳು ಸೇರಿದಂತೆ ಆಕಾಶವಾಣಿಯಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಕೀರ್ತನಭಾಸ್ಕರ, ಕೀರ್ತನಾಲಂಕಾರ ಇತ್ಯಾದಿ ಬಿರುದುಗಳು ಲಭ್ಯವಾಗಿವೆ.

ಕೊಡಿರುದ್ಯಾವರದ ಯು.ವಿ.ನಾಯಕ್ ೨೫ ಕೃತಿ ರಚಿಸಿದ್ದು ಹರಿದಾಸರು ಪ್ರವಚನಕಾರರು ಹಾಗೂ ಯಕ್ಷಗಾನ ಕಲಾಚತುರರಾಗಿದ್ದರು. ಶಿರಾಡಿಪಾಲ್ ಅವರು ೪೦ ಕೀರ್ತನೆ, ಹರಿಕಥೆ ಕಲಾವಿದರನ್ನು ಗ್ರಂಥ ಬರೆದಿದ್ದಾರೆ. ಹರಿದಾಸ ಜ್ಞಾನದಾನಿ ಹಾಗೂ ವಾಸುದೇವರಾವ್, ಅವರು ಕೀರ್ತನೆ, ಹರಿಕಥೆ, ಪ್ರವಚನಗಳಲ್ಲಿ ಹೆಸರು ಮಾಡಿದ್ದಾರೆ. ೧೯೭೪ರಲ್ಲಿ ಬೆಳ್ತಂಗಡಿಯಲ್ಲಿ ಹರಿದಾಸ ಸಾಹಿತ್ಯ ಸೇವಾ ಪರಿಷತ್ತು ಸ್ಥಾಪಿತವಾಗಿದ್ದು ನರಹರಿಜೋಶಿ, ವಾಸುದೇವ ನಾಯಕ್ ಎಸ್.ಎ.ಗೋಖಲೆ, ಶ್ರೀರಂಗಜೋಶಿ, ಬಾಳಕೃಷ್ಣ ಆಠವಲೆ ಅವರುಗಳು ಸಂಸ್ಥೆಯ ಹರಿದಾಸರುಗಳಾಗಿದ್ದರು.

**ಗಮಕ**

ಗೋವಿಂದಪೈ ಅವರ ಸಹೋದರಿ ಮಂಜೇಶ್ವರದ ಎಂ.ರಮಾಬಾಯಿ (ಜ.೧೯೦೧) ಅವರು ಗಮಕ ಕಲೆಯನ್ನು ಕೃಷ್ಣಗಿರಿ ಕೃಷ್ಣರಾಯರಲ್ಲಿ ಕಲಿತು ಮುಂದೆ ತಮ್ಮ ೬೦ನೇ ವರ್ಷದಲ್ಲಿ ಗಮಕ ಪರೀಕ್ಷೆ ತೇರ್ಗಡೆ ಮಾಡಿದ್ದರು. ಹಲವು ಭಾಷೆ ತಿಳಿದಿದ್ದ ರಮಾಬಾಯಿಯವರು ನಾಟಕಗಳ ಮಧ್ಯೆ ಪ್ರೇಕ್ಷಕರನ್ನು ರಂಜಿಸುವಂತಹ ಹಲವಾರು ಹಾಸ್ಯ ಚುಟುಕುಗಳನ್ನು ರಚಿಸಿದ್ದರು. ಸಂಗೀತದಲ್ಲೂ

ಪರಿಶ್ರಮವಿದ್ದು ಅನೇಕ ವಿದ್ಯಾರ್ಥಿನಿಯರಿಗೆ ಗಮಕ ಕಲೆ ಕಲಿಸಿ, ಕಲೆ ಜಿಲ್ಲೆಯಲ್ಲಿ ಪ್ರಚುರವಾಗುವಂತೆ ಶ್ರಮಿಸಿದ್ದಾರೆ. ಮುಳಿಯ ತಿಮ್ಮಪ್ಪಯ್ಯ ಅವರೂ ಒಳ್ಳೆಯ ಗಮಕಿಗಳಾಗಿದ್ದರು. ಬಂಟ್ವಾಳದ ಎನ್.ವಿ.ಕೃಷ್ಣರಾವ್ ಕೆದಿಲ (ಜ.೧೯೨೯) ತಾಯಿಯವರಿಂದ ಹಾಡುಗಾರಿಕೆ ಕಲಿತು ಜಿಲ್ಲೆಯಾದ್ಯಂತ ಗಮಕದೊಂದಿಗೆ ಪುರಾಣ, ಪ್ರವಚನ, ವ್ಯಾಖ್ಯಾನ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮೂಡಬಿದಿರೆಯ ಬಿ.ಚಂದ್ರಯ್ಯರವರು (ಜ.೧೯೩೧) ಕಾಸರಗೋಡಿನಲ್ಲಿ ಜನಿಸಿದ್ದು ಹಾಡುಗಾರಿಕೆ, ಪಿಟೀಲು ವಾದನಗಳಲ್ಲೂ ಪರಿಶ್ರಮ ಪಡೆದಿದ್ದಾರೆ. ಕಾವ್ಯವಾಚನ, ವ್ಯಾಖ್ಯಾನ ಹಾಗೂ ಗಮಕ ಕುರಿತು ಆಕಾಶವಾಣಿಯೂ ಸೇರಿದಂತೆ ಐನೂರಕ್ಕೂ ಹೆಚ್ಚು ಕಾರ್ಯಕ್ರಮ ನೀಡಿದ್ದಾರೆ. ಅನೇಕರನ್ನು ಗಮಕ ಕಲೆಯಲ್ಲಿ ಬೆಳೆಸಿದ್ದಾರೆ. ಮತ್ತೂರು ಕೃಷ್ಣಮೂರ್ತಿ ದತ್ತಿ ಪುರಸ್ಕಾರ, ದಕ್ಷಿಣ ಕನ್ನಡ ಜಿಲ್ಲೆ ಗಮಕ ಸಮ್ಮೇಳನದ ಅಧ್ಯಕ್ಷತೆ ಹಾಗೂ ಸನ್ಮಾನಗಳು ಲಭಿಸಿವೆ. ಸ್ವ ಪರಿಶ್ರಮದಿಂದ ಹಾಡುವಿಕೆ, ಗಮಕ ಕಲೆ ಕಲಿತು ಅನೇಕ ಕಾರ್ಯಕ್ರಮ ನೀಡಿರುವ ಕೈಂತಜೆ ನರಸಿಂಹಭಟ್ (ಜ.೧೯೩೫) ಅವರು ೧೯೯೯ರಲ್ಲಿ ಪುನರೂರಿನಲ್ಲಿ ನಡೆದ ದಕ್ಷಿಣ ಕನ್ನಡ ಪ್ರಥಮ ಗಮಕ ಕಲಾ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗೀತನಾಟಕಗಳಲ್ಲೂ ಪಾಲ್ಗೊಂಡಿದ್ದಾರೆ. ಮೂಲತಃ ಕೇರಳದವರಾದ ವಿ.ಸತ್ಯಭಾಮ (ಜ.೧೯೩೮) ಅವರು ಮಂಗಳೂರಿನಲ್ಲಿ ನೆಲೆಸಿ ಕನ್ನಡ ಕಲಿತು ಗಮಕ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಹಲವಾರು ಗಮಕ ಕಾರ್ಯಕ್ರಮ ನೀಡಿದ್ದಾರೆ. ಆಕಾಶವಾಣಿಯಿಂದಲೂ ಕಾವ್ಯವಾಚನ ಪ್ರಸಾರವಾಗಿದೆ. ಕಾಸರಗೋಡಿನ ಉಂಡೆಮನೆ ಗಣಪತಿಭಟ್ ಅವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ 'ಗಮಕ ಕಾವೇರಿ' ಯೋಜನೆಯಲ್ಲಿ ಕಾವ್ಯವಾಚನಗಳನ್ನು ನೀಡಿದ್ದು ಗಮಕ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದಾರೆ. ಜಿಲ್ಲೆಯಾದ್ಯಂತ ಗಮಕ ಕಲೆ ಪ್ರಸರಿಸುತ್ತಿದ್ದಾರೆ. ಬೈಂದೂರಿನವರಾದ ಬಿ.ವಿಶ್ವೇಶ್ವರ (ಜ.೧೯೪೬) ಅವರು ನಾಗರತ್ನಮ್ಮರವರಲ್ಲಿ ಗಮಕ ಕಲೆ ಕಲಿತು ಸ್ಥಳೀಯ ದೇವಾಲಯಗಳಲ್ಲಿ, ಸಮೀಪದ ಪ್ರಾಂತಗಳಲ್ಲಿ ನಿರಂತರ ಕಾರ್ಯಕ್ರಮ ನೀಡುತ್ತಿದ್ದಾರೆ. ಗಮಕ ಪರೀಕ್ಷೆಗಳ ಪರೀಕ್ಷಕರೂ ಆಗಿದ್ದು ವಿದ್ಯಾರ್ಥಿಗಳಿಗೆ ಕಲೆ ಬೋಧಿಸುವುದರಲ್ಲಿ ಬೆಳವಣಿಗೆಯಲ್ಲಿ ಮಹತ್ತರ ಪಾತ್ರವಹಿಸುತ್ತಿದ್ದಾರೆ. ಸುರತ್ಕಲ್‌ನ ಪಿ.ಸಿ.ವಾಸುದೇವರಾವ್ ಅವರು ಕಳೆದ ಸುಮಾರು ಐವತ್ತು ವರ್ಷಗಳಿಂದ ಗಮಕ ಹಾಗೂ ಕಾವ್ಯವಾಚನ ಕಾರ್ಯಕ್ರಮ ನೀಡುತ್ತಿದ್ದಾರೆ. ಸ್ಥಳೀಯವಾಗಿ ಕೆಲಕಾಲ ಗಮಕ ಪರೀಕ್ಷೆ ನಡೆಸುತ್ತಿದ್ದು ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದಾರೆ. ೧೯೯೭ರ ಪ್ರಥಮ ಜಿಲ್ಲಾ ಗಮಕ ಸಮ್ಮೇಳನ ಹಾಗೂ ಇನ್ನಿತರ ಸಮ್ಮೇಳನಗಳಲ್ಲಿ ಗೌರವಿಸಲಾಗಿದೆ. ಕಾಸರಗೋಡಿನವರಾದ ಶಶಿರಾಜ ನೀಲಂಗಳ ಅವರು (೧೯೬೮) ತಮ್ಮ ಗುರುಗಳಾದ ಗಮಕಿ ಬಿ.ಕೆ.ವನಮಾಲ ಅವರ ಕಲಾಶಾಲೆಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದು ಗಮಕ, ವ್ಯಾಖ್ಯಾನ, ಯಕ್ಷಗಾನ, ಸಂಗೀತಗಳಲ್ಲಿ ಪರಿಶ್ರಮ ಪಡೆದಿದ್ದಾರೆ. ವ್ಯಾಪಕ ಪ್ರಚಾರ ಮಾಡುತ್ತಿದ್ದಾರೆ. ಪ್ರಸ್ತುತ ಬೆಳ್ತಂಗಡಿಯಲ್ಲಿರುವ ಟಿ.ಸುಬ್ರಹ್ಮಣ್ಯ ಭಟ್ ಅವರು ಕರ್ನಾಟಕ ಗಮಕ ಕಲಾ ಪರಿಷತ್ತಿನ ಸದಸ್ಯರಾಗಿದ್ದು ದೆಹಲಿಯೂ ಸೇರಿದಂತೆ ಅನೇಕ ಭಾಗಗಳಲ್ಲಿ ಗಮಕ ಕಾರ್ಯಕ್ರಮ ನೀಡಿದ್ದಾರೆ. ಹರಿಕಥೆ, ಯಕ್ಷಗಾನ, ವ್ಯಾಖ್ಯಾನಗಳಲ್ಲಿ ಒಲವಿರುವ ಶ್ರೀಯುತರು ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇವರುಗಳಲ್ಲದೆ ಬೆಳ್ತಂಗಡಿ ವರದರಾಜ ಸೀತಮ್ಮ, ಅಡ್ಯನಡ್ಕದ ಪಾರ್ವತಿ ಗಣೇಶ್ ಭಟ್ ಅವರುಗಳು ಗಮಕ ಕಲಾವಿದರಾಗಿದ್ದಾರೆ. ಇನ್ನಿತರ ಗಮಕ ಕಲಾವಿದರೆಂದರೆ ಟಿ. ಕೃಷ್ಣಭಟ್ (ಜ ೧೯೧೭), ಎಂ. ಕೃಷ್ಣಭಟ್ (ಜ ೧೯೪೯), ಎನ್.ವಿ.ಕೃಷ್ಣರಾವ್ (ಜ ೧೯೨೯), ಟಿ.ಕೇಶವ್‌ಭಟ್(೧೯೨೦) ಗಣಪತಿ ಪದ್ಯಾಣ (ಜ ೧೯೪೯), ಯು. ಗಣಪತಿ ಭಟ್ಟ (ಜ ೧೯೩೨) ನಿರ್ಚಾಲು ನಾರಾಯಣ ಮಧ್ಯಸ್ಥ (ಜ ೧೯೩೦), ನೆಕ್ರಾಜೆ ಸೀತಾರಾಮ ಭಟ್ಟ (ಜ ೧೯೩೩), ಬರೆ ಕೇಶವ ಭಟ್ಟ (ಜ ೧೯೪೧), ಮೋಹನ್ ಕಲ್ಲೂರಾಯ (ಜ ೧೯೫೫), ಕೆ.ವಿ. ರಮಣ್ (ಜ ೧೯೬೭) ಸುಂದರಿ ಕನ್ಯಾಡಿ (ಜ ೧೯೪೦) ಸುರೇಶ್‌ರಾವ್ ಅತ್ತೂರು (ಜ ೧೯೪೨) ಹರ್ಷ ನಾರಾಯಣ ಮೂರ್ತಿ (ಜ ೧೯೫೧) ಹೆಚ್.ಎನ್. ಹೆಬ್ಬಾರ್ (ಜ ೧೯೫೧) ಅವರುಗಳು, ಇವರಲ್ಲಿ ಅನೇಕರು ಯಕ್ಷಗಾನದಲ್ಲಿಯೂ ಪರಿಣಿತರಿದ್ದು ಅರ್ಥಧಾರಿ, ಹರಿಕಥೆ, ಭಜನೆಗಳ ನೂರಾರು ಕಾರ್ಯಕ್ರಮ ನೀಡಿ ಅನೇಕ ಬಿರುದು–ಬಾವಲಿಗಳನ್ನು ಗಳಿಸಿದ್ದಾರೆ. ಟಿ. ಕೇಶವ ಭಟ್ಟರು ಸಾಹಿತ್ಯ ಕ್ಷೇತ್ರದಲ್ಲೂ ಗಣನೀಯ ಕೊಡುಗೆ ನೀಡಿದ್ದಾರೆ.

**ಸುಗಮ ಸಂಗೀತ**

ಇತ್ತೀಚಿನ ದಿನಗಳಲ್ಲಿ ಸುಗಮ ಸಂಗೀತ ಕಲಾಪ್ರಕಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬರುತ್ತಿದ್ದು, ಜಿಲ್ಲೆಯಲ್ಲಿಯೂ ಕೆಲವು ಹೆಸರಾಂತ ಕಲಾವಿದರಿದ್ದಾರೆ. ಮಂಗಳೂರಿನಲ್ಲಿ ಜನಿಸಿ ಮುಂಬಯಿಯಲ್ಲಿ ನೆಲೆಸಿರುವ ಎಂ.ಎಸ್.ಕಾಮತ್ (ಜ.೧೯೪೭) ಅವರು ತಂದೆ ಎಂ.ಎನ್.ಕಾಮತ್, ಬಸವರಾಜ ರಾಜಗುರು ಮುಂತಾದವರಿಂದ ಸಂಗೀತಾಭ್ಯಾಸ ಮಾಡಿ ಹೊರನಾಡ ಕನ್ನಡಿಗರಾಗಿ ಮಹಾರಾಷ್ಟ್ರದಲ್ಲಿ ಕನ್ನಡ ಸೇವೆ ಮಾಡುತ್ತಿದ್ದಾರೆ. ಆಕಾಶವಾಣಿ ಕಲಾವಿದರಾಗಿ ಐವತ್ತಕ್ಕೂ ಹೆಚ್ಚು ಧ್ವನಿಸುರುಳಿ ಹೊರತಂದಿದ್ದಾರೆ. ಮರಾಠಿಯ ಗೀತ ರಾಮಾಯಣವೊಂದನ್ನು ಕನ್ನಡಕ್ಕೆ ಅನುವಾದಿಸಿ ಹಾಡಿರುವುದಲ್ಲದೆ ಬೇರೆಯವರಿಂದ ದಾಸರಪದ ಹಾಡಿಸಿ ರಾಗಸಂಯೋಜನೆ ಮಾಡಿದ್ದಾರೆ. ಕನ್ನಡದ ಖ್ಯಾತ ಕವಿಗಳ ಕವನಗಳು, ದಾಸವಾಣಿಗಳನ್ನು 'ಕಾವ್ಯಾಂಜಲಿ–ಭಾವಾಂಜಲಿ', 'ದಾಸ ಸೌರಭ' ಇತ್ಯಾದಿ ಕಾರ್ಯಕ್ರಮಗಳಲ್ಲಿ ಹಾಡಿದ್ದಾರೆ. ಮುಂಬಯಿ

ಚಿತ್ರ ಜಗತ್ತಿನ ಅನೇಕ ಖ್ಯಾತರು ಇವರಲ್ಲಿ ಶಿಷ್ಯವೃತ್ತಿ ಪಡೆದಿದ್ದಾರೆ. ಅಂತೆಯೇ ಮಂಗಳೂರಿನಲ್ಲಿ ಜನಿಸಿ ಬೆಳಗಾವಿಯಲ್ಲಿ ನೆಲೆಸಿರುವ ಪದ್ಮಜ ಪ್ರಕಾಶ (ಜ.೧೯೫೦) ಅವರು ಸಂಗೀತಾಭ್ಯಾಸ ಮಾಡಿ ಸುಗಮ ಸಂಗೀತ ಕ್ಷೇತ್ರದಲ್ಲಿದ್ದು ಸಂಗೀತಶಾಲೆ ನಡೆಸುತ್ತಿದ್ದಾರೆ. ಆಕಾಶವಾಣಿ ಕಲಾವಿದರಾಗಿದ್ದು ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇಂದು ಸುಗಮ ಸಂಗೀತ ಕ್ಷೇತ್ರದಲ್ಲಿ ಪ್ರಸಿದ್ಧವಾಗಿರುವ ಹೆಸರು ಪುತ್ತೂರು ನರಸಿಂಹನಾಯಕ್ (ಜ.೧೯೫೮) ಅವರದು. ಸ್ವಂತ ಪರಿಶ್ರಮದಿಂದ ಗಾನಲೋಕಕ್ಕೆ ಪದಾರ್ಪಣೆ ಮಾಡಿದ ನಾಯಕ್ ಅವರು ಅರಬ್ ರಾಷ್ಟ್ರಗಳು, ಅಮೆರಿಕಾ, ಕೆನಡಾ ಸೇರಿದಂತೆ ಭಾರತಾದ್ಯಂತ ಸಾವಿರಾರು ಕಾರ್ಯಕ್ರಮ ನೀಡಿದ್ದಾರೆ. ದಾಸವಾಣಿ, ಭಕ್ತಿಗೀತೆಗಳಲ್ಲಿ ಪರಿಶ್ರಮವಿರುವ ನಾಯಕ್ ಅವರು ಆಕಾಶವಾಣಿ, ದೂರದರ್ಶನಗಳಲ್ಲಿ 'ಎ' ದರ್ಜೆಯ ಕಲಾವಿದರಾಗಿದ್ದಾರೆ. ಮೂವತ್ತಕ್ಕೂ ಹೆಚ್ಚು ಚಲನಚಿತ್ರಗಳಿಗೆ ಹಿನ್ನೆಲೆ ಗಾಯಕರಾಗಿದ್ದಾರೆ. ಮರಾಠಿ, ಹಿಂದಿ ಸೇರಿದಂತೆ ದಕ್ಷಿಣ ಭಾರತದ ತುಳು, ಕೊಂಕಣಿ ಆದಿಯಾಗಿ ಎಲ್ಲಾ ಭಾಷೆಗಳಲ್ಲಿ ಹತ್ತು ಸಾವಿರ ಸುಗಮ ಸಂಗೀತ, ಭಕ್ತಿಗೀತೆಗಳನ್ನು ಹಾಡಿದ್ದು ಅನೇಕವು "ನಾದಲಹರಿ" ಧ್ವನಿ ಸುರುಳಿ ರೂಪದಲ್ಲಿ ಪ್ರಕಟವಾಗಿವೆ. ಶ್ರೀಯುತರಿಗೆ ರಾಜ್ಯ ಸರ್ಕಾರ ಹಾಗೂ ಕೊಂಕಣಿ ಅಕಾಡೆಮಿಗಳ ಪ್ರಶಸ್ತಿಗಳು ಲಭ್ಯವಾಗಿವೆ.

ಪಿ. ಕಾಳಿಂಗರಾಯರು ರಾಜ್ಯದಾದ್ಯಂತ ಸುಗಮ ಸಂಗೀತವನ್ನು ಪ್ರಚುರ ಪಡಿಸಿದವರಲ್ಲಿ ಮುಖ್ಯರಾದವರು, ಅವರು ಹಾಡಿದ ಭಾವಗೀತೆಗಳು ಅನೇಕ ಧ್ವನಿ ಸುರುಳಿಯ ರೂಪದಲ್ಲಿ ಹೊರಬಂದಿದ್ದು ಇಂದಿಗೂ ಜನಪ್ರಿಯವಾಗಿವೆ. ಪಣಂಬೂರಿನವರಾದ ರತ್ನಮಾಲಾ ಪುರಂದರ್ (ಜ. ೧೯೭೧) ಅವರು ತಂದೆ ಜಿ. ಓಬಯ್ಯ ಅವರಿಂದ ಗಾಯನ ಕಲಿತು ಮೊದಲಿಗೆ 'ಗುರು ಆರ್ಕೆಸ್ಟ್ರಾ' ತಂಡದಿಂದ ನಂತರ ತಮ್ಮದೇ ಆದ 'ರತ್ನಾಮಾಲ ವಾದ್ಯ ಗೋಷ್ಠಿ'ಯ ಮೂಲಕ ನಾಡಿನಾದ್ಯಂತ ಕಾರ್ಯಕ್ರಮ ನೀಡಿದ್ದಾರೆ. ಜನಪದ, ಭಾವಗೀತೆ, ಭಕ್ತಿಗೀತೆಗಳ ಸುಮಾರು ೫೦ ಧ್ವನಿಸುರುಳಿಗಳು ಪ್ರಕಟವಾಗಿವೆ. ಚಲನಚಿತ್ರದಲ್ಲೂ ನಟಿಸಿರುವ ರತ್ನಮಾಲ ಪುರಂದರ್ ಅವರಿಗೆ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿವೆ. ಧರ್ಮಸ್ಥಳದಲ್ಲಿ ನೆಲೆಸಿರುವ ಪುಷ್ಪಮಾಲ ಚಂದ್ರಹಾಸ (೧೯೭೩) ಅವರು ತಂದೆ ಜಿ.ಆರ್.ದಾಸಪ್ಪರಲ್ಲಿ ಸಂಗೀತ ಕಲಿತು ರಾಜ್ಯೋತ್ಸವ, ದಸರಾ ಸಂಗೀತೋತ್ಸವ ಇತ್ಯಾದಿಗಳಲ್ಲದೆ ಆಕಾಶವಾಣಿಯಿಂದಲೂ ಕಾರ್ಯಕ್ರಮ ನೀಡಿದ್ದಾರೆ. ಕಾಸರಗೋಡಿನ ವೃಂದ ಎಸ್.ರಾವ್, (ಜ.೧೯೭೩) ಅವರು ಸದಾಶಿವ ಆಚಾರ್ಯ ಮುಂತಾದವರಿಂದ ಸಂಗೀತಾಭ್ಯಾಸ ಹಾಗೂ ಜಿವಿ.ಅತ್ರಿಯವರಲ್ಲಿ ಸುಗಮ ಸಂಗೀತಾಭ್ಯಾಸ ಮಾಡಿ ಬೆಂಗಳೂರು ಮಂಗಳೂರುಗಳಲ್ಲಿ ಆಕಾಶವಾಣಿಯೂ ಸೇರಿದಂತೆ ಅನೇಕ ಕಾರ್ಯಕ್ರಮ ನೀಡಿದ್ದಾರೆ. ಕರೀಂಖಾನರ 'ಮಂದಾರ ಧರ್ಮಸ್ಥಳ' ಭಕ್ತಿಗೀತೆ ಹಾಡಿ ಧ್ವನಿ ಸುರುಳಿ ಹೊರತಂದಿದ್ದಾರೆ. ಸುಗಮ ಸಂಗೀತ ಸಂಸ್ಥೆಯ ಆದರ್ಶ ಸುಗಮ ಸಂಗೀತ ಅಕಾಡೆಮಿಯ ವ್ಯವಸ್ಥಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಜಿಲ್ಲೆಯ ಶಶಿಧರ ಕೋಟೆ (ಜ.೧೯೭೫) ಅವರು ದೂರದರ್ಶನದಲ್ಲಿ 'ಸಂಗೀತ ಸಂಭ್ರಮ' ಎಂಬ ಜನಪ್ರಿಯ ಕಾರ್ಯಕ್ರಮ ನೀಡಿದ್ದು ಆರ್ಯಭಟ ಸಂಸ್ಥೆಯವರ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ದೊರೆತಿವೆ. ಬೆಳ್ವಾರೆಯ ಮುಕುಂದಪೈ (ಜ.೧೯೭೯) ಅವರು ರಾಜ್ಯೋತ್ಸವ ಸೇರಿದಂತೆ ಹಲವಾರು ಕಡೆ ಭಾವಗೀತೆ ಕಾರ್ಯಕ್ರಮ ನೀಡಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬೆಂಗಳೂರಿನಲ್ಲಿ ಚಲನಚಿತ್ರ ಗಾಯಕರಾಗಿ ಪ್ರಸಿದ್ಧರಾದ ರಮೇಶ್ಚಂದ್ರ ಅವರು, ಮಂಗಳೂರು ಹಾಗೂ ಮೂಡಬಿದಿರೆಗಳಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಸುಗಮ ಸಂಗೀತ ತರಬೇತಿ ನೀಡುತ್ತಿದ್ದಾರೆ.

## ಉತ್ಸವ

ಜಿಲ್ಲೆಯಲ್ಲಿ ಹಲವಾರು ಉತ್ಸವಗಳು, ಹಬ್ಬಗಳು ನಡೆಯುತ್ತಿದ್ದು ಆ ವೇಳೆಯಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತದೆ. ಕದ್ರೋಳಿಯ ಗೋಕರ್ಣನಾಥ ದೇವಾಲಯದ ನವರಾತ್ರಿ ಮಹೋತ್ಸವ ಹೆಚ್ಚು ಆಕರ್ಷಕ, ಜನಪ್ರಿಯವಾಗಿದ್ದು, ಮೆರವಣಿಗೆಯಲ್ಲಿ ಜನಪದ ಕುಣಿತ, ಸ್ತಬ್ಧ ಚಿತ್ರ ಇತ್ಯಾದಿಗಳಿರುತ್ತವುದಲ್ಲದೆ ಸಂಗೀತ, ನೃತ್ಯ ಕಾರ್ಯಗಳು ನಡೆಯುತ್ತವೆ. ಕೃಷ್ಣ ಜಯಂತಿಯ ವೇಳೆಯಲ್ಲಿ ಕೃಷ್ಣವೇಷಸ್ಪರ್ಧೆ ಹಾಗೂ ಇನ್ನಿತರ ಸ್ಪರ್ಧೆಗಳಿರುತ್ತದೆ. ಟೀಮ್ ಮಂಗಳೂರು ಎಂಬ ಸಂಸ್ಥೆ ೧೯೯೭ರಲ್ಲಿ ಸ್ಥಾಪಿತವಾಗಿ ಗಾಳಿಪಟ ಹಾರಿಸುವ ಸ್ಪರ್ಧೆಯಲ್ಲಿ ಫ್ರಾನ್ಸ್, ಇಂಗ್ಲೆಂಡ್‌ಗಳಲ್ಲೂ ಬಹುಮಾನ ಪಡೆದಿದೆ. ಸ್ಥಳೀಯವಾಗಿಯೂ ರಾಜ್ಯ ರಾಷ್ಟ್ರ ಅಂತರರಾಷ್ಟ್ರಮಟ್ಟದಲ್ಲಿಯೂ ಗಾಳಿಪಟ ಸ್ಪರ್ಧೆ ನಡೆಸುತ್ತಿದ್ದು ಅತ್ಯಂತ ವಿಶಾಲವಾದ, ವೈವಿಧ್ಯಮಯವಾದ ಗಾಳಿಪಟ ತಯಾರಿಸುವ ಹಾರಿಸುವ ಕ್ರಿಯೆ ಕುತೂಹಲಕಾರಿಯಾಗಿದೆ. ಜಿಲ್ಲಾಡಳಿತ ಕೆಲವರ್ಷಗಳಿಂದ ಕರಾವಳಿ ಉತ್ಸವ ನಡೆಸುತ್ತಿದ್ದು ಲಲಿತಕಲೆಗಳು ನಾಟಕ, ಮರಳ ಶಿಲ್ಪ ರಚನೆ ಇತ್ಯಾದಿ ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ. ಜಿಲ್ಲೆಯಲ್ಲಿ ಯಕ್ಷಿಣಿಗಾರರ ತಂಡವಿದ್ದು ಉಡುಪಿ, ಮಂಗಳೂರುಗಳಲ್ಲಿ ಆಗಾಗ್ಗೆ ರಾಷ್ಟ್ರಮಟ್ಟದ ಯಕ್ಷಿಣಿ, ಮೋಡಿಗಾರರನ್ನು ಸಂಘಟಿಸಿ ದೇಶದ ವೈವಿಧ್ಯಮಯ ಮನೋರಂಜಕ ಕಲೆಯನ್ನು ಪ್ರೋತ್ಸಾಹಿಸುತ್ತಿದೆ. ಧರ್ಮಸ್ಥಳವಂತೂ ಧಾರ್ಮಿಕ ಕಾರ್ಯಗಳಂತೆಯೇ ಕಲೆ, ಸಾಹಿತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಸಾಹಿತ್ಯ ಸಮ್ಮೇಳನ, ಸರ್ವಧರ್ಮಸಮ್ಮೇಳನ, ನಾಟಕ ಕಲಾಶಿಬಿರಗಳು ಆಗಾಗ್ಗೆ ನಡೆಯುತ್ತಿರುತ್ತವೆ. ಯಕ್ಷಗಾನ ಕಲೆ ಉಳಿಸಲು ಬಹಳ ಹಿಂದೆಯೇ ತರಬೇತಿ

ಕೇಂದ್ರ ಸ್ಥಾಪಿಸಿದ್ದಲ್ಲದೆ, ನೂರಾರು ಜನರ ಯಕ್ಷಗಾನ ತಂಡ ದೇಶವಿದೇಶಗಳಲ್ಲಿ ಪ್ರತಿನಿತ್ಯವೆಂಬಂತೆ ಕಲಾಪ್ರದರ್ಶನ ನೀಡುತ್ತಿವೆ. ನಿರ್ದಿಷ್ಟ ಕಾಲಾವಧಿಗೆ ನಡೆಯುವ ಮಹಾಮಸ್ತಕಾಭಿಷೇಕ, ನಡಾವಳಿಗಳು ಇಲ್ಲಿಯ ವೈಶಿಷ್ಟ್ಯವಾಗಿದೆ.

ಮೂಡಬಿದಿರೆಯ ಬಳಿ 'ಆಳ್ವಾಸ್ ನುಡಿಸಿರಿ' ಹಾಗೂ 'ಆಳ್ವಾಸ್ ನುಡಿಸಿರಿ' ಗಳು ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತಿದೆ. ಈಚಿನ ವರ್ಷಗಳಲ್ಲಿ ಆರಂಭವಾದ ಆಳ್ವಾಸ್ ನುಡಿಸಿರಿಯಲ್ಲಿ ಉಪನ್ಯಾಸ, ವಿಚಾರ ಸಂಕಿರಣ, ಮನೋರಂಜನ ಕಾರ್ಯಕ್ರಮವಿದ್ದು ಸಾಹಿತ್ಯ, ಕಲೆಯೂ ಸೇರಿದಂತೆ ಸಮಾಜಸೇವೆ, ವಿಜ್ಞಾನ ಇತ್ಯಾದಿ ವಿಭಿನ್ನ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಗುತ್ತದೆ. ಸಾಂಸ್ಕೃತಿಕ ಉತ್ಸವ 'ವಿರಾಸತ್' ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಸಂಗೀತಗಾರರು, ನೃತ್ಯಗಾರರು ಆತ್ಮೀಯವಾಗಿ ಬಂದು ನಡೆಸಿಕೊಡುವ ಕಾರ್ಯಕ್ರಮ. ದೇಶದ ವಿವಿಧ ಪ್ರಕಾರದ ಸಂಗೀತ, ನೃತ್ಯಗಳ ರಸದೌತಣ ವಾರಗಳ ಕಾಲ ನಡೆಯುತ್ತದೆ. ಉತ್ಸವ ಕಳೆದ ಇಪ್ಪತ್ತು ವರ್ಷಗಳಿಂದ ನಡೆಯುತ್ತಿದ್ದು ಈಚೆಗೆ ರಾಷ್ಟ್ರೀಯ ಮಟ್ಟದ ಕಲಾವಿದರೊಬ್ಬರನ್ನು ಸನ್ಮಾನಿಸುವ ಕಾರ್ಯಕ್ರಮ ಸೇರ್ಪಡೆಯಾಗಿದೆ.

## ಚಲನಚಿತ್ರ

ಭಾರತದಲ್ಲಿ ಚಲನಚಿತ್ರ ಇತಿಹಾಸದ ಆರಂಭದೊಂದಿಗೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಅದರ ಹೆಜ್ಜೆ ಗುರುತುಗಳು ೧೯೩೧ರಲ್ಲಿ ಕಾಣಿಸಿಕೊಂಡಿತು. ೧೯೩೧ರಲ್ಲಿ ಎಂ. ಭವನಾನಿ ಅವರು ನಿರ್ದೇಶಿಸಿದ ವಸಂತಸೇನ (ಮೃಚ್ಛಕಟಿಕ) ಚಲನಚಿತ್ರದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರು ಪ್ರಮುಖ ಪಾತ್ರ ವಹಿಸಿದ್ದರು. ಆ ವೇಳೆಗಾಗಲೇ ಪುತ್ತೂರಿನಲ್ಲಿ ನೆಲೆಸಿದ್ದ, ಶಿವರಾಮ ಕಾರಂತರು ೧೯೩೦ರಲ್ಲಿ ಚಲನಚಿತ್ರ ಕಲೆ ಕುರಿತು ಸುದೀರ್ಘವಾದ ಹಲವಾರು ಲೇಖನಗಳನ್ನು ಬರೆದು ಪ್ರಕಟಿಸಿದ್ದರು. ಪಾಶ್ಚಾತ್ಯ ದೇಶದಲ್ಲಿ ಚಲನಚಿತ್ರದ ಹುಟ್ಟು, ಬೆಳವಣಿಗೆ, ದೇಶೀಯ ಚಿತ್ರಗಳ ವಿಮರ್ಶೆಗಳಲ್ಲದೆ ತಾಂತ್ರಿಕವಾಗಿಯೂ ಅನೇಕ ಸಂಗತಿಗಳನ್ನು ತಿಳಿಸಿ ವೈಜ್ಞಾನಿಕ ಶಬ್ದಕೋಶವೊಂದನ್ನು ಸಹ ನೀಡಿದ್ದಾರೆ. ಸ್ವತಃ ಕಾರಂತರೇ ಚಲನಚಿತ್ರಕಲೆಯ ಬಗ್ಗೆ ಆಸಕ್ತಿ ವಹಿಸಿ ಜರ್ಮನ್ ಹಾಗೂ ರಷ್ಯಾಗಳಿಂದ ತಾಂತ್ರಿಕ ವಿವರಗಳನ್ನು ಪಡೆದು ಸಿನಿ ಕ್ಯಾಮರಾ ಒಂದನ್ನು ಕೊಂಡು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ತಾವೇ ಚಿತ್ರಕಥೆಯೊಂದನ್ನು ರಚಿಸಿ, ಗೆಳೆಯರ ಅಭಿನಯದ ನೆರವಿನಿಂದ ಚಿತ್ರೀಕರಣಮಾಡಿ ಮುಂಬಯಿಗೆ ಸಂಸ್ಕರಣ ಹಾಗೂ ಮುದ್ರಣಕ್ಕೆ ಕಳುಹಿಸಿದರು. ಆದರೆ ದೃಶ್ಯಗಳು ಅಸ್ಪಷ್ಟವಾಗಿದ್ದುದರಿಂದ ಮತ್ತೊಮ್ಮೆ ಚಿತ್ರಿಸಿ ಸ್ವತಃ ತಾವೇ ಮುಂಬಯಿಗೆ ಹೋಗಿ ತಾಂತ್ರಿಕ ವಿವರಗಳನ್ನು ಅಭ್ಯಸಿಸಿ ಚಿತ್ರವನ್ನು ಸಿದ್ಧಪಡಿಸಿಕೊಂಡು ಬಂದರು. ಚಿತ್ರಕ್ಕೆ 'ಡೊಮಿಂಗೊ' ಎಂದು ಹೆಸರಿಸಿ ಬೆಳ್ತಂಗಡಿಯ ಮಕ್ಕಳಕೂಟದಲ್ಲಿ ಪ್ರದರ್ಶಿಸಲು ವಿಫಲ ಪ್ರಯತ್ನ ಮಾಡಿದರು. ಮತ್ತೆ ಕಾರಂತರೇ ತಾವೇ ನಟ, ನಿರ್ದೇಶಕ, ಛಾಯಾಗ್ರಾಹಕರಾಗಿ 'ಭೂತರಾಜ್ಯ'ವೆಂಬ ಅತಿ ಮಾನುಷ ಕಲ್ಪನೆಯ ಚಿತ್ರವೊಂದನ್ನು ತೆಗೆದು, ಮುಂಬಯಿಯಲ್ಲಿ ಸಂಸ್ಕರಿಸಿ, ಮಂಗಳೂರಿನಲ್ಲಿ ಚಿತ್ರಪ್ರದರ್ಶನವನ್ನು ಮಾಡಿದರು. ಎಂಟು ಸಾವಿರ ಅಡಿ ಉದ್ದದ ಸಾಕಷ್ಟು ಉತ್ತಮ ಛಾಯಾಗ್ರಹಣವನ್ನು ಹೊಂದಿದ ಚಿತ್ರ ಕಥೆ ಅಂದಿನ ಜನಾಸಕ್ತಿಗೆ ತಕ್ಕಂತೆ ಪೌರಾಣಿಕವಲ್ಲದ್ದರಿಂದ ಹೆಚ್ಚು ಯಶಸ್ವಿಯಾಗಲಿಲ್ಲ. ನಂತರ ಪರಿಚಿತ ನೃತ್ಯ ಕಲಾವಿದರೊಬ್ಬರು ತಮ್ಮ ನೃತ್ಯ ತಂಡದೊಂದಿಗೆ ಸಂಚರಿಸುವ ವೇಳೆಯಲ್ಲಿ ಈ ಚಲನ ಚಿತ್ರವನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರು. ಆವೇಳೆಗಾಗಲೇ ವಾಕ್ ಚಿತ್ರ ಬಂದಿದ್ದು, ಈ ಉದ್ಯಮದಲ್ಲಿ ನಷ್ಟ ಅನುಭವಿಸಿದ ಕಾರಂತರು ಈ ಕ್ಷೇತ್ರದಲ್ಲಿ ಮುಂದುವರಿಯಲಿಲ್ಲ. ಆದರೆ ೧೯೭೭ರಲ್ಲಿ ಮತ್ತೆ ದಕ್ಷಿಣ ಕನ್ನಡ ಜಿಲ್ಲೆಯ ನಟಿ ಕಲ್ಪನಾ ಅವರೊಂದಿಗೆ ಸ್ಥಳೀಯ ಕಲಾವಿದರನ್ನು ಸೇರಿಸಿ 'ಮಲೆಯ ಮಕ್ಕಳು' (ಕುಡಿಯರ ಕೂಸು ಆಧಾರಿತ) ಕಪ್ಪು ಬಿಳುಪು ಚಿತ್ರವನ್ನು ತೆರೆಗೆ ತಂದರು.

೧೯೩೦ರ ದಶಕದಿಂದಲೆ ಜಿಲ್ಲೆಯ ಮತ್ತೊಬ್ಬ ಪ್ರತಿಭಾವಂತರಾದ ಪುತ್ತೂರು ಬಳಿಯ ಕೊಯ್ಲದ ವೆಂಕಟರಾವ್ ಕೊಯ್ಲೂರ್‌ಕರ್ (ಕುಮಾರ ವೆಂಕಣ್ಣ) ಅವರು 'ಕಂಠೀರವ' ಪ್ರತಿಕೆಯ ಸಂಪಾದಕರಾಗಿದ್ದು, ೧೯೩೭ರಲ್ಲಿ ಚಲನಚಿತ್ರ ರಂಗಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲೇ ಎರಡನೆಯ ಪತ್ರಿಕೆಯಾದ 'ಚಿತ್ರ'ವನ್ನು ಹೊರತಂದರು. ಕುಮಾರ ವೆಂಕಣ್ಣ ಅವರು ಇಂಗ್ಲಿಷ್ ಚಿತ್ರಗಳ ಜೊತೆ 'ಹೆರಾಲ್ಡ್' ಎಂಬ ಹೆಸರಿನಲ್ಲಿ ನೀಡುತ್ತಿದ್ದ ೪ ಪುಟಗಳ ಫೋಲ್ಡರ್ ಅನ್ನು ಕನ್ನಡದಲ್ಲಿ ೨೦ ಪುಟಗಳಿಗೆ ವಿಸ್ತರಿಸಿ ಒಂದು ಆಣೆ ಬೆಲೆಗೆ ನೀಡುತ್ತಿದ್ದರು. ಕಾಗದದ ಬೆಲೆ ಏರಿಕೆಯಿಂದಾಗಿ ಈ ಮಾಸಪತ್ರಿಕೆ ಹೆಚ್ಚು ಕಾಲ ಹೊರಬರಲಿಲ್ಲ. ಬೆಂಗಳೂರು ಮತ್ತು ಮೈಸೂರಿನಲ್ಲಿ ಪತ್ರಿಕೆ ಮತ್ತು ಸಿನಿಮಾ ಎರಡೂ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಶ್ರೀಯುತರು ಮೈಸೂರಿನಲ್ಲಿ 'ನವಜ್ಯೋತಿ' ಪತ್ರಿಕೆ ಆರಂಭವಾದಾಗ ಪ್ರಚಾರ ಅಧಿಕಾರಿಯಾಗಿ 'ವಿಶ್ವ ಕರ್ನಾಟಕ' 'ತಾಯಿ ನಾಡು' ಪತ್ರಿಕೆಗಳಲ್ಲಿ ಸಹಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಸ್ವತಂತ್ರವಾಗಿ 'ಪಾಪಚ್ಚಿ' ಪತ್ರಿಕೆಯನ್ನು ಪ್ರಕಟಿಸಿದ್ದರು. ೧೯೪೭ರ ಸುಮಾರಿನಲ್ಲಿ 'ಬಿಂದು. ಬಿ.ಎ' ಚಿತ್ರದ ನೃತ್ಯ ನಿರ್ದೇಶಕರಾಗಿ ನಾಯಕರಾಗಿಯೂ ಅಭಿನಯಿಸಿದ್ದರು. ೧೯೭೦ರಲ್ಲಿ ಕಟಕ ಪ್ರಕಾಶನದಿಂದ ಚಲನ ಚಿತ್ರೋದ್ಯಮಕ್ಕೆ ಸಂಬಂಧಿಸಿದಂತೆ 'ಕನ್ನಡ ಚಿತ್ರೋದ್ಯಮ' ಎಂಬ ಕಿರುಹೊತ್ತಿಗೆ ಪ್ರಕಟಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯು ಚಲನಚಿತ್ರ ಕ್ಷೇತ್ರಕ್ಕೆ ಅನೇಕ ಪ್ರತಿಭಾವಂತರನ್ನು ನೀಡಿದ್ದು ಅವರಲ್ಲಿ ನಟ, ನಟಿಯರು, ನಿರ್ದೇಶಕರುಗಳನ್ನು ಕುರಿತು ಇಲ್ಲಿ ಹೇಳಲಾಗಿ, ಮಂಗಳೂರಲ್ಲಿ ಜನಿಸಿ, ಹೆಚ್ಚಿನ ವಿದ್ಯಾಭ್ಯಾಸ ಮಾಡಿ, ಅಭ್ಯಾಸದ ವೇಳೆಯಲ್ಲಿ ನಾಟಕಗಳಲ್ಲಿ ಅಭಿನಯಿಸಿ, ನೃತ್ಯ ಕಲಾವಿದ ಮಾಸ್ಟರ್ ವಿಠ್ಠಲ ಶೆಟ್ಟಿ ಅವರೊಂದಿಗೆ 'ಶಿಲ್ಪಿಯ ಸ್ವಪ್ನ' ಎಂಬ ರೂಪಕದಲ್ಲಿ ಅಭಿನಯಿಸಿ ಹೆಸರು ಮಾಡಿದ ಮಿನುಗುತಾರೆ ಕಲ್ಪನಾ ಅವರು, ಪಂತಲು ಅವರ 'ಸಾಕು ಮಗಳು' ಚಿತ್ರದಿಂದ ಬೆಳ್ಳಿತೆರೆಯನ್ನು ಪ್ರವೇಶಿಸಿದರು. ಕಲ್ಪನಾರವರ ತಾರಾ ಜೀವನಕ್ಕೆ ತಿರುವು ಬಂದಿದ್ದು ಪುಟ್ಟಣ್ಣ ಕಣಗಾಲರ 'ಬೆಳ್ಳಿ ಮೋಡ' ಚಿತ್ರದಿಂದ, ಆನಂತರ ಮಣ್ಣಿನಮಗ, ಕಪ್ಪು ಬಿಳುಪು, ಶರಪಂಜರ, ಉಯ್ಯಾಲೆ, ಎರಡು ಕನಸು, ಮುಕ್ತಿ ಇತ್ಯಾದಿ ಚಿತ್ರಗಳಲ್ಲಿ ಅಭಿನಯಿಸಿದ್ದರು, ಹಾಗೂ 'ಶರಪಂಜರ' ಚಿತ್ರಗಳಲ್ಲಿನ ಅಭಿನಯಕ್ಕಾಗಿ ಮೂರುಬಾರಿ ರಾಜ್ಯ ಸರ್ಕಾರದ ಶ್ರೇಷ್ಠನಟಿ ಪ್ರಶಸ್ತಿ ಪಡೆದಿದ್ದರು.

ಬಂಟ್ವಾಳ ಸಮೀಪದ ಬಿ.ವಿ. ಕಾರಂತರು ಗುಬ್ಬಿ ನಾಟಕ ಕಂಪನಿಯಲ್ಲಿ ರಂಗ ಕಲಾವಿದರಾಗಿದ್ದು ಗಿರೀಶ್ ಕಾರ್ನಾಡರೊಂದಿಗೆ ಸೇರಿ 'ವಂಶವೃಕ್ಷ' ಚಿತ್ರವನ್ನು ನಿರ್ದೇಶಿಸುವುದರ ಮೂಲಕ ಸಿನಿಮಾ ಲೋಕವನ್ನು ಪ್ರವೇಶಿಸಿದರು. ಕಾಡು, ಹಂಸಗೀತೆ, ಫಣಿಯಮ್ಮ ಇತ್ಯಾದಿ ಚಿತ್ರಗಳಿಗೆ ಸಂಗೀತ ನಿರ್ದೇಶನ ನೀಡಿದ್ದಾರೆ. ಶಿವರಾಮಕಾರಂತರ 'ಚೋಮನದುಡಿ' ನಿರ್ದೇಶಿಸಿದ್ದು, ಕೇಂದ್ರ ಸರ್ಕಾರದ ಸ್ವರ್ಣ ಕಮಲ ಪ್ರಶಸ್ತಿ ಈ ಚಿತ್ರಕ್ಕೆ ದೊರಕಿದೆ.

ನಟರಾಗಿ ರಂಗಭೂಮಿ ಪ್ರವೇಶಿಸಿ ಭಾವಗೀತೆಗಳ ಗಾಯಕರಾಗಿ ಪ್ರಖ್ಯಾತರಾದ ಪಿ. ಕಾಳಿಂಗರಾವ್ (೧೯೧೪–೮೧) ಅವರು ಶಾಸ್ತ್ರೋಕ್ತವಾಗಿ ಸಂಗೀತಾಭ್ಯಾಸ ಮಾಡಿದ್ದರು. ರಂಗಭೂಮಿಯಲ್ಲಿ ಅಭಿನಯಿಸುತ್ತಿದ್ದಾಗ 'ಪ್ರೇಮಸಾಗರ್' ಹಿಂದಿ ಚಲನಚಿತ್ರಕ್ಕೆ ಸಂಗೀತ ನಿರ್ದೇಶನ ನೀಡಿರುವುದಲ್ಲದೆ ೧೯೪೧ರಲ್ಲಿ ನಿರ್ಮಿತವಾದ 'ವಸಂತಸೇನ' ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ನಿರ್ದೇಶನ ಮಾಡಿರುವುದರ ಜೊತೆಗೆ ಚಿತ್ರದಲ್ಲಿ ಜೈನ ಸನ್ಯಾಸಿಯ ಪಾತ್ರದಲ್ಲಿ ಅಭಿನಯಿಸಿದ್ದರು. ಆನಂತರ ಕೃಷ್ಣಲೀಲಾ, ಭಕ್ತರಾಮದಾಸ, ನಟಶೇಖರ, ಅಬ್ಬಾ ಆ ಹುಡುಗಿ ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿದ್ದಲ್ಲದೆ ಅನೇಕ ಚಲನಚಿತ್ರಗಳಲ್ಲಿ ಹಾಡಿದ್ದಾರೆ.

ಮಂಗಳೂರಿನವರಾದ ಕಿಶೋರಿ ಬಲ್ಲಾಳ ಅವರು ರಂಗ ಭೂಮಿಯಲ್ಲಿ ಅಭಿನಯಿಸಿದ್ದು, ಜಿ.ವಿ. ಅಯ್ಯರ್ ಅವರ ಕುದುರೆ ಮೊಟ್ಟೆ ಚಿತ್ರದಿಂದ ಚಿತ್ರರಂಗಕ್ಕೆ ಬಂದಿದ್ದು, ಮೈಸೂರು ಮಲ್ಲಿಗೆ, ಮುತ್ತಿನಹಾರ, ಜೀವನದಿ ಇತ್ಯಾದಿ ಕನ್ನಡ ಸಿನಿಮಾಗಳಲ್ಲೂ, ಕೆಲವು ತುಳು ಸಿನಿಮಾಗಳಲ್ಲೂ ಅಭಿನಯಿಸಿದ್ದಲ್ಲದೆ ಕಿರುತೆರೆಯಲ್ಲೂ ನಟಿಸಿದ್ದಾರೆ. ಹಾಸ್ಯನಟರಾಗಿ ೧೨೦ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಬಿ.ಗಣಪತಿ ಭಟ್ ಅವರು ಕನ್ಯಾನದಲ್ಲಿ ಜನಿಸಿದ್ದು, ಮರಾಠಿ ರಂಗ ಭೂಮಿಯಲ್ಲಿದ್ದು, ನಂತರ ಚೆನ್ನೈಗೆ ಬಂದು 'ಭೂ ಕೈಲಾಸ' ಚಲನ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ ನಳದಮಯಂತಿ, ಪ್ರೇಮದ ಪುತ್ರಿ ಇತ್ಯಾದಿ ಕನ್ನಡ ಚಿತ್ರಗಳು ಸೇರಿದಂತೆ ಪಂಚ ಭಾಷಾ ಚಿತ್ರಗಳಲ್ಲಿ ನಟಿಸಿದ್ದರು. ಮಂಗಳೂರಿನವರೇ ಆದ ಗುರುಕಿರಣ್ ಅವರು ವಾದ್ಯಗೋಷ್ಠಿಗಳಲ್ಲಿ ಹಾಡುತ್ತಿದ್ದು ಉಪೇಂದ್ರರ ಸಂಪರ್ಕದಿಂದ ಅವರ 'ಎ' ಚಿತ್ರದ ಸಂಗೀತ ನಿರ್ದೇಶಕರಾಗಿ ಸಂಗೀತದಲ್ಲಿ ಹೊಸ ಅಲೆ ಒಂದನ್ನು ತಂದರು. ಉಪೇಂದ್ರರ ಹಲವಾರು ಚಿತ್ರಗಳಿಗೆ ಹಾಡುಗಾರರಾಗಿದ್ದು ಕಿರುತೆರೆಯಲ್ಲೂ ನಟಿಸಿದ್ದಾರೆ. ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಜಯಮಾಲಾ ಕೆ.ಎನ್. ಟೈಲರ್ ಅವರ ತುಳು ಭಾಷೆಯ ಚಲನ ಚಿತ್ರ 'ಕಾಸದಾಯೆ ಕಂಡೇನೆ' ಮೂಲಕ ಚಿತ್ರರಂಗ ಪ್ರವೇಶಿಸಿ ೭೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ೧೯೯೮ರಲ್ಲಿ ಜಯಮಾಲಾ ಅವರು ತಯಾರಿಸಿದ ಗಿರೀಶ್‌ಕಾಸರವಳ್ಳಿ ನಿರ್ದೇಶನದ 'ರಾಣೀಸಾಹೇಬ' ಚಿತ್ರಕ್ಕೆ ಕೇಂದ್ರ ಸರ್ಕಾರದ ಸ್ವರ್ಣ ಕಮಲ ಪ್ರಶಸ್ತಿಯಲ್ಲದೆ ಅವರ ಅಭಿನಯಕ್ಕೆ ವಿಶೇಷ ಪ್ರಶಸ್ತಿಯೂ ಲಭ್ಯವಾಯಿತು. ಸದರಿ ಚಿತ್ರಕ್ಕೆ ರಾಜ್ಯ ಸರ್ಕಾರದ ಅತ್ಯುತ್ತಮ ಚಿತ್ರ ಪಶಸ್ತಿ ಸೇರಿದಂತೆ ಐದು ಪ್ರಶಸ್ತಿಗಳು ಲಭ್ಯವಾಯಿತು. ಈ ಚಿತ್ರ ಕೆಲವು ಅಂತರ ರಾಷ್ಟ್ರೀಯ ಚಿತ್ರೋತ್ಸವದಲ್ಲಿ ಭಾರತೀಯ ಚಲನಚಿತ್ರದ ಪ್ರತಿನಿಧಿಯಾಗಿ ಪಾಲ್ಗೊಂಡು ವಿದೇಶೀ ದೂರದರ್ಶನದಲ್ಲೂ ಪ್ರಸಾರವಾಯಿತು. ಈ ಮೊದಲೇ ಜಯಮಾಲಾ ಅವರು ನಾಲ್ಕು ಚಿತ್ರಗಳನ್ನು ನಿರ್ಮಿಸಿದ್ದು ಹೊಸ ಅಲೆ ಹಾಗೂ ವಾಣಿಜ್ಯ ಪರ ಚಿತ್ರಗಳಲ್ಲೂ ನಟಿಸಿ ಜನಪ್ರಿಯರಾಗಿದ್ದಾರೆ. ಜಯಮಾಲಾ ಅವರು ನಿರ್ಮಿಸಿದ 'ತುತ್ತೂರಿ' ಮಕ್ಕಳ ಚಲನಚಿತ್ರಕ್ಕೆ ಟೋಕಿಯೊ ವಿಶ್ವ ಪರಿಸರ ಚಲನಚಿತ್ರೋತ್ಸವದಲ್ಲಿ ಆರ್ಥ್ ವಿಷನ್ ಪ್ರಶಸ್ತಿ, ಬಾಂಗ್ಲಾದೇಶದ ಪ್ರೇಕ್ಷಕರ ಪ್ರಶಸ್ತಿ, ಕರ್ನಾಟಕ ರಾಜ್ಯದ ಅತ್ಯುತ್ತಮ ಮಕ್ಕಳ ಚಲನಚಿತ್ರ ಪ್ರಶಸ್ತಿಗಳು ಲಭ್ಯವಾಗಿವೆ. ಹೈದರಾಬಾದಿನಲ್ಲಿ ನಡೆದ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ಭಾರತದಿಂದ ಆಯ್ಕೆಯಾದ ಏಕೈಕ ಚಿತ್ರ ಇದಾಗಿತ್ತು. ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದ ಜಯಮಾಲಾ ಅವರು ಸಮಾಜ ಸೇವಕರೂ ಆಗಿದ್ದಾರೆ.

'ಮೂರು ದಾರಿಗಳು' ಚಲನಚಿತ್ರದ ನಿರ್ಮಾಪಕ ಎನ್.ಎಸ್. ದೇವಿಪ್ರಸಾದ್ ಅವರು ಸಂಪಾಜೆಯವರಾಗಿದ್ದು, ಚಿತ್ರಕ್ಕೆ ರಾಜ್ಯ ಪ್ರಶಸ್ತಿ ದೊರೆಯಿತು. ಪೆಣಂಬೂರು ಸುಬ್ರಹ್ಮಣ್ಯ ಅವರು ಪುಟ್ಟಣ್ಣ ಕಣಗಾಲರ ಧರಣಿಮಂಡಲ, ರಂಗನಾಯಕಿ, ಅಮೃತ ಘಳಿಗೆ

ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿದ್ದಾರೆ. ಪುತ್ತೂರಿನ ಜ್ಯೋತಿಯವರು ಪುಟ್ಟಣ್ಣ ಕಣಗಾಲರ 'ಅಮೃತಘಳಿಗೆ' ಮೂಲಕ ಚಿತ್ರರಂಗ ಪ್ರವೇಶಿಸಿದ್ದು ತಾಯಿಯ ಆಸೆ, ಕರುಣಾಮಯಿ ಮುಂತಾದ ಹಲವಾರು ಚಿತ್ರಗಳಲ್ಲಿ ಪೋಷಕ ಪಾತ್ರ ನಿರ್ವಹಿಸಿದ್ದು, ಕಿರುತೆರೆಯಲ್ಲೂ ನಟಿಸಿದ್ದಾರೆ.

ಮಂಗಳೂರಿನ ಎಸ್.ಎಸ್. ಡೇವಿಡ್ ಅವರು 'ಮಹಾಯುದ್ಧ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ ಸೋಲಿಲ್ಲದ ಸರದಾರ, ಓಂ ನಮಃ ಶಿವಾಯ ಮುಂತಾದ ಚಿತ್ರಗಳಲ್ಲಿ ನಟಿಸಿದ್ದಾರೆ. ೩೦ಕ್ಕೂ ಹೆಚ್ಚು ಚಿತ್ರಗಳಿಗೆ ಕಥೆ, ಚಿತ್ರಕಥೆ ಬರೆದಿದ್ದು, ಜೈಹಿಂದ್ ಚಿತ್ರ ನಿರ್ದೇಶಿಸಿದ್ದಾರೆ. ಹೆಸರಾಂತ ನಿರ್ದೇಶಕರಾಗಿದ್ದ ಆರೂರು ಪಟ್ಟಾಭಿಯವರು ಮೊದಲಿಗೆ ಮಲೆಯಾಳಂ ಚಿತ್ರರಂಗದಲ್ಲಿದ್ದು, ೧೯೫೭ರಲ್ಲಿ 'ಭಕ್ತ ವಿಜಯ' ಕನ್ನಡ ಚಿತ್ರವನ್ನು ನಿರ್ದೇಶಿಸಿದರು. ಹಲವಾರು ತುಳು ಚಿತ್ರವನ್ನು ನಿರ್ದೇಶಿಸಿದ ಪಟ್ಟಾಭಿಯವರು ಶುಕ್ರದೆಸೆ, ಸರ್ವಜ್ಞ ಮೂರ್ತಿ, ನಟ ಸಾರ್ವಭೌಮ (ರಾಜ್‌ಕುಮಾರ್ ಅಭಿನಯಿಸಿದ ಚಲನಚಿತ್ರಗಳ ತುಣುಕುಗಳ ಸಂಕಲನ) ಸೇರಿದಂತೆ ಹದಿನಾಲ್ಕು ಕನ್ನಡ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕೋಕಿಲ ಮೋಹನ್ ಅಭಿನಯದ ಬಗೆಗಿನ ಆಸಕ್ತಿಯಿಂದಾಗಿ ಬಿ.ವಿ. ಕಾರಂತರ ಬೆನಕ ತಂಡದಲ್ಲಿ ಒಬ್ಬರಾಗಿ ರಂಗಭೂಮಿ ಮತ್ತು ಚಲನ ಚಿತ್ರರಂಗದ ನಂಟನ್ನು ಪಡೆದರು. ಪ್ರಥಮ ಚಿತ್ರ 'ಕೋಕಿಲಾ' ದಿಂದ ಜನಮನ್ನಣೆ ಪಡೆದರೂ ಮಲೆಯಾಳಂ ತಮಿಳು, ತೆಲುಗು ಚಿತ್ರಗಳಲ್ಲಿ ನಾಯಕನಟರಾಗಿ ಅಭಿನಯಿಸಿ ಪ್ರಸಿದ್ಧರಾದರು. ಗಾಳಿಮಾತು, ಮುನಿಯನ ಮಾದರಿ, ಹಾವಾದ ಹೂವು, ಸಾಕಿದ ಸರ್ಪ, ನಮ್ಮಮ್ಮನ ಸೊಸೆ, ಹೆಣ್ಣಿನ ಸೇಡು, ಅಪರಿಚಿತ ಮುಂತಾದ ಯಶಸ್ವೀ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ವೃತ್ತಿಯಿಂದ ಹಾಡುಗಾರರಾದ ರಮೇಶ್ ಚಂದ್ರ ಕಾಸರಗೋಡಿನವರು. ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ ಪ್ರಕಾರಗಳಲ್ಲಿ ತರಬೇತಿ ಪಡೆದು ಅನುರಾಗ ಸಂಗಮ, ಇಂದ್ರ ಧನುಷ್, ಟುವ್ವಿ ಟುವ್ವಿ, ಮುನ್ನುಡಿ, ಚಂದ್ರೋದಯ ಮುಂತಾದ ೫೦ಕ್ಕೂ ಹೆಚ್ಚು ಚಿತ್ರಗಳಿಗೆ ಹಿನ್ನೆಲೆಗಾಯನ ನೀಡಿದ್ದಾರೆ. 'ಅನುರಾಗ ಸಂಗಮ' ಮತ್ತು 'ಮುನ್ನುಡಿ' ಚಿತ್ರಗಳ ಹಿನ್ನೆಲೆಗಾಯನಕ್ಕೆ ರಾಜ್ಯಪ್ರಶಸ್ತಿ ಪಡೆದಿದ್ದಾರೆ. ಪುತ್ತೂರಿನ ರಮೇಶ್‌ರಾವ್ 'ಲವ್ ಟ್ರೈನಿಂಗ್' ಚಿತ್ರಕ್ಕೆ ಗೀತ ರಚನೆ ಮಾಡುವ ಮೂಲಕ ಚಿತ್ರರಂಗಕ್ಕೆ ಪ್ರವೇಶಿಸಿದರು. ಗೀತ ರಚನೆ, ಸಂಭಾಷಣೆ, ಅಭಿನಯದೊಂದಿಗೆ ಸಹನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ೨೦ಕ್ಕೂ ಹೆಚ್ಚು ಚಿತ್ರಗಳಿಗೆ ಗೀತರಚನೆ ಮಾಡಿರುವ ರಮೇಶ್‌ರಾವ್ ಮರಣಮೃದಂಗ, ಓ ಮಲ್ಲಿಗೆ, ತುತ್ತಾ–ಮುತ್ತಾ, ಏಕೆ ೪೭ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಬೆಳ್ತಂಗಡಿಯ ಲೀಲಾಕಿರಣ್ ಅವರು ಹಲವಾರು ವರ್ಷಗಳು ರಾಜ್‌ಕುಮಾರ್ ಮುಂತಾದ ಶ್ರೇಷ್ಠ ನಟರೊಂದಿಗೆ ನಾಯಕಿಯಾಗಿ ಅಭಿನಯಿಸಿ ಲೀಲಾವತಿ ಎಂಬ ಹೆಸರಿನಿಂದ ಕನ್ನಡ ಚಿತ್ರಲೋಕದ ಖ್ಯಾತ ತಾರೆಯಾಗಿ ಪ್ರಸಿದ್ಧರಾದವರು. ೧೯೪೯ರಲ್ಲಿ 'ನಾಗಕನ್ನಿಕಾ' ಚಿತ್ರದಿಂದ ರಂಗಪ್ರವೇಶಿಸಿ, ೧೯೫೮ರಲ್ಲಿ 'ಮಾಂಗಲ್ಯಯೋಗ'ದಲ್ಲಿ ನಾಯಕಿಯಾಗಿ ಮುಂದೆ ರಣಧೀರ ಕಂಠೀರವ, ರಾಣಿ ಹೊನ್ನಮ್ಮ ಚಿತ್ರಗಳಲ್ಲಿ ರಾಜಕುಮಾರ್ ಅವರೊಂದಿಗೆ ೪೯ ಚಿತ್ರಗಳಲ್ಲಿ ಅಭಿನಯಿಸಿ ಜನಪ್ರಿಯ ಜೋಡಿಯಾದರು. ೭೦ರ ದಶಕದ ನಂತರ ಪೋಷಕ ಪಾತ್ರದ ನಟಿಯಾಗಿ ರಂಗಭೂಮಿ ಪ್ರವೇಶಿಸಿ, ಗುಬ್ಬಿ ಕಂಪನಿಯಲ್ಲಿ ನೆಲೆ ನಿಂತರು. ೧೯೭೫ರಲ್ಲಿ ಬಿ.ವಿ. ಕಾರಂತರ ಚೋಮನ ದುಡಿಯಲ್ಲಿ ಅಭಿನಯಿಸಿದ್ದು ಮೊದಲ ಚಿತ್ರಕ್ಕೆ ಅಭಿನಯಕ್ಕಾಗಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪ್ರಶಸ್ತಿಗಳನ್ನು ಪಡೆದರು. ಇದಲ್ಲದೆ ಮೈತ್ರಿ, ದಂಗೆ ಎದ್ದ ಮಕ್ಕಳು, ಕಳಸಾಪುರದ ಹುಡುಗರು ಮುಂತಾದ ಚಿತ್ರಗಳಲ್ಲೂ, ಕಿರುತೆರೆಯಲ್ಲೂ ಅಭಿನಯಿಸಿದ್ದರು. ಮಂಗಳೂರಿನವರಾದ ವಿನೋದ್ ಆಳ್ವ ಅವರು ಮುಂಬಯಿಯಲ್ಲಿ ರೂಪದರ್ಶಿಯಾಗಿದ್ದು ಅಬ್ಬಾಯಿ ನಾಯ್ಡು ಅವರ ನಮ್ಮ ಊರ ದೇವತೆ, ತವರುಮನೆ ಇತ್ಯಾದಿಗಳಲ್ಲಿ ಅಭಿನಯಿಸಿ, ವಿನೋದ್‌ಕುಮಾರ್ ಹೆಸರಿನಿಂದ ತೆಲುಗು ಚಿತ್ರರಂಗಕ್ಕೆ ಹೋಗಿ ಮತ್ತೆ ಕನ್ನಡ ಸಿನಿಮಾ ರಂಗಕ್ಕೆ ಮರಳಿದರು. ಲೀಲಾವತಿಯವರು ಇತ್ತೀಚೆಗೆ ವಿನೋದ್ ನಾಯಕತ್ವದಲ್ಲಿ 'ಕನ್ನಡದ ಕಂದ' ಚಿತ್ರ ನಿರ್ಮಿಸಿದ್ದಾರೆ.

ಸಾಹಿತ್ಯ ಮತ್ತು ಸಹಕಾರಿ ಕ್ಷೇತ್ರಗಳಲ್ಲಿ ಹೆಸರು ಮಾಡಿದ ವಿಶುಕುಮಾರ್ ಅವರು ತುಳು ನಾಡಿನ ವೀರರಾದ ಕೋಟಿ ಚೆನ್ನಯ್ಯ ಕುರಿತು ತುಳುವಿನಲ್ಲಿ ಪ್ರಪ್ರಥಮವಾಗಿ ಚಲನಚಿತ್ರವೊಂದನ್ನು ನಿರ್ದೇಶಿಸಿದರು. ಕನ್ನಡದಲ್ಲಿ ಕರಾವಳಿ, ಅಖಂಡ ಬ್ರಹ್ಮಚಾರಿಗಳು ಹಾಗೂ ಮದರ್ ಚಿತ್ರಗಳಿಗೆ ಕಥೆ, ಚಿತ್ರಕಥೆ, ನಿರ್ದೇಶನ ಮಾಡುವುದರೊಂದಿಗೆ ಅದರಲ್ಲಿ ನಟಿಸಿದ್ದಾರೆ. ಕೋಟಿ ಚೆನ್ನಯ್ಯ ಚಿತ್ರಕ್ಕೆ ೧೯೭೩–೭೪ರಲ್ಲಿ ರಾಜ್ಯ ಸರ್ಕಾರದ ನಾಲ್ಕನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ದೊರೆಯಿತು. ವಿಶುಕುಮಾರ್ ಅವರು ತಮ್ಮ ಕೊನೆಯ ಚಿತ್ರ 'ಪ್ರಜೆಗಳು ಮತ್ತು ಪ್ರಭುಗಳು' ನಿರ್ದೇಶಿಸುತ್ತಿದ್ದಾಗ ನಿಧನರಾಗಿದ್ದು ನಂತರ ಆ ಚಿತ್ರವನ್ನು ಭೀಮಾನಾಗರಾಜ್ ಮತ್ತು ವಿಜಯಲಕ್ಷ್ಮಿ ವಿಶುಕುಮಾರ್ ಅವರು ಪೂರ್ಣಗೊಳಿಸಿದರು.

ಮಂಗಳೂರಿನವರೇ ಆದ ಶಶಿಧರ ಅಡಪ ಅವರು ಚಲನಚಿತ್ರ ಕಲಾನಿರ್ದೇಶಕರಾಗಿ ನಾಗಮಂಡಲ, ಕಾನೂರು ಹೆಗ್ಗಡತಿ ಮುಂತಾದ ಚಲನಚಿತ್ರಗಳಿಗೂ, ನಾಗಾಭರಣರ ಕಿರುತೆರೆಯ ಧಾರಾವಾಹಿ 'ಸ್ಟೋನ್ ಬಾಯ್' ಗೂ ಹಾಗೂ ಎರಡು ಫ್ರೆಂಚ್, ಎರಡು

ಹಿಂದಿ ಚಿತ್ರಗಳಿಗೆ ಕಲಾ ನಿರ್ದೇಶನ ಮಾಡಿದ್ದಾರೆ. ರಾಜ್ಯ ನಾಟಕ ಅಕಾಡೆಮಿ ಪುರಸ್ಕೃತರಾದ ಅಡಪ ಅವರಿಗೆ ನಾಗಮಂಡಲ ಹಾಗೂ ಕಾನೂರು ಹೆಗ್ಗಡತಿ ಚಿತ್ರಗಳ ಕಲಾ ನಿರ್ದೇಶನಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ ಬಂದಿದೆ. ಹೇರಳ ಕಟ್ಟೆಯವರಾದ ಶ್ಯಾಮ ಸುಂದರ ಶೆಟ್ಟಿ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಕತ್ತಿವರಸೆ, ಕುದುರೆ ಸವಾರಿ ಕಲಿತಿದ್ದು ಪ್ರಾರಂಭದಲ್ಲಿ ಸಾಹಸ ಪಾತ್ರಗಳಿಗೆ ಡ್ಯೂಪ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಮಿಳು ಚಿತ್ರವೊಂದರಲ್ಲಿ ನಾಯಕರೂ ಆಗಿದ್ದರು. ಪರಭಾಷಾ ಚಿತ್ರಗಳಿಗೆ ಸಾಹಸ ನಿರ್ದೇಶನ ಮಾಡುವ ಮೂಲಕ ರಂಗ ಪ್ರವೇಶಿಸಿ ಕನ್ನಡದಲ್ಲಿ ರಣಧೀರ ಕಂಠೀರವ, ಕಿತ್ತೂರು ರಾಣಿ ಚೆನ್ನಮ್ಮ, ವಿಜಯನಗರದ ವೀರಪುತ್ರ, ನಾಗರಹಾವು, ಇತ್ಯಾದಿ ಅನೇಕ ಚಿತ್ರಗಳಿಗೆ ಸಾಹಸ ನಿರ್ದೇಶನ ಮಾಡಿದ್ದಾರೆ.

ಮುಂಬಯಿ ರಂಗಭೂಮಿಯಲ್ಲಿ ನಾಲ್ಕು ದಶಕಗಳ ಕಾಲ ತಮ್ಮನ್ನು ತೊಡಗಿಸಿಕೊಂಡಿದ್ದ ಸದಾನಂದ ಸುವರ್ಣ ಅವರು ಗಿರೀಶ್ ಕಾಸರವಳ್ಳಿಯ ಪ್ರಥಮ ನಿರ್ದೇಶಿತ ಚಿತ್ರ 'ಘಟಶ್ರಾದ್ಧ' ನಿರ್ಮಿಸಿದ್ದು, ೧೯೭೭–೭೮ರ ಸಾಲಿನಲ್ಲಿ ಚಿತ್ರಕ್ಕೆ ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಪ್ರಶಸ್ತಿಗಳು ದೊರಕಿವೆ. ನಂತರ ತಬರನ ಕಥೆಗೆ ಕಾರ್ಯ ನಿರ್ವಾಹಕ ನಿರ್ದೇಶಕರಾಗಿದ್ದು, ಮುಂದೆ 'ಕುಬಿ ಮತ್ತು ಇಯಾಲ' ಚಿತ್ರವನ್ನು ಸ್ವತಃವಾಗಿ ನಿರ್ದೇಶಿಸಿದರು. ಆ ಚಿತ್ರ ರಾಜ್ಯ ಪ್ರಶಸ್ತಿ ಪಡೆದುದಲ್ಲದೆ ಅಂತರ ರಾಷ್ಟ್ರೀಯ ಪನೋರಮಾಕ್ಕೂ ಆಯ್ಕೆ ಆಯಿತು. ಮಂಗಳೂರಿನವರೇ ಆದ ಸುಂದರನಾಥ ಸುವರ್ಣ ಅವರು ಛಾಯಾಚಿತ್ರ ಗ್ರಾಹಕರಾಗಿದ್ದು, ಮೊದಲಿಗೆ ಚಲನ ಚಿತ್ರರಂಗದಲ್ಲಿ ಸ್ಟಿಲ್ ಫೋಟೋಗ್ರಾಫರ್ ಆಗಿ ನಂತರ 'ಅಪರೂಪದ ಅತಿಥಿಗಳು' ಚಿತ್ರದಿಂದ ಸ್ವತಂತ್ರ ಛಾಯಾ ಚಿತ್ರ ಗ್ರಾಹಕರಾದರು. 'ಆರಂಭ' ಚಿತ್ರವನ್ನು ನಿರ್ಮಿಸಿ ನಿರ್ದೇಶಿಸಿದ್ದಲ್ಲದೆ, ಅಗ್ನಿಪರ್ವ, ಕಿಲಾಡಿತಾತ ಇತ್ಯಾದಿ ಚಿತ್ರಗಳನ್ನು ನಿರ್ದೇಶಿಸಿದ್ದು, 'ಹಳ್ಳಿಯಾದರೇನು ಶಿವ' ನಿರ್ಮಿಸಿದ್ದಾರೆ. ಯಕ್ಷಗಾನದಲ್ಲಿ ವಿಶೇಷ ಪರಿಶ್ರಮ ಹೊಂದಿದ್ದು. ಆರೂರು ಪಟ್ಟಾಭಿಯವರ 'ನಾದಸುರಭಿ' ಚಿತ್ರದ ಮೂಲಕ ರಂಗಕ್ಕೆ ಬಂದ ಸುನಿಲ್ ಅವರು ಮಂಗಳೂರಿನವರು. ಅನಂತರ ಶೃತಿ, ಬೆಳ್ಳಿ ಕಾಲುಂಗರ, ಕಲಿಯುಗ ಸೀತೆ, ಮಾಲಾಶ್ರೀ ಮಾಮಾಶ್ರೀ ಇತ್ಯಾದಿ ಅನೇಕ ಚಿತ್ರಗಳಲ್ಲಿ ಅಭಿನಯಿಸಿದ್ದರು. ಬಾಳಿಗ ಸಹೋದರರು ಮಯೂರ, ಸಿಡಿದೆದ್ದ ಸೋದರರು, ಸೇಡಿನ ಸಂಚು ನಿರ್ಮಿಸಿದ್ದಾರೆ. ಉಜಿರೆ, ಕೊಣಾಜೆಗಳಲ್ಲಿ ಚಲನಚಿತ್ರ ಸಮುದಾಯ ಕ್ಲಬ್‌ಗಳು ಇದ್ದವು.

ಮಂಗಳೂರಿನ ರಾಧಿಕಾ ಅವರು ನೀಲಮೇಘಶ್ಯಾಮ, ತವರಿಗೆ ಬಾ ತಂಗಿ, ಅಣ್ಣತಂಗಿ: ದುರ್ಗಾ ಶೆಟ್ಟಿ ಅವರು ಮೀಸೆ ಚಿಗುರಿದಾಗ, ಶುಕ್ಲಾಂಭರಧರಂ: ಸಂಗೀತಾ ಶೆಟ್ಟಿ ಅವರು ನಿನಗೆ ನಾನು ನನಗೆ ನೀನು: ಸಾಕ್ಷಿ ಶಿವಾನಂದ ಅವರು ಸೈನಿಕ, ಜೋಡಿ ಸಿಂಹಗಳು; ಪುತ್ತೂರಿನ ಪ್ರದೀಪ್ ನಾಯಕ್ ಅವರು ಫೋಟೋಗ್ರಾಫರ್; ಇಳಾ ವಿಟ್ಲ ಅವರು ಓ ಪ್ರಿಯತಮ, ಶಂಭು ಮಾಯೆಗಳಲ್ಲೂ ಪ್ರಕಾಶ್ ರೈ ಅವರು ಪ್ರೀತಿ, ಪ್ರೇಮ, ಪ್ರಣಯದಲ್ಲೂ; ಭವ್ಯ ಶ್ರೀ ರೈ ಅವರು ಕುಂಕುಮ ಭಾಗ್ಯದಲ್ಲೂ; ಆಶಿತಾ ಅವರು ಗ್ರೀನ್ ಸಿಗ್ನಲ್, ಹಾರ್ಟ್‌ಬೀಟ್ಸ್ ಚಿತ್ರದಲ್ಲೂ; ರೇಖಾ ಚಂದ್ರಶೇಖರ್ ಅವರು ಜನುಮದಾತ, ಟುವ್ವಿ, ಟುವ್ವಿ ಗಳಲ್ಲೂ; ಶಿವಧ್ವಜ ಅವರು 'ಹಲೋ, ಶಂಭು'ಗಳಲ್ಲೂ ನಟಿಸಿದ್ದಾರೆ.

ಪುತ್ತೂರಿನ ಸಂತೋಷ ರೈ ಅವರು ಮಠ, ಅಮೃತಧಾರೆ ಇತ್ಯಾದಿಗಳ ಛಾಯಾಚಿತ್ರ ಗ್ರಾಹಕರಾಗಿದ್ದು '೭ ಓಕ್ಲಾಕ್' ನಿರ್ದೇಶಿಸಿದ್ದಾರೆ. ನಂದರಾಜ ಶೆಟ್ಟಿ 'ಶುಭಂ' ಚಿತ್ರವನ್ನೂ, ಪ್ರವೀಣ್ ನಾಯಕ್ ಅವರು ೨ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಸುಳ್ಯದ ರಘುನಾಥರೈ ಅವರು ಶುಕ್ಲಾಂಭರಧರಂ ನ ನಿರ್ಮಾಪಕರಾಗಿದ್ದಾರೆ. ಪ್ರದೀಪ್ ಪುತ್ತೂರ್ ಅವರು ಚಕ್ರ, ಅರ್ಧಸತ್ಯಗಳ ನಿರ್ಮಾಪಕರಾಗಿದ್ದಾರೆ.

ಬೊಳುವಾರು ಮಹಮದ್ ಕುಂಞ ಅವರ ಕಥೆ ಆಧಾರಿಸಿದ 'ಮುನ್ನುಡಿ' ಚಲನಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂದಿದೆಯಲ್ಲದೆ, ಚಿತ್ರ ಕತೆಗಾಗಿ ಅವರಿಗೆ ರಾಜ್ಯಪ್ರಶಸ್ತಿಯೂ ಬಂದಿದೆ. ಕಾಸರಗೋಡು ಚಿನ್ನಾ ಅವರು ಪುಣೆಯ ಆದರ್ಶ ಫಿಲಂ ಇನ್ಸಿಟಿಟ್ಯೂಟ್ನಲ್ಲಿ ಶಿಕ್ಷಣ ಪಡೆದು, ಸುವರ್ಣ ಪದಕ ವಿಜೇತರಾಗಿದ್ದು, ಪ್ರಾಯ ಪ್ರಾಯ ಪ್ರಾಯ, ಘಟಿಯಮ್ಮ, ಕೆಂಡದಮಳೆ, ಇತ್ಯಾದಿಗಳಲ್ಲಿ ನಟಿಸಿದ್ದಾರೆ. ಚಿತ್ರಕಲಾವಿದ ಸುದೇಶ್ ಮಹಾನ್ ಅವರು ಹಲವಾರು ಚಿತ್ರಗಳಿಗೆ ಕಲಾ ನಿರ್ದೇಶನ ಮಾಡಿದ್ದು ಹಿಂದಿಯ 'ತೆನಾಲಿರಾಮ', ದೂರದರ್ಶನ ಧಾರಾವಾಹಿಯ ಕಲಾ ನಿರ್ದೇಶನಕ್ಕೆ ಅಪ್ ಟ್ರೋನ್ ಪ್ರಶಸ್ತಿ ಬಂದಿರುತ್ತದೆ.

ಜಿಲ್ಲೆಯ ಸಾಹಿತಿಗಳ ಹಲವಾರು ಕಾದಂಬರಿಗಳು ಚಲನಚಿತ್ರವಾಗಿದೆ. ವಿಶುಕುಮಾರ್ ಅವರ ಕರಾವಳಿ, ಮದರ್, ಹಂಸಕ್ಷೀರ; ಕೆ.ಟಿ.ಗಟ್ಟಿಯವರ ಅರಗಿನ ಮನೆ, ಅಶ್ರುತಗಾನ, ಮೃತ್ಯೋಮ ಅಮೃತಂಗಮಯ ಇತ್ಯಾದಿ; ಪದ್ಮಾಶೆಣೈ ಅವರ ಅನಿಶ್ಚಿತ; ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿಯತೀರದಲ್ಲಿ ; ಗಂಗಾಪಾದೇಕಲ್ ಅವರ ಸೆರೆಯಿಂದ ಹೊರಗೆ; ಎ.ಪಿ.ಮಾಲತಿ ಅವರ ಅಶೋಕ ಇತ್ಯಾದಿ ೧೫ ಕಾದಂಬರಿಗಳು; ಶಿವರಾಮ ಕಾರಂತರ ಚೋಮನದುಡಿ, ಕುಡಿಯರ ಕೂಸು(ಮಲೆಯ ಮಕ್ಕಳು), ಚಿಗುರಿದ ಕನಸು ಕಾದಂಬರಿಗಳು ಚಲನಚಿತ್ರಗಳಾಗಿವೆ.

ಸಾರಾ ಅಬೂಬಕ್ಕರ್ ಅವರ ಚಂದ್ರಗಿರಿಯ ತೀರದಲ್ಲಿ, ಶಿವರಾಮಕಾರಂತರ ಚೋಮನದುಡಿ ಹಾಗೂ ಚಿಗುರಿದ ಕನಸುಗಳಿಗೆ ಪ್ರಶಸ್ತಿಗಳು ಬಂದಿವೆ. ಬಾಲಕೃಷ್ಣ ಎಡನೀರು ಅವರು ಎದುರು ಮನೆ ಮೀನಾ, ಅಂತರ್ಗಾಮಿ, ಪ್ರೀತಿಯೆಂಬ ಮಾಯೆ, ಇತ್ಯಾದಿ ದೂರದರ್ಶನ ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮುಂಬಯಿಗೆ ಕಾರ್‍ಯಾರ್ಥವಾಗಿ ಅನೇಕರು ಹೋಗಿ ನೆಲೆಸಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಹಾಗೆ ಹೋದವರಲ್ಲಿ ಚಲನಚಿತ್ರ ಕ್ಷೇತ್ರದವರು ಗಣನೀಯವಾಗಿದ್ದಾರೆ. ಗುರುದತ್ ಅವರು ಮೂಲತಃ ಜಿಲ್ಲೆಯವರಾಗಿದ್ದು ಹಿಂದಿ ಚಿತ್ರಗಳಲ್ಲಿ ನಟಿಸಿದ್ದಲ್ಲದೆ, ನಿರ್ದೇಶಕ, ನಿರ್ಮಾಪಕರೂ ಆಗಿದ್ದರು. ಚೌದ್‌ವೀಂಕ ಚಾಂದನಿ, ಸಾಹೇಬ್ ಬೇಬಿ ಔರ್‌ಗುಲಾಂ ಇತ್ಯಾದಿಗಳು ಹೆಸರು ತಂದುಕೊಟ್ಟವು. ಮಂಗಳೂರಿನಲ್ಲಿ ಜನಿಸಿದ ಐಶ್ವರ್ಯರೈ ಅವರು ಮುಂಬಯಿಗೆ ಹೋಗಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದರಾದರೂ ಸೌಂದರ್ಯಸ್ಪರ್ಧೆಗಳಲ್ಲಿ ಬಾಗವಹಿಸಿ ಭುವನಸುಂದರಿ (ಮಿಸ್‌ವರ್ಲ್ಡ್) ಯಾಗಿ ಗೌರವ ಪುರಸ್ಕಾರ ಪಡೆದರು. ಆ ನಂತರ ತಮಿಳು ಚಿತ್ರಗಳ ಮೂಲಕ ಸಿನಿಮಾ ಕ್ಷೇತ್ರಕ್ಕೆ ಬಂದು ಓರ್ ಪ್ಯಾರ್ ಹೋಗಯಾ, ಹಮ್ ದಿಲ್ ದೆ ಚುಕೆ, ತಾಳ್, ದೇವಿದಾಸ್, ಉಮರಾಜಾನ್ ಇವೇ ಮುಂತಾದ ಮುಖ್ಯವಾಗಿ ಹಿಂದಿ ಹಾಗೂ ಇಂಗ್ಲಿಷ್, ತೆಲುಗು, ಬಂಗಾಳಿ ಭಾಷೆಗಳ ೩೦ ಚಿತ್ರಗಳಲ್ಲಿ ನಟಿಸಿದ್ದಾರೆ. ರೈ ಅವರಿಗೆ ಉತ್ತಮ ನಟನೆಗಾಗಿ ಎರಡು ಬಾರಿ ಫಿಲಂಫೇರ್ ಪ್ರಶಸ್ತಿ, ಐಐಎಫ್‌ಎ ಪ್ರಶಸ್ತಿ, ಸ್ಟಾರ್ ಸ್ಕ್ರೀನ್ ಪ್ರಶಸ್ತಿ, ಝೀ ಸಿನಿ ಪ್ರಶಸ್ತಿ, ರಾಜೀವ್ ಗಾಂಧಿ ಪ್ರಶಸ್ತಿಗಳು ದೊರೆತಿವೆ. ಶಿಲ್ಪಶೆಟ್ಟಿಯವರು ಯುಗ್, ಆಗ್, ಬಾಜಿಗಾರ್ ಇತ್ಯಾದಿ ೩೫ ಹಿಂದಿ ಚಿತ್ರಗಳಲ್ಲೂ, ರವಿಚಂದ್ರನ್ ಅವರ 'ಪ್ರೀತಿಸೋದ್ ತಪ್ಪಾ' ಮುಂತಾದ ಕನ್ನಡ ಚಿತ್ರಗಳಲ್ಲಿ ನಟಿಸಿದ್ದು, ನಟನೆಗಾಗಿ ಫಿಲಂ ಫೇರ್ ಪ್ರಶಸ್ತಿ ಬಂದಿದೆ. ಶಮಿತಾಶೆಟ್ಟಿ 'ಮಹಬತ್ ಹೋ ಗಯಾ ತುಮ್ ಸೆ ಇತ್ಯಾದಿ ಹತ್ತು ಚಿತ್ರಗಳಲ್ಲೂ, ಸ್ನೇಹ ಉಲ್ಲಾಳ್ ಅವರು ಲಕ್ಕೀ, ಆರ್ಯಸ್‌ಗಳಲ್ಲೂ ಸಾಹಸ ನಿರ್ದೇಶಕ ರಾಮಶೆಟ್ಟಿಯವರ ಮಗ ಸುನೀಲ್ ಶೆಟ್ಟಿ ಅವರು ಬಲ್ವಾನ್, ವಾರ್ಡರ್, ಹಲ್ ಚಲ್, ದಸ್ ಉಮರಾಜಾನ್ ಇತ್ಯಾದಿ ತೊಂಭತ್ತು ಚಿತ್ರಗಳಲ್ಲಿ ನಟಿಸಿದ್ದಾರೆ. ಸಂಧ್ಯಾಶೆಟ್ಟಿ ಅವರು 'ಮೀನಾಕ್ಷಿ', ಅಮೃತಾರಾವ್ ಅವರು 'ಇಷ್ಕ್'ಗಳಲ್ಲೂ ನಟಿಸಿದ್ದಾರೆ. ಸೂರತ್ಕಲ್ ಗಣೇಶ್ ಹೆಗಡೆಯವರು ನೃತ್ಯ ಸಂಯೋಜಕರಾಗಿದ್ದು ಲಗಾನ್, ಪ್ಯಾರ್ ತುನೆ ಕ್ಯಾ ಕಿಯಾ, ದಸ್ ಇತ್ಯಾದಿ ಚಿತ್ರಗಳಿಗೆ ನೃತ್ಯ ಸಂಯೋಜನೆ ಮಾಡಿದ್ದಾರೆ. ಪರಂಗಿ ಪೇಟೆಯ ಹರೀಶ್‌ಶೆಟ್ಟಿ ಅವರು ಸಾಹಸ ನಿರ್ದೇಶಕರಾಗಿದ್ದು, ದಾಯಿರಾ, ಚಾಂದನಿ ಬಾತ್ ಹಿಂದಿ ಸಿನಿಮಾಗಳು ಹಾಗೂ 'ನಿರ್ಬಂಧ' ಕನ್ನಡ ಸಿನಿಮಾಕ್ಕೆ ಸಾಹಸ ನಿರ್ದೇಶನ ಮಾಡಿದ್ದಾರೆ. ಕಾಸರಗೋಡಿನ ಸುರೇಶ್ ಪೈ ಅವರ ಹಿಪ್ ಹಿಪ್ ಹುರ್ರೆ, ಸೀ ಹಾಕ್ಸ್, ಓಂಕಾರ್ ಬೀಟ್ಸ್ ಇತ್ಯಾದಿ ಸಂಕಲನಕ್ಕೆ ರಾಷ್ಟ್ರೀಯ ಪ್ರಶಸ್ತಿ ಬಂದಿದೆ.

### ಕೊಂಕಣಿ ಚಲನಚಿತ್ರ

ಕೊಂಕಣಿ ಭಾಷೆಯು ಮುಂಬಯಿಯಿಂದ ಹಿಡಿದು ಕಾಸರಗೋಡು ಜಿಲ್ಲೆಯವರೆಗೆ ಕರಾವಳಿಯಲ್ಲಿ ಆಡುವ ಪ್ರಮುಖ ಭಾಷೆಯಾಗಿದ್ದು ಮೂರು ರಾಜ್ಯಗಳ ವ್ಯಾಪ್ತಿಗೆ ಒಳಪಟ್ಟಿದೆ. ಹಾಗಾಗಿ ಬರೆಯಲು ಇಂಗ್ಲಿಷ್ ಹಿಂದಿಯೂ ಸೇರಿದಂತೆ ಮರಾಠಿ ಹಾಗೂ ಕನ್ನಡ ಲಿಪಿಗಳನ್ನು ಬಳಸಲಾಗುತ್ತಿದೆಯಾದರೂ ಆಡುವ ಭಾಷೆಯ ದೃಷ್ಟಿಯಿಂದ ಹೆಚ್ಚಿನ ವ್ಯತ್ಯಾಸವಿಲ್ಲ. ಭಾಷೆ ರಾಜ್ಯವ್ಯಾಪ್ತಿಯನ್ನು ಮೀರಿದ್ದರಿಂದ ಚಲನಚಿತ್ರ ಉದ್ಯಮ ಆರಂಭದಿಂದಲೇ ಎಂದರೆ ಐವತ್ತು ವರ್ಷಗಳಿಗೂ ಹಿಂದೆಯೇ ಕೊಂಕಣಿ ಭಾಷೆಯಲ್ಲಿ ಚಲನಚಿತ್ರಗಳು ತಯಾರಾದವು. ಒಂದು ಸಮೀಕ್ಷೆಯಂತೆ ೧೯೫೪ ರಿಂದ ೨೦೦೦ರವರೆಗೆ ಇಪ್ಪತ್ತು ಚಲನಚಿತ್ರಗಳು ನಿರ್ಮಾಣಗೊಂಡಂತೆ ತಿಳಿದುಬರುತ್ತದೆ. ಆದರೆ ಹೆಚ್ಚಿನವು ಮುಂಬಯಿಯಲ್ಲಿ ತಯಾರಾದವು. ಬೆಂಗಳೂರಲ್ಲಿ ತಯಾರಾದ 'ಜೀವಿತ್ ಆಮ್ಚೆ ಆಶೆಂ', 'ಭುಂಯಾ ರಾತ್ಲೊ ಮನಿಸ್' ರಾಜ್ಯದಲ್ಲದೆ ಹೊರರಾಜ್ಯಗಳಲ್ಲೂ ತೆರೆಕಂಡವು. ಮಂಗಳೂರಿನಲ್ಲಿ ತಯಾರಾದ 'ಭೊಗ್ಲಾಂಟ್' ಕೊಂಕಣಿ ಭಾಷೆಯಲ್ಲಿ ತಯಾರಾದ ಹತ್ತನೇ ಚಿತ್ರ. ಕೊಂಕಣಿ ಚಿತ್ರ 'ಸುಜಾನ್ನ' ಕನ್ನಡಕ್ಕೂ ಪರಿವರ್ತನೆಗೊಂಡಿತ್ತು. ಮಂಗಳೂರು ಪರಿಸರದಲ್ಲಿ ಚಿತ್ರೀಕರಣಗೊಂಡ 'ತಪಸ್ವಿನಿ' ವರ್ಣಚಿತ್ರ (೧೯೭೭)ದ ನಿರ್ಮಾಪಕರು ಕೆ.ಜಿ.ನಾಯಕ್. ಚಿತ್ರದಲ್ಲಿ ರೇಖಾಮಾವಿನಕುರ್ವೆ, ಬಿ.ಪಿ.ಬಾಳಿಗ, ಎಸ್.ಆರ್.ಬಾಲಗೋಪಾಲ್ ಅಭಿನಯಿಸಿದ್ದರು. ತುಳು ಚಿತ್ರ ನಿರ್ಮಾಪಕರಾಗಿದ್ದ ರಿಚರ್ಡ್ ಕ್ಯಾಸ್ಟಲಿನೋ ತಾವೇ ನಿರ್ದೇಶಿಸಿದ್ದ ಕೊಂಕಣಿ ಚಿತ್ರ 'ಬೊಗ್ಸಾಣೆ'ಯಲ್ಲಿ (೧೯೮೬) ಹೊರರಾಜ್ಯ ಹಾಗೂ ಅಂಡಮಾನ್ ಪ್ರದೇಶದಲ್ಲೂ ಚಿತ್ರೀಕರಣ ನಡೆಸಿದ್ದರು. ವಿಲ್ಸಿರೆ ಬಿಂಬಸ್ ಸಂಗೀತ, ಅಶೋಕ ಕಶ್ಯಪ್ ಛಾಯಾಚಿತ್ರಗ್ರಾಹಕರಾಗಿದ್ದು ನಂದಿನಿಸಿಂಗ್, ಪ್ರಮೋದ್ ಚಕ್ರವರ್ತಿ ಮುಂತಾದವರು ಅಭಿನಯಿಸಿದ್ದು ಚಿತ್ರನಿರ್ಮಾಪಕರಿಗೆ ಪ್ರಾದೇಶಿಕ ಚಲನಚಿತ್ರಕ್ಕಾಗಿ ಪ್ರಶಸ್ತಿ ಲಭ್ಯವಾಯಿತು. ಚಿತ್ರ ದೂರದರ್ಶನದ ರಾಷ್ಟ್ರೀಯ ವಾಹಿನಿಯಲ್ಲಿ ಪ್ರಸಾರವಾಯಿತು. ೨೦೦೦ದಲ್ಲಿ ಬಿಡುಗಡೆ ಆದ ಚಿತ್ರ 'ಜೀವಾನಾಂಚೋ ಖೆಳ್'ನ ನಿರ್ದೇಶಕರು ಎ.ಎಸ್.ಮಹದೇವರಾಜ್‌ರವರಾಗಿದ್ದು, ನವಕುಮಾರ್, ಚಂದ್ರೇಶ್, ಮಾಲಾ ಮುಂತಾದವರು

ಅಭಿನಯಿಸಿದ್ದಾರೆ. ಟಿ.ರವಿರಾಜ್ ಸಂಗೀತ ನಿರ್ದೇಶಕರಾಗಿದ್ದು, ಪುತ್ತೂರು ನರಸಿಂಹನಾಯಕ್, ಸುನೀತ, ಕೆ.ಸದಾಶಿವ ಶೆಣೈ ಅವರುಗಳು ಹಾಡಿದ್ದಾರೆ

**ತುಳು ಚಲನಚಿತ್ರ**

ತುಳು ಭಾಷೆಯು ಉಡುಪಿ, ದಕ್ಷಿಣ ಕನ್ನಡ ಹಾಗೂ ಕಾಸರಗೋಡು ಜಿಲ್ಲೆಯ ಆಡುಭಾಷೆಯಾಗಿದ್ದು, ತುಳು ಚಲನಚಿತ್ರಗಳು ಈ ಪ್ರದೇಶಕ್ಕೇ ಹೆಚ್ಚು ಸೀಮಿತವಾಗಿದೆ. ೧೯೭೧ರಲ್ಲಿ ಪ್ರಥಮ ತುಳುಚಿತ್ರ 'ಎನ್ನತಂಗಡಿ' ತೆರೆ ಕಂಡಿದ್ದು ೨೦೦೦ದ ವೇಳೆಗೆ ಮೂವತ್ತು ಚಿತ್ರಗಳು ಪ್ರದರ್ಶನಗೊಂಡಿದ್ದವು. 'ಎನ್ನತಂಗಡಿ' ಚಿತ್ರದ ನಿರ್ಮಾಪಕ, ನಿರ್ದೇಶಕ ಹಾಗೂ ನಟರಾದ ರಾಜನ್ ಅವರಲ್ಲದೆ ಪಂಡರಿಬಾಯಿ, ಆನಂದಶೇಖರ್, ಲೋಕಯ್ಯಶೆಟ್ಟಿ ಮುಂತಾದವರು ಅಭಿನಯಿಸಿದ್ದರು. ಇದಕ್ಕಿಂತ ಮೊದಲೇ ಆರಂಭವಾಗಿದ್ದ, ತುಳು ರಂಗಭೂಮಿಯಲ್ಲಿ ಪ್ರಸಿದ್ಧರಾಗಿದ್ದ ಕೆ.ಎನ್.ಟೈಲರ್ ನಿರ್ದೇಶಿಸಿದ್ದ 'ದಾರೆದ ಬುಡೆದಿ' ಆನಂತರ ಬಿಡುಗಡೆಯಾಯಿತು. ಆರೂರು ಪಟ್ಟಾಭಿ ಅವರು ನಿರ್ದೇಶಿಸಿದ್ದು, ಟೈಲರ್ ಅವರಲ್ಲದೆ ಲೀಲಾವತಿ, ಸೋಮಶೇಖರ್, ನಾರಾಯಣಪುತ್ರನ್, ರಾಮಚಂದ್ರ ಕೋಳ್ಕೂರು ಮುಂತಾದವರು ಅಭಿನಯಿಸಿದ್ದರು. ಉಡುಪಿಯ ಸೂರ್ಯನಾರಾಯಣ ಚಡಗರ ಕಾದಂಬರಿ ಆಧಾರಿತ 'ಪಗೆತ ಪುಗೆ' ಚಿತ್ರವನ್ನು (೧೯೭೨) ಆರೂರು ಪಟ್ಟಾಭಿಯವರೇ ನಿರ್ದೇಶಿಸಿದ್ದು, ಟೈಲರ್, ಆನಂದಗಾಣಿಗ, ಲೀಲಾವತಿ ಮತ್ತಿತರರು ಅಭಿನಯಸಿದ್ದರು. ಅದೇ ವರ್ಷ ರಮಾನಂದಚೂರ್ಯರ ನಾಟಕ ಆಧಾರಿತ 'ಬಿಸತ್ತಿಬಾಬು' ಆರೂರು ಪಟ್ಟಾಭಿ ನಿರ್ದೇಶಿಸಿದ್ದು ಸಂಭಾಷಣೆ, ಚಿತ್ರಕಥೆ, ಗೀತರಚನೆಗಳೊಂದಿಗೆ ಟೈಲರ್ ಅವರು ಲೀಲಾವತಿ ಮತ್ತಿತರರೊಂದಿಗೆ ನಟನೆಯನ್ನು ಮಾಡಿದ್ದರು. ಚಿತ್ರಕ್ಕೆ ರಾಜ್ಯ ಸರ್ಕಾರದಿಂದ ತೃತೀಯ ಬಹುಮಾನ ಲಭ್ಯವಾಯಿತು. ಮುಂದೆ ೧೯೭೩ರಲ್ಲಿ ವಾಸುದೇವನ್ ನಿರ್ದೇಶಿತ, ಎಂ.ಸೀತಾರಾಮಕುಲಾಲ್‌ರ ನಾಟಕ ಆಧಾರಿತ 'ಉಡಲ್ದ ತುಡರ್' ಬಿಡುಗಡೆಯಾಯಿತು.

ಚಿತ್ರರಂಗದ ಇನ್ನೊಂದು ಹೊಸ ಅಧ್ಯಾಯ ಆರಂಭವಾದುದೆಂದರೆ ಸಾಹಿತಿ ವಿಶುಕುಮಾರ್ ಅವರು ೧೯೭೩ರಲ್ಲಿ ನಿರ್ದೇಶಿಸಿದ 'ಕೋಟಿ ಚೆನ್ನಯ್ಯ' ದಿಂದ. ಮುದ್ದು ಸುವರ್ಣ ನಿರ್ಮಾಪಕರಾಗಿದ್ದು ಸುಭಾಷ್, ವಾಮನ್, ಭೋಜರಾಜ್, ಕಲ್ಪನಾ, ಲೋಕಯ್ಯಶೆಟ್ಟಿ, ಆನಂದಗಾಣಿಗ, ಕುದ್ಯಾಡಿ ವಿಶ್ವನಾಥರೈ, ಬಿ.ಟಿ.ಎಸ್.ಕುಲಾಲ್, ಮಂಜುನಾಥ, ಶಾಲಿವಾಹನ ಮುಂತಾದವರು ಅಭಿನಯಿಸಿದ್ದರು. ಸಾಹಸ ಚಿತ್ರದ ನಿರ್ದೇಶಕ ಫೈಟರ್ ಶೆಟ್ಟಿ ಹಿಂದಿ ಚಿತ್ರರಂಗದಲ್ಲಿ ಜನಪ್ರಿಯರಾಗಿದ್ದರು. ಅಮೃತ ಸೋಮೇಶ್ವರ, ವಿವೇಕರೈ, ವಿಶುಕುಮಾರ್ ಅವರು ಗೀತ ರಚನೆ ಮಾಡಿದ್ದು ಖ್ಯಾತ ಗಾಯಕರು ಹಾಡಿದ್ದರು. ಚಿತ್ರ ೧೨೩ ದಿನಗಳು ಓಡಿದ್ದು ದಾಖಲೆಯಾಗಿದ್ದಲ್ಲದೆ ರಾಜ್ಯ ಸರ್ಕಾರದಿಂದ ನಾಲ್ಕನೇ ಪ್ರಶಸ್ತಿ ಪಡೆಯಿತು. ಈ ಅವಧಿಯಲ್ಲಿ ಕೆ.ಎನ್.ಟೈಲರ್ ಅವರು 'ಕಾಸ್‌ದಾಯೆಕಂಡೆನೆ', 'ಯಾನ್ ಸನ್ಯಾಸಿ ಆಪೆ' ನಿರ್ಮಿಸಿದ್ದು ಜಿಲ್ಲೆಯವರೇ ಆದ ಜಯಮಾಲ ಅವರು ಚಿತ್ರರಂಗಕ್ಕೆ ಈ ಚಿತ್ರಗಳ ಮೂಲಕ ಪ್ರವೇಶಿಸಿದರು. ಮರುವರ್ಷ ೧೯೭೪ರಲ್ಲಿ ಟೈಲರ್ ಅವರು ಪ್ರಥಮವಾಗಿ ನಿರ್ದೇಶಿಸಿದ 'ಏರ್ ಮಲ್ತಿನ ತಪ್ಪು' ಹಾಗೂ ಅರೂರು ಪಟ್ಟಾಭಿ ನಿರ್ದೇಶಿಸಿದ ಸಂಜೀವ ದಂಡಕೇರಿಯವರ ನಾಟಕ 'ಬಯ್ಯಮಲ್ಲಿಗೆ' ಬಿಡುಗಡೆಯಾಯಿತು.

ಮೊದಲ ನಾಲ್ಕು ವರ್ಷಗಳಲ್ಲಿ ಹತ್ತು ತುಳು ಚಿತ್ರ ತೆರೆಕಂಡಿದ್ದು ಮುಂದೆ ಎರಡು ವರ್ಷಗಳ ಬಿಡುವಿನ ನಂತರ 'ಸಾವಿರದೊಡತಿ ಸಾವಿತ್ರಿ' ಹಾಗೂ 'ಇಂಕ್ವಿಲಾಬ್ ಜಿಂದಾಬಾದ್', ಟೈಲರ್ ನಿರ್ದೇಶಿತ ಜನಪದ ಕಥೆ 'ತುಳುನಾಡಸಿರಿ', ಆರೂರು ಪಟ್ಟಾಭಿ ನಿರ್ದೇಶಿತ 'ಬೊಳ್ಳಿದೂಟ', ಸುಂದರಕೃಷ್ಣಅರಸ್ ನಿರ್ದೇಶಿಸಿದ 'ಸಂಗಮ ಸಾಕ್ಷಿಗಳು' ತೆರೆಕಂಡವು. ತುಳು ಭಾಷೆಯ ಪ್ರಥಮ ವರ್ಣಚಿತ್ರ ಆರೂರು ಪಟ್ಟಾಭಿ ಅವರೇ ನಿರ್ದೇಶಿಸಿದ 'ಕರಿಮಣಿ ಕಟ್ಟೊಂದಿ ಕಂಡನೆ' ೧೯೭೮ ರಲ್ಲಿ ಬಿಡುಗಡೆಯಾಯಿತು. ನಂತರ ಚಂದ್ರಶೇಖರ್ ಕುಕ್ಕಿಕಟ್ಟೆ ನಿರ್ದೇಶಿಸಿದ 'ನ್ಯಾಯೋಗಾದ್ ಎನ್ನಬದ್‌ಕ್' ಹೊರಬಂದಿದ್ದು ಮುಂದೆ ಆರೂರು ಪಟ್ಟಾಭಿಯವರೇ ನಿರ್ದೇಶಿಸಿದ, ಸರ್ಕಾರದಿಂದ ವಿಶೇಷ ಪ್ರಶಸ್ತಿ ಪಡೆದ 'ಭಾಗ್ಯವಂತೆದಿ', 'ಬದ್ಕೆರೆ ಬುಡ್ಲೆ' (೧೯೮೩). 'ಸತ್ಯ ಓಲುಂಡು' (೧೯೯೦) ಬಿಡುಗಡೆಯಾದುವು. ಈ ಚಿತ್ರಗಳಲ್ಲಿ ಒಂದಲ್ಲ ಒಂದಕ್ಕೆ ಟೈಲರ್ ಟಿ.ಎ. ಶ್ರೀನಿವಾಸ್, ಸದಾಶಿವ ಸಾಲಿಯಾನ್, ರಾಮಣ್ಣರೈ, ದೇವದಾಸ್ ಕಾಪಿಕಾಡ್, ಎಸ್.ಎಸ್.ಪುತ್ರನ್ ಮುಂತಾದವರು ಹಲವಾರು ರೀತಿಯಲ್ಲಿ ನೆರವಾಗಿದ್ದರು. ಈ ಮಧ್ಯೆ ಸಾಹಸ ಸಂಯೋಜಕ ರಾಮ್‌ಶೆಟ್ಟಿ ೧೯೮೪ರಲ್ಲಿ ನಿರ್ಮಿಸಿ ನಿರ್ದೇಶಿಸಿದ ಚಿತ್ರ 'ದಾರೆದ ಸೀರೆ'ಗೆ ಸಂಭಾಷಣೆ ಹಾಗೂ ಗೀತೆಗಳನ್ನು ಮಚ್ಚೇಂದ್ರನಾಥ್ ಪಾಂಡೇಶ್ವರ್ ರಚಿಸಿದ್ದರು. ಕೋಡ್ಲು ರಾಮಕೃಷ್ಣ ಅವರು 'ರಾತ್ರಿ ಪಗಲ್' ನಿರ್ದೇಶಿಸಿದ್ದರು. ೧೯೮೭ರಲ್ಲಿ ಸದಾಶಿವ ಸಾಲಿಯಾನ್ ನಿರ್ಮಿಸಿದ 'ಪಟ್ಟಾಯಿ ಪಿಲಿ' ಚಿತ್ರದ ನಿರ್ದೇಶಕರು ರವಿ ಅಂಚನ್‌ರವರು. ಮರುವರ್ಷ ಶ್ರೀಕಾಂತ್ ನಿರ್ಮಿಸಿದ ದಾಮೋದರ ಬಂಗೇರ ನಿರ್ದೇಶಿಸಿದ 'ಬದ್ಕೊಂಜಿ ಕಬಿತೆ' ತೆರೆ ಕಂಡಿದ್ದು ಗುರುಕಿರಣ್, ಕುಮುದಾ ಬಾರ್ಕೂರು ಅಭಿನಯಿಸಿದ್ದರು. ೧೯೯೧ರಲ್ಲಿ ಕೋಡ್ಲು ರಾಮಕೃಷ್ಣ ನಿರ್ದೇಶಿಸಿದ, ಅಚ್ಯುತ ಕಲ್ಲಾವು ಸಂಭಾಷಣೆ ಬರೆದ, 'ರಾತ್ರಿ ಪಗಲ್' ಹೊರಬಂದಿತು.

ಈ ಹಿಂದೆ ತುಳು ಹಾಗೂ ಕೊಂಕಣಿ ಚಿತ್ರಗಳನ್ನು ನಿರ್ದೇಶಿಸಿ, ನಿರ್ಮಿಸಿದ್ದ ರಿಚರ್ಡ್ ಕ್ಯಾಸ್ಟಲಿನೋ ಭಾರಿ ವೆಚ್ಚದಲ್ಲಿ 'ಬಂಗಾರ್ ಪಟ್ಲೇರ್' ವರ್ಣಚಿತ್ರ ೧೯೯೩ರಲ್ಲಿ ಹೊರತಂದಿದ್ದು ರಾಜ್ಯ, ರಾಷ್ಟ್ರ ಪ್ರಶಸ್ತಿ ಗಳಿಸಿದ್ದಲ್ಲದೆ ಕೋಲ್ಕತಾದಲ್ಲಿ ನಡೆದ ಅಂತರ ರಾಷ್ಟ್ರೀಯ ಚಿತ್ರೋತ್ಸವದಲ್ಲೂ ಪ್ರದರ್ಶನಗೊಂಡಿತು. ನಾರಾಯಣಶೆಟ್ಟಿ ಅವರ ನಾಟಕ 'ಸತ್ಯದ ಬತ್ತಲೆ' ಆಧರಿಸಿ ರಾಮಣ್ಣ ರೈ ಸಂಭಾಷಣೆ ಬರೆದ ಸುಂದರನಾಥ ಸುವರ್ಣರ ಛಾಯಾಚಿತ್ರಗ್ರಹಣ ಹೊಂದಿದ ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ಸುಧಾರಾಣಿ, ವಾಮನರಾಜ್, ಸರೋಜಿನಿಶೆಟ್ಟಿ ಕಾಸರಗೋಡು ಚಿನ್ನಾ, ರಾಮಣ್ಣರೈ, ರೋಹಿದಾಸ್ ಕದ್ರಿ ಅವರು ನಟಿಸಿದ್ದರು. ಇದರ ಯಶಸ್ಸಿನಿಂದಾಗಿ ರಿಚರ್ಡ್ ಕ್ಯಾಸ್ಟಲಿನೊ ವಿಶೇಷ ದಾಖಲೆ ನಿರ್ಮಿಸುವ ಸಲುವಾಗಿ 'ಸೆಪ್ಟೆಂಬರ್ ೮' ಎಂಬ ಚಿತ್ರವನ್ನು ವಿವಿಧ ಸ್ಥಳಗಳಲ್ಲಿ ಬೇರೆಬೇರೆಯಾಗಿ ಕೇವಲ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಇಡೀ ಚಿತ್ರ ನಿರ್ಮಿಸಿದರು. ಶಿವರಾಮ ಕಾರಂತರೂ ಸೇರಿದಂತೆ ಶ್ರುತಿ, ಸುನೀಲ್, ಉಮಾಶ್ರೀ, ಗೀತಾ, ರಮೇಶ್ ಭಟ್, ರೋಹಿದಾಸ್ ಕದ್ರಿ, ಆನಂದ ಬೋಳಾರ ಅಭಿನಯಿಸಿದ್ದರು. ಮುಂದಿನ ಚಿತ್ರಗಳೆಂದರೆ ಟಿ.ಎ.ಶ್ರೀನಿವಾಸ್ ನಿರ್ಮಿಸಿದ ಗಣೇಶಪ್ರಿಯ ನಿರ್ದೇಶಿಸಿದ 'ಬದ್‌ಕ್‌ದ ಬಿಲೆ', ಎ.ಆರ್.ಅಶ್ವತ್ಥನಾರಾಯಣರಾವ್ ನಿರ್ಮಿಸಿದ, ರಾಜ್ ಬಲ್ಲಾಳ್ ನಿರ್ದೇಶಿಸಿದ 'ಕಾಲ'; ರಘುನಾಥ ರೈ ನಿರ್ಮಿಸಿದ ಕೃಷ್ಣಪ್ಪ ಉಪ್ಪೂರು ನಿರ್ದೇಶಿಸಿದ ಪ್ರಶಸ್ತಿ ವಿಜೇತ ಚಿತ್ರ 'ಮಾರಿಬಲೆ', ಪ್ರೇಮನಾಥರೈ ನಿರ್ಮಿಸಿದ, ಪ್ರಭಾಕರ ಬ್ರಹ್ಮಾವರ ನಿರ್ದೇಶಿಸಿದ ೧೯೯೮–೯೯ನೇ ಸಾಲಿನ ಅತ್ಯುತ್ತಮ ಭಾಷಾ ಚಿತ್ರವೆಂದು ರಾಜ್ಯ ಚಲನಚಿತ್ರ ಪ್ರಶಸ್ತಿ ಪಡೆದ 'ಒಂತೆ ಅಡ್ಜಸ್ಟ್ ಮಲ್ಪಿ' ಮುಂತಾದವುಗಳು. ಈ ಮಧ್ಯೆ ಪ.ಗೋಪಾಲಕೃಷ್ಣ ಅವರು ನಿರ್ಮಿಸಿ ನಿರ್ದೇಶಿಸಿದ ಚಿತ್ರ 'ಸರ್ಪ ಸಂಕಲೆ'ಯಲ್ಲಿ ರಘು, ಬಾಲಕೃಷ್ಣ ಕದ್ರಿ, ರೋಹಿದಾಸ್ ಕದ್ರಿ, ಅಭಿನಯಿಸಿದಂತೆ ತಿಳಿದುಬರುತ್ತದೆ. ಹೊಸ ಸಹಸ್ರಮಾನದಲ್ಲಿ ತೆರೆಕಂಡ ಕೋಡ್ಲು ರಾಮಕೃಷ್ಣ ನಿರ್ದೇಶಿತ ಚಿತ್ರ 'ತುಡರ್' ರಾಜ್ಯ ಸರ್ಕಾರದ ಉತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಪಡೆಯಿತು.

ಪವನ ಶೆಟ್ಟಿ, ಮೋಹನ್ ಉಳ್ಳಾಲ್, ಗಗನ ಶೆಟ್ಟಿ ಅವರುಗಳು ತುಳು ಸಿನಿಮಾ ನಿರ್ಮಾಪಕರಾಗಿದ್ದು, 'ಯುಂಚಿನೊ' 'ಅವಸ್ಥೆ' ಇತ್ಯಾದಿ ಚಿತ್ರಗಳನ್ನು ನಿರ್ಮಿಸಿದ್ದಾರೆ. ಪ್ರಾರ್ಥನಾ ಕ್ರಿಯೇಷನ್ ಅವರ ಈಚಿನ ವರ್ಣಚಿತ್ರ 'ಕೋಟಿ ಚೆನ್ನಯ್ಯ' ಚಿತ್ರಕ್ಕೆ ಧನರಾಜ ನಿರ್ಮಾಪಕರಾಗಿದ್ದು ಆನಂದ್ ಪಿ.ರಾಜು ನಿರ್ದೇಶಕರಾಗಿದ್ದರು. ಬಾಲಕೃಷ್ಣ ಶೇಖರ ಕೋಟ್ಯಾನ್, ವಿನಯ ಪ್ರಸಾದ್, ನೀತು ಭಾರದ್ವಾಜ್, ಪ್ರಕಾಶ್‌ಪಡುಬಿದರಿ, ಚೇತನ ರೈ, ಗುಣ ಸುವರ್ಣರವರುಗಳು ನಟಿಸಿದ್ದಾರೆ.

ಪಿ.ಎಸ್. ರಾಮಚಂದ್ರ ನಿರ್ದೇಶಿಸಿದ ತುಳು ಚಿತ್ರ 'ಸುದ್ದ' ಅಮೆರಿಕೆಯ ಆಸ್ಟಿನ್ ಏಷ್ಯಾ ಚಲನಚಿತ್ರೋತ್ಸವಕ್ಕೆ (೨೦೦೮) ಆಯ್ಕೆಯಾಗಿದೆ. ಇದೇ ಡಿಜಿಟಲ್ ಚಿತ್ರ ಓಷಿಯಾನ್ ಸಿನಿಫ್ಯಾನ್ ಚಲನಚಿತ್ರೋತ್ಸವದ ಏಷ್ಯಾ ವಿಭಾಗದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾಗಿತ್ತು.

ವಿಜಯಕುಮಾರ್ ಕೊಡಿಯಲ್ ಬೈಲ್ ಅವರ 'ಬರುವುದ ಬಂಡಸಾಲೆ' ನಿರ್ಮಾಣದ ಹಂತದಲ್ಲಿದೆ. ಈಚೆಗೆ ಮಂಗಳೂರಿನಲ್ಲಿ ಟಿ.ಎ. ಶ್ರೀನಿವಾಸ್ ಅವರು "ತುಳು ಚಲನಚಿತ್ರೋತ್ಸವ" ಆಚರಿಸಿ ತೆರೆಕಂಡ ಆಯ್ದ ಚಿತ್ರಗಳ ಪ್ರದರ್ಶನ ಕೈಗೊಂಡಿದ್ದರು.

ಸೀಮಿತ ಮಾರುಕಟ್ಟೆಯ ಪ್ರಾದೇಶಿಕವಾಗಿಯಷ್ಟೆ ಪ್ರೇಕ್ಷಕರನ್ನು ಉಳ್ಳ ತುಳು, ಕೊಂಕಣಿ ಚಿತ್ರಗಳು ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಿಕೊಂಡಿತು. ಸ್ಥಳೀಯವಾಗಿ ಆಡುಭಾಷಿಕರಲ್ಲದವರೂ ಚಿತ್ರನಿರ್ಮಾಣದ ವಿವಿಧ ಹಂತಗಳಲ್ಲಿ ಆಸಕ್ತಿವಹಿಸಿ ತಮ್ಮ ಕಾಣಿಕೆ ನೀಡಿದರು. ಆರೂರು ಪಟ್ಟಾಭಿಯಂತಹವರು ಕನ್ನಡ ಚಿತ್ರರಂಗಕ್ಕೂ ಮೇರು ಕಾಣಿಕೆ ನೀಡಿದರು. ಅನೇಕ ಸ್ಥಳೀಯ ನಟನಟಿಯರು ಕನ್ನಡವೂ ಸೇರಿದಂತೆ ಅನ್ಯ ಭಾಷೆಗಳಲ್ಲೂ ಹೆಸರು ಮಾಡಿದರು. ಮಂಗಳೂರಿನ 'ಕೃಷ್ಣ' ಚಲನಚಿತ್ರ' ಮಂದಿರದಲ್ಲಿ ೧೯೩೨ರಲ್ಲಿ ಮೊದಲ ಬಾರಿಗೆ 'ಬಿಲ್ವ ಮಂಗಲ' ಚಿತ್ರ ಪ್ರದರ್ಶನ ನಡೆಯಿತು. ಪ್ರಸ್ತುತ ಜಿಲ್ಲೆಯಲ್ಲಿರುವ ಚಿತ್ರ ಮಂದಿರಗಳೆಂದರೆ

| ತಾಲೂಕು | ಖಾಯಂ | ಅರೆಖಾಯಂ | ತತ್ಕಾಲಿಕ |
|---|---|---|---|
| ಬಂಟ್ವಾಳ | – | 1 | 1 |
| ಬೆಳ್ತಂಗಡಿ | – | 2 | – |
| ಮಂಗಳೂರು | 11 | 1 | – |
| ಪುತ್ತೂರು | 2 | 2 | – |
| ಸುಳ್ಯ | 1 | – | – |

(ಸಂಚಾರಿ ಚಿತ್ರಮಂದಿರಗಳು ಜಿಲ್ಲೆಯಲ್ಲಿ ಇಲ್ಲ)

ಇದುವರೆಗಿನ ಸಾಹಿತ್ಯ–ಸಂಸ್ಕೃತಿ ಕುರಿತ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಸಾಹಿತಿ ಕಲಾವಿದರುಗಳನ್ನು ಹೆಸರಿಸಿದೆ. ಇವರುಗಳಲ್ಲಿ ಆಯಾ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಇನ್ನು ಅನೇಕರಿದ್ದಾರೆ. ಲಭ್ಯ ದಾಖಲೆಗಳು, ಪರಿವೀಕ್ಷಣೆ ಕೈಗೊಂಡಿದ್ದು ಕಾಲಮಿತಿಯಲ್ಲಿ ರಚಿಸಲಾಗಿದ್ದು ಅಧ್ಯಾಯ ಇನ್ನಷ್ಟು ಪರಿಪೂರ್ಣತೆಗೊಳಿಸಲು ಅವಕಾಶವಿದೆ.

## ಅಧ್ಯಾಯ–೧೪ ಸಾಹಿತ್ಯ ಮತ್ತು ಸಂಸ್ಕೃತಿ (ಆಯ್ದ ಆಕರಗಳು)

**ಸಾಹಿತ್ಯ**

–ಪಾದೇಕಲ್ಲು ವಿಷ್ಣುಭಟ್ಟ, 'ಪ್ರಾಚೀನ ಕನ್ನಡ ಸಾಹಿತ್ಯ' ಪೊಲಿ, ೨೦೦೦, ಮಂಗಳೂರು.
–ಆರ್. ನರಸಿಂಹಾಚಾರ್ , 'ಕರ್ನಾಟಕ ಕವಿಚರಿತ್ರೆ' ಭಾಗ–೨, ೨ನೇ ಮುದ್ರಣ, ಬೆಂಗಳೂರು.
–ವೈ. ಉಮಾನಾಥ ಶೆಣೈ, 'ಕನ್ನಡ ಸಾಹಿತ್ಯಕ್ಕೆ ಮೂಡುಬಿದರೆ ಲೇಖಕರ ಕೊಡುಗೆ' ೨೦೦೩, ಬೆಂಗಳೂರು.
–ವೈ. ಉಮಾನಾಥ ಶೆಣೈ, 'ಲೀಲಾಶುಕ', ಇತಿಹಾಸದಲ್ಲಿ ಮರೆತುಹೋದ ಕನ್ನಡದ ಪುಟಗಳು, ಬೆಂಗಳೂರು ೨೦೦೪.
–ಎಚ್. ಎಲ್. ನಾಗೇಗೌಡ, 'ಪ್ರವಾಸಿ ಕಂಡ ಇಂಡಿಯಾ', ಸಂಪುಟ–೧, ೧೯೬೪: ಸಂಪುಟ–೨, ೧೯೬೬: ಸಂಪುಟ–೩, ೧೯೬೯, ಮೈಸೂರು.
–ಸೂರ್ಯನಾಥ ಕಾಮತ್, 'ಕರ್ನಾಟಕದಲ್ಲಿ ಬಾಸೆಲ್ ಮಿಶನ್ ಸಾಧನೆ', 'ಇತಿಹಾಸ ದರ್ಶನ' ಸಂಪುಟ–೧, ಸಂಚಿಕೆ–೧
–೧೯೮೬,ಬೆಂಗಳೂರು.
–ಶ್ರೀನಿವಾಸ ಹಾವನೂರ 'ಹೊಸಗನ್ನಡದ ಅರುಣೋದಯ' , ೧೯೭೪, ಮೈಸೂರು.
–ಶ್ರೀನಿವಾಸ ಹಾವನೂರ, 'ದಕ್ಷಿಣ ಕನ್ನಡದ ಸಾರಸ್ವತ ಪರಂಪರೆ', ೨೦೦೪, ಬೆಂಗಳೂರು.
–ಕೆ. ಕುಶಾಲಪ್ಪಗೌಡ ಮತ್ತು ಕೆ. ಚಿನ್ನಪ್ಪಗೌಡ 'ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯತ್ತುಗಳು', ೧೯೮೩, ಉಜಿರೆ.
–ಕೆ.ಜಿ. ವಸಂತ ಮಾಧವ, 'ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸಕ್ಕೆ ವಿದೇಶಿ ಆಕರಗಳು–೧೮೦೦ರವರೆಗೆ, 'ರಜತಶ್ರೀ', ೧೯೯೦–೯೧, ಉಜಿರೆ
–ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ೧೯೬೯, ಮೈಸೂರು.
–ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ, 'ಸಾರ್ಥಕ', ೧೯೯೫, ಮದರಾಸು.
–ದೊಡ್ಡರಂಗೇಗೌಡ, 'ಕರಾವಳಿ ಕವಿಗಳು', ೨೦೦೩, ಬೆಂಗಳೂರು.
–೩೧ನೇಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, 'ತೆಂಕನಾಡು', ೧೯೪೭ ಕಾಸರಗೋಡು.
–ಪಿ.ಕೆ. ನಾರಾಯಣ, 'ದಕ್ಷಿಣ ಕನ್ನಡದಲ್ಲಿ ಕನ್ನಡದ ಬೆಳವಣಿಗೆ', ೧೯೬೩, ಮಂಗಳೂರು.
–ಸೂರ್ಯನಾರಾಯಣ ಚಡಗ (ಸಂ), 'ದಕ್ಷಿಣ ಕನ್ನಡದ ಬರಹಗಾರರು', ೧೯೬೭, ಬೆಂಗಳೂರು.
–ಸುಬ್ರಾಯ ಚೊಕ್ಕಾಡಿ ಮತ್ತು ಮುರಳೀಧರ ಉಪಾಧ್ಯ ಹಿರಿಯಡ್ಕ (ಸಂ), 'ದಕ್ಷಿಣ ಕನ್ನಡ ಕಾವ್ಯ, ೧೯೭೭, ಕಾಂತಾವರ.
–ಎಸ್. ವಿ. ಶ್ರೀನಿವಾಸರಾವ್. 'ಕನ್ನಡ ಸಾಹಿತಿ ದರ್ಶನ', ೧೯೯೯,ಬೆಂಗಳೂರು.
–ಅಖಿಲ ಭಾರತ ೬೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, 'ಪೊನ್ನಕಂಠಿ', ೧೯೯೭, ಮಂಗಳೂರು.
–ಬಿ. ಜನಾರ್ದನ ಭಟ್(ಸಂ), 'ದಕ್ಷಿಣ ಕನ್ನಡದ ಶತಮಾನದ ಕಾವ್ಯ' , ೨೦೦೧, ಕಾಂತಾವರ
–ಬಿ. ಜನಾರ್ದನ ಭಟ್ (ಸಂ), 'ದಕ್ಷಿಣ ಕನ್ನಡದ ಶತಮಾನದ ಕತೆಗಳು', ಪುತ್ತೂರು.
–ನೀಲಾ ಪಾಟೀಲ (ಸಂ), 'ಕನ್ನಡ ಸಾಹಿತಿಗಳ ಮಾಹಿತಿ', ೨೦೦೩, ಬೆಂಗಳೂರು.
–'ಗಡಿನಾಡಿನ ಕಿಡಿ' ಆಕರ ಗ್ರಂಥ, ೧೯೯೦, ಕಾಸರಗೋಡು.
–ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ದಶಮಾನೋತ್ಸವದ ನೆನಪಿನ ಸಂಪುಟ, 'ಕವಳಿಗೆ', ೨೦೦೬, ಹಂಪಿ.
–ಅಖಿಲ ಭಾರತ ತುಳು ಸಮ್ಮೇಳನ ನೆನಪಿನ ಸಂಚಿಕೆ, 'ಪನಿಯಾರ' (ತುಳು) ೧೯೯೯, ಮಂಗಳೂರು.
–ಯುವ ವಾಹಿನಿಯ ವಾರ್ಷಿಕ ವಿಶೇಷಾಂಕ, 'ಸಿಂಚನ,' ೨೦೦೩, ಮಂಗಳೂರು.
–ದಕ್ಷಿಣ ಕನ್ನಡ ಜಿಲ್ಲಾ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ,'ಅಕ್ಷಯ' ೧೯೯೪, ಸುಳ್ಯ.
–ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ನನ್ನದು ಈ ಕನ್ನಡನಾಡು', ೨೦೦೫, ಬೆಂಗಳೂರು.
–ಶ್ರೀ ನರೇಂದ್ರ ರೈ ದೇರ್ಲ, 'ವಿಶುಕುಮಾರ', ೧೯೯೮, ಮಂಗಳೂರು.
–ಬಾ.ಕಿ.ನ. ಗಾಂಧಿ ಬಜಾರ್ ಪತ್ರಿಕೆ, ಅಕ್ಟೋಬರ್ ೨೦೦೬, ಬೆಂಗಳೂರು.

–ಶಾ.ಮಂ. ಕೃಷ್ಣರಾಯ, ‘ಪ್ರತಿಭಾ ಶಿಖರಗಳು’ , ೧೯೯೯, ಗೋವಾ.
–ಕರ್ನಾಟಕ  ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ‘ಜಾನಪದ ತಲೆಮಾರು–೧’ ೨೦೦೩, ಜಾನಪದ ತಲೆಮಾರು– ೩ :೨೦೦೩,ಬೆಂಗಳೂರು.
–ದಕ್ಷಿಣ ಕನ್ನಡ ಜಿಲ್ಲಾ ಮೂರನೆಯ ಸಾಹಿತ್ಯ ಸಮ್ಮೇಳನದ ಸ್ಮೃತಿ ಸಂಪುಟ, ‘ಸಂಗಮ’, ೧೯೮೭, ಮೂಲ್ಕಿ.
–ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ‘ಕರ್ನಾಟಕಲೋಚನ’: ಸಂಪುಟ–೧೮–೧೯, ಸಂಚಿಕೆ–೨–೧,೨೦೦೫–೨೦೦೬, ಬೆಂಗಳೂರು.
–ಪೀಟರ್ ವಿಲ್ಸನ್ ಪ್ರಭಾಕರ್ ಮತ್ತು ವಿಘ್ನೇಶ್ವರ ವರ್ಮುಡಿ(ಸಂ), ‘ಪುತ್ತೂರು ತಾಲ್ಲೂಕು ಇತಿಹಾಸ ದರ್ಶನ’,೨೦೦೫,ಪುತ್ತೂರು.
–ಹರಿಕೃಷ್ಣ ಪುನರೂರು ಅಭಿನಂದನ ಗ್ರಂಥ, ‘ಪುನರೂರು ಪುರಸ್ಕಾರ’, ೨೦೦೫ ಕಾಂತಾವರ.
–ಮನೋರಮಾ ಎಂ. ಭಟ್,(ಸಂ) ‘ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರು’ ೧೯೯೬, ಕಾಸರಗೋಡು.
–ಕರಾವಳಿ ಲೇಖಕಿಯರ– ವಾಚಕಿಯರ ಸಂಘದ ಸ್ಮರಣಸಂಚಿಕೆ, ‘ಸಾಹಿತ್ಯಸದನ’ ೨೦೦೬, ಮಂಗಳೂರು.

**ತುಳು.**

–ವೆಂಕಟರಾಜ ಪುಣಿಂಚತ್ತಾಯ, ‘ತುಳು ಮಹಾಕಾವ್ಯಗಳು’, ’ಪೊಲಿ”, ೨೦೦೦, ಮಂಗಳೂರು.
–ಮುರಳೀಧರ ಉಪಾಧ್ಯ, ‘ತುಳು ಸಣ್ಣಕತೆ, ಸಾಹಿತ್ಯ’, “ಪೊಲಿ”, ೨೦೦೦, ಮಂಗಳೂರು.
– ಪಾದೇಕಲ್ಲು ವಿಷ್ಣುಭಟ್ಟ (ಸಂ), ‘ತುಳುವರಿವರು’, ೧೯೯೭, ಉಡುಪಿ.
–ಎನ್. ರಘುನಾಥಶೆಟ್ಟಿ, ‘ನರ್ಕಳ ಮಾರಪ್ಪಶೆಟ್ಟಿ’, ೨೦೦೨, ಮಂಗಳೂರು.
–ವೆಂಕಟರಾಜ ಪುಣಿಂಚತ್ತಾಯ, ‘ತುಳುಲಿಪಿ’, ೨ನೇ ಮುದ್ರಣ ೨೦೦೪, ಮಂಗಳೂರು.

**ಕೊಂಕಣಿ**

–ಮಾವ್ರಿಸ್ ಡೆಸಾ, ‘ಕನ್ನಡ ಲಿಪಿಯಲ್ಲಿ ಕ್ರೈಸ್ತ ಸಾಹಿತ್ಯ’, ಪೊಲಿ, ೨೦೦೦, ಮಂಗಳೂರು.
–ರೋಹಿದಾಸ್ ಎಸ್. ಶೇಟ್, ‘ಕೊಂಕಣಿ ಭಾಷೆ ಮತ್ತು ಸಾಹಿತ್ಯ ಇವುಗಳ ಸಂಶೋಧನಾತ್ಮಕ ಸಮೀಕ್ಷೆ’, ೨೦೦೪, ಶಿವಮೊಗ್ಗ.
–ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡಮಿ ದಶಮಾನೋತ್ಸವ ನೆನಪಿನ ಸಂಚಿಕೆ, ‘ಕೊಂಕಣಿ ಉತ್ಸವ’, ೨೦೦೪, ಮಂಗಳೂರು,
–ಬಿ.ಎಂ. ಇಚ್ಲಂಗೋಡು, ‘ಬ್ಯಾರಿ ಬೆಳೆದು ಬಂದ ದಾರಿ’, “ಪೊಲಿ”, ೨೦೦೦, ಮಂಗಳೂರು.

**ಜನಪದ**

–ಟಿ. ಕೇಶವಭಟ್ಟ, ‘ಯಕ್ಷಗಾನ ಕಲಾದರ್ಶನ’, ೨೦೦೨, ಬೆಂಗಳೂರು.
–ಮಂಜೇಶ್ವರ ಗೋವಿಂದ ಪೈ, ‘ಪಾರ್ತಿಸುಬ್ಬ’, ‘ಪಾರ್ತಿಸುಬ್ಬನ ಹುಟ್ಟೂರು ಯಾವುದು’, ‘ಪಾರ್ತಿ ಸುಬ್ಬನ ಕುರಿತು ಎರಡು ಮಾತುಗಳು’, ಹೆರಂಜೆ ಕೃಷ್ಣಭಟ್ ಮತ್ತು ಮುರಳೀಧರ ಉಪಾಧ್ಯ (ಸಂ) ಗೋವಿಂದ ಪೈ ಸಂಶೋಧನ ಸಂಪುಟ, ಹಿರಿಯಡ್ಕ,೧೯೯೫,ಉಡುಪಿ.
–ಶಿವರಾಮ ಕಾರಂತರ ಲೇಖನಗಳು. ‘ಯಕ್ಷಗಾನ ಕವಿ ಸುಬ್ಬ ಯಾರು’, ಸಂ.ಮಾಲಿನಿ ಮಲ್ಯ,೧೯೯೪, ಮಂಗಳೂರು.
–ಟಿ. ಕೇಶವಭಟ್ಟ, ‘ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು’ , ೧೯೯೬, ಬೆಂಗಳೂರು.
–ಕೆ. ಚಿನ್ನಪ್ಪಗೌಡ, ‘ಸಂಸ್ಕೃತಿ ಸಿರಿ’, ೨೦೦೩, ಮಂಗಳೂರು.
–ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ‘ಸಿರಿ’ . ೧೯೯೫, ಮಂಗಳೂರು.
–ಕೆ. ಚಿನ್ನಪ್ಪಗೌಡ , ‘ಭೂತಾರಾಧನೆಯ ವೇಷಭೂಷಣಗಳಲ್ಲಿ ಕರಕೌಶಲ್ಯ’ ,ಪೊಲಿ, ೨೦೦೦. ಮಂಗಳೂರು.
–ಪಾಲ್ತಾಡಿ ರಾಮಕೃಷ್ಣ ಆಚಾರ್, ‘ಜನಪದ ಪ್ರಕಾರಗಳು ಮತ್ತು ಕಲಾಸಾಧನಗಳು’, ಪೊಲಿ,  ೨೦೦೦, ಮಂಗಳೂರು.
–ಪುರುಷೋತ್ತಮ ಬಿಳಿಮಲೆ, ‘ಯಕ್ಷಗಾನ’ ಬದಲಾವಣೆ’, ಪೊಲಿ, ೨೦೦೦, ಮಂಗಳೂರು.

**ಪತ್ರಿಕೋದ್ಯಮ**

–ಪಿ. ಗೋಪಾಲಕೃಷ್ಣ ‘ಕರ್ನಾಟಕ ಪತ್ರಿಕಾ ಇತಿಹಾಸ’, ಸಂಪುಟ–೧. ಕರ್ನಾಟಕ ಮಾಧ್ಯಮ ಅಕಾಡಮಿ, ೧೯೯೯, ಬೆಂಗಳೂರು.
–ಸೂರ್ಯನಾಥ ಯು.ಕಾಮತ್(ಪ್ರಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–೧, ೧೯೮೪, ಬೆಂಗಳೂರು.
–‘ಕಾಲು ಶತಮಾನ ಕಂಡ ಕನ್ನಡ ಪತ್ರಿಕೆಗಳು’, ಕರ್ನಾಟಕ ಪತ್ರಿಕಾ ಅಕಾಡಮಿ ೧೯೯೦, ಬೆಂಗಳೂರು.
–ಹುರಳಿ ಭೀಮರಾಯರು, ‘ದಕ್ಷಿಣ ಕನ್ನಡದಲ್ಲಿ ಪತ್ರಿಕೋದ್ಯಮದ ಬೆಳವಣಿಗೆ’. “ತೆಂಕನಾಡು”, ೧೯೪೭, ಕಾಸರಗೋಡು.
–ಎಂ. ಜನಾರ್ಧನ್, ‘ದ ಕ್ರೇಡಲ್ ಆಫ್ ಕನ್ನಡ ಜರ್ನಲಿಸಂ’, ಸಿಂಡಿಕೇಟ್ ಬ್ಯಾಂಕ್, ಸ್ಮರಣ ಸಂಚಿಕೆ ೧೯೫೮, ಮಂಗಳೂರು.
–ಶ್ರೀಕರ ಎಲ್. ಭಂಡಾರಕರ್, ‘ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮ’, “ದಕ್ಷಿಣ ಕನ್ನಡದ ಬರಹಗಾರರು”. ೧೯೬೭, ಬೆಂಗಳೂರು.
ಚಂದ್ರರಾಜ ಶೆಟ್ಟಿ, ‘ಕನ್ನಡದ ಪತ್ರಿಕೆಗಳು’, ಕನ್ನಡ ನುಡಿ, ಸೆಪ್ಟಂಬರ್ ೧ ಮತ್ತು ಸಪ್ಟಂಬರ್ ೧೬–೧೯೭೨, ಬೆಂಗಳೂರು.

–ಜಿಲ್ಲಾ ಆಡಳಿತ ನೀಡಿದ ಪತ್ರಿಕೆಗಳ ಪಟ್ಟಿ ೨೦೦೬
–ಕೆ. ಚಿನ್ನಪ್ಪಗೌಡ, 'ಭೂತಾರಾಧನೆ' ೧೯೯೦, ಮಂಗಳೂರು.
–ಸಂ. ಬಿ.ಎ. ವಿವೇಕ ರೈ ಮತ್ತಿತರರು, 'ಭೂತಾರಾಧನೆಯ ಬಣ್ಣಗಾರಿಕೆ,' ೨೦೦೧, ಮಂಗಳೂರು.
–ಅ.ಲ. ನರಸಿಂಹನ್. 'ಭಿತ್ತಿ ಚಿತ್ರ ಪರಂಪರೆ', ೧೯೯೮ , ಬೆಂಗಳೂರು.
–ಅ.ಲ. ನರಸಿಂಹನ್, 'ಚರ್ಚುಗಳಲ್ಲಿ ಚಿತ್ರಕಲೆ', ಸುಧಾ, ೧೮ ಡಿಸೆಂಬರ್ ೧೯೯೪, ಬೆಂಗಳೂರು.
–ಎಸ್. ನಿತ್ಯಾನಂದ ಪಡ್ರೆ, 'ಅಪೂರ್ವ ವರ್ಣಚಿತ್ರಗಳಿಗೆ ಕಾಯಕಲ್ಪ' , ಉದಯವಾಣಿ ೨೮.೩.೧೯೯೩, ಮಣಿಪಾಲ.
–ಶಿವರಾಮ ಕಾರಂತರ ಲೇಖನಗಳು ಸಂಪುಟ–೩, 'ಧವಲಗ್ರಂಥಗಳಲ್ಲಿ ಚಿತ್ರಕಲೆ', ಸಂ. ಮಾಲಿನಿ ಮಲ್ಯ, ೧೯೯೪, ಮಂಗಳೂರು.
–ಸಿ. ಶಿವರಾಮ ಮೂರ್ತಿ 'ಸೌತ್ ಇಂಡಿಯನ್ ಪೈಯೆಂಟಿಂಗ್ಸ್, ದೆಹಲಿ.
–ಎಚ್. ಆರ್. ರಘುನಾಥ ಭಟ್,  'ಧವಳ ಗ್ರಂಥಗಳಲ್ಲಿ ಹೊಯ್ಸಳ ಚಿತ್ರಶೈಲಿ', 'ಕರ್ನಾಟಕ ಶಾಸನ ಕಲೆ', ೧೯೭೭, ಮೈಸೂರು.
–ಬಿ.ವ್ಹಿ. ಶಿರೂರ್, 'ಶ್ರವಣ ಬೆಳಗೊಳ', ೧೯೭೬, ಧಾರವಾಡ.
–ಪಿ.ಕೆ.ಭಾಗೋಜಿ, 'ಪ್ರಾಚೀನ ವೈವಿಧ್ಯ ಮತ್ತು ಲಕ್ಷಣಗಳು' , ೧೯೭೦, ಧಾರವಾಡ.
–ಶ್ರೀ ದಿಗಂಬರ ಜೈನ ಮಠ, 'ಮೂಢಬಿದ್ರಿ', ೧೯೮೬, ಮೂಡಬಿದ್ರಿ.
–ಬಿ.ಎಸ್.ಶಾಂತಪ್ರಿಯ, 'ಪಾವಂಜೆ ಗೋಪಾಲಕೃಷ್ಣಯ್ಯ', ೧೯೯೪, ಬೆಂಗಳೂರು.
–ಬಿ.ಪಿ. ಬಾಯರಿ, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿತ್ರಕಲೆ', ತೋನ್ಸೆ ಅನಂತ ಪೈ ಅಭಿನಂದನಾ ಗ್ರಂಥ  'ಸುದರ್ಶನ'....... ಉಡುಪಿ.
–ಸರ್ವಮಂಗಳಾ ಶಂಕರ್ (ಸಂ),  'ನಮ್ಮ ಸಂಗೀತ ಕಲಾವಿದರು", ೧೯೮೩, ಬೆಂಗಳೂರು.
–ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, 'ಕಲಾಚೇತನ', ೨೦೦೪, ಬೆಂಗಳೂರು.
–ಎಸ್.ಎಸ್. ಚಂದ್ರಶೇಖರ್ (ಸಂ), 'ನೃತ್ಯ ಕಲಾವಿದರು'. ೧೯೮೫, ಬೆಂಗಳೂರು.
–ಪ್ರಕೃ. ಗಾಯಿತ್ರಿ, 'ಕರ್ನಾಟಕ ಕಲಾವಿದರ ನೃತ್ಯ', ೨ನೇ ಮುದ್ರಣ ೨೦೦೧, ಬೆಂಗಳೂರು.
–ಶ್ಯಾಮಲಾ ಜಿ. ಭಾವೆ, 'ಕರ್ನಾಟಕ ಕಲಾವಿದರು–ಸುಗಮ ಸಂಗೀತ', ೨ನೇ ಮುದ್ರಣ ೨೦೦೧, ಬೆಂಗಳೂರು.

**ಚಿತ್ರಕಲೆ ಮತ್ತು ಶಿಲ್ಪಕಲೆ**

–ಅ. ಸುಂದರ, 'ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ'. ಕ.ಲ.ಕ.ಅ. ೧೯೯೪, ಬೆಂಗಳೂರು.
–ಬಿ. ವಸಂತ ಶೆಟ್ಟಿ, 'ದಕ್ಷಿಣ ಕನ್ನಡದ ಪ್ರಾಗಿತಿಹಾಸ ಸಂಶೋಧನ'. ಎಂ ಚಿದಾನಂದ ಮೂರ್ತಿಯವರ ಸಂಭಾವನಾಗ್ರಂಥ, ೧೯೯೧, ಬೆಂಗಳೂರು.
–ಕೆ. ಅಭಿಶಂಕರ್ (ಸಂ) ಸೌತ್ ಕೆನರಾ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೭೩, ಬೆಂಗಳೂರು.
–ಎ.ವಿ. ನಾವಡ, ನಾಗಮಂಡಲ–ಡಕ್ಕೆ ಬಲಿ, 'ತುಳುವರ ಆಚರಣೆಗಳಲ್ಲಿ ಕಲಾವಂತಿಕೆ' ೧೯೮೯, ಬೆಂಗಳೂರು.
–ಕೆ. ಚಿನ್ನಪ್ಪಗೌಡ, 'ಭೂತಾರಾಧನೆ' ೧೯೯೦, ಮಂಗಳೂರು.
–ಬಿ. ಎ. ವಿವೇಕ ರೈ(ಸಂ), ಮತ್ತಿತರರು, 'ಭೂತಾರಾಧನೆಯ ಬಣ್ಣಗಾರಿಕೆ,' ೨೦೦೧, ಮಂಗಳೂರು.
–ಅ. ಲ. ನರಸಿಂಹನ್, 'ಭಿತ್ತಿಚಿತ್ರ ಪರಂಪರೆ', ೧೯೯೮, ಬೆಂಗಳೂರು.
–ಅ. ಲ. ನರಸಿಂಹನ್, 'ಚರ್ಚುಗಳಲ್ಲಿ ಚಿತ್ರಕಲೆ' ಸುಧಾ, ೧೮ ಡಿಸೆಂಬರ್ ೧೯೯೪, ಬೆಂಗಳೂರು.
–ಎಸ್. ನಿತ್ಯಾನಂದ ಪಡ್ರೆ, 'ಅಪೂರ್ವ ವರ್ಣಚಿತ್ರಗಳಿಗೆ ಕಾಯಕಲ್ಪ', ಉದಯವಾಣಿ ೨೮.೩.೧೯೯೩, ಮಣಿಪಾಲ.
–ಶಿವರಾಮಕಾರಂತರ ಲೇಖನಗಳು ಸಂಪುಟ–೩, 'ಧವಲಗ್ರಂಥಗಳಲ್ಲಿ ಚಿತ್ರಕಲೆ', ಸಂ. ಮಾಲಿನಿ ಮಲ್ಯ, ೧೯೯೪, ಮಂಗಳೂರು.
–ಶಿವರಾಮ ಮೂರ್ತಿ, 'ಸೌತ್ ಇಂಡಿಯನ್ ಪೈಯೆಂಟಿಂಗ್ಸ್, ದೆಹಲಿ.
–ಎಚ್. ಆರ್. ರಘುನಾಥ ಭಟ್, 'ಧವಳ ಗ್ರಂಥಗಳಲ್ಲಿ ಹೊಯ್ಸಳ ಚಿತ್ರಶೈಲಿ', 'ಕರ್ನಾಟಕ ಶಾಸನ ಕಲೆ', ೧೯೭೭, ಮೈಸೂರು.
–ಬಿ. ವ್ಹಿ. ಶಿರೂರ್, 'ಶ್ರವಣ ಬೆಳಗೊಳ', ೧೯೭೬, ಧಾರವಾಡ.
–ಪಿ. ಕೆ. ಭಾಗೋಜಿ, 'ಪ್ರಾಚೀನ ವೈವಿಧ್ಯ ಮತ್ತು ಲಕ್ಷಣಗಳು', ೧೯೭೦, ಧಾರವಾಡ.
–ಶ್ರೀ ದಿಗಂಬರ ಜೈನ ಮಠ, 'ಮೂಡಬಿದ್ರಿ', ೧೯೮೬, ಮೂಡಬಿದಿರೆ.
–ಬಿ. ಎಸ್. ಶಾಂತಪ್ರಿಯ, 'ಪಾವಂಜೆ ಗೋಪಾಲಕೃಷ್ಣಯ್ಯ', ೧೯೯೪, ಬೆಂಗಳೂರು.
–ಬಿ. ಪಿ. ಬಾಯರಿ, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿತ್ರಕಲೆ', ತೋನ್ಸೆ ಅನಂತ ಪೈ ಅಭಿನಂದನಾ ಗ್ರಂಥ 'ಸುದರ್ಶನ'ಆಡ್ಯನಡ್ಕ – ಕೃಷ್ಣಭಟ್(ಸಂ), ೧೯೭೭, ಉಡುಪಿ.

–ಪಿ.ಆರ್. ತಿಪ್ಪೇಸ್ವಾಮಿ, 'ಪಿ.ಆರ್. ರಾವ್' , ಕಲೋಪಾಸಕರು, ೧೯೭೨, ಬೆಂಗಳೂರು.
–'ಕರ್ನಾಟಕ ಕಲಾವಿದರ ಪರಿಚಯಾವಳಿ' ಕರ್ನಾಟಕ ಲಲಿತಾಕಲಾ ಅಕಾಡಮಿ, ೨೦೦೧, ಬೆಂಗಳೂರು.
–ನಾ. ಉಜಿರೆ, 'ಧರ್ಮಸ್ಥಳ' 'ಮಂಜಯ್ಯ ಹೆಗ್ಗಡೆಯವರು', ೨೦೦೪, ಮಂಗಳೂರು.
–ಮನೋರಮಾ ಎಂ. ಭಟ್ ಮತ್ತು ಮುಳಿಯ ಮಹಾಬಲಭಟ್ (ಸಂ), 'ವ್ಯಂಗ್ಯ ಬದುಕು', ೧೯೯೮, ಪುತ್ತೂರು.
–ಪಿ.ಗುರುರಾಜ ಭಟ್. 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್' ೧೯೭೫, ಮಂಗಳೂರು.
–ಎಂ. ಮುಕುಂದ ಪ್ರಭು, 'ಟ್ರೆಡಿಷನಲ್ ಸ್ಕಲ್ಪಚರ್ಸ್', 'ಪೊಲಿ', ೨೦೦೦, ಮಂಗಳೂರು
–ಸುವರ್ಣ ಸಂಸ್ಕೃತಿ ದರ್ಶಿಕೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬, ಬೆಂಗಳೂರು.

**ರಂಗಭೂಮಿ**

–ಬಿ.ಆರ್. ನಾಗೇಶ್, 'ನಾಟಕ ಚಟುವಟಿಕೆ', "ಪೊಲಿ". ೨೦೦೦, ಮಂಗಳೂರು.
–ನಾ.ದಾಮೋದರ ಶೆಟ್ಟಿ, 'ಕರಾವಳಿ ಹವ್ಯಾಸಿ ರಂಗಭೂಮಿಯ ಒಲವುಗಳು' "ಪೊಲಿ" , ೨೦೦೦, ಮಂಗಳೂರು.
–ಉದ್ಯಾವರ ಮಾಧವ ಆಚಾರ್ಯ, 'ಸಾಂಪ್ರದಾಯಿಕ ರಂಗಭೂಮಿ ಮತ್ತು ಸೃಜನಶೀಲತೆ', "ಪೊಲಿ" , ೨೦೦೦, ಮಂಗಳೂರು.
–ಮುರಳೀಧರ ಉಪಾಧ್ಯ ಹಿರಿಯಡಕ (ಸಂ), 'ಬಿ.ವಿ, ಕಾರಂತ', ೧೯೯೬. ಪುತ್ತೂರು.
–ಕೆ.ವಿ. ಆಚಾರ್, 'ಕರ್ನಾಟಕ ರಂಗಭೂಮಿ', ೧೯೭೬, ಬೆಂಗಳೂರು.
–ಸಂ.ಎಸ್. ಎಸ್. ವೀರಪ್ಪ 'ಕನ್ನಡ ರಂಗಭೂಮಿಯ ಶತಮಾನೋತ್ಸವ ಸಂಚಿಕೆ', ೧೯೪೮, ಬೆಂಗಳೂರು.

**ಸಂಗೀತ ನೃತ್ಯ**

–ಅರವಿಂದ ಹೆಬ್ಬಾರ್, 'ಸಂಗೀತ ನೃತ್ಯ', "ಪೊಲಿ" ೨೦೦೦, ಮಂಗಳೂರು,
–ಟಿ.ಬಿ. ನರಸಿಂಹಾಚಾರ್ (ಸಂ), 'ನಮ್ಮ ಸಂಗೀತ ಕಲಾವಿದರು ಭಾಗ–೧, ೧೯೮೩, ಬೆಂಗಳೂರು. ಭಾಗ–೨, ೧೯೮೫, ಬೆಂಗಳೂರು.

**ಕೀರ್ತನೆ**

–ಎಂ. ಎ. ಜಯರಾಮರಾವ್. 'ನಮ್ಮ ಕೀರ್ತನ ಕಲಾವಿದರು', ೧೯೮೬, ಬೆಂಗಳೂರು.
–ಎಂ. ಎ. ಜಯರಾಮರಾವ್, 'ಕರ್ನಾಟಕ ಕಲಾವಿದರ ಕಥಾ ಕೀರ್ತನೆ, ೨ನೇ ಮುದ್ರಣ ೨೦೦೦, ಬೆಂಗಳೂರು.
–ಭದ್ರಗಿರಿ ಸರ್ವೋತ್ತಮದಾಸರು, 'ಕೀರ್ತನ ದಿಗ್ಗಜಗಳು' , ೧೯೯೮, ಬೆಂಗಳೂರು.
–ಜಯಂತ, 'ದಕ್ಷಿಣ ಕನ್ನಡ ಜಿಲ್ಲೆಯ ಹರಿದಾಸರು' , ದಾಸ ಸಾಹಿತ್ಯ ದರ್ಶನ' ೧೯೮೪, ಮೈಸೂರು.

**ಗಮಕ**

–ಎಂ. ಆರ್. ಸತ್ಯನಾರಾಯಣ, 'ಕರ್ನಾಟಕ ಕಲಾವಿದರು–ಗಮಕ ' , ೨ನೇ ಮುದ್ರಣ ೨೦೦೧, ಬೆಂಗಳೂರು.
–ಕರ್ನಾಟಕ ಗಮಕ ಕಲಾಪರಿಷತ್ತು. , 'ಗಮಕ ಕಲೋಪಾಸಕರು', ೨೦೦೧, ಬೆಂಗಳೂರು.
–ಎಂ. ಎ. ಜಯರಾಮರಾವ್,'ಗಮಕ ದಿಗ್ಗಜಗಳು', ೧೯೯೮, ಬೆಂಗಳೂರು.

**ಚಲನಚಿತ್ರ**

–ಶಿವರಾಮ ಕಾರಂತರ ಲೇಖನಗಳು, ಸಂಪುಟ––೩ 'ಚಲನ ಚಿತ್ರ', ಸಂ. ಮಾಲಿನಿಮಲ್ಯ, ೧೯೯೪, ಮಂಗಳೂರು.
–ಮನೋಹರ ಪ್ರಸಾದ್, 'ದಕ್ಷಿಣ ಕನ್ನಡದ ಚಲನಚಿತ್ರ ಸಂಗಮ' ೧೯೮೭, ಮುಲ್ಕಿ.
–ಡಾ: ವಿಜಯಾ ಮತ್ತು ಇತರರು (ಸಂ), 'ಕನ್ನಡ ಚಲನಚಿತ್ರ ಇತಿಹಾಸ ' ಭಾಗ–೨, ೨೦೦೧, ಹಂಪಿ.
–ಅಂತರ್ಜಾಲದಿಂದ ಪಡೆದ ಮಾಹಿತಿಗಳು.

ಇವಲ್ಲದೆ, ಅಕಾಡಮಿಗಳು, ಸರ್ಕಾರ ಹಾಗೂ ಸಾರ್ವಜನಿಕರು, ಗೌರವಾನ್ವಿತರಿಗೆ ಪ್ರಶಸ್ತಿಗಳನ್ನು ನೀಡುವಾಗ ಪ್ರಕಟಿಸುವ ಪ್ರಶಸ್ತಿವಾಚಿಕೆಗಳು ಹಾಗೂ ಪತ್ರಿಕೆಗಳು ತಮ್ಮ ಕ್ಷೇತ್ರಗಳಿಗೆ ಸೇರಿದಂತೆ ಸಾಹಿತಿ, ಕಲಾವಿದರು ನೀಡಿದ ಮಾಹಿತಿಗಳು (ವಿಶೇಷವಾಗಿ ನಾ. ಮೊಗಸಾಲೆ, ನಾ. ದಾಮೋದರ ಶೆಟ್ಟಿ, ಚಂದ್ರಶೇಖರ ದಾಮ್ಲೆ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಕಾ.ವಾ. ಆಚಾರ್, ಗಣೇಶ ಸೋಮಯಾಜಿ ಮುಂತಾದವರು) ಮತ್ತು ಪರಿವೀಕ್ಷಣೆಗಳನ್ನು ಆಧ್ಯಾಯದ ರಚನೆಗಾಗಿ ಬಳಸಿಕೊಂಡಿದೆ.

***